



## ನಮ್ಮ ಸುವರ್ಣ ಆಶಯ

ಮಹಾಬೋಧಿ ಸೊಸೈಟಿಯು 1956 ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಖಿತರವರಿಂದ ಸ್ಥಾಪನೆಗೊಂಡು ಅವರ ಮಾರ್ಗದರ್ಶನದಲ್ಲಿ ಭಗವಾನ್ ಬುದ್ಧರು ಬೋಧಿಸಿದ ನಾಲ್ಕು ಪರಮ ಪವಿತ್ರ ಸತ್ಯಗಳನ್ನು, ಪಂಚಶೀಲಗಳನ್ನು, ಮಧ್ಯಮ ಮಾರ್ಗವನ್ನು, ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸುವುದರ ಜೊತೆಗೆ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸುತ್ತಾ ಬಂದಿದೆ.

2550ನೇ ಪವಿತ್ರ ಬುದ್ಧ ಜಯಂತಿಯು ಹಾಗು ಮಹಾಬೋಧಿ ಸೊಸೈಟಿಯ ಸುವರ್ಣಜಯಂತಿ ಮತ್ತು ಸುವರ್ಣ ಕರ್ನಾಟಕ ಜಯಂತಿಗಳ ನೆನಪಿಗಾಗಿ ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆಯಲ್ಲಿ 50 ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಆಶಯವುಳ್ಳವರಾಗಿದ್ದೇವೆ.

ಮನುಕುಲದ ಒಳಿತಿಗಾಗಿ ಭಗವಾನ್ ಬುದ್ಧರು ಉಪದೇಶಿಸಿದ ಸತ್ಯಗಳನ್ನು ಈ ಕಿರು ಕನ್ನಡದ ಪುಸ್ತಕಗಳಲ್ಲಿ ಸರಳ ಆಡುಭಾಷೆಯಲ್ಲಿ ಪ್ರಕಟಿಸಿ ಎಲ್ಲ ವಯೋಮಾನದವರಿಗೂ ಅರ್ಥವಾಗುವ ಪುಸ್ತಕಮಾಲಿಕೆ ಇದಾಗಲಿದೆ.

ಇಂದಿನ ಕಲುಷಿತ ಬದುಕಿನಿಂದ ನೆಮ್ಮದಿ ಕಳೆದುಕೊಂಡ ಮನಸುಗಳಿಗೆ ಸರಿ ತಪ್ಪುಗಳ ಅರಿವು ಮೂಡಿಸಿ ಸುಖ, ಶಾಂತಿ ಮತ್ತು ಜ್ಞಾನದ ದಾರಿದೀಪವಾಗಿ ಈ ಮಾಲಿಕೆ ಜನರ ಮನದಲ್ಲಿ ಸುವರ್ಣ ಬೆಳಕು ಚೆಲ್ಲಲಿ ಎನ್ನುವುದೇ ನಮ್ಮ ಆಶಯ.

MAHA BODHI SOCIETY

BUDDHA VACHANA TRUST

MAHA BODHI SOCIETY, GANDHINAGAR, BANGALORE - 9

FOR FREE DISTRIBUTION

ಮಿಥ್ಯ ದೃಷ್ಟಿಯ ಕತ್ತಲೆಯಿಂದ ಸಮ್ಯಕ್ ದೃಷ್ಟಿಯ ಬೆಳಕಿನೆಡೆಗೆ

ಲೇಖಕರು : ಅನೀಶ್ ಬೋಧ್

# ಮಿಥ್ಯ ದೃಷ್ಟಿಯ ಕತ್ತಲೆಯಿಂದ ಸಮ್ಯಕ್ ದೃಷ್ಟಿಯ ಬೆಳಕಿನೆಡೆಗೆ



ಲೇಖಕರು :

ಅನೀಶ್ ಬೋಧ್

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ 26

## ಮಿಥ್ಯ ದೃಷ್ಟಿಗಳ ಕತ್ತಲೆಯಿಂದ ಸಮ್ಯಕ್ ದೃಷ್ಟಿಗಳ ಬೆಳಕಿನೆಡೆಗೆ

ಮಿಥ್ಯಾದೃಷ್ಟಿಗಳು ನಮ್ಮ ಮನಸ್ಸಿನಲ್ಲಿ ಅಷ್ಟೇ ಅಲ್ಲದೆ, ನಮ್ಮ ಇಡೀ ಜೀವನವನ್ನು ಹಾಸುಹೊಕ್ಕಿದೆ. ಇದರ ಪರಿಣಾಮದಿಂದ ನಮ್ಮ ಚಿಂತನೆಯು ಕಲುಷಿತವಾಗಿ ಮಿಥ್ಯಾ ಮಾರ್ಗದರ್ಶಿತವಾಗುತ್ತದೆ. ಅದರ ಪರಿಣಾಮ ನಮ್ಮ ಮಾತು ಮತ್ತು ವರ್ತನೆಗಳು ತಪ್ಪಾದ ಹಾದಿಯನ್ನು ಹಿಡಿಯುತ್ತವೆ. ಇದರ ಫಲಿತಾಂಶದಿಂದಾಗಿ ನಮ್ಮ ಈಗಿನ ಎಷ್ಟೋ ದುಃಖಕ್ಕೆ ಮತ್ತು ಜನ್ಮ ಜನ್ಮಾಂತರಗಳ ದುಃಖಕ್ಕೂ ಕಾರಣವಾಗಿದೆ. ಇದರ ಭೀಕರ ಸ್ವರೂಪವನ್ನು ಮೊದಲಿಗೆ ಕಂಡವರು ಮತ್ತು ಇದರಿಂದ ಮುಕ್ತರಾಗಿ, ಸಮ್ಮಾದೃಷ್ಟಿಯನ್ನು ಬೋಧಿಸಿದವರು ಬುದ್ಧ ಭಗವಾನರಾಗಿದ್ದಾರೆ. ಬಹಳಷ್ಟು ಜನರು ಬುದ್ಧರು ಬೋಧಿಸಿದ್ದು ಹೀಗೆಯೇ ಎಂದು ಮಿಥ್ಯಾ ಸಿದ್ಧಾಂತವನ್ನು ಪ್ರಕಟಿಸುತ್ತಾರೆ. ಆದರೆ ಪಾಳಿ ಸಾಹಿತ್ಯವನ್ನು, ತಿಪಿಟಕವನ್ನು, ಬುದ್ಧವಚನವನ್ನು ಆಳವಾಗಿ ಅರಿತವರು ನಿಜ ಧಮ್ಮವನ್ನೇ ತಿಳಿಸುತ್ತಾರೆ.

ಈ ಕೃತಿಯಲ್ಲಿ ತಿಪಿಟಕಗಳಲ್ಲಿ ಒಂದಾದ ಸುತ್ತ ಪಿಟಕದಲ್ಲಿ ಎಲ್ಲೆಲ್ಲಿ ಮಿಥ್ಯಾದೃಷ್ಟಿಗಳ ಬಗ್ಗೆ, ಮೂಢನಂಬಿಕೆಗಳ ಬಗ್ಗೆ ಮಿಥ್ಯಾ ಸಿದ್ಧಾಂತಗಳ ಬಗ್ಗೆ ಉಲ್ಲೇಖವಿದೆಯೋ ಅದನ್ನೆಲ್ಲಾ ಆರಿಸಿ ಸಂಕ್ಷಿಪಿಸಿ, ಇಲ್ಲಿ ಹೀಗೆ ಸಮರ್ಪಿಸಲಾಗಿದೆ.

## ಅನೀಶ್ ಬೋಧ್‌ರವರ ಇತರ ಕೃತಿಗಳು

1. ಬೌದ್ಧರ ಅದ್ವಿತೀಯ ಧ್ಯಾನಗಳ ಮಾರ್ಗ ಭಾಗ–1
2. ಬೌದ್ಧರ ಅದ್ವಿತೀಯ ಧ್ಯಾನಗಳ ಮಾರ್ಗ ಭಾಗ–2
3. ಬುದ್ಧ ಭಗವಾನರ ಸುಭಾಷಿತ ರತ್ನಗಳು
4. ಧಮ್ಮಪದ ಗಾಥಾ ಪ್ರಸಂಗಗಳು ಭಾಗ–1

### ಅನೀಶ್ ಭೋದ್‌ರವರಿಂದ ಅನುವಾದವಾಗಿರುವಂತಹ ಕಿರು ಕೃತಿಗಳು

1. ಸಾಧನಾತ್ಮಕ ಬೌದ್ಧ ಧಮ್ಮ
2. ನಿಮ್ಮ ನೋವುಗಳನ್ನು ದಾಟುವುದು ಹೇಗೆ?
3. ಪೋಷಕರು ಮತ್ತು ಮಕ್ಕಳು
4. ಬೌದ್ಧ ಧರ್ಮ ಇಂದು ಪ್ರಸ್ತುತವೆ ?
5. ನಿಮ್ಮ ಸಮಸ್ಯೆಗೆ ಹೊಣೆ ಯಾರು ?
6. ಬುದ್ಧ ಮತ್ತು ಧಮ್ಮದ ಪವಿತ್ರ ಗುಣಗಳು.
7. ಬುದ್ಧರ ಬೋಧನೆಯಲ್ಲಿ ಪರಿಪೂರ್ಣ ಪ್ರೀತಿ (ಮೆತ್ತಾ)
8. ವೈಜ್ಞಾನಿಕ ಯುಗದಲ್ಲಿ ಧರ್ಮ ಮತ್ತು ಧರ್ಮವು ಶಾಂತಿಯನ್ನು ನೀಡೀತೆ?
9. ಜೀವನದ ಉದ್ದೇಶ
10. ಬೌದ್ಧರು ಮೂರ್ತಿ ಪೂಜಕರೇ ?
11. ಬೌದ್ಧರ ಸೌಹಾರ್ದ ಮನೋಭಾವ
12. ಮಿಲಿಂದ ಪನ್ಹ

ನಮೋ ತಸ್ಸ ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ

# "ಮಿಥ್ಯಾ ದೃಷ್ಟಿಯ ಕತ್ತಲೆಯಿಂದ ಸಮ್ಯಕ್ ದೃಷ್ಟಿಯ ಬೆಳಕಿನೆಡೆಗೆ"

"ಪ್ರಜ್ಞಾ ಜೀವಿಯ ಜೀವನ ಶ್ರೇಷ್ಠಕರವಾಗಿರುತ್ತದೆ."

*ಲೇಖಕರು :*

**ಅನೀಶ್ ಬೋಧ್**

ಬುದ್ಧ ವಚನ ಟ್ರಸ್ಟ್

ಮಹಾ ಬೋಧಿ ಸೊಸೈಟಿ

**ಗಾಂಧಿನಗರ, ಬೆಂಗಳೂರು-560 009**



For Free distribution only

ಪ್ರಕಾಶನ :
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು-560 009
ದೂರವಾಣಿ : 080-22250684
ಫ್ಯಾಕ್ಸ್ : 080-22264438
E-mail : books@mahabodhi.info

ಪ್ರಥಮ ಮುದ್ರಣ – ಮೇ 2010

© ಬುದ್ಧವಚನ ಟ್ರಸ್ಟ್

@ **ಅನೀಶ್ ಬೋಧ್**
E-mail : aneeshbodh@gmail.com
Mobile : 8050333925

ಮುಖಪುಟ ವಿನ್ಯಾಸ : **ಅನೀಶ್ ಬೋಧ್**

ಮುದ್ರಕರು :
**ಶ್ರೀ ಅರವಿಂದ್ ಪ್ರಿಂಟರ್ಸ್**
ಸರಸ್ವತಿಪುರಂ, ಬೆಂಗಳೂರು-560 096
ದೂ : 080-23498198, ಮೊ : 9916461691

# ಹೃತ್ಪೂರ್ವಕ ಸಮರ್ಪಣೆ

ಈ ಗ್ರಂಥವು

ವಿಚಾರಶೀಲತೆಯನ್ನು ಇಷ್ಟಪಡುವವರಿಗಾಗಿ, ತೋರಿಕೆಯ ಸತ್ಯದಿಂದ ಆಚೆ ಇರುವ ಯಥಾಭೂತ ಸತ್ಯವನ್ನು ಬಯಸುವವರಿಗಾಗಿ, ಪ್ರತಿಯೊಂದನ್ನು ಪರೀಕ್ಷಿಸಿ, ವಿಮರ್ಶಿಸಿ, ತುಲನಾತ್ಮಕವಾಗಿ ಅರಿಯುವವರಿಗಾಗಿ ಸಮರ್ಪಿಸಲಾಗಿದೆ.





# ಹೃತ್ಪೂರ್ವಕ ಕೃತಜ್ಞತೆಗಳು

ನನ್ನಲ್ಲಿ ಬೋಧಿಜ್ಞಾನ ಪ್ರಾರಂಭವಾಗಲು ಮತ್ತು ಅಭಿವೃದ್ಧಿ ಹೊಂದಲು ಕಾರಣರಾದ ಸಕಲ ಪೂಜ್ಯರಿಗೂ, ಕರ್ನಾಟಕದಲ್ಲಿ ಧಮ್ಮ ಪ್ರವರ್ತನೆ ಮಾಡಿ, ನಾನಾರೀತಿಯ ಮಹಾ ಸೇವಾ ಕಾರ್ಯಗಳನ್ನು ಮಾಡುತ್ತಿರುವ ಪರಮಪೂಜ್ಯ ಆಚಾರ್ಯ ಬುದ್ಧರಕ್ಖಿತ ಥೇರರವರಿಗೂ, ನನಗೆ ಲೇಖಕನಾಗಲು ಸ್ಫೂರ್ತಿ ಮತ್ತು ಅವಕಾಶ ನೀಡುತ್ತಿರುವ ಆನಂದ ಭಂತೆಯವರಿಗೂ ಈ ಕೃತಿ ರಚಿಸಲು ಸಲಹೆ ಮತ್ತು ಸ್ಫೂರ್ತಿ ತುಂಬಿದ ಮಿತ್ರರಾದ ಎಸ್. ಗಣೇಶ್ ಮತ್ತು ಮಹಾ ಉಪಾಸಕರಾದಂತಹ ಎ.ಎಂ. ರಾಜಣ್ಣನವರಿಗೂ, ಹಾಗೆಯೇ ಸದಾ ಉತ್ತೇಜನ ನೀಡುವ ಮತ್ತು ಈ ಕೃತಿಗೆ ತಿದ್ದುಪಡಿ ಮಾಡಿದಂತಹ ಬಿ.ವಿ. ರಾಜಾರಾಂರವರಿಗೂ, ಹಾಗೆಯೇ ಸದಾ ಪ್ರೋತ್ಸಾಹಿಸುವ ಎಲ್ಲಾ ಮಿತ್ರರಿಗೂ ಮತ್ತು ಎಲ್ಲಾ ಓದುಗರಿಗೂ ಮತ್ತು ಶ್ರೇಯೋಭಿಲಾಷಿಯಾದ ಅರವಿಂದ್ ಪ್ರಿಂಟರ್ಸ್‌ನ ಗೌಡರಿಗೂ, ನನ್ನ ಕುರೂಪ ಅಕ್ಷರಗಳನ್ನು ಅಂದವಾಗಿ ಪರಿವರ್ತಿಸುವಂತೆ ಡಿಟಿಪಿ ಮಾಡುವ ಮೋಹನ್‌ರವರಿಗೂ ಹಾಗು ಇತರರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

**–ಅನೀಶ್ ಬೋಧ್**

# ಮುನ್ನುಡಿ

“ಸತ್ಯವನ್ನು ಗುರಿಯಾಗಿಸಿಕೊಂಡು, ಸತ್ಯವನ್ನೇ ಅರಸುತ್ತ, ಅನ್ವೇಷಿಸುತ್ತ, ನುಡಿದಂತೆ ನಡೆಯುವ, ನಡೆದಂತೆ ನುಡಿಯುವ, ಸತ್ಯಕ್ಕಾಗಿ ತನು, ಮನ, ಕಾಲ, ತನ್ನ ಸರ್ವಸ್ವವನ್ನೇ ಅರ್ಪಿಸಿ ನಿಷ್ಠರಾಗಿದ್ದು, ಸತ್ಯವನ್ನೇ ಬೋಧಿಸಿದ ತಥಾಗತರಿಗೆ ಬುದ್ಧರಿಗೆ ನಾವು ಅಪಾರ ಚಿರಋಣಿಗಳಾಗಿದ್ದೇವೆ.

ಅವರೆಂದೂ ಕಲ್ಪನೆಯನ್ನು, ಸಿದ್ಧಾಂತವನ್ನು ಬೋಧಿಸಿಲ್ಲ, ಕೇವಲ ಸತ್ಯಗಳನ್ನು ಬೋಧಿಸಿದರು. ಅವರಿಗೆ ಬೋಧಿ ಪ್ರಾಪ್ತಿಯಾದಾಗಲೇ, ಇದರ ಗಂಭೀರ ಜ್ಞಾನವನ್ನು ಸಾಧಾರಣ ಜನರು ಅರ್ಥ ಮಾಡಿಕೊಳ್ಳಲಾರರು ಎಂದು ಅರಿತಿದ್ದರು. ಆದರೆ ಯಾರಲ್ಲಿ ಲೋಭ, ದ್ವೇಷ ಮತ್ತು ಮೋಹವು ಅತ್ಯಲ್ಪ ಪ್ರಮಾಣದಲ್ಲಿದೆಯೋ ಅವರು ಮಾತ್ರ ಅರಿಯುತ್ತಾರೆ ಎಂದು ಅರಿತಿದ್ದರು. ಹಾಗೆಯೇ ಅವರು ಸಾಮಾನ್ಯರಿಗೆ ಸಾಮಾನ್ಯ ಸತ್ಯಗಳನ್ನು, ಮಹೋನ್ನತರಿಗೆ ಆರ್ಯಸತ್ಯಗಳನ್ನು ತಿಳಿಸಿದರು. ಸರ್ವರಿಗೂ ಲಾಭವಾಗುವಂತಹ ಧಮ್ಮವನ್ನು ಅವರು ಸವಿವರವಾಗಿ ಬೋಧಿಸಿದ್ದರು. ಅವರ ಬೋಧನೆಯಲ್ಲಿ ನಾವು ಅಜ್ಞಾನವನ್ನಾಗಲಿ, ಮೂಢನಂಬಿಕೆಯಾಗಲಿ, ಲೋಭ ಪ್ರಚೋದಕವಾಗಲಿ, ದ್ವೇಷ ಪ್ರಚೋದಕವಾಗಲಿ, ಮೋಹ ಪ್ರಚೋದಕವಾಗಲಿ ಕಾಣಲಾರೆವು. ಬದಲಾಗಿ ವ್ಯಕ್ತಿಗೆ ಹಿತ ಮತ್ತು ಸಮಾಜದ ಅಭಿವೃದ್ಧಿಕಾರಕವಾದುದನ್ನು ನಾವು ಕಾಣುತ್ತೇವೆ. ಕೆಲವರಲ್ಲಿ ಒಂದು ಮೂಢನಂಬಿಕೆಯಿದೆ, ಅದು ಏನೆಂದರೆ ಬುದ್ಧರ ಬೋಧನೆ ಕೇವಲ ಭಿಕ್ಷುಗಳಿಗಾಗಿ ಮಾತ್ರ, ವೈರಾಗ್ಯ ಮಾತ್ರ ಬೋಧಿಸಿದ್ದಾರೆ ಎಂದು. ಆದರೆ ಅದು ಸರಿಯಲ್ಲ, ಅವರು ಗೃಹಸ್ಥರಿಗೂ ಬೋಧಿಸಿದ ಅಪಾರ ಸುತ್ತಗಳಿವೆ. ಅವುಗಳಲ್ಲಿ ನಾವು ನ್ಯಾಯಯುತ ಪರಿಶ್ರಮ, ಯೋಗ್ಯವಾದ ಜೀವನೋಪಾಯ, ಶೀಲ, ದಾನ, ಮೈತ್ರಿ, ಪ್ರಜ್ಞಾಭಿವೃದ್ಧಿ ಸಮಚಿತ್ತತೆ, ವಿಚಾರಶೀಲತೆ ಇತ್ಯಾದಿಗಳ ಬೋಧನೆಯನ್ನು ಅರಿಯಲು ನಾವು ಪೂರ್ವಾಗ್ರಹ ಪೀಡಿತರಾಗದೆ, ಪಕ್ಷಪಾತವಿಲ್ಲದೆ ನಾವು ಅರಿಯಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಕಥೆಯಿದೆ.

ಚೀನಾದಲ್ಲಿ ಒಮ್ಮೆ ಒಬ್ಬ ವಿದ್ವಾಂಸನು ಧಮ್ಮವನ್ನು ಅರಿಯಲು ಬೌದ್ಧ ಭಿಕ್ಷುವಿನ ಬಳಿಗೆ ಹೋದನು. ಆಗ ಅಲ್ಲಿ ಆ ಬೌದ್ಧ ಗುರುವು ಧಮ್ಮವನ್ನು ವಿವರಿಸಲು ಹೋದರೆ, ಆತನು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತ ಅಡ್ಡಿಯುಂಟು ಮಾಡುತ್ತಿದ್ದನು. ಆಗ ಬೌದ್ಧಗುರು ಬೋಧನೆ ನಿಲ್ಲಿಸಿ ಶಿಷ್ಯರಿಗೆ ಚಹಾ ತೆಗೆದುಕೊಂಡು ಬರಲು ಆಜ್ಞಾಪಿಸಿದರು. ಆ ವಿದ್ವಾಂಸನಿಗೆ ಚಹಾವನ್ನು ನೀಡಿದರು. ನಂತರ ಆತನ ಚಹಾ ಬಟ್ಟಲಿಗೆ ಚಹಾ ತುಂಬಿ ಹರಿಯುವಷ್ಟು ಸುರಿಯುತ್ತ ಹೋದರು.



“ನಿಲ್ಲಿಸಿ” ಎಂದು ಕೂಗಿದ ಆ ವಿದ್ವಾಂಸ, “ಈ ಬಟ್ಟಲು ತುಂಬಿದೆ, ಅದಕ್ಕೆ ಇನ್ನಷ್ಟು ಸುರಿಯಬೇಕಿಲ್ಲ, ಖಾಲಿ ಬಟ್ಟಲಿಗೆ ಮಾತ್ರ ಸುರಿಯಬೇಕು.”

“ಅದೇರೀತಿಯಲ್ಲಿ ನೀವು ಸಹಾ, ನಿಮ್ಮ ಅಭಿಪ್ರಾಯಗಳಿಂದ ತುಂಬಿಹೋಗಿದ್ದೀರಿ, ನಿಮ್ಮ ಅಭಿಪ್ರಾಯಗಳಿಂದ ನಿಮ್ಮ ಮನಸ್ಸು ಬರಿದಾಗದಿದ್ದಾಗ, ನೀವು ಈ ಬೋಧನೆಯನ್ನು ಹೇಗೆತಾನೇ ಸ್ವಾದಿಸಬಲ್ಲಿರಿ.”

ಆಗ ಆ ವಿದ್ವಾಂಸನು ಕ್ಷಮೆಯಾಚಿಸಿ ಪೂರ್ವಾಗ್ರಹ ಪೀಡಿತನಾಗದೆ ಧಮ್ಮವನ್ನು ಆಲಿಸಿ, ಅದರ ಮೌಲ್ಯವನ್ನು ಅರಿತನು.

ಆದ್ದರಿಂದ ನಾವು ಬುದ್ಧರ ಬೋಧನೆಯ ಮಹತ್ವ ಅರಿಯಲು ನಮ್ಮ ಸಿದ್ಧಾಂತಗಳ, ಪಕ್ಷಪಾತ ಮೀರಿ ವೀಕ್ಷಿಸಬೇಕಾಗಿದೆ. ತೋರಿಕೆಯ ಆಚೆಯ ಯತಾಭೂತತೆಯನ್ನು ಅರಿಯಬೇಕಾಗಿದೆ.

ಸತ್ಯವನ್ನು ಅರಿಯಲು ಕೇವಲ ಯಂತ್ರಗಳಾಗಲಿ, ಇಂದ್ರೀಯಗಳಾಗಲಿ ಸಾಲದು, ಮನಸ್ಸು ಸಾಲದು, ಧ್ಯಾನದಿಂದ ಸಿಗುವ ಅಭಿಜ್ಞಾ ಬಲಗಳು, ಪ್ರಜ್ಞೆಯು ಎಲ್ಲಕ್ಕಿಂತ ಹೆಚ್ಚಾಗಿ ವಿಚಾರಶೀಲತೆಯು ಅತ್ಯಾವಶ್ಯಕವಾಗಿದೆ. ಕೆಲವರಲ್ಲಿ ಧ್ಯಾನವು ವ್ಯರ್ಥ, ಅಥವಾ ಧ್ಯಾನವು ಕೇವಲ ಭಿಕ್ಷುಗಳಿಗಾಗಿಯೇ ಎಂಬ ಮಿಥ್ಯಾದೃಷ್ಟಿಯೂ ಇದೆ. ಆದರೆ ಧ್ಯಾನವು ಆರೋಗ್ಯಕ್ಕೆ, ಮಾನಸಿಕ ಶಾಂತಿಗೆ, ಉನ್ನತವಾದ ಸುಖಕ್ಕೆ, ವಿಮುಕ್ತಿಗೆ, ವಿಶುದ್ಧಿಗೆ, ಅಷ್ಟೇ ಅಲ್ಲದೆ ಅಪಾರ ಚಿಂತನಾಭಿವೃದ್ಧಿಗೂ ಸಹಕಾರಿಯಾಗಿದೆ. ಪ್ರಜ್ಞಾಭಿವೃದ್ಧಿಗೂ, ಅಭಿಜ್ಞಾ ಸಂಬೋಧಿಪ್ರಾಪ್ತಿಗೂ ಸಹಾಯಕರವಾಗಿದೆ. ಈ ಕೃತಿಯ ಉದ್ದೇಶ ಪಕ್ಷಪಾತರಹಿತ ಚಿಂತನೆಗಾಗಿ, ವಿಮರ್ಶೆಗಾಗಿ, ತುಲನಾತ್ಮಕ ವಿಚಾರಶೀಲತೆಗಾಗಿ, ವಿಜ್ಞಾನಕ್ಕೂ ಎಟುಕದ ವಿಷಯಗಳ ಅರಿವಿಗಾಗಿ ಆಗಿದೆಹೊರತು ವಾದ ವಿವಾದಗಳನ್ನು ಸೃಷ್ಟಿಸಲು ಖಂಡಿತ ಅಲ್ಲ. ಏಕೆಂದರೆ ಭಗವಾನರು ಒಮ್ಮೆ ಹೀಗೆ ಹೇಳಿದ್ದಾರೆ:

“ಒಂದು ಸಿದ್ಧಾಂತಕ್ಕೆ ಅಂಟಿಕೊಂಡು, ಪರರ ದೃಷ್ಟಿಕೋನಗಳನ್ನು ಕೀಳಾಗಿ ಕಾಣುವುದನ್ನು ಜ್ಞಾನಿಗಳು ತಡೆ ಎಂದಿದ್ದಾರೆ.”

“ಇಷ್ಟೊಂದು ಶುಭ್ರವಾದ, ಪರಿಶುದ್ಧವಾದ ಈ ಬೋಧನೆಗೂ ನೀವು ಅಂಟಿದರೆ, ನೀವು ತಪ್ಪದ ಬೋಧನೆ ಅರ್ಥಮಾಡಿಕೊಳ್ಳಿ, ಹೇಗೆಂದರೆ ಬೋಧನೆ ದಾಟುವುದಕ್ಕಾಗಿ ಹೊರತು ಹಿಡಿದುಕೊಳ್ಳಲಿಕ್ಕೆ ಅಲ್ಲ.”

ಸರ್ವರಲ್ಲೂ, ಸಮ್ಮಾದೃಷ್ಟಿ ಪ್ರಾಪ್ತಿಯಾಗಲೆಂದು ಬಯಸುತ್ತೇನೆ.

॥ ಭವತು ಸಬ್ಬ ಮಂಗಳಂ ॥

ಇಂತಿ ನಿಮ್ಮವ

**ಅನೀಶ್ ಬೋಧ್**

## ಪರಿವಿಡಿ


| | | |
|---|---|---|
| ಭಾಗ–I | **ಮಿಥ್ಯಾದೃಷ್ಟಿಗಳು ಮತ್ತು ವಿಚಾರಶೀಲತೆ** | **1** |
| | ವಿಚಾರಶೀಲತೆ | **3** |
| | ಸತ್ಯದ ರಕ್ಷಣೆ ಮತ್ತು ಸಾಕ್ಷಾತ್ಕಾರ | 4 |
| | ಧಮ್ಮ ಶ್ರವಣದ ಐದು ಲಾಭಗಳು | 4 |
| | ಸತ್ಯವನ್ನು ಅರಿಯಲು ಮಾರ್ಗ | 5 |
| | ವಿಚಾರಶೀಲತೆಯ ಅಗತ್ಯ ಮತ್ತು ವಿಜ್ಞಾನದ ಮಿತಿ | 5 |
| | ನಂಬುವುದರ ಪರಿಣಾಮ | 6 |
| | ಕಾಲಾಮ (ವಿಚಾರಶೀಲತೆಯ) ಸುತ್ತ | 8 |
| | ಸಂಪ್ರದಾಯಗಳು ಸ್ಥಾಪಿತವಾಗುವ ಬಗೆ | 12 |
| | ಸಕ್ಕನ ಶ್ರೇಷ್ಠ ಪ್ರಶ್ನೆ | 12 |
| | ಚಿಂತನಾತೀತವಾದುದು ಯಾವುದು? | 14 |
| | ಸಾಕ್ಷಾತ್ಕರಿಸಲೇಬೇಕಾದ ನಾಲ್ಕು ಉಪಾದಾನಗಳು | 14 |
| | ಅಜ್ಞಾನಿಯಾರು ? | 15 |
| | ಅವಿಜ್ಜ ಸುತ್ತ (ಅವಿದ್ಯೆ/ಅಜ್ಞಾನ ಸುತ್ತ) | 15 |
| | ಅವಿದ್ಯೆಯೇ ಅಕುಶಲ ಧಮ್ಮಗಳಿಗೆ ನಾಯಕ | 16 |
| | ವಿಪಲ್ಲಾಸಗಳು | 17 |
| | ವಿಪಲ್ಲಾಸ ಸುತ್ತ | 18 |
| ಭಾಗ–II | **ಮಿಥ್ಯಾದೃಷ್ಟಿಯ ಭೀಕರತೆ** | 19 |
| | ಎರಡು ಬಗೆಯ ಮೂರ್ಖರು | 22 |
| | ಭಯ ಸುತ್ತ | 22 |
| | ದೃಷ್ಟಿಗಳು ಉದಯಿಸಲು ತಕ್ಷಣದ ಕಾರಣ | 26 |
| ಭಾಗ–III | **ಮಿಥ್ಯಾದೃಷ್ಟಿಗಳ ವಿಧಗಳು** | 27 |
| | ಮಿಥ್ಯಾದೃಷ್ಟಿಗಳ ಐದು ಬಗೆಗಳು | 27 |
| | ಮಿಥ್ಯಾದೃಷ್ಟಿಗಳ ಪರ್ಯಾಯ ವರ್ಗೀಕರಣ | 27 |
| | ಬುದ್ಧರ ಕಾಲದಲ್ಲಿದ್ದ ದಾರ್ಶನಿಕರು | 29 |
| | ಮೂರು ಬಗೆಯ ಮಿಥ್ಯಾ ಸಿದ್ಧಾಂತಗಳು | 31 |
| | ಮಿಥ್ಯಾದೃಷ್ಟಿಗಳಿಗೆ ಬೋಧಿಸತ್ವರ ಖಂಡನೆ | 34 |
| | ಭೂರಿದತ್ತ ಜಾತಕದಲ್ಲೂ ಬೋಧಿಸತ್ತರ ಖಂಡನೆ... | 36 |
| | ಅಂತಗಹಿಕಾ ಮಿಥ್ಯಾದೃಷ್ಟಿಗಳು | 36 |
| | ಸತ್ಪುರುಷನನ್ನು ಹೇಗೆ ಅರಿಯುವುದು? | 37 |
| | ವ್ಯಕ್ತಿಯನ್ನು ಅರಿಯುವುದು ಹೇಗೆ? | 41 |
| | ಅತಿರೇಕದ ದೃಷ್ಟಿಗಳು | 42 |
| | ಲೋಕಯಾತಿಕಾ ಬ್ರಾಹ್ಮಣನ ಪ್ರಶ್ನೆಗಳು | 43 |
| | ಬಲವೇ ಸತ್ಯವಲ್ಲ | 43 |
| | ವ್ಯಕ್ತಿ ವಿಕಾಸಕ್ಕೆ ಅಡ್ಡಿಯಾದ ಅಭಿಪ್ರಾಯಗಳು | 44 |
| | ಇರುವಾಗ ಇಲ್ಲವೆನ್ನುವುದು ತಪ್ಪು | 45 |
| | ನಿರ್ವಿವಾದ ಧಮ್ಮ | 45 |
| | ಮುಗ್ಧರಿಗೆ ಮಾಡಿದ ಪಾಪ ಖಂಡಿತ ಹಿಂತಿರುಗುತ್ತದೆ | 45 |
| | ಪಾಪ ಫಲದಿಂದ ತಪ್ಪಿಸಿಕೊಳ್ಳಲಾಗುವ ಸ್ಥಳವೇ ಇಲ್ಲ. | 46 |
| ಭಾಗ–IV | **ಮೂಢನಂಬಿಕೆಗಳ ಖಂಡನೆ** | 48 |
| | ಮೂಢನಂಬಿಕೆ ಬೇಡ | 48 |
| | ಆಹಾರದಿಂದ ಶುದ್ಧಿಯಿಲ್ಲ | 48 |
| | ಪ್ರಾಣಿಗಳ ಅನುಕರಣೆಗೆ ಖಂಡನೆ | 48 |
| | ಪ್ರಾಣಿಬಲಿಯ ಯಾಗಗಳ ಖಂಡನೆ | 49 |
| | ಅಸ್ಸಲಾಯನ ಸುತ್ತ (ವರ್ಣ ವ್ಯವಸ್ಥೆಯ ಖಂಡನೆ) | 50 |
| | ಬಾಹ್ಯಾಚರಣೆಯಿಂದ ಶುದ್ಧಿಯಿಲ್ಲ | 51 |
| | ಸೀಲಬ್ಬತ ಪಾರಾಮಾಸ | 51 |
| | ನದಿಗಳ ಸ್ನಾನದಿಂದ ಮಾನವನ ಶುದ್ಧಿಯಾಗುವುದೇ? | 55 |
| | ಹೆಣ್ಣು ಮಗುವು ಅಶುಭವೇ? | 56 |
| | ಯುದ್ಧದಲ್ಲಿ ಸತ್ತರೇ ಸ್ವರ್ಗ ಸಿಗುವುದೇ? | 56 |
| ಭಾಗ–V | **ಸಮ್ಯಕ್ (ಸಮ್ಮಾ ದೃಷ್ಟಿಕೋನ)** | 58 |
| | ಸಮ್ಮಾದೃಷ್ಟಿ | 58 |
| | ಕುಶಲ, ಅಕುಶಲ ಮತ್ತು ಅವುಗಳ ಮೂಲ ಅರಿತಾಗ ಸಮ್ಮಾದೃಷ್ಟಿ | 58 |
| | 10 ಪುಣ್ಯಕ್ರಿಯಾ ವಸ್ತುಗಳಲ್ಲಿ ಸಮ್ಮಾದೃಷ್ಟಿಯೂ ಒಂದು | 60 |
| | ಎಲ್ಲಿಯವರೆಗೆ ಸಮ್ಮಾದೃಷ್ಟಿ | 60 |
| | ಆರ್ಯ ಸತ್ಯಗಳು | 61 |

| | | |
|---|---|---|
| | ಸಮ್ಮಾದೃಷ್ಟಿಯೇ ಮೊದಲು | 62 |
| | ಮಿಥ್ಯಾ ಯೋಚನೆಯಿಂದ ಮಿಥ್ಯಾದೃಷ್ಟಿ, ಮಿಥ್ಯಾದೃಷ್ಟಿಯಿಂದ ಬಂಧನ | 63 |
| | ಸಮ್ಮಾದೃಷ್ಟಿಯಿಂದ ಬಿಡುಗಡೆ | 63 |
| | ಐದು ವಿಧದ ಸಮ್ಮಾದೃಷ್ಟಿ | 64 |
| | ಐದು ವಿಷಯಗಳಿಂದಾಗಿ ಸಮ್ಮಾದಿಟ್ಟಿ ಫಲವಾಗುತ್ತದೆ | 65 |
| | ಸಮ್ಮಾದಿಟ್ಠಿ ಹೊಂದಿರುವವರ ಲಕ್ಷಣಗಳು | 65 |
| | ಆನಂದವೇ ಅಳುವಿಗೆ ಕಾರಣ | 66 |
| ಭಾಗ–VI | **ಸತ್ಕಾಯ ದಿಟ್ಠಿ** | 67 |
| | ಸತ್ಕಾಯ ದಿಟ್ಟಿ | 67 |
| | ನಿಮ್ಮದಲ್ಲದ್ದನ್ನು ಬಿಟ್ಟುಬಿಡಿ | 68 |
| | ಆತ್ಮವು ಸರ್ವ ಶಕ್ತವೇ? ಪರಿಶುದ್ಧವೇ? ನಿತ್ಯವೇ? | 68 |
| | ಆತ್ಮರಹಿತ ಸ್ಪಷ್ಟ ಅರಿವು | 70 |
| | ಆತ್ಮದ ಬಗ್ಗೆ ಚರ್ಚೆ | 72 |
| ಭಾಗ–VII | **ಬ್ರಹ್ಮಜಾಲ ಸುತ್ತ** | 76 |
| ಭಾಗ–VIII | **ತಡೆಯುಂಟುಮಾಡುವ ಐದು ಸಂಶಯಗಳು ಮತ್ತು 10 ತಡೆಗಳು** | 104 |
| | ಲೋಕವು ಬಯಸುವ 10 ವಿಷಯಗಳಿಗೆ ಸಹಕಾರಿ | 105 |
| | ಲೋಕೋತ್ತರ ಮಾರ್ಗದಲ್ಲಿ ದೃಷ್ಟಿಗಳ ನಾಶ | 105 |
| | ಕಂಖಾವಿತರಣ–ವಿಶುದ್ಧಿ | 112 |
| | ತ್ರಿಶರಣುವಿಗೆ ಮೀರಿದ ಶ್ರೇಷ್ಠ ಶರಣಿಲ್ಲ | 118 |
| | ಸೋತಪನ್ನ ಯಾರು ? | 119 |
| | ಸೋತಾಪನ್ನ ಹೇಗಾಗುತ್ತಾನೆ? | 120 |
| ಭಾಗ–IX | **ಬುದ್ಧರು ಕೆಲವು ಪ್ರಶ್ನೆಗಳಿಗೆ ಏಕೆ ಉತ್ತರಿಸಲಿಲ್ಲ?** | 121 |
| | ಕುರುಡರ ದೃಷ್ಟಿಕೋನ | 122 |
| | ಬುದ್ಧರ ಮೌನ ? | 123 |
| | ತಥಾಗತರು ಮರಣದ ಬಳಿಕ ಏನಾಗುತ್ತಾರೆ? | 124 |
| ಭಾಗ–X | **ನಾವು ಕಲಿಯಲೇಬೇಕಾದ ಪಾಠವೇನು ?** | 126 |




# ಉದ್ದೇಶ

"ಓ ನಿಗ್ರೋಧ, ನಾನು ಬೋಧಿಸುತ್ತಿರುವುದು ಏತಕ್ಕೆಂದರೆ ಶಿಷ್ಯರನ್ನು ಪಡೆಯಲು, ಗೆಲ್ಲಲು ಅಲ್ಲ, ಅಥವಾ ನಿಮ್ಮ ಧರ್ಮದಿಂದ ಜಾರಿ ಬೀಳಲೆಂದು ಅಲ್ಲ ಅಥವಾ ನಿಮ್ಮ ಜೀವನಾಶ್ರೈಲಿಯನ್ನು ಬಿಡಲು ಅಲ್ಲ, ಅಥವಾ ನೀವು ನಂಬಿರುವುದನ್ನು ಬಿಡಲೆಂದು ಅಲ್ಲ ಅಥವಾ ನಿಮ್ಮ ಗುರುಗಳನ್ನು ಬಿಟ್ಟುಬಿಡಲಿ ಎಂದೂ ಅಲ್ಲ, ಅಥವಾ ನೀವು ನಂಬಿದಂತಹ ಕೆಟ್ಟದ್ದನ್ನು ಅದೇ ಮಾಡಲೆಂದು ಅಲ್ಲ, ಅಥವಾ ನೀವು ನಂಬಿದಂತಹ ಒಳ್ಳೆಯದನ್ನು ತ್ಯಜಿಸಲಿ ಎಂದೂ ಅಲ್ಲ, ನೀವು ಹಾಗೆ ತಿಳಿಯಬಾರದು."

"ಆದರೆ ನಿಗ್ರೋಧ, ಕೆಲವೊಂದು ಪಾಪವು ಅಕುಶಲವಾದವು, ಕಲುಶಿತವಾದವು ಇವೆ. ಅವನ್ನು ಬಿಡಲೆಂದೇ ನಾನು ಧಮ್ಮವನ್ನು ಬೋಧಿಸುತ್ತಿದ್ದೇನೆ. ಈ ಹಾದಿಯಲ್ಲಿ ನಡೆದಾಗ ಆ ಕಶ್ಮಲಗಳೆಲ್ಲಾ ನಾಶವಾಗಿ, ಕುಶಲ ವಿಷಯಗಳು ಸ್ಥಾಪಿತವಾಗಿ ವೃದ್ಧಿಯಾಗುತ್ತದೆ ಮತ್ತು ಒಬ್ಬನು ಇಲ್ಲಿಯೇ ಮತ್ತು ಈಗಲೇ ಪೂರ್ಣ ಸಾಕ್ಷಾತ್ಕಾರ ಪ್ರಾಪ್ತಿಮಾಡಿ, ಸುಖವನ್ನು, ಅಭಿಜ್ಞಾವನ್ನು, ಪ್ರಜ್ಞೆಯ ಪರಿಪೂರ್ಣತೆ ಯನ್ನು ಪಡೆಯುತ್ತಾನೆ ಮತ್ತು ದುಃಖದಿಂದ ವಿಮುಕ್ತನಾಗುತ್ತಾನೆ."

**ಭಗವಾನ್ ಬುದ್ಧರು**

---

## ಗ್ರಂಥಕ್ಕೆ ಆಧಾರಗಳು

ಸುತ್ತಪಿಟಕದಲ್ಲಿರುವ
ದೀಘನಿಕಾಯ
ಮಜ್ಜಿಮನಿಕಾಯ
ಅಂಗುತ್ತರ ನಿಕಾಯ
ಸಂಯುಕ್ತ ನಿಕಾಯ
ಖುದ್ದಕ ನಿಕಾಯ

ವಿಸುದ್ದಿ ಮಾರ್ಗ

ಮಜ್ಜಿಮ ನಿಕಾಯ – ಅನುವಾದ : ಬಿ.ವಿ. ರಾಜಾರಾಂ

ದೀಘನಿಕಾಯ – ಅನುವಾದ : ಹೆಚ್.ವಿ. ಶ್ರೀರಂಗರಾಜ್

ಪೂಜ್ಯ ಸಾರದ ಮಹಾಥೇರರವರ Treasure of Dhamma

ಇತ್ಯಾದಿ.

॥ ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ದಸ್ಸ ॥

# ಮಿಥ್ಯಾದೃಷ್ಟಿಗಳ ಕತ್ತಲೆಯಿಂದ ಸಮ್ಯಕ್‌ದೃಷ್ಟಿಯ ಬೆಳಕಿನೆಡೆಗೆ

## I. ಮಿಥ್ಯಾದೃಷ್ಟಿಗಳು ಮತ್ತು ವಿಚಾರಶೀಲತೆ

*"ಯಾವುದೇ ರೀತಿಯಾದ ಹಾನಿಯನ್ನು ಶತ್ರುವು ಶತ್ರುವಿಗೆ ಮಾಡುವುದಕ್ಕಿಂತ ಅಥವಾ ದ್ವೇಷಿಯು ದ್ವೇಷಿಗೆ ಮಾಡುವುದಕ್ಕಿಂತ ಹೆಚ್ಚಿನ ಹಾನಿಯು ಮಿಥ್ಯಾ ಮಾರ್ಗದರ್ಶಿತ ಚಿತ್ತದಿಂದ ಒಬ್ಬನಿಗೆ ಆಗುತ್ತದೆ"* – **ಬುದ್ಧ ಭಗವಾನರು**

*"ಶುದ್ಧ ವ್ಯಕ್ತಿಯು ಲೋಕದಲ್ಲಿ ಎಲ್ಲಿಯೂ ಕಲ್ಪಿತದೃಷ್ಟಿ ಹೊಂದಿಸಲಾರನು. ಆ ಶುದ್ಧ ವ್ಯಕ್ತಿಯು ಮಾಯಾ ಮತ್ತು ಅಭಿಮಾನವನ್ನು ತ್ಯಜಿಸಿ ಅನಾಸಕ್ತನಾಗಿ, ಮತ್ತೆ ಯಾವ ಕಾರಣಕ್ಕಾಗಿ ವಿವಾದದಲ್ಲಿ ಬೀಳಬೇಕು"* – **ಬುದ್ಧ ಭಗವಾನರು**

ದಿಟ್ಠಿ (ದೃಷ್ಟಿ) ಅಂದರೆ ದೃಷ್ಟಿಕೋನ, ಅರಿವು, ನಂಬಿಕೆ, ಸಿದ್ಧಾಂತ ಮತ್ತು ಅಭಿಪ್ರಾಯ. ಆದರೆ ಇಲ್ಲಿ ಸಮ್ಮಾದೃಷ್ಟಿ ಎಂದು ಭಾವಿಸಬಾರದು. ಇಲ್ಲಿ ದಿಟ್ಟಿ ಎಂದರೆ ಸದಾ ಮಿಥ್ಯಾದೃಷ್ಟಿ, ಮೂಢನಂಬಿಕೆಗಳಿಗೆ ಬಳಸುತ್ತಾರೆ. ಬುದ್ಧ ಜ್ಞಾನವನ್ನು ಹೊಂದಿರುವವರು ಈ ದಿಟ್ಟಿ ಅಥವಾ ಮಿಥ್ಯಾದೃಷ್ಟಿಗಳಿಂದ ಮುಕ್ತರಾಗಿರುತ್ತಾರೆ. ಅದರಲ್ಲೂ ಸೋತಪನ್ನ ಅಥವಾ ಅವರಿಗಿಂತ ಹಿರಿಯರು ಮಾತ್ರ ಪೂರ್ಣವಾಗಿ ದೃಷ್ಟಿಜಾಲದಿಂದ ಹೊರ ಬಂದಿರುತ್ತಾರೆ. ಬುದ್ಧರು ಇದರ ಅಪಾಯವನ್ನು ಸ್ಪಷ್ಟವಾಗಿ ಅರಿತಿರುವವರಲ್ಲಿ ಇತಿಹಾಸದಲ್ಲೇ ಮೊದಲಿಗರಾಗಿದ್ದಾರೆ. ಅಷ್ಟೇ ಅಲ್ಲ, ಇದನ್ನು ಮಾನಸಿಕ ಪಾಪ, ಪಾಪದ ಮೂಲ ಎಂದು ಸ್ಪಷ್ಟವಾಗಿ ವಿವರಿಸಿದ್ದಾರೆ. ಮಿಥ್ಯಾದೃಷ್ಟಿಗಳು ಚಿತ್ತದ ಅನುಶಯಗಳಲ್ಲಿ ಒಂದಾಗಿದೆ, ಆಸವಗಳಲ್ಲಿ ಒಂದಾಗಿದೆ, ಉಪದಾನಗಳಲ್ಲಿ ಒಂದಾಗಿದೆ, ವಿಪಲ್ಲಾಸಗಳಲ್ಲಿ ಒಂದಾಗಿದೆ, ಅಕುಶಲಚಿತ್ತದಲ್ಲಿ ಒಂದಾಗಿದೆ, ಲೋಭಕ್ಕೆ ಮೂಲವಾಗಿದೆ, ದ್ವೇಷಕ್ಕೂ ಮೂಲವಾಗಿದೆ.

ಇದಕ್ಕೆ ವಿರುದ್ಧವಾದುದೇ ಸಮ್ಮಾದೃಷ್ಟಿ. ಅಂದರೆ ನಾಲ್ಕು ಆರ್ಯಗಳು ಜ್ಞಾನವೇ ಆಗಿದೆ.

ಇಷ್ಟಕ್ಕೂ ಇದಕ್ಕೆ ನಾವು ಏತಕ್ಕೆ ಇಷ್ಟೊಂದು ಮಹತ್ವ ನೀಡಬೇಕು. ಅದಕ್ಕೆ ಪ್ರಬಲ ಕಾರಣವಿದೆ. ಅದೇನೆಂದರೆ ನಮ್ಮ ಕಾರ್ಯ ಮತ್ತು ಮಾತುಗಳಿಗೆ ಮನಸ್ಸಿನ ಯೋಚನೆಗಳೇ ಕಾರಣಗಳಾಗಿವೆ. ಆದರೆ ಈ ಮನಸ್ಸಿನ ಯೋಚನೆಗಳಿಗೆ ಮಾರ್ಗದರ್ಶಿ ಈ ದೃಷ್ಟಿಕೋನಗಳೇ ಆಗಿವೆ. ಈ ಸತ್ಯದ ಅರ್ಥದಲ್ಲಿ ಇದಕ್ಕೆ ನಾವು ಅತ್ಯಂತ ಮಹತ್ವ ನೀಡಬೇಕಿದೆ.



ಅದರಿಂದಾಗಿ ನಮ್ಮ ದುಃಖಗಳಿಗೆ ಮೂಲ ನಮ್ಮ ಕರ್ಮಗಳಾದರೆ ಅದಕ್ಕೆ ಮೂಲ ನಮ್ಮ ಯೋಚನೆಗಳು, ಯೋಚನೆಗಳಿಗೆ ಮೂಲ ದೃಷ್ಟಿಕೋನಗಳು, ಅದಕ್ಕೆ ಮೂಲ ಕಾರಣ ಅಜ್ಞಾನವಾಗಿದೆ. ಈ ರೀತಿಯಲ್ಲಿ ನಮ್ಮ ಸುಖ ದುಃಖಗಳಿಗೆ ಕಾರಣ ಈ ದೃಷ್ಟಿಗಳೇ ಆಗಿದೆ. ಇವು ಆರ್ಯ ಸತ್ಯಗಳಿಂದ ಮಾರ್ಗದರ್ಶಿತ್ವವಾದರೆ ದುಃಖವಿಮುಕ್ತನಾಗಿ ಸುಖಿಯಾಗಿರುತ್ತಾನೆ. ಮಿಥ್ಯಾದೃಷ್ಟಿಗಳಿಂದ ಮಾರ್ಗದರ್ಶಿತನಾದರೆ ಆತನು ದುಃಖಿಯಾಗಿಯೇ ಇರುತ್ತಾನೆ. ಆದ್ದರಿಂದಲೇ ಈ ಗಾಥೆ ಹೇಳಲಾಗಿದೆ.

*"ಯಾರು ಅಸಾರವನ್ನು ಸಾರವೆಂದು ಮತ್ತು ಸಾರವನ್ನು ಅಸಾರವೆಂದು ತಿಳಿಯುವರೋ ಅಂತಹ ಮಿಥ್ಯಾಸಂಕಲ್ಪಗಳಿರುವವರು ಎಂದಿಗೂ ಸಾರದ ನೆಲೆ ತಲುಪಲಾರರು".*

*"ಆದರೆ ಯಾರು ಸಾರವನ್ನು ಸಾರವೆಂದೇ ಮತ್ತು ಅಸಾರವನ್ನು ಅಸಾರವೆಂದೇ ತಿಳಿಯುವರೋ ಅಂತಹ ಸಮ್ಮಾಸಂಕಲ್ಪಗಳಿರುವವರು ಸಾರದ ನೆಲೆ ತಲುಪುವರು."*

ಹಾಗೆಯೇ ಹೀಗೂ ಹೇಳಿರುವರು:

"ತಾಯಿಗಿಂತ, ತಂದೆಗಿಂತ ಅಥವಾ ಯಾವುದೇ ಬಂಧು–ಮಿತ್ರರಿಗಿಂತ ಹೆಚ್ಚಿನ ಹಿತವನ್ನು, ಲಾಭವನ್ನು ಸಮ್ಮಾದಿಕ್ಕಿನಲ್ಲಿ (ದೃಷ್ಟಿ) ನಿರ್ದೇಶಿತವಾದ ಚಿತ್ತವು ಒಬ್ಬನಿಗೆ ಮಾಡುತ್ತದೆ."

ಇದನ್ನು ಉದಾಹರಣೆ ಸಹಿತ ವಿವರಿಸುವೆನು. ಒಬ್ಬನಿಗೆ 'ಕುಡಿತ ತಪ್ಪಲ್ಲ' ಎಂಬ 'ಮಿಥ್ಯಾದೃಷ್ಟಿ' ಇದ್ದಾಗ ಆತನು ಅಂತಹ ಮಿಥ್ಯಾಸಂಕಲ್ಪ (ಯೋಚನೆಗಳಲ್ಲಿ) ಮುಳುಗುವನು. ನಂತರ ಅದೇರೀತಿಯ ಮಿಥ್ಯಾವಾಚಾ, ಮಿಥ್ಯಾಕರ್ಮ (ಅಂದರೆ ಕುಡಿತ ಸೇವನೆ), ಅದೇರೀತಿ ಮಿಥ್ಯಾ ಜೀವನ (ಕುಡಿತದ ಅಂಗಡಿಯನ್ನು ತೆರೆಯಬಹುದು). ಆತನ ಚಿತ್ತವು ಅನಿಯಂತ್ರಿತವಾಗುತ್ತದೆ. (ಮಿಥ್ಯಾ ವ್ಯಾಯಾಮ) ಆತನ ಚಿತ್ತವು ಎಚ್ಚರಿಕೆ ಹೀನವಾಗುತ್ತದೆ (ಮಿಥ್ಯಾಸ್ಮೃತಿ). ಆತನು ಪಾಪಗಳಿಕೆ ಮಾಡುತ್ತಾನೆ (ಮಿಥ್ಯಾ ಸಮಾಧಿ).

ಹೀಗೆ ಆತನು ಮಿಥ್ಯಾ ಮಾರ್ಗದಲ್ಲಿ ತಲ್ಲೀನನಾಗಿ ಸರ್ವಭ್ರಷ್ಟನಾಗಿ ಇಹಪರ ಗಳೆರಡನ್ನು ಕಳೆದುಕೊಳ್ಳುತ್ತಾನೆ. ಆತನ ಅವನತಿಗೆ ಮೂಲ 'ಕುಡಿತ ತಪ್ಪಲ್ಲ' ಎಂಬ ಮಿಥ್ಯಾದೃಷ್ಟಿಯೇ ಆಗಿತ್ತು.

ಆದರೆ 'ಕುಡಿತ ತಪ್ಪು, ಅದು ಪಾಪ' ಎಂಬ ಸಮ್ಮಾದೃಷ್ಟಿ ಇದ್ದಾಗ ಆತನಿಂದ ಆರ್ಯ ಅಷ್ಟಾಂಗ ಪಾಲನೆಯಾಗಿ ಆ ಒಂದು ಬಂಧನದಿಂದಾದರೂ ಮುಕ್ತನಾಗಿರುತ್ತಾನೆ."

ಆದ್ದರಿಂದಾಗಿ ನಮ್ಮ ಇಡೀ ಜೀವನದಲ್ಲಿ ಈ ಸಮ್ಮಾದೃಷ್ಟಿ ಮತ್ತು ಮಿಥ್ಯಾದೃಷ್ಟಿಗಳು ಹಾಸು ಹೊಕ್ಕಿವೆ. ನಾವು ದುಃಖವನ್ನು ಆಯ್ಕೆ ಮಾಡದೆ ಸುಖವನ್ನೇ ಆಯ್ಕೆ ಮಾಡುವುದಾದರೆ ನಮ್ಮ ಪ್ರಯಾಣವನ್ನು ಮೊಟ್ಟಮೊದಲಿಗೆ ಮಿಥ್ಯಾದೃಷ್ಟಿಗಳಿಂದ ಸಮ್ಮಾದೃಷ್ಟಿಗಳ ಕಡೆಗೆ ಬೆಳೆಸಬೇಕಾಗುತ್ತದೆ.

ಆರ್ಯ ಅಷ್ಟಾಂಗ ಮಾರ್ಗದ ಮೊದಲನೇ ಮೆಟ್ಟಿಲು ಆದ ಸಮ್ಮಾದೃಷ್ಟಿಯನ್ನು ಅರಿಯಬೇಕಾಗುತ್ತದೆ. ಸಮ್ಮಾದೃಷ್ಟಿಯು ಯಾವುದೆಂದು ಅರಿಯುವುದು ಎಷ್ಟು ಮುಖ್ಯವೋ ಹಾಗೆಯೇ ಯಾವುದು ಸಮ್ಮಾದೃಷ್ಟಿಯಲ್ಲ, ಇವು ಮಿಥ್ಯಾದೃಷ್ಟಿಗಳೇ ಎಂದು ಅರಿಯುವುದು ಅಷ್ಟೇ ಪ್ರಮುಖವಾದ ವಿಷಯಗಳಾಗಿವೆ.

ಮಿಥ್ಯಾದೃಷ್ಟಿಯ ಲಕ್ಷಣವೇನೆಂದರೆ ಕಲ್ಪಿತ ದೃಷ್ಟಿಗೆ ಇದೇ ಸತ್ಯವೆಂದು ಪ್ರಬಲವಾಗಿ ನಂಬುವಿಕೆ, ಇದು ಸಮ್ಮಾದೃಷ್ಟಿಯ ಅಭಾವದಿಂದ ಸ್ಥಾಪಿತವಾಗುತ್ತದೆ. ಇದು ಮಾನವನನ್ನು ಮಿಥ್ಯಾ ಮಾರ್ಗದಲ್ಲೇ ಹೋಗುವಂತೆ ಕಾರ್ಯವಹಿಸುತ್ತದೆ. ಇದಕ್ಕೆ ತಕ್ಷಣದ ಕಾರಣ ಅಯೋಗ್ಯವಾದ ಗಮನಹರಿಸುವಿಕೆ, ಮಿಥ್ಯಾಜ್ಞಾನದಲ್ಲಿ ನಂಬಿಕೆ, ಅಂದರೆ ಹಾವನ್ನು ಹಗ್ಗವೆಂದು ಭ್ರಮಿಸುವಿಕೆ, ನಂಬುವಿಕೆ, ವಿಚಾರಹೀನನಾಗಿ ನಂಬುವಿಕೆಯೇ ಆಗಿದೆ. ಆದ್ದರಿಂದಾಗಿ ವಿಚಾರಶೀಲನಾಗುವುದು ನಮ್ಮೆಲ್ಲರ ಅತ್ಯಗತ್ಯ ಕರ್ತವ್ಯವಾಗಿದೆ.

## ವಿಚಾರಶೀಲತೆ :

ಬುದ್ಧಭಗವಾನರ ಬೋಧನೆಯಲ್ಲಿ ನಮಗೆ ಪರಿಪೂರ್ಣ ತರ್ಕ (ಯೋಚಿಸುವ ವಿಧಾನ), ವಿಚಾರಶೀಲತೆ (ಚಿಂತನೆ ಮಾಡುವ ಸಾಮರ್ಥ್ಯ) ಮನಶ್ಶಾಸ್ತ್ರ (ಪ್ರತಿ ಹಂತದ ಚಿತ್ತದ ಮತ್ತು ಚಿತ್ತವೃತ್ತಿಗಳ ಆಗು–ಹೋಗುಗಳ ದರ್ಶನವಾಗುತ್ತದೆ), ತತ್ವಶಾಸ್ತ್ರ (ಆರ್ಯ ಸತ್ಯಗಳ ದರ್ಶನ)ಗಳ ಒಟ್ಟಾರೆ ಅನುಭೂತಿ ಆಗುತ್ತದೆ. ಸತ್ಯ ಸಾಕ್ಷಾತ್ಕಾರಗಳ ಬೋಧನೆ ಮಾತ್ರವಲ್ಲ. ಅದನ್ನು ನಾವು ಹೇಗೆ ಸಾಕ್ಷಾತ್ಕರಿಸಬಹುದು ಎಂದೂ ಸಹ ತಿಳಿಸುತ್ತಾರೆ. ಮಾನಸಿಕ ವಿಕಾಸ ಮತ್ತು ಪ್ರಜ್ಞಾದ ವಿಕಾಸವನ್ನು ತಿಳಿಸಿದ್ದಾರೆ. ಪರರಿಗೆ ಅವಲಂಬನೆಯಾಗದೆ ಸ್ವತಂತ್ರವಾಗಿ ಚಿಂತಿಸುವುದನ್ನು, ಸಾಕ್ಷಾತ್ಕರಿಸುವುದನ್ನು ತಿಳಿಸಿದ್ದಾರೆ. ಒಟ್ಟಾರೆ ಸಿಗುವ ಎಲ್ಲದರಿಂದ ಹೇಗೆ ಸತ್ಯವನ್ನು ಮಿಥ್ಯದಿಂದ ಬೇರ್ಪಡಿಸಿ ಶುದ್ಧೀಕರಿಸಿ ಪಡೆಯಬಹುದೆಂದೆಲ್ಲಾ ವಿವರಿಸಿದ್ದಾರೆ. ಹೀಗೆ ಅವರು ನಮ್ಮ ಚಿಂತನಶೀಲ ಸಾಮರ್ಥ್ಯವನ್ನು ವೃದ್ಧಿಸುವ ಸರ್ವ ಅವಕಾಶವನ್ನು ನೀಡುತ್ತಾರೆ. ಅವರ ಧಮ್ಮದ (ಬೋಧನೆಯ) ಪ್ರಶಂಸೆ ಹೀಗಿದೆ :

"ಬುದ್ಧರ ಧಮ್ಮವು (ಬೋಧನೆಯು) ಸವಿವರವಾಗಿ ಬೋಧಿಸಲ್ಪಟ್ಟಿದೆ. ಸರಿಯಾಗಿ ದೃಷ್ಟಿಸಿಕೊಳ್ಳಿ. ಕಾಲವಿಳಂಬವಿಲ್ಲದೆ ಫಲಕಾರಿಯಾಗಿದೆ, ಸರ್ವಕಾಲಿಕ ಸತ್ಯವಾಗಿದೆ. ಬನ್ನಿ, ಬಹುವಿಧವಾಗಿ ಪರೀಕ್ಷಿಸಿ. ನಂಬದಿರಿ, ಪರೀಕ್ಷಿಸಿ ಸತ್ಯವೆಂದು ಕಂಡುಬಂದರೆ ಮಾತ್ರ ಸ್ವೀಕರಿಸಿ. ಇದು ಊರ್ದ್ವಗಾಮಿಯಾಗಿದೆ, ಉನ್ನತಿಯೆಡೆ, ವಿಶುದ್ಧಿಯೆಡೆ, ನಿಬ್ಬಾಣದತ್ತ ಸಾಗಿಸುವಂತಹದ್ದಾಗಿದೆ. ಆದರೆ ಜ್ಞಾನಿಗಳಿಂದ ನೇರವಾಗಿ ಗ್ರಹಿಸುವಂತಹದ್ದಾಗಿದೆ.

ಸತ್ಯವನ್ನು ಅರಿಯಲು ಜ್ಞಾನಿಗಳಿಗೆ ಮಾತ್ರ ಸಾಧ್ಯ, ಮೂರ್ಖರಿಗಲ್ಲ. ಏಕೆಂದರೆ ಮೂರ್ಖರು ಪಕ್ಷಪಾತಿಗಳಾಗಿರುತ್ತಾರೆ, ಸಿಕ್ಕಿದುದೆಲ್ಲ ನಂಬುತ್ತಾರೆ. ಅಥವಾ ಪ್ರತಿಯೊಂದನ್ನು ಸಂಶಯದಿಂದ ಕಂಡು ಎಲ್ಲವನ್ನು ತಿರಸ್ಕರಿಸುತ್ತಾರೆ. ಎಲ್ಲವನ್ನು ನಂಬುವಿಕೆ ಅಥವಾ ಎಲ್ಲವನ್ನು ತಿರಸ್ಕರಿಸುವಿಕೆ ಇದು ಮೂರ್ಖರ ಅನ್ವೇಷಣಾ ಮಾರ್ಗವಾಗಿದೆ.



ಆದರೆ ಜ್ಞಾನಿಗಳು ಪಕ್ಷಪಾತಕ್ಕೆ ಅತೀತರಾಗುತ್ತಾರೆ. ಅವರು ಪ್ರಿಯವಾದುದಕ್ಕೆ ವಶವಾಗಿ ಇವೆಲ್ಲ ಸತ್ಯವೆಂದು ಹೇಳುವುದಿಲ್ಲ. ಹಾಗೆಯೇ ಅಪ್ರಿಯವಾದುದಕ್ಕೆ ದ್ವೇಷಿಸುತ್ತ ಇವೆಲ್ಲ ಮಿಥ್ಯಾ ಎಂದು ಹೇಳುವುದಿಲ್ಲ. ಅವರು ಸತ್ಯವನ್ನು ಅನ್ವೇಷಿಸಿ ಯಾವುದೇ ದಾಕ್ಷಿಣ್ಯ, ಭಯ, ಲೋಭ, ದ್ವೇಷ ಇವ್ಯಾವುದು ಇಲ್ಲದೆ ಸತ್ಯವನ್ನು ಮಾತ್ರ ಸತ್ಯವೆಂದು, ಮಿಥ್ಯವನ್ನು ಮಾತ್ರ ಮಿಥ್ಯವೆಂದು ಹೇಳುತ್ತಾರೆ.

## ಸತ್ಯದ ರಕ್ಷಣೆ ಮತ್ತು ಸಾಕ್ಷಾತ್ಕಾರ

ಒಮ್ಮೆ ಒಬ್ಬ ಭಗವಾನರ ಬಳಿಗೆ ಬಂದು ಈ ರೀತಿ ಪ್ರಶ್ನಿಸುತ್ತಾನೆ "ಭಗವಾನರೆ, ಯಾವರೀತಿಯಲ್ಲಿ ಸತ್ಯವನ್ನು ರಕ್ಷಿಸಬಹುದು ?"

"ಇಲ್ಲಿ ಯಾರಾದರೊಬ್ಬ ನಂಬಿಕೆಯಿಂದ ಧಮ್ಮ ಕೇಳಬಹುದು, ಆದರೆ 'ಇದೇ ಸತ್ಯ! ಮಿಕ್ಕವೆಲ್ಲ ಸತ್ಯವಲ್ಲ' ಎಂದು ಈ ರೀತಿ ಹೇಳುವುದಿಲ್ಲ. ಇದೇ ಸತ್ಯವನ್ನು ರಕ್ಷಿಸುವ ದಾರಿಯಾಗಿದೆ. ಆದರೆ ಇದೇ ಸತ್ಯ ಸಾಕ್ಷಾತ್ಕಾರದ ಹಾದಿಯಾಗಿಲ್ಲ."

"ಸತ್ಯ ಸಾಕ್ಷಾತ್ಕಾರದ ಹಾದಿಯು ಹೇಗೆ ಭಗವಾನ್ ?"

"ಇಲ್ಲಿ ಒಬ್ಬನು ಬಂದು ಧಮ್ಮವನ್ನು ಆಲಿಸಲು ಕಿವಿಗೊಡುತ್ತಾನೆ. ಕಿವಿಕೊಟ್ಟಾಗ ಆಲಿಸುತ್ತಾನೆ. ಆಲಿಸಿದಾಗ ಜ್ಞಾಪಕದಲ್ಲಿಡುತ್ತಾನೆ. ಜ್ಞಾಪಕದಲ್ಲಿದ್ದಾಗ ಅದರ ಬಗ್ಗೆ ಚಿಂತಿಸುತ್ತಾನೆ. ಚಿಂತಿಸಿದಾಗ ಪರೀಕ್ಷಿಸುತ್ತಾನೆ. ಪರೀಕ್ಷಿಸಿದಾಗ ಅವುಗಳ ನೈಜಸ್ವರೂಪ ಅರ್ಥ ಮಾಡಿಕೊಳ್ಳುತ್ತಾನೆ. ಆಗ ಆತನಲ್ಲಿ ಇಚ್ಛೆಯು ಉಂಟಾಗುತ್ತದೆ. ಇಚ್ಛೆಯು ಉಂಟಾದಾಗ ಆತನು ಪ್ರಯತ್ನಶಾಲಿ ಆಗುತ್ತಾನೆ. ಪ್ರಯತ್ನಶಾಲಿಯಾದಾಗ ಮತ್ತೆ ತುಲನಾತ್ಮಕವಾಗಿ ಪರಿಶೀಲಿಸುತ್ತಾನೆ. ಹಾಗೆ ತುಲನಾತ್ಮಕವಾಗಿ ಪರಿಶೀಲಿಸುವಾಗ ಸಮ್ಮಾ ವಾಯಾಮ ಪ್ರಾರಂಭಿಸುತ್ತಾನೆ (ಮಿಥ್ಯದ ವರ್ಜ್ಯ, ಸತ್ಯದ ಪಾಲನೆ). ಈ ರೀತಿ ಪರಿಶ್ರಮ ಪಟ್ಟಾಗ ಆತನಿಗೆ ಅತ್ಯುನ್ನತ ಸತ್ಯ ಸಾಕ್ಷಾತ್ಕಾರವಾಗುತ್ತದೆ. ಹೀಗೆ ಆತನು ಈ ಶರೀರ ಇರುವಾಗಲೇ ಆತ ಆಳ ಪ್ರಜ್ಞಾಶೀಲತೆಯಿಂದ ಅರಿಯುತ್ತಾನೆ. ಈ ರೀತಿಯಲ್ಲಿ ಆತನು ಸತ್ಯದ ಸಾಕ್ಷಾತ್ಕಾರ ಮಾಡುತ್ತಾನೆ."

## ಧಮ್ಮ ಶ್ರವಣದ ಐದು ಲಾಭಗಳು

"ಭಿಕ್ಷುಗಳೇ, ಧಮ್ಮವನ್ನು ಆಲಿಸುವುದರಿಂದಾಗಿ ಐದು ರೀತಿಯ ಲಾಭಗಳಿವೆ. ಯಾವುವವು? ಆತನಿಗೆ ಹಿಂದೆ ಕೇಳಿರದಂತಹ ಅರಿಯದಂತಹ ವಿಷಯಗಳು ಕೇಳುತ್ತಾನೆ. ಹಿಂದೆ ಅರಿತಿರುವುದನ್ನು ಮತ್ತಷ್ಟು ಸ್ಪಷ್ಟವಾಗಿ ಅರಿಯುವಂತಹವನು ಆಗುತ್ತಾನೆ. ಆಗ ಆತನಲ್ಲಿದ್ದ ಸಂಶಯಗಳು ನಿವಾರಣೆಯಾಗಿ ಶ್ರದ್ಧಾವಂತನಾಗುತ್ತಾನೆ. ಆತನಲ್ಲಿದ್ದ ಮಿಥ್ಯಾದೃಷ್ಟಿಗಳು ನಾಶವಾಗಿ, ಸಮ್ಮಾದೃಷ್ಟಿಯು ಸ್ಥಾಪಿತವಾಗುತ್ತದೆ. ಹೀಗಾಗಿ ನೇರದೃಷ್ಟಿ ಉಳ್ಳವನಾಗುತ್ತಾನೆ ಮತ್ತು ಆತನ ಚಿತ್ತವು ಶಾಂತತೆಯನ್ನು ಹೊಂದುತ್ತದೆ. ಇದೇ ಭಿಕ್ಷುಗಳೇ ಧಮ್ಮಾ ಶ್ರವಣದ ಐದು ಲಾಭಗಳಾಗಿವೆ."

## ಸತ್ಯವನ್ನು ಅರಿಯಲು ಮಾರ್ಗ :

ನಾವು ಸತ್ಯವನ್ನು ಅರಿಯಲು ಹೋದಾಗ ನಾವು ಪಕ್ಷಪಾತಕ್ಕೆ ಅತೀತರಾಗ ಬೇಕಾಗುತ್ತದೆ. ನಂಬಿಕೆಗೆ ಒತ್ತು ನೀಡಬಾರದು. ಏಕೆಂದರೆ ಹಾಗಾದಾಗ ಪ್ರಜ್ಞಾಶೀಲತೆ ಕಡಿಮೆಯಾಗಿ ನಂಬಿಕೆ ಹೆಚ್ಚಾದಾಗ ಆತನಲ್ಲಿ ಮೂಢನಂಬಿಕೆಗಳು ಸ್ಥಾಪಿತವಾಗುತ್ತದೆ. ಮತ್ತೆ ಕೆಲವರು ತಮ್ಮ ಪವಿತ್ರ ಗ್ರಂಥಗಳಲ್ಲಿ ಹೀಗಿದೆ ಎಂದು ಅದನ್ನು ಕಡ್ಡಾಯವಾಗಿ ನಂಬಿ, ಕೆಲವೊಮ್ಮೆ ಪಾಪಕೃತ್ಯಗಳನ್ನು ಸಹಾ ಮಾಡುತ್ತಾರೆ. ಕೆಲವರು ತಮ್ಮ ಗುರುವು ಹೀಗೆ ಹೇಳಿದ್ದಾರೆ, ಅವರು ಪವಾಡ ಪುರುಷರಾಗಿದ್ದಾರೆ, ಅವತಾರಿಗಳಾಗಿದ್ದಾರೆ ಎಂದು ನಂಬಿ ವಿಚಾರಶೀಲತೆಯನ್ನು ಕೈಬಿಡುತ್ತಾರೆ. ಆದರೆ ಬುದ್ಧರು ವಿಚಾರಶೀಲತೆಯ ಮಾರ್ಗ ಹೀಗೆ ಹೇಳಿದ್ದಾರೆ: "ಯಾವಾಗ ನಿಮಗೆ ಕೆಲವು ವಿಷಯಗಳು ಅಕುಶಲವಾದವು, ಕೆಟ್ಟದೆಂದು ಅರಿವಾಗುತ್ತದೋ ಆಗ ಅದನ್ನು (ಮಿಥ್ಯವನ್ನು) ತ್ಯಜಿಸಿ. ಮತ್ತು ಯಾವಾಗ ಕೆಲವು ವಿಷಯಗಳು ಕುಶಲವಾದದ್ದು ಮತ್ತು ಹಿತಕಾರಿ (ಸತ್ಯ) ಎಂದು ಅರಿಯುವಿರೋ ಅದನ್ನು ಸ್ವೀಕರಿಸಿ ಮತ್ತು ಅನುಸರಿಸಿ."

## ವಿಚಾರಶೀಲತೆಯ ಅಗತ್ಯ ಮತ್ತು ವಿಜ್ಞಾನದ ಮಿತಿ

"ಎಲ್ಲಿ ವಿಜ್ಞಾನವು ಮುಂದೆ ಹೋಗಲಾರದೆ ನಿಲ್ಲುವುದೋ, ಅಲ್ಲಿಂದ ಬೋಧಿ ಜ್ಞಾನವು ಆರಂಭವಾಗುತ್ತದೆ".

ಲೋಕದಲ್ಲಿ ಐದುರೀತಿಯ ಜನರಿದ್ದಾರೆ:

(1) ಎಲ್ಲವನ್ನು ನಂಬುವವರು (3) ಎಲ್ಲವನ್ನು ಸಂಶಯದಿಂದ ಕಾಣುವವರು (3) ನಂಬಬಾರದ್ದನ್ನು ನಂಬಿ, ನಂಬುವಂತಹದನ್ನು ನಂಬದವರು (ಮಿಥ್ಯಾದೃಷ್ಟಿಯುಳ್ಳವರು) (4) ಪ್ರತ್ಯಕ್ಷವೇ ಸತ್ಯ ಎಂದು ಹೇಳುವ ವಿಜ್ಞಾನವನ್ನು ನಂಬುವವರು (5) ಸಮ್ಮಾದೃಷ್ಟಿಯುಳ್ಳ ವಿಚಾರಶೀಲರು.

ಎಲ್ಲವನ್ನು ನಂಬುವವರು ಜೀವನದಲ್ಲಿ ಮೋಸಹೋಗಿ ಅಪಾರ ದುಃಖವನ್ನು ಅನುಭವಿಸಿ ಎಲ್ಲವನ್ನು ಸಂಶಯದೃಷ್ಟಿಯಿಂದ ನೋಡುವವರು ಎಲ್ಲಿಯೂ ಶ್ರದ್ಧೆ ತಾಳದೆ, ಯಾರಿಗೂ ಯಾವುದನ್ನು, ಸ್ವತಃ ತಮ್ಮನ್ನು ನಂಬದೆ ಕೀಳರಿಮೆಯಿಂದ ಅಶಾಂತತೆಯಿಂದ ಜೀವಿಸುತ್ತಾರೆ. ನಂಬಬಾರದುದನ್ನು ನಂಬಿ, ನಂಬುವಂತಹುದನ್ನು ನಂಬದೆ ಮಿಥ್ಯಾದೃಷ್ಟಿಯುಳ್ಳವರು ಅಪಾರ ದುಃಖ ಅನುಭವಿಸುತ್ತಾರೆ. ತಮ್ಮನ್ನು ಜ್ಞಾನಿಗಳೆಂದು ಭಾವಿಸಿದರೂ ನಿಜವಾಗಿ ದಡ್ಡರಾಗಿರುತ್ತಾರೆ. ವಿಜ್ಞಾನದಿಂದ ಮನುಕುಲಕ್ಕೆ ಅಪಾರ ಲಾಭ ಸಿಕ್ಕಿದೆ, ಆದರೂ ಪ್ರತ್ಯಕ್ಷವೇ ಪ್ರಮಾಣ ಅಥವಾ ಇಂದ್ರೀಯಗಳಿಗೆ ಗೋಚರವಾದುದು ಮಾತ್ರ ಸತ್ಯ ಎನ್ನುವ ವೈಜ್ಞಾನಿಕರು ಸಹಾ ಪೂರ್ಣವಾಗಿ ವಿಚಾರಶೀಲರಾಗಿರುವುದಿಲ್ಲ. ಏಕೆಂದರೆ ವಿಜ್ಞಾನಕ್ಕೂ ಸಹಾ ಒಂದು ಮಿತಿಯಿದೆ. ಆ ಮಿತಿಯಿಂದ ಆಚೆಗೆ ಪರಮಾರ್ಥ ಸತ್ಯಗಳಿವೆ. ಉದಾಹರಣೆಗೆ ಅಲ್ಟ್ರಾ ವಯಲೇಟ್ ಕಿರಣಗಳು ಮತ್ತು ಇನ್ಫ್ರೆಡ್ ಕಿರಣಗಳು ಕಣ್ಣಿಗೆ ಕಾಣಿಸದು. ಆದರೂ ಅವನ್ನು ಇಲ್ಲವೆನ್ನಲಾಗುವುದಿಲ್ಲ. ಆದರೆ ಕೆಲ ಉಪಕರಣಗಳ ಸಹಾಯದಿಂದ ನಾವು ಅವನ್ನೆಲ್ಲಾ ಕಾಣಬಹುದು. ಅದೇರೀತಿಯಲ್ಲಿ ವಿಜ್ಞಾನಕ್ಕೆ ಅತೀತವಾದ, ಹೇರಳವಾದ ವಿಷಯಗಳಿವೆ. ಉದಾಹರಣೆಗೆ ದಾನಕ್ಕೆ, ಶೀಲಕ್ಕೆ,



ಫಲವಿರುವುದು, ಪರಲೋಕವಿರುವುದು, ನಮಗೆ ಗೋಚರವಾಗದ ಅನೇಕ ವಿಧವಾದ ಅಸಂಖ್ಯಾತ ಜೀವಿಗಳಿರುವುದು. ತಾವಾಗಿಯೇ ತಂದೆ–ತಾಯಿಗಳ ಸಹಾಯವಿಲ್ಲದೆ ಉಗಮಿಸುವ ಜೀವಿಗಳಾಗಿರುವುದು, ಧ್ಯಾನದಲ್ಲಿ ಸಿಗುವಂತಹ ಅತೀಂದ್ರಿಯ ಅನುಭವಗಳು ಅತೀಂದ್ರಿಯ ಸಿದ್ಧಿಗಳು, ಅಲೌಕಿಕ ಜ್ಞಾನಗಳು, ಸಂಬೋಧಿ ಜ್ಞಾನ, ಧ್ಯಾನದ ಉನ್ನತ ಅವಸ್ಥೆಗಳು ನಿಬ್ಬಾಣ ಇತ್ಯಾದಿ. ಇವೆಲ್ಲಾ ಆ ಕಡೆಯ ದಡದಲ್ಲಿ ನಿಂತು ನೋಡಿದರೆ ಆಗದು. ನಾವು ಅವೆಲ್ಲಾ ಎಷ್ಟು ಸತ್ಯವೆಂದು ಅರಿಯಬೇಕಾದರೆ ಯೋಗ್ಯ ರೀತಿಯಲ್ಲಿ ಧ್ಯಾನ ಮಾಡಿಯೇ ತಿಳಿಯಬೇಕು. ಆ ಅಲೌಕಿಕ, ಅತೀಂದ್ರಿಯ, ಅದ್ಭುತ, ಲೋಕೋತ್ತರ ಅನುಭವ ತಿಳಿಯಬೇಕಾದರೆ ಧ್ಯಾನವೇ ಸಾಧನವಾಗಿದೆ. 'ಇವೆಲ್ಲಾ ಮೌಢ್ಯ'ವೆಂದು ಮೊದಲೇ ಪೂರ್ವಾಗ್ರಹ ಪೀಡಿತರಾದರೆ ಅದರಿಂದಾಗಿ ನಮಗೆ ಹಾನಿ ಹೊರತು, ಬೇರೆಯವರಿಗಲ್ಲ. ನಮಗೆ ಗೋಚರವಾಗುವಂತೆ ಕೆಲವು ಮಕ್ಕಳು ಅದ್ಭುತ ಪ್ರತಿಭಾಶಾಲಿಗಳಾಗಿರುತ್ತಾರೆ. ಅಂತಹ ಪ್ರತಿಭೆ ಅವರ ತಂದೆ–ತಾಯಿಗಳಲ್ಲಾಗಲಿ, ಅವರ ವಂಶದಲ್ಲೇ ಇರುವುದಿಲ್ಲ. ಕೆಲವರು ತಮ್ಮ ಪೂರ್ವ ಜನ್ಮವನ್ನು ಸ್ಮರಿಸಿರುತ್ತಾರೆ, ಕೆಲವರಿಗೆ ಭವಿಷ್ಯದ ಸ್ವಪ್ನ ಬೀಳುತ್ತದೆ, ಕೆಲವರಿಗೆ ದೆವ್ವದ ಅನುಭವವಾಗಿರುತ್ತದೆ, ಕೆಲವರಿಗೆ ಧ್ಯಾನದಲ್ಲಿ ಅಲೌಕಿಕ ಅನುಭವವಾಗಿರುತ್ತದೆ. ಇವೇ ಮುಂತಾದವನ್ನು ನಾವು ಒಮ್ಮೆಗೇ 'ಮೌಢ್ಯವೆಂದು', 'ಮೂಢನಂಬಿಕೆಯನ್ನು' ಪೂರ್ವಾಗ್ರಹ ಪೀಡಿತರಾದರೆ ಅದು ನಮ್ಮ ಮಿಥ್ಯಾ ದೃಷ್ಟಿಯನ್ನು ಸೂಚಿಸುತ್ತದೆ. ಎಲ್ಲವನ್ನು ನಂಬುವುದು ಎಷ್ಟು ಹಾನಿಕರವೋ, ಎಲ್ಲವನ್ನು ನಂಬದಿರುವುದು ಅಷ್ಟೇ ಹಾನಿಕರವಾಗಿದೆ. ಹಾಗೆಯೇ ನಂಬುವುದಕ್ಕೆ ಅರ್ಹವಾದುದನ್ನು ನಂಬದಿರುವುದು, ಅದಕ್ಕೆ ಪೂರ್ವಾಗ್ರಹ ಪೀಡಿತರಾಗುವುದು, ವೈಜ್ಞಾನಿಕ ಎನ್ನುವ ಒಂದು ಕಾರಣದಿಂದ 'ಅದೇ ಸತ್ಯ' ಮಿಕ್ಕಿದ್ದೆಲ್ಲಾ ಮೌಢ್ಯವೆನ್ನುವುದು' ವಿಚಾರಶೀಲರ ಲಕ್ಷಣವಲ್ಲ. ಶೇಕಡ ಎಷ್ಟರಷ್ಟು ಸತ್ಯ ಮತ್ತು ಶೇಕಡ ಎಷ್ಟರಷ್ಟು ಮಿಥ್ಯ ಎಂದು ಅರಿಯುವತನಕ ನಮ್ಮ ವಿಚಾರಶೀಲತೆ ವೃದ್ಧಿಯಾಗದು. ವಿಜ್ಞಾನದ ಯಾವ ಪ್ರತ್ಯಕ್ಷವೇ ಪ್ರಮಾಣ ಎಂಬುವ ದೃಷ್ಟಿಕೋನವಿದೆಯೋ ಅದು ಬುದ್ಧ ಕಾಲದಲ್ಲೂ ಇತ್ತು, ಆಗ ಅದನ್ನು ಅಜೀತ ಕೇಶ ಕಂಬಳಿ ಎನ್ನುವವನು ಅದನ್ನು ಪ್ರತಿಪಾದಿಸಿದ್ದನು. ಆದರೂ ಆಗಿನ ವಿಚಾರಶೀಲರು ಅದನ್ನು ನಿರಾಕರಿಸಿದರು. ಆಗ ಅದು ಮಿಥ್ಯಾದೃಷ್ಟಿಯಾಗಿತ್ತು. ಆದರೆ ಈಗ ಅದೇ ವಿಚಾರಶೀಲತೆಯಾಗಿದೆ. ಸತ್ಯಶೋಧನೆಗೆ, ಅಪಾರ ತಾಳ್ಮೆಯಿರಬೇಕು, ಪೂರ್ವಗ್ರಹ ಪೀಡಿತತೆ ಇರಬಾರದು, ಕುಶಲವಾದುದನ್ನು ಒಳಿತಾಗಿರುವುದನ್ನು ಸತ್ಯವನ್ನು ಸ್ವೀಕರಿಸಬೇಕು. ಹಾಗೆಯೇ ಮಿಥ್ಯವನ್ನು ವರ್ಜಿಸಬೇಕು. ಅಪಾರ ವಿಶ್ಲೇಷಣೆ, ವಿಮರ್ಶೆ, ಅಪಾರ ಚಿಂತನೆ, ಧ್ಯಾನದಲ್ಲಿ ತೊಡಗುವುದು, ಪ್ರಯೋಗಿಕವಾಗಿ ಅನುಭವಿಸುವುದು ಅತ್ಯಗತ್ಯವಾಗಿದೆ. ಸತ್ಯವನ್ನು ಅರಿಯುವುದಕ್ಕಾಗಿ, ನಿಜಸುಖ, ನಿಜಶಾಂತಿ, ಪರಮೋನ್ನತಿಯನ್ನು ಪಡೆಯಲು ವಿಚಾರಶೀಲತೆ ಅತ್ಯಗತ್ಯವಾಗಿದೆ.

## ನಂಬುವುದರ ಪರಿಣಾಮ

ನಂಬಿಕೆಗಳಲ್ಲಿ 2 ವಿಧವಿದೆ, ಮೂಢವಾದುದರಲ್ಲಿ ನಂಬಿಕೆ ತಾಳುವುದು ಮತ್ತು ಯೋಗ್ಯವಾದುದರಲ್ಲಿ ಶ್ರದ್ಧೆ ತಾಳುವುದು. ನಂಬುವುದರ ಪರಿಣಾಮವು ನಂಬುವ

ವಿಷಯದ ಮೇಲೆ ನಿಂತಿದೆ. ನಾವು ನಂಬಿಕೆಯನ್ನು ವಿಚಾರಶೀಲತೆಗಿಂತ ಹೆಚ್ಚಾಗಿ ಬೆಳಸಿದರೆ ಮೌಢ್ಯ ಬೆಳೆಯುತ್ತದೆ. ಆದರೆ ನಂಬಿಕೆಗಿಂತ ವಿಚಾರಶೀಲತೆಯನ್ನೇ ಹೆಚ್ಚಾಗಿ ಬೆಳಸಿದರೆ ನಾವು ಯಾವುದನ್ನು ನಂಬದ ಸಂಶಯವುಳ್ಳ, ದ್ವಂದ್ವದ ಚಿತ್ತದ ವ್ಯಕ್ತಿಗಳಾಗುವೆವು. ಇದಕ್ಕೆ ಪರಿಹಾರ ಪೂರ್ವಗ್ರಹ ಪೀಡತೆಯಿಲ್ಲದ, 'ಇದೇ ಸತ್ಯ, ಮಿಕ್ಕಿದ್ದೆಲ್ಲಾ ಮೌಢ್ಯ' ಎನ್ನುವ ಮನೋಭಾವ ತ್ಯಜಿಸುವುದು.

ಈಗ ಸ್ವಲ್ಪ ನಂಬಿಕೆಗಳ ಪರಿಣಾಮಗಳನ್ನು ವಿಶ್ಲೇಷಿಸೋಣ. ಕೆಲವೊಮ್ಮೆ ನಾವು ಅಪಾರ ಜನರು ಇರುವೆಡೆ ಬಾಂಬ್ ಇದೆ ಎಂದು ಸುದ್ದಿ ಕೇಳಿದ ಕ್ಷಣವೇ ಎಲ್ಲರೂ ಮರು ಯೋಚಿಸದೆ ತಮ್ಮ ಪ್ರಾಣ ಉಳಿಸಿಕೊಳ್ಳಲು ಪರರನ್ನು ತುಳಿದು ಓಡಿಹೋಗುತ್ತೇವೆ, ಪರಿಣಾಮ ಎಷ್ಟೋಜನರ ಸಾವು. ಮತ್ತೆ ಕೆಲವೊಮ್ಮೆ ಕೆಲವು ದುರ್ಘಟನೆಗಳಿಗೆ ಒಂದು ಪಂಗಡದ ಜನರೇ ಎಂದುಕೊಳ್ಳುತ್ತೇವೆ. ಆಗ ಅವರ ಮೇಲೆ ಹಿಂಸೆ ಮೊದಲಾದವುಗಳಿಗೆ ದಾರಿಯಾಗುತ್ತದೆ. ಹಾಗೆಯೇ ನಾವು ನೋಡಿರುವಂತೆ ವಿಗ್ರಹವು ಹಾಲು ಕುಡಿಯಿತು ಎಂದು ಎಷ್ಟು ಜನರು ನಂಬಿದರು, ಆದರೆ ಅವೆಲ್ಲಾ ಕೇವಲ ಸುದ್ದಿಗಳಾಗಿತ್ತು. ಸುದ್ದಿಗಳಿಂದಾಗಿ ಬಹಳಷ್ಟು ಜನರು ದುಃಖಕ್ಕೆ ಈಡಾಗುತ್ತಾರೆ. ಮೌಢ್ಯಕ್ಕೆ ಬಲಿಯಾಗುತ್ತಾರೆ, ಆದ್ದರಿಂದ ಬುದ್ಧರು ಹೇಳುವ 'ಸುದ್ದಿಗಳಿಗೆ ನಂಬಬೇಡಿ' ಎಂಬುದು ಸರ್ವಕಾಲಿಕ ಸತ್ಯವಾಗಿದೆ. ಇಂದಿಗೂ ಸಂಪ್ರದಾಯ ಹೆಸರಿನಲ್ಲಿ ಪ್ರಾಣಿ ಬಲಿ, ಜನರಲ್ಲಿ ದ್ವೇಷ, ಮೌಢ್ಯಾಭಿವೃದ್ಧಿ, ವಿಚಾರಹೀನ ಕಾರ್ಯಗಳು ಮುಂತಾದವುಗಳನ್ನು ಕಾಣುತ್ತೇವೆ. ಯಾರು ಸಹಾ, ಏತಕ್ಕಾಗಿ ಹೀಗೆ ಮಾಡುತ್ತಿದ್ದೇವೆ ಎಂದು ಕೇಳದಂತಹ ಸಂಪ್ರದಾಯಕ್ಕೆ ನಂಬುವುದರಿಂದ ಉಂಟಾಗಿದೆ. ಆದ್ದರಿಂದ ಬುದ್ಧರು ಹೇಳುವ ಸಂಪ್ರದಾಯಕ್ಕೆ ನಂಬಬೇಡಿ, ಎಂಬುದು ಸರ್ವಕಾಲಿಕ ಸತ್ಯವಾಗಿದೆ.

ಆದರೆ ಕೆಲವರು ಅಸಂಪ್ರದಾಯಿಗಳಾಗಿರುತ್ತಾರೆ, ಅವರು ನವನವೀನತೆಗೆ ಮಾರು ಹೋಗುತ್ತಿದ್ದಾರೆ. ಪಾಶ್ಚಾತ್ಯರನ್ನು ಅನುಕರಿಸುತ್ತಿದ್ದಾರೆ. ನವೀನತೆಯ ಹೆಸರಿನಲ್ಲಿ ಹಿರಿಯರಿಗೆ ಅಗೌರವ, ಸತ್‌ಸಂಪ್ರದಾಯಗಳಿಗೆ ಅಗೌರವ, ಕುಡಿತ, ಕುಣಿತ ನಾನಾ ಅಸಭ್ಯತೆಗೆ ಬಾಗುತ್ತಿದ್ದಾರೆ. ಇದಕ್ಕೆ ಕಾರಣ ಅಸಂಪ್ರದಾಯವನ್ನು ನಂಬುವುದು.

ಕೆಲವರು ತಮ್ಮ ಧಮ್ಮ ಗ್ರಂಥಗಳನ್ನು ಅಕ್ಷರಸಹ ಸತ್ಯವೆಂದು ಭಾವಿಸುತ್ತಾರೆ. ಅದರಲ್ಲಿ ಎಲ್ಲಾ ಜ್ಞಾನವು ಅಡಗಿದೆ ಎಂದು ನಂಬುತ್ತಾರೆ. ಅದರಲ್ಲಿ ತಪ್ಪು ಸಂದೇಶವಿದ್ದರೂ ಸ್ವೀಕರಿಸುತ್ತಾರೆ, ಅದನ್ನೇ ಸಮರ್ಥಿಸಿಕೊಳ್ಳುತ್ತಾರೆ, ಪಾಲಿಸುತ್ತಾರೆ, ಇದರ ಪರಿಣಾಮ ಮಾನವತೆಯಲ್ಲಿ ಐಕ್ಯತೆಯ ಭಂಗ, ಹಿಂಸೆಗೆ ಪ್ರಚೋದನೆ, ಲೋಭಕ್ಕೆ ಪ್ರಚೋದನೆ, ಮೌಢ್ಯಾರಾಧನೆ, ವಿಚಾರಶೀಲತೆ ಕುಂಠಿತ ಆಗುತ್ತದೆ. ಆದ್ದರಿಂದಲೇ ಭಗವಾನರು ಧಮ್ಮ ಗ್ರಂಥಗಳಲ್ಲಿದೆ ಎಂಬ ಮಾತ್ರಕ್ಕೆ ನಂಬಬೇಡಿ ಎನ್ನುತ್ತಾರೆ. ಸತ್ಯ ಯಾವುದೇ ಧಮ್ಮದಲ್ಲಿರಲಿ ಸ್ವೀಕರಿಸಿ ಎಂದು ಬುದ್ಧರು ಹೇಳುತ್ತಾರೆ. ಹಾಗೆಯೇ ಮಿಥ್ಯವನ್ನು ತಿರಸ್ಕರಿಸಿ ಎನ್ನುತ್ತಾರೆ.

ಮತ್ತೆ ಕೆಲವರಿಗೆ ತಮ್ಮ ಗುರುಗಳ ಬಗ್ಗೆ ಅಪಾರ ನಂಬಿಕೆಯಿರುತ್ತದೆ. ಆ ಗುರುಗಳ



ಬಗ್ಗೆ ಅವರು ಪೂರ್ಣವಾಗಿ ನಂಬಿರುತ್ತಾರೆ. ಅವರಲ್ಲಿ ಹಲವಾರು ದೋಷಗಳಿದ್ದರೂ ಅವರಿಗೆ ಅದು ದೋಷವಾಗಿಯೇ ಕಾಣುವುದಿಲ್ಲ. ಅವರಲ್ಲಿ ಅಂತಹ ಸದ್ಗುಣವೇನು ವಿಕಾಸವಾಗದಿದ್ದರೂ ಅವರಿಗೆ ಅದು ಗಮನಕ್ಕೆ ಬಂದಿರುವುದಿಲ್ಲ. ಅದರಲ್ಲೂ ಆ ಗುರುಗಳು ತಮ್ಮನ್ನು ದೇವಾಂಶಸಂಭೂತರೆಂದರೆ ಅಥವಾ ಪವಾಡ ಪ್ರದರ್ಶಿಸಿದರೆ ಅಥವಾ ಕೆಲವು ಜ್ಞಾನವುಳ್ಳ ಮಾತುಗಳನ್ನು ಆಡಿದರೆ ಜನರು ಅವರ ಬಗ್ಗೆ ವಿಮರ್ಶಿಸುವುದೇ ಪಾಪವೆಂದು ಎಣಿಸುತ್ತಾರೆ. ಅವರಲ್ಲಿ ಲೋಭ ಯಾವ ಇಂದ್ರೀಯಗಳಲ್ಲಿದೆ, ಅವರು ಯಾವ ವಿಷಯದಲ್ಲಿ ಕ್ರುದ್ಧರಾಗುತ್ತಾರೆ, ಅವರಲ್ಲಿನ ಮೂಢನಂಬಿಕೆಗಳೇನು ಎಂದು ಯೋಚಿಸಲು ಹೋಗುವುದಿಲ್ಲ. ನಾವು ಗುರುಗಳೆನ್ನುವ ಬಹಳಷ್ಟು ಜನರಲ್ಲಿ ಕೆಲವು ಶೀಲಗಳ ಕೊರತೆಯನ್ನು ಕಾಣುತ್ತೇವೆ, ಕೆಲವು ದೌರ್ಬಲ್ಯಗಳನ್ನು ಕಾಣುತ್ತೇವೆ. ಕೆಲವರಂತು ತಮ್ಮ ಬೋಧನೆಯಲ್ಲಿ ದ್ವೇಷ, ಹಿಂಸೆ ಬೋಧಿಸಿ ಅದರ ಪರಿಣಾಮದಿಂದ ಈ ಲೋಕದಲ್ಲಿ ಅದೆಷ್ಟು ಯುದ್ಧಗಳು ಜಗಳಗಳು, ಅಶಾಂತಿಗಳು ತಾಂಡವವಾಡಿದೆ. ನೆನಪಿಡಿ, ಮುಕ್ತ ಪುರುಷರಲ್ಲಿ ಶೀಲವಿರಲೇಬೇಕು ಮತ್ತು ಅವರು ಲೋಭ, ದ್ವೇಷ ಮತ್ತು ಮೋಹದಿಂದ ಮುಕ್ತರಾಗಿರಬೇಕು. ಇಲ್ಲದಿದ್ದಲ್ಲಿ ಅವರು ಸಾಮಾನ್ಯ ಮನುಷ್ಯರೇ ಸರಿ. ಪವಾಡ ತೋರಿಸಿದ ಮಾತ್ರಕ್ಕೆ ಅಥವಾ ಸುಂದರವಾಗಿ ಮಾತನಾಡಿದ ಮಾತ್ರಕ್ಕೆ ಅವರು ಮಹಾನ್ ಆಗುವುದಿಲ್ಲ. ಉದಾಹರಣೆಗೆ ಬುದ್ಧರನ್ನು ಕೊಲ್ಲಲು ಪ್ರಯತ್ನಿಸಿದ ದೇವದತ್ತನಲ್ಲೂ ಪವಾಡಶಕ್ತಿಯಿತ್ತು. ಆದರೆ ಆತನು ಪಾಪಿ ಎನಿಸಿಕೊಂಡನು. ಆದ್ದರಿಂದಲೇ ಭಗವಾನರು ಮಿಥ್ಯಾ ಗುರುಗಳನ್ನು ನಂಬಬೇಡಿ ಎಂದಿರುವರು.

ಮತ್ತೆ ಕೆಲವರು ತರ್ಕಕ್ಕೆ, ಊಹೆಗಳಿಗೆ ಸಿದ್ಧಾಂತಗಳಿಗೆ ಸತ್ಯವೆಂದು ಭಾವಿಸುತ್ತಾರೆ, ಆದರೆ ಅದೇ ಸತ್ಯವಾಗುವುದಿಲ್ಲ. ಉದಾಹರಣೆಗೆ ಹಿಂದೆ ಜನರು ತರ್ಕಿಸಿ ಭೂಮಿ ಚಪ್ಪಟೆ ಎಂದು ಊಹಿಸಿದ್ದರು, ನಂತರ ಗುಂಡಗಿದೆ ಎಂದು ಅರಿತರು. ಹಿಂದೆ ಚಂದ್ರನಲ್ಲಿ ಜಲವಿಲ್ಲ, ವಾಯುವು ಇಲ್ಲ ಎಂದು ಹೇಳಿದ್ದರು. ಆದರೆ ಈಗ ಅವುಗಳ ಸಾಧ್ಯತೆಯಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದಾಗಿ ತರ್ಕಕ್ಕೆ ಮತ್ತು ಊಹೆಗೆ ಮತ್ತು ಅವುಗಳಿಂದಾದ ಸಿದ್ಧಾಂತಕ್ಕೆ ಪೂರ್ಣವಾಗಿ ನಂಬಬೇಕಿಲ್ಲ. ಉದಾಹರಣೆಗೆ ಮಂಗನಿಂದ ಮಾನವ ಸಿದ್ಧಾಂತ ಪ್ರಕಟಿಸಿ ವಿಶ್ವವೆಲ್ಲಾ ಹಬ್ಬಿಸಿದ ಸ್ವತಃ ಡಾರ್ವಿನ್‌ಗೆ ಅದರಲ್ಲಿ ನಂಬಿಕೆಯಿರಲಿಲ್ಲ. ಆದ್ದರಿಂದಲೇ ಭಗವಾನರು ಕಾಲಾಮ ಸುತ್ತದಲ್ಲಿ ಇದರ ಬಗ್ಗೆ ಅತ್ಯಂತ ವಿಚಾರಶೀಲತೆಯಿಂದ ಕೂಡಿದ ಬೋಧನೆ ಮಾಡಿದ್ದಾರೆ. ಆದ್ದರಿಂದ ನಾವು ನಂಬಿಕೆಗಿಂತ ವಿಚಾರಶೀಲತೆಗೆ ಪ್ರಾಶಸ್ತ್ಯ ನೀಡುವುದು ಅತಿ ಸ್ತುತ್ಯಾರ್ಹವಾಗಿದೆ.

## ಕಾಲಾಮ (ವಿಚಾರಶೀಲತೆಯ) ಸುತ್ತ

ನಾನು ಹೀಗೆ ಕೇಳಿರುವೆ, ಭಗವಾನರು ಒಮ್ಮೆ ಕೋಶಲ ರಾಜ್ಯದ ಕೇಸಪುತ್ತ ಜಿಲ್ಲೆಗೆ ಬೃಹತ್ ಸಮೂಹದೊಂದಿಗೆ ಬಂದರು. ಕೇಸಪುತ್ತರು ಕಾಲಾಮರಿಗೆ ಭಗವಾನರು ಅಲ್ಲಿಗೆ ಬಂದಿರುವುದು ತಿಳಿಯಿತು. ಭಗವಾನರ ಖ್ಯಾತಿ ಆಲಿಸಿ ಎಲ್ಲರೂ ಭಗವಾನರಲ್ಲಿಗೆ ಬಂದು ವಂದಿಸಿ, ಕುಶಲಕ್ಷೇಮವನ್ನು ವಿಚಾರಿಸಿ, ಗೌರವಾರ್ಪಣೆ ಮಾಡಿ ಕುಳಿತರು. ಆಗ ಕಾಲಾಮರು ಭಗವಾನರಲ್ಲಿ ಹೀಗೆ ಪ್ರಶ್ನಿಸಿದರು:

"ಭಂತೆ ಇಲ್ಲಿಗೆ ಕೆಲವು ಸಮಣ ಬ್ರಾಹ್ಮಣರು ಬರುತ್ತಾರೆ, ತಮ್ಮ ಸಿದ್ಧಾಂತವನ್ನು ವಿವರಿಸುತ್ತಾರೆ, ಬಣ್ಣಿಸುತ್ತಾರೆ. ಆದರೆ ಹಾಗೆಯೇ ಪರರ ಸಿದ್ಧಾಂತಗಳನ್ನು ಖಂಡಿಸುತ್ತಾರೆ, ನಿಂದಿಸುತ್ತಾರೆ, ನಿರಾಕರಿಸುತ್ತಾರೆ. ಅದೇರೀತಿಯಲ್ಲೇ ಬೇರೆ ಕೆಲವು ಸಮಣ ಬ್ರಾಹ್ಮಣರು ಸಹಾ ಬಂದು ಹಾಗೇ ಅದೇರೀತಿ ಮಾಡುತ್ತಾರೆ. ಹೀಗೆ ವಿಭಿನ್ನವಾದ ಸಿದ್ಧಾಂತಗಳಿಂದಾಗಿ ನಮ್ಮಲ್ಲಿ ದ್ವಂದ್ವ ಉಂಟಾಗಿದೆ, ಸಂಶಯ ಉಂಟಾಗಿದೆ, ನಮಗೆ ಅವರಲ್ಲಿ ಸತ್ಯ ಹೇಳುತ್ತಿರುವವರು ಯಾರು? ಮಿಥ್ಯ ನುಡಿಯುತ್ತಿರುವವರು ಯಾರು ತಿಳಿಯದಾಗಿದೆ. ಇದನ್ನು ನೀವೇ ನಮಗೆ ಪರಿಹರಿಸಬೇಕು ಭಂತೆ."

"ಓ ಕಾಲಾಮರೇ, ನೀವು ಸಂಶಯಸ್ತ ವಿಷಯಗಳಲ್ಲಿಯೇ ಸಂಶಯಪಡುತ್ತಿರುವಿರಿ, ದ್ವಂದ್ವವುಳ್ಳ ವಿಷಯದಲ್ಲೇ ದ್ವಂದ್ವಪಡುತ್ತಿರುವಿರಿ. ಸಂಶಯಸ್ತ ವಿಷಯಗಳಲ್ಲಿ ದ್ವಂದ್ವತೆ ಆಗುವುದು."

"ಈಗ ನೋಡಿ ಕಾಲಾಮರೇ, ಸುದ್ದಿಗಳಿಗಾಗಲಿ ಅಥವಾ ಸಂಪ್ರದಾಯಕ್ಕಾಗಲಿ ಅಥವಾ ಅಸಂಪ್ರದಾಯ ಸಿದ್ಧಾಂತಕ್ಕಾಗಲಿ ನಂಬದಿರಿ. ಅದರಲ್ಲೇ ದಾರಿ ತಪ್ಪಬೇಡಿ. ಧಮ್ಮಗ್ರಂಥಗಳಲ್ಲಿದೆ ಎಂದಾಗಲಿ, ಅಥವಾ ತರ್ಕ ಸಮ್ಮತ ಎಂದಾಗಲಿ, ಊಹೆಗೆ ನಿಲುಕುತ್ತದೆ ಎಂದಾಗಲಿ, ಪರ್ಯಾಯಾಲೋಚಿಸಿ ಸಿದ್ಧವಾದುದೆಂದಾಗಲಿ, ಚಿಂತನೆ ಮಾಡಿ ಸಿದ್ಧವಾದ ಸಿದ್ಧಾಂತ ಎಂದಾಗಲಿ, ಚೆನ್ನಾಗಿ ಕಾಣಿಸುತ್ತದೆ ಎಂದಾಗಲಿ, ಇದು ಗೌರವಾರ್ಹ ಗುರುವಿನಿಂದ ಬಂದಿದೆ ಎಂದಾಗಲಿ ನಂಬಬೇಡಿ. ಆದರೆ ಕಾಲಾಮರೇ, ಯಾವಾಗ ನೀವೇ ಚಿಂತನೆ ಮಾಡಿದಾಗ, ನಿಮಗೆ ಇವು ಅನರ್ಥಕಾರಿ, ನಿಂದನೀಯ, ಜ್ಞಾನಿಗಳಿಂದ ನಿಷೇಧಿಸಲ್ಪಡುತ್ತದೆ ಎಂದು ಗೊತ್ತಾದಾಗ, ಇವುಗಳ ಪಾಲನೆಯಿಂದ ದುಃಖವಾಗುತ್ತದೆ ಎಂದು ಅರಿವಾದಾಗ ಅದನ್ನು ತಿರಸ್ಕರಿಸಿ."

"ಈಗ ಕಾಲಾಮರೇ, ಒಬ್ಬನಲ್ಲಿ ಲೋಭ ಉಂಟಾದಾಗ (ಅಥವಾ ದ್ವೇಷ ಉಂಟಾದಾಗ... ಅಥವಾ ಮೋಹ ಉಂಟಾದಾಗ) ಅದು ಆತನಿಗೆ ಲಾಭ ತರುತ್ತದೆಯೋ ಅಥವಾ ನಷ್ಟವನ್ನು ಉಂಟುಮಾಡುತ್ತದೆಯೋ?"

"ಅದು ನಷ್ಟವನ್ನು, ಹಾನಿಯನ್ನು ತರುತ್ತದೆ ಭಗವಾನರೇ."

"ಕಾಲಾಮರೇ, ಈಗ ಆತನು ಲೋಭಿಯಾದಾಗ (ದ್ವೇಷಿಯಾದಾಗ/ ಮೋಹಿಯಾದಾಗ) ಆತನ ಚಿತ್ತವು ನಿಯಂತ್ರಣ ತಪ್ಪುತ್ತದೆ, ಆಗ ಆತನು ಜೀವಹತ್ಯೆ, ಕಳ್ಳತನ, ವ್ಯಭಿಚಾರ, ಸುಳ್ಳು, ಮದ್ಯಪಾನವೆಲ್ಲಾ ಮಾಡುತ್ತಾನೆ. ಹಾಗೆಯೇ ಪರರಿಗೂ ಪ್ರೋತ್ಸಾಹ ನೀಡುತ್ತಾನೆ. ಈ ರೀತಿಯಾಗಿ ಭವಿಷ್ಯದ ದೀರ್ಘ ದುಃಖ ಉಂಟಾಗಲು ಕಾರಣಕರ್ತನಾಗುತ್ತಾನೆ ಅಲ್ಲವೇ?"

"ಹೌದು ಭಗವಾನರೇ."

"ಈಗ ನಿಮಗೆ ಹೇಗೆ ಅನಿಸುತ್ತದೆ ಕಾಲಾಮರೇ, ಇವು ಲಾಭಕಾರಿಯೋ ಅಥವಾ ನಷ್ಟಕಾರಿಯೋ?"



"ಇವು ನಷ್ಟಕಾರಿ ಭಗವಾನ್."

"ಇವು ನಿಂದನೀಯವೋ ಅಥವಾ ಅಲ್ಲವೋ."

"ನಿಂದನೀಯವಾದುದು ಭಗವಾನ್."

"ಇವು ಜ್ಞಾನಿಗಳಿಂದಲೇ ನಿಷೇಧಿಸಲ್ಪಡುವುದು ಅಲ್ಲವೇ?"

"ಹೌದು ಭಗವಾನ್."

"ಇವುಗಳನ್ನು ಪರಿಪಾಲಿಸಿದಾಗ ದೀರ್ಘಕಾಲ ದುಃಖ, ನಷ್ಟ ಉಂಟಾಗುತ್ತದೆ ಅಲ್ಲವೇ?"

"ಹೌದು ಭಂತೆ."

"ಈಗ ಕಾಲಾಮರೇ, ಈ ಲೋಭದಿಂದ (ದ್ವೇಷದಿಂದ ಅಥವಾ ಮೋಹದಿಂದ) ಮುಕ್ತನಾದರೆ ಆತನಿಗೆ ಲಾಭವಾಗುತ್ತದೋ ಅಥವಾ ನಷ್ಟವಾಗುತ್ತದೋ?"

"ಲಾಭವಾಗುತ್ತದೆ ಭಂತೆ."

"ಈಗ ಇಂತಹ ಮನುಷ್ಯನು ಲೋಭದಿಂದ, ದ್ವೇಷದಿಂದ ಮತ್ತು ಮೋಹದಿಂದ ಮುಕ್ತನಾದಾಗ, ಆತನು ಜೀವಹತ್ಯೆಯಾಗಲಿ, ಕಳ್ಳತನವಾಗಲಿ, ವ್ಯಭಿಚಾರವಾಗಲಿ, ಸುಳ್ಳಾಗಲಿ, ನುಡಿಯಲಾರನು, ಮದ್ಯ ಸೇವಿಸಲಾರನು. ಹಾಗೆಯೇ ಪರರಿಗೂ ಆತನು ದಾರಿ ತಪ್ಪಿಸಲಾರನು. ಹೀಗಿರುವಾಗ ಆತನಿಗೆ ದುಃಖವಿಲ್ಲದೆ, ನಷ್ಟವಿಲ್ಲದೆ ಸುಖಿಯಾಗಿ ಇರುತ್ತಾನೆ ಅಲ್ಲವೆ."

"ಹೌದು ಭಂತೆ."

"ಈಗ ಕಾಲಾಮರೇ, ನೀವೇನು ಯೋಚಿಸುವಿರಿ? ಲೋಭದಿಂದ, ದ್ವೇಷದಿಂದ ಮತ್ತು ಮೋಹದಿಂದ ಮುಕ್ತನಾಗುವುದು ಲಾಭಕಾರಿಯೋ ಅಥವಾ ನಷ್ಟಕಾರಿಯೋ?"

"ಲಾಭಕಾರಿ ಭಂತೆ."

"ಇವು ನಿಂದನೀಯವೋ ಅಥವಾ ಅಲ್ಲವೋ?"

"ಇವು ನಿಂದನೀಯವಲ್ಲ."

"ಜ್ಞಾನಿಗಳಿಂದ ನಿರಾಕರಿಸಲ್ಪಡುತ್ತದೋ ಅಥವಾ ಪ್ರಶಂಸಿಸಲ್ಪಡುತ್ತದೋ?"

"ಪ್ರಶಂಸಿಲ್ಪಡುತ್ತದೆ ಭಂತೆ."

"ಹೀಗೆ ಪರಿಪಾಲಿತವಾದಾಗ ಅವು ಸುಖಕಾರಿಯೋ ಅಥವಾ ಅಲ್ಲವೋ."

"ಸುಖಕಾರಿ ಭಂತೆ, ಸುಖವನ್ನು ತರುತ್ತದೆ."

"ಈಗ ಕಾಲಾಮರೇ, ಯಾವ ಆರ್ಯ ಶ್ರಾವಕನು ಹೀಗೆ ಲೋಭದಿಂದ, ದ್ವೇಷದಿಂದ ಮತ್ತು ಮೋಹದಿಂದ ಮುಕ್ತನಾದಾಗ ಆತನು ದಿಗ್ಭ್ರಮೆಪಡುವುದಿಲ್ಲ. ಬದಲಾಗಿ ಸ್ವನಿಯಂತ್ರಣವುಳ್ಳವನಾಗುತ್ತಾನೆ ಮತ್ತು ಸ್ಮೃತಿವಂತನಾಗುತ್ತಾನೆ ಮತ್ತು ಚಿತ್ತದಲ್ಲಿ ಮೈತ್ರಿಯಿಂದ

ಕೂಡಿರುತ್ತಾನೆ, ಕರುಣೆಯಿಂದ ಕೂಡಿರುತ್ತಾನೆ, ಮುದಿತಾದಿಂದ ಕೂಡಿರುತ್ತಾನೆ, ಸಮಚಿತ್ತತೆಯಿಂದ ಕೂಡಿರುತ್ತಾನೆ. ಇದೇರೀತಿಯ ಭಾವನೆಯಿಂದ ಆತನು ಒಂದು ದಿಕ್ಕಿಗೆ ಹರಡುತ್ತಾನೆ. ಹಾಗೆಯೇ ಎಲ್ಲಾ ದಿಕ್ಕುಗಳಿಗೂ ಹರಡುತ್ತಾನೆ. ಈ ರೀತಿಯಾಗಿ ಆರ್ಯಶ್ರಾವಕನು ಚಿತ್ತದಿಂದ, ದ್ವೇಷ, ವಿರೋಧ, ಚಿತ್ತಕ್ಲೇಶಗಳಿಂದ ಮುಕ್ತನಾಗಿ, ಪರಿಶುದ್ಧನಾಗುತ್ತಾನೆ. ಅಂತಹುದರಿಂದ ಈ ಜನ್ಮದಲ್ಲೇ ನಾಲ್ಕು ಸಮಾಧಾನವನ್ನು ಕಾಣಬಹುದು."

1. ಪರಲೋಕವಿದ್ದರೆ ಕರ್ಮಫಲವು ಸಿಗುವುದಿದ್ದರೆ ನಮ್ಮ ಒಳ್ಳೆಯ ಕಾರ್ಯಗಳನ್ನು ಮಾಡಿರುವೆ, ನನಗೆ ಸುಗತಿಯೇ ಸಿಗುವುದು.
2. ಪರಲೋಕವಿಲ್ಲದಿದ್ದರೆ, ಕರ್ಮಫಲ ಸಿಗದಿದ್ದರೆ ಈ ಜನ್ಮದಲ್ಲೇ ದ್ವೇಷರಹಿತನಾಗಿ, ದುಃಖರಹಿತನಾಗಿ, ಕ್ಲೇಷರಹಿತನಾಗಿ ಸುಖಿಯಾಗಿ ಇರುತ್ತೇನೆ.
3. ಕರ್ಮಫಲ ಇರುವುದಾದರೆ, ನಾನು ಹಿಂದೆ ಪಾಪ ಮಾಡಿದ್ದರೂ, ಈಗ ನಾನು ಯಾರ ಅಹಿತವನ್ನು ಬಯಸುತ್ತಿಲ್ಲ. ಹೀಗಿರುವಾಗ ದುಃಖವು ನನಗೆ ಹೇಗೆತಾನೆ ತಟ್ಟಿತು."
4. ಕರ್ಮಫಲ ಸಿಗುವುದಾದರೆ, ನನ್ನಿಂದ ಯಾವ ಪಾಪವು ನಡೆದಿಲ್ಲ, ಹೀಗೆ ಎರಡು ರೀತಿಯಲ್ಲಿ ಪರಿಶುದ್ಧನಾಗಿಯೇ ಇರುವೆನು.

ಹೀಗೆ ಕಾಲಾಮರೆ, ಆ ಆರ್ಯಶ್ರಾವಕನು ಚಿತ್ತಕ್ಲೇಷಗಳಿಂದ, ದ್ವೇಷದಿಂದ, ವಿಮುಕ್ತನಾಗಿ ನಿರ್ಮಲನಾಗಿ ಈ ಜೀವಿತದಲ್ಲೇ ಈ ನಾಲ್ಕು ಸಮಾಧಾನ ಪಡೆಯುತ್ತಾನೆ.

"ಅದ್ಭುತ ಭಂತೆ, ನಾವು ಇಂದಿನಿಂದ ತಮಗೆ, ಧಮ್ಮಕ್ಕೆ ಮತ್ತು ಸಂಘಕ್ಕೆ ಶರಣು ಹೋಗುವೆವು. ಭಗವಾನರು ನಮ್ಮನ್ನು ತಮ್ಮ ಉಪಾಸಕರೆಂದು ಸ್ವೀಕರಿಸಲಿ. ನಾವು ಜೀವಿತ ಪರ್ಯಂತ ತ್ರಿಶರಣು ಹೋಗುವೆವು."

ಕಾಲಾಮ ಸುತ್ತದಲ್ಲಿ ನಾವು ಅರಿಯುವಂತಹುದು ಏನೆಂದರೆ ಸಿದ್ಧಾಂತಗಳಿಗೆ, ಸಂಪ್ರದಾಯಕ್ಕೆ, ಅಸಂಪ್ರದಾಯಕ್ಕೆ, ತರ್ಕ, ಊಹೆ, ಸುದ್ದಿಗಳಿಗೆ, ಪೂಜ್ಯ ಗ್ರಂಥಗಳಿಗೆ, ಪೂಜ್ಯ ಗುರುಗಳಿಗೂ ನಂಬಬಾರದು. ಏಕೆಂದರೆ ನಾವು ಕಂಡಂತೆ ಇವುಗಳಲ್ಲಿ ಎಷ್ಟೋ ತಪ್ಪಿರುತ್ತದೆ, ಅಹಿತ ತರುವಂತಹುದು ಇರುತ್ತದೆ. ಆದ್ದರಿಂದ ನಾವು ವಿಚಾರಶೀಲರಾಗಿ ಸತ್ಯವನ್ನೇ ಸ್ವೀಕರಿಸಬೇಕು.

ಎರಡನೆಯ ವಿಷಯ ಏನೆಂದರೆ ಭಗವಾನರ ಬೋಧನೆಯಲ್ಲಿ ಇಲ್ಲಿ ಲೋಭರಹಿತ, ದ್ವೇಷರಹಿತ ಮತ್ತು ಮೋಹರಹಿತರಾಗಿರುವುದು ಮತ್ತು ಮೈತ್ರಿ, ಕರುಣೆ, ಮುದಿತಾ ಮತ್ತು ಸಮಚಿತ್ತತೆಯಿಂದ ಕೂಡಿರುವುದು.

ನಿಜಕ್ಕೂ ಈ ರೀತಿಯ ಶ್ರೇಷ್ಠ ಜೀವನದಿಂದಾಗಿ ಇಹ ಮತ್ತು ಪರರಲ್ಲಿಯೂ ಸಹಾ ಸುಖ ಪ್ರಾಪ್ತಿಯೇ ಆಗುವುದು.



## ಸಂಪ್ರದಾಯಗಳು ಸ್ಥಾಪಿತವಾಗುವ ಬಗೆ :

"ಚೀನಾ ದೇಶದ ಒಂದು ವಿಹಾರದಲ್ಲಿ ಭಿಕ್ಷುಗಳು ಧ್ಯಾನ ಮಾಡುತ್ತಿದ್ದರು. ಆಗ ಒಂದು ಬೆಕ್ಕಿನ ಮರಿಯು ಅವರ ಮೇಲೆ ಚಲಿಸುತ್ತ ಅವರ ಏಕಾಗ್ರತೆಗೆ ತೊಂದರೆ ಮಾಡುತ್ತಿತ್ತು. ಆಗ ಗುರುವು ಬೆಕ್ಕಿನ ಮರಿಯನ್ನು ಕಟ್ಟಿಹಾಕಿ ಧ್ಯಾನಿಸಲು ಆಜ್ಞೆನೀಡಿದನು. ನಂತರ ಹೀಗೆಯೇ ಸಾಗಿತು. ಅವರಿಗೆ ಈಗ ಧ್ಯಾನ ಭಂಗವಾಗುತ್ತಿರಲಿಲ್ಲ. ಗುರುವಿನ ಆಜ್ಞೆಯಂತೆ ಎಲ್ಲರೂ ಮೊದಲು ಬೆಕ್ಕನ್ನು ಕಟ್ಟಿಯೇ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಗುರುವಿನ ಉದ್ದೇಶ ಧ್ಯಾನಕ್ಕೆ ಬೆಕ್ಕಿನ ವರ್ತನೆ ಅಡ್ಡಿಯೆಂದು ಆತನು ಅದನ್ನು ಕಟ್ಟಿಹಾಕಿ ಧ್ಯಾನ ಮಾಡಲು ಆಜ್ಞಾಪಿಸಿದ್ದನು. ಒಂದು ವರ್ಷದ ನಂತರ ಗುರುಗಳು ಮರಣವನ್ನಪ್ಪಿದರು. ಆ ಘಟನೆಯ 2 ವರ್ಷದ ತರುವಾಯ ಆ ಬೆಕ್ಕು ಸಹಾ ಸತ್ತಿತ್ತು. ಈಗ ಭಿಕ್ಷುಗಳು ಧ್ಯಾನಕ್ಕೆ ಕುಳಿತುಕೊಳ್ಳುವ ಮುನ್ನ ಬೆಕ್ಕನ್ನು ಕಟ್ಟುವ ಅಭ್ಯಾಸ ನೆನಪಿಗೆ ಬಂದಿತು. ಅದಕ್ಕಾಗಿ ಬೇರೊಂದು ಬೆಕ್ಕು ತಂದು ಕಟ್ಟಿಹಾಕಿ ಧ್ಯಾನಕ್ಕೆ ಕುಳಿತರು. ಇಲ್ಲಿ ಅವರು ಗುರುಗಳಲ್ಲಿ ಬೆಕ್ಕು ಏತಕ್ಕಾಗಿ ಕಟ್ಟುತ್ತಾರೆ ಕೇಳಲಿಲ್ಲ. ಆ ಗುರುವು ಸಹಾ ಶಿಷ್ಯರು ಬುದ್ಧಿವಂತರೆಂದು ಆತನು ಸಹಾ ಹೇಳಲಿಲ್ಲ. ಹೀಗಾಗಿ ಬೆಕ್ಕು ಕಟ್ಟಿ ಧ್ಯಾನ ಮಾಡುವ ಸಂಪ್ರದಾಯ ಹರಿದುಬಂತು. ಇದೇರೀತಿಯಲ್ಲಿ ಇಂದು ನಾವು ಅನೇಕಾನೇಕ ಸಂಪ್ರದಾಯವನ್ನು ಪಾಲಿಸುತ್ತ ಬಂದಿದ್ದೇವೆ. ಅದರ ಮೂಲಕಾರಣ ಅರಿತಿಲ್ಲ. ಅದರಿಂದಾಗುವ ಪ್ರಯೋಜನವೂ ಅರಿತಿಲ್ಲ. ಕೇವಲ ಮೌಢ್ಯದ ಭಾರವನ್ನು ಹೊತ್ತು ಜೀವನದಲ್ಲಿ ನಡೆದಾಡುತ್ತಿದ್ದೇವೆ. ಜೀವನದಲ್ಲಿ ಬರುವ ಹೇರಳವಾದ ಮೌಢ್ಯಗಳನ್ನು ಕಿತ್ತು ಎಸೆಯಬೇಕಾಗಿದೆ.

## ಸಕ್ಕನ ಶ್ರೇಷ್ಠ ಪ್ರಶ್ನೆ

ಸಕ್ಕನು ಭಗವಾನರಲ್ಲಿ ಒಮ್ಮೆ ಈ ಪ್ರಶ್ನೆಯನ್ನು ಕೇಳುತ್ತಾನೆ:

"ಭಗವಾನ್ ಎಲ್ಲಾರೀತಿಯ ಸಮಣ ಬ್ರಾಹ್ಮಣರು ಒಂದೇಗುರಿಯನ್ನು ಹೊಂದಿದ್ದಾರೆಯೇ? ಒಂದೇರೀತಿಯ ವಿಧಾನವನ್ನು ಹೊಂದಿದ್ದಾರೆಯೇ? ಒಂದೇರೀತಿಯ ನಂಬಿಕೆಯನ್ನು ಹೊಂದಿದ್ದಾರೆಯೇ? ಒಂದೇರೀತಿಯ ಅಭಿಪ್ರಾಯವನ್ನು ಹೊಂದಿದ್ದಾರೆಯೇ?"

"ಇಲ್ಲ ದೇವಾಧಿಪತಿಯೆ, ಅವರು ಹಾಗೆ ಕೂಡಿಲ್ಲ."

"ಆದರೆ ಭಂತೆ, ಏಕೆ ಅವರು ಹಾಗೆ ಒಂದೇ ಗುರಿ, ಒಂದೇ ಸಿದ್ಧಾಂತ, ಒಂದೇ ಮಾರ್ಗ ಹೊಂದಿಲ್ಲ."

"ಓ ದೇವಾಧಿಪತಿಯೇ, ಈ ಲೋಕವು ಸಹಾ ನಾನಾರೀತಿಯ ಧಾತುಗಳಿಂದ ಕೂಡಿದೆ. ಹಾಗೆಯೇ ಜೀವಿಗಳು ಸಹಾ ನಾನಾರೀತಿಯ ಧಾತುಗಳಿಗೆ, ಗ್ರಹಿಕೆಗಳಿಗೆ, ಅಭಿಪ್ರಾಯಗಳಿಗೆ, ಸಿದ್ಧಾಂತಗಳಿಗೆ, ಗುರಿಗಳಿಗೆ ಮಾರ್ಗ ವಿಧಾನಗಳಿಗೆ ಅಂಟಿರುವರು. ಅಷ್ಟೇ ಅಲ್ಲ, ಅವರು "ಇದೊಂದೇ ಸತ್ಯ, ಮಿಕ್ಕವೆಲ್ಲ ಮೌಢ್ಯ" ಎಂದು ಪ್ರತಿಪಾದಿಸುತ್ತಾರೆ.

ಆದ್ದರಿಂದಲೇ ಎಲ್ಲಾಬಗೆಯ ಸಮಣ ಬ್ರಾಹ್ಮಣರು ಒಂದೇ ಗುರಿಯನ್ನಾಗಲಿ, ಒಂದೇ ಮಾರ್ಗವನ್ನಾಗಲಿ, ಸಿದ್ಧಾಂತವನ್ನಾಗಲಿ, ನಂಬಿಕೆಯನ್ನಾಗಲಿ, ಅಭಿಪ್ರಾಯವಾಗಲಿ ಹೊಂದಿಲ್ಲ."

"ಹಾಗಾದರೆ ಭಂತೆ, ಎಲ್ಲಾ ಸಮಣ ಬ್ರಾಹ್ಮಣರು ಪೂರ್ಣ ನಿಪುಣರು, ಪೂರ್ಣವಾಗಿ ಸುರಕ್ಷಿತರು, ಶ್ರೇಷ್ಠ ಜೀವನವನ್ನು ಪಾಲಿಸಿದವರು ಶ್ರೇಷ್ಠ ಆದರ್ಶ ಪಾಲಿಸಿದರು ಮತ್ತು ಶ್ರೇಷ್ಠ ಗಮ್ಯವನ್ನು ತಲುಪಿದವರು ಆಗಿರುವವರೇ?"

"ಇಲ್ಲ ದೇವೇಂದ್ರ ಅವರೆಲ್ಲರೂ ಹಾಗಿಲ್ಲ."

"ಏಕೆ ಭಂತೆ ಅವರು ಪ್ರಾಪ್ತಿಮಾಡಿಲ್ಲ?"

"ದೇವೇಂದ್ರ ಯಾವ ಸಮಣ ಬ್ರಾಹ್ಮಣರು ಪೂರ್ಣವಾಗಿ ದುಃಖಕ್ಕೆ ಕಾರಣವಾದ ತನ್ಹಾಗಳಿಂದ ಮುಕ್ತರೋ ಅವರು ಮಾತ್ರ ಪೂರ್ಣ ನಿಪುಣರು, ಪೂರ್ಣ ಸುರಕ್ಷಿತರು, ಶ್ರೇಷ್ಠ ಜೀವಿತ ಪರಿಪಾಲಿಸಿದವರು ಮತ್ತು ಗಮ್ಯವನ್ನು ತಲುಪಿದವರು ಆಗಿರುತ್ತಾರೆ. ಅದರಿಂದ ಅವರೆಲ್ಲರೂ ಹಾಗಿಲ್ಲ ಎಂದು ಹೇಳುತ್ತೇನೆ."

"ಅದ್ಭುತ ಭಂತೆ, ಅದು ಹೀಗೆಯೇ ಭಂತೆ. ಬಹುಕಾಲದ ಪ್ರಶ್ನೆಯು ಭಗವಾನರಿಂದಾಗಿ ಪರಿಹಾರವಾಯಿತು."

ಇಲ್ಲಿ ಭಗವಾನರು ಸಕ್ಕನ ಪ್ರಶ್ನೆಗೆ ಅತಿ ಅದ್ಭುತವಾದ ಹಾಗೆಯೇ ಸತ್ಯವಾದ ಉತ್ತರ ನೀಡಿದ್ದಾರೆ. ನಾವು ಸಹಾ ಇಲ್ಲಿ ಸದಾ ನಾನಾರೀತಿಯ ಸಿದ್ಧಾಂತಗಳನ್ನು ಕಾಣುತ್ತಿದ್ದೇವೆ. ಅದರಲ್ಲಿ ಎರಡು ಬಗೆಯ ಸಿದ್ಧಾಂತಗಳ ಪ್ರತಿಪಾದಕರಿದ್ದಾರೆ.

1. ಇದೊಂದೇ ಸತ್ಯ ಎಂದು ಹೇಳುವವರು
2. ಎಲ್ಲವೂ ಸತ್ಯ ಎಂದು ಹೇಳುವವರು.

"ಇದೊಂದೇ ಸತ್ಯ, ಮಿಕ್ಕವೆಲ್ಲಾ ಮೌಢ್ಯ" ಎಂದು ಹೇಳುವವರು ವಿವಾದವನ್ನೇ ಸೃಷ್ಟಿಸುತ್ತಾರೆ. ಆಗ ದ್ವೇಷ, ಕಲಹಗಳಿಗೆ ಕಾರಣವಾಗುತ್ತದೆ. ಅದಕ್ಕೆ ಕಾರಣ ಅವರವರ ಅನುಭವ, ತರ್ಕವೇ ಕಾರಣವಾಗಿರುತ್ತದೆ. ಆದರೂ ಅವರು ಪೂರ್ಣವಾಗಿ ಸತ್ಯವನ್ನು ಕಂಡಿರುವುದಿಲ್ಲ. ಹಾಗೆಯೇ "ಎಲ್ಲವೂ ಸತ್ಯ" ಎಂದು ಹೇಳುವವರು ಸಾಮರಸ್ಯ ಉಂಟುಮಾಡಬಹುದು. ಆದರೆ ಅದು ಸಹಾ ಮೋಸ ಮಾಡಿದಂತೆ ಆಗುತ್ತದೆ, ಪೂರ್ಣ ಸತ್ಯವಾಗಲಾರದು. ಏಕೆಂದರೆ ಪ್ರತಿಯೊಂದಕ್ಕೂ ಕಾರಣಗಳಿವೆ. ಅದರಂತೆಯೇ ಪ್ರತಿಯೊಂದಕ್ಕೂ ಪರಿಣಾಮಗಳಿವೆ. ಒಂದು ಕಾರ್ಯದ ಪರಿಣಾಮವು, ಮತ್ತೊಂದು ಕಾರ್ಯದ ಪರಿಣಾಮಕ್ಕೂ ವ್ಯತ್ಯಾಸವಿರುತ್ತದೆ. ಗುರಿಗಳು ವಿಭಿನ್ನವಾದಂತೆ, ಮಾರ್ಗಗಳು ವಿಭಿನ್ನವಾಗಿರುತ್ತದೆ. ಅದರಂತೆಯೇ ಪರಿಣಾಮಗಳು ವಿಭಿನ್ನವಾಗಿರುತ್ತದೆ. ಒಂದು ಸಿದ್ಧಾಂತದಂತೆ ಒಬ್ಬನು ಜೀವಿಸುತ್ತಾ, ಇನ್ನೊಬ್ಬ ಇನ್ನೊಂದು ಸಿದ್ಧಾಂತದಂತೆ ಜೀವಿಸುತ್ತಾನೆ, ಅಂತಹುದರಲ್ಲಿ ಇಬ್ಬರು ಒಂದೇ ಗಮ್ಯಕ್ಕೆ ಸೇರಲು ಸಾಧ್ಯವಿಲ್ಲ. ಏಕೆಂದರೆ ಕಾರ್ಯಗಳಂತೆ, ದೃಷ್ಟಿಕೋನಗಳಂತೆಯೇ ಪರಿಣಾಮಗಳು ದೊರೆಯುತ್ತದೆ.



ಬುದ್ಧರ ಪ್ರಕಾರ ತನ್ಹಾಗಳಿಂದ ಪೂರ್ಣವಾಗಿ ಮುಕ್ತರಾದವರು ಮಾತ್ರ ಗಮ್ಯ, ಪೂರ್ಣತ್ವ ಸಾಧಿಸುತ್ತಾರೆ. ತನ್ಹಾಗಳಲ್ಲಿ ಮೂರು ವಿಧವಿದೆ. ಇಂದ್ರೀಯ ಭೋಗಗಳ ಲಾಲಸೆಯಾದ ಕಾಮತನ್ಹಾ, ಶಾಶ್ವತವಾಗಿ ಇರಬೇಕೆನ್ನುವ ಭವತನ್ಹಾ, ಇರಲೇಬಾರದು ಎನ್ನುವ ವಿಭವ ತನ್ಹಾ, ಇವುಗಳಿಂದ ಪಾರಾಗಬೇಕಾಗುತ್ತದೆ.

## ಚಿಂತನಾತೀತವಾದುದು ಯಾವುದು?

"ಭಿಕ್ಷುಗಳೇ ಇವು ನಾಲ್ಕು ಚಿಂತನೆಗೆ ಅತೀತವಾಗಿವೆ, ತರ್ಕಕ್ಕೆ ಅತೀತವಾಗಿವೆ, ಚಿಂತಿಸಲು ಆಗುವುದಿಲ್ಲ. ಹಾಗೇನಾದರೂ ಒಬ್ಬನು ಪ್ರಯತ್ನಿಸಿದರೆ ಆತನ ಮನಸ್ಸು ಚದುರಿ ಹೋಗುವುದು, ಕ್ಷೋಭೆಗೆ ಒಳಗಾಗುವುದು, ನಿರಾಶನಾಗುವನು, ಯಾವುವವು ನಾಲ್ಕು?

"ಭಿಕ್ಷುಗಳೇ ಬುದ್ಧರ ಕ್ಷೇತ್ರವು ಚಿಂತನಾತೀತವಾಗಿದೆ, ತರ್ಕಾತೀತವಾಗಿದೆ. ಅದನ್ನು ಚಿಂತಿಸಲು ಆಗುವುದಿಲ್ಲ. ಹಾಗೆಯೇ ಸಮಾಧಿಯ ಕ್ಷೇತ್ರಗಳು ಚಿಂತನೆಗೆ ಸಿಗದು. ಅದು ಚಿಂತನಾತೀತವಾಗಿದೆ, ತರ್ಕಾತೀತವಾಗಿದೆ. ಹಾಗೆಯೇ ಕರ್ಮಫಲಗಳ ಕ್ಷೇತ್ರವು ಚಿಂತನಾತೀತವಾಗಿದೆ. ತರ್ಕಾತೀತವಾಗಿದೆ. ಅದು ಚಿಂತನೆಗೆ ಸಿಗದು ಮತ್ತು ಲೋಕಗಳ ಚಿಂತನೆ ಅಂದರೆ ಸೃಷ್ಟಿರಹಸ್ಯ, ಅದು ಚಿಂತನೆಗೆ ಸಿಗದು, ಚಿಂತನಾತೀತವಾಗಿದೆ, ತರ್ಕಾತೀತವಾಗಿದೆ. ಇವೇ ಭಿಕ್ಷುಗಳೇ, ಆ ನಾಲ್ಕು. ಇವುಗಳನ್ನು ಅರಿಯಲು ಕೇವಲ ಚಿಂತನೆಗೆ ಅಥವಾ ತರ್ಕಕ್ಕೆ ಮೊರೆ ಹೋದರೆ ಆತನ ಮನಸ್ಸು ಚದುರಿಹೋಗುವುದು. ಕ್ಷೋಭೆಗೆ ಒಳಗಾಗುವುದು, ನಿರಾಶನಾಗುವನು."

## ಸಾಕ್ಷಾತ್ಕರಿಸಲೇ ಬೇಕಾದ ನಾಲ್ಕು

"ಭಿಕ್ಷುಗಳೇ, ಈ ನಾಲ್ಕನ್ನು ಸಾಕ್ಷಾತ್ಕರಿಸಲೇ ಬೇಕಾಗಿದೆ, ಯಾವುವವು ನಾಲ್ಕು?"

"(ಚಿತ್ತ) ಕಾಯದಿಂದ ಸಾಕ್ಷಾತ್ಕರಿಸುವಂತಹುದು; ಸ್ಮೃತಿಯಿಂದ ಸಾಕ್ಷಾತ್ಕರಿಸುವಂತಹುದು. ದಿವ್ಯದೃಷ್ಟಿಯಿಂದ ಸಾಕ್ಷಾತ್ಕರಿಸುವಂತಹುದು ಮತ್ತು ಪ್ರಜ್ಞಾದಿಂದ ಸಾಕ್ಷಾತ್ಕರಿಸುವಂತಹುದು."

"ಕಾಯದಿಂದ ಸಾಕ್ಷಾತ್ಕರಿಸುವಂತಹುದು ಯಾವುದು ಭಿಕ್ಷುಗಳೇ?"

"ಅಷ್ಟ ವಿಮೋಕ್ಷಗಳು (ಬಿಡುಗಡೆ) ಸಾಕ್ಷಾತ್ಕರಿಸಬಹುದು."

"ಸ್ಮೃತಿಯಿಂದ ಸಾಕ್ಷಾತ್ಕರಿಸುವಂತಹುದು, ಯಾವುದು ಭಿಕ್ಷುಗಳೇ?"

"ಪೂರ್ವ ಜನ್ಮಗಳನ್ನು ಸಾಕ್ಷಾತ್ಕರಿಸಬಹುದು."

"ದಿವ್ಯದೃಷ್ಟಿಯಿಂದ ಸಾಕ್ಷಾತ್ಕರಿಸುವಂತಹುದು ಯಾವುವು ಭಿಕ್ಷುಗಳೇ?"

"ಮರಣ, ಪುನರ್ಜನ್ಮ ಮತ್ತು ಕರ್ಮ ನಿಯಮಗಳನ್ನು ಸಾಕ್ಷಾತ್ಕರಿಸಬಹುದು."

"ಪ್ರಜ್ಞಾದಿಂದ ಸಾಕ್ಷಾತ್ಕರಿಸುವಂತಹುದು ಯಾವುದು ಭಿಕ್ಷುಗಳೇ?"

"ಅಸವ ಕ್ಷಯವನ್ನು ಸಾಕ್ಷಾತ್ಕರಿಸಬಹುದು."

## 4 ಉಪಾದಾನಗಳು (ಅಂಟುವಿಕೆಗಳು)

"ಭಿಕ್ಷುಗಳೇ ನಾಲ್ಕು ರೀತಿಯ ಉಪಾದಾನಗಳಿವೆ (ಅಂಟುವಿಕೆಗಳಿವೆ) ಅವು ಯಾವುವು? (1) ಇಂದ್ರೀಯ ಸುಖಗಳಿಗೆ ಅಂಟುವಿಕೆ (2) ಮಿಥ್ಯಾದೃಷ್ಟಿಗೆ ಅಂಟುವಿಕೆ (3) ವಿಧಿಸಂಸ್ಕಾರ, ಮೂಢಾಚರಣೆಗೆ ಅಂಟುವಿಕೆ (4) ಆತ್ಮ ಸಿದ್ಧಾಂತಕ್ಕೆ ಅಂಟುವಿಕೆ. ಕೆಲವು ಮಿಥ್ಯಾ ದಾರ್ಶನಿಕರು, ತಾವು ಎಲ್ಲಾ ಅಂಟುವಿಕೆಯನ್ನು ಅರಿತಿದ್ದೇವೆ, ಎಲ್ಲವನ್ನೂ ತ್ಯಜಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ ಅವರು ಪೂರ್ಣ ಸತ್ಯಗಳನ್ನು ಅರಿತಿರುವುದಿಲ್ಲ ಮತ್ತು ಹಾಗೆಯೇ ತ್ಯಜಿಸಿರುವುದು ಇಲ್ಲ."

## ಅಜ್ಞಾನಿ ಯಾರು?

ಒಬ್ಬನು ಬಂದು ಭಗವಾನರಿಗೆ ಹೀಗೆ ಪ್ರಶ್ನಿಸುತ್ತಾನೆ: "ಭಗವಾನ್ ಅಜ್ಞಾನವೆಂದರೇನು ಮತ್ತು ಎಲ್ಲಿಯವರೆಗೆ ಒಬ್ಬನು ಅಜ್ಞಾನಿ ಎನಿಸಿಕೊಳ್ಳುತ್ತಾನೆ?"

"ಗೃಹಪತಿಯೇ, ಇಲ್ಲಿ ಯಾರು ದೇಹವನ್ನು ಅರಿಯುವುದಿಲ್ಲವೋ ಅದರ ಉದಯವನ್ನು ಅರಿಯುವುದಿಲ್ಲವೋ, ಅದರ ನಿರೋಧವನ್ನು ಅರಿಯುವುದಿಲ್ಲವೋ, ಅದರ ನಿರೋಧಕ್ಕೆ ಒಯ್ಯುವ ಮಾರ್ಗ ಅರಿಯುವುದಿಲ್ಲವೋ ಹಾಗೆಯೇ ವೇದನೆಗಳನ್ನು ಅರಿಯುವುದಿಲ್ಲವೋ ಅವುಗಳ ಉದಯವನ್ನು ಅರಿಯುವುದಿಲ್ಲವೋ ಅವುಗಳ ನಿರೋಧವನ್ನು ಅರಿಯುವುದಿಲ್ಲವೋ, ಅವುಗಳ ನಿರೋಧಕ್ಕೆ ಒಯ್ಯುವ ಮಾರ್ಗ ಅರಿಯುವುದಿಲ್ಲವೋ ಹಾಗೆಯೇ ಸಞ್ಞಗಳನ್ನು (ಗ್ರಹಿಕೆ) ಅರಿಯುವುದಿಲ್ಲವೋ, ಸಂಖಾರಗಳನ್ನು (ಚಿತ್ತದ ಚಟುವಟಿಕೆ) ಅರಿಯುವುದಿಲ್ಲವೋ, ವಿಞ್ಞಾನವನ್ನು (ಅರಿವನ್ನು) ಅರಿಯುವುದಿಲ್ಲವೋ ಅವುಗಳ ಉದಯವನ್ನು ಅರಿಯುವುದಿಲ್ಲವೋ, ಅವುಗಳ ನಿರೋಧವನ್ನು ಅರಿಯುವುದಿಲ್ಲವೋ ನಿರೋಧಕ್ಕೆ ಒಯ್ಯುವ ಮಾರ್ಗವನ್ನು ಅರಿಯುವುದಿಲ್ಲವೋ ಇಲ್ಲಿಯವರೆಗೆ ಆತನು ಅಜ್ಞಾನಿಯಾಗಿರುತ್ತಾನೆ.

(ಅಂದರೆ ಒಟ್ಟಾರೆ ದೇಹ, ಮನಸ್ಸಿನ ವಿಶ್ಲೇಷಣೆ, ಕ್ರಿಯೆ, ಉದಯ ನಿರೋಧ ಮತ್ತು ನಿರೋಧ ಮಾರ್ಗ ಅರಿಯದವರು ಅಜ್ಞಾನಿ ಎನಿಸಿಕೊಳ್ಳುತ್ತಾರೆ ಅಥವಾ ಆರ್ಯಸತ್ಯಗಳನ್ನು ಅರಿಯದವರು ಅಜ್ಞಾನಿಗಳು ಎನಿಸಿಕೊಳ್ಳುತ್ತಾರೆ.)

## ಅವಿಜ್ಜ ಸುತ್ತ (ಅವಿದ್ಯೆ/ಅಜ್ಞಾನದ ಸೂತ್ರ)

ಒಬ್ಬ ಭಿಕ್ಷುವು ಭಗವಾನರಲ್ಲಿಗೆ ಹೋಗಿ ವಂದಿಸಿದನು, ನಂತರ ಒಂದು ಪಕ್ಕದಲ್ಲಿ ಕುಳಿತನು ಮತ್ತು ಹೀಗೆ ಹೇಳಿದನು: "ಭಗವಾನ್ ಯಾವ ಒಂದು ವಿಷಯವನ್ನು ಭಿಕ್ಷುವು ವರ್ಜಿಸಿದಾಗ, ಆತನಲ್ಲಿನ ಅಜ್ಞಾನವು ಪರಿತ್ಯಜಿಸಲ್ಪಟ್ಟು ಆತನಲ್ಲಿ ಸ್ಪಷ್ಟ ಜ್ಞಾನವು ಉದಯಿಸುತ್ತದೆ?"

"ಹೌದು ಭಿಕ್ಷು, ಅಂತಹ ವಿಷಯವೊಂದಿದೆ. ಅದನ್ನು ಭಿಕ್ಷುವು ವರ್ಜಿಸಿದಾಗ ಆತನಲ್ಲಿನ ಅಜ್ಞಾನವು ಪರಿತ್ಯಜಿಸಲ್ಪಟ್ಟು ಆತನಲ್ಲಿ ಸ್ಪಷ್ಟ ಜ್ಞಾನವು ಉದಯಿಸುತ್ತದೆ."

"ಆ ಒಂದು ವಿಷಯ ಯಾವುದು?"



"ಅಜ್ಞಾನವೇ ಭಿಕ್ಷುವೆ, ಇದನ್ನು ಭಿಕ್ಷುವು ವರ್ಜಿಸಿದಾಗ ಆತನ ಅಜ್ಞಾನವು ಪರಿತ್ಯಜಿಸಲ್ಪಟ್ಟು, ಆತನಲ್ಲಿ ಸ್ಪಷ್ಟ ಜ್ಞಾನವು ಉದಯಿಸುತ್ತದೆ."

"ಆದರೆ ಅಜ್ಞಾನವು ಪರಿತ್ಯಜವಾಯಿತು ಮತ್ತು ಸ್ಪಷ್ಟ ಜ್ಞಾನವು ಉದಯಿಸುತ್ತದೆ ಎಂದು ಭಿಕ್ಷುವು ಹೇಗೆ ಅರಿಯುತ್ತಾನೆ ಮತ್ತು ಕಾಣುತ್ತಾನೆ?"

ಒಮ್ಮೆ ಭಿಕ್ಷುವು ಹೀಗೆ ಕೇಳಿರುತ್ತಾನೆ: "ಎಲ್ಲಾ ವಿಷಯಗಳು ಅಂಟುವಿಕೆಗೆ ಅನರ್ಹವಾಗಿದೆ". ಆಗ ಆತನಿಗೆ ನೇರವಾಗಿ ಪ್ರತಿಯೊಂದು ಅರಿವಿಗೆ ಬಂದಿರುತ್ತದೆ. ಆತನು ಎಲ್ಲವನ್ನು ಸೂಕ್ಷ್ಮವಾಗಿಯೇ ಗ್ರಹಿಸಿರುತ್ತಾನೆ. ಆತನು ಎಲ್ಲಾ ವಿಷಯಗಳನ್ನು ಯಾವುದೋ ರೀತಿಯಲ್ಲಿ ಪ್ರತ್ಯೇಕವಾಗಿ ಕಾಣುತ್ತಾನೆ."

"ಆತನು ಕಣ್ಣನ್ನು ಬೇರೆಯಾಗಿ ಕಾಣುತ್ತಾನೆ, ಹಾಗೆಯೇ ದೃಶ್ಯಗಳನ್ನು ಬೇರೆಯಾಗಿ (ಪ್ರತ್ಯೇಕವಾಗಿ) ಕಾಣುತ್ತಾನೆ, ಅವೆರಡರಿಂದ ಉತ್ಪನ್ನವಾಗುವ ಕಣ್ಣಿನಿಂದಾದ ಅರಿವನ್ನು (ಚಕ್ಷು ವಿಞ್ಞಾನ) ಬೇರೆಯಾಗಿಯೇ ಕಾಣುತ್ತಾನೆ. ಹಾಗೆಯೇ ಕಣ್ಣು ಮತ್ತು ದೃಶ್ಯಗಳ ನಡುವಿನ ಸಂಪರ್ಕವನ್ನು (ಪಸ್ಸ/ಸ್ಪರ್ಶ) ಬೇರೆಯಾಗಿಯೇ ಕಾಣುತ್ತಾನೆ ಮತ್ತು ಯಾವುದೆಲ್ಲವು ಕಣ್ಣಿನ ಸಂಪರ್ಕದಿಂದಾಗಿ ಉದಯಿಸಿತೋ ಹೇಳುವುದಾದರೆ ಸುಖ, ದುಃಖ ಅಥವಾ ಸುಖವು-ದುಃಖವೂ ಅಲ್ಲದ, ಅವೆಲ್ಲವನ್ನು ಪ್ರತ್ಯೇಕವಾಗಿ ಕಾಣುತ್ತಾನೆ."

"ಹಾಗೆಯೇ ಕಿವಿಯನ್ನು... ಮೂಗನ್ನು... ನಾಲಿಗೆಯನ್ನು... ದೇಹವನ್ನು ಪ್ರತ್ಯೇಕವಾಗಿ ಕಾಣುತ್ತಾನೆ. ಆತನು ಮನಸ್ಸನ್ನು ಪ್ರತ್ಯೇಕವಾಗಿ ಕಾಣುತ್ತಾನೆ, ಹಾಗೆಯೇ ಚಿತ್ತ ವಿಷಯಗಳನ್ನು ಪ್ರತ್ಯೇಕವಾಗಿ ಕಾಣುತ್ತಾನೆ, ಹಾಗೆಯೇ ಮನೋ ವಿಞ್ಞಾನವನ್ನು (ಮನಸ್ಸಿನಿಂದ ಅರಿಯುವಿಕೆಯನ್ನು) ಬೇರೆಯಾಗಿ ಕಾಣುತ್ತಾನೆ. ಮನಸ್ಸಿನ ಮತ್ತು ಮನೋ ವಿಷಯಗಳ ನಡುವಿನ ಸಂಪರ್ಕವನ್ನು ಬೇರೆಯಾಗಿ ಕಾಣುತ್ತಾನೆ. ಹಾಗೆಯೇ ಅಲ್ಲಿಂದ ಉತ್ಪನ್ನವಾದ ಸುಖ-ದುಃಖ, ಸುಖವು ಅಲ್ಲದ, ದುಃಖವು ಅಲ್ಲದ ವೇದನೆಗಳನ್ನು ಬೇರೆಯಾಗಿ ಕಾಣುತ್ತಾನೆ."

"ಹೀಗೆ ಓ ಭಿಕ್ಷುವೇ, ಭಿಕ್ಷುವು ಅಜ್ಞಾನವು ಪರಿತ್ಯಜಿತವಾಗಿ, ಸ್ಪಷ್ಟ ಜ್ಞಾನವು ಉದಯಿಸುವುದನ್ನು ಭಿಕ್ಷು ಕಾಣುತ್ತಾನೆ."

## ಅವಿದ್ಯೆಯೇ ಅಕುಶಲ ಧಮ್ಮಗಳಿಗೆ ನಾಯಕ :

"ಭಿಕ್ಷುಗಳೇ, ಹೇಗೆ ಅರುಣೋದಯ ಸೂರ್ಯನ ಉದಯಕ್ಕೆ ಮುಂದಾಳುವೋ ಹಾಗೆಯೇ ಅವಿದ್ಯೆಯು (ಅಜ್ಞಾನವು) ಅಕುಶಲ ಧಮ್ಮಗಳಿಗೆ ನಾಯಕನಂತಿದೆ. ಜ್ಞಾನದಿಂದಾಗಿ, ಪಾಪಲಜ್ಜೆಯಿಲ್ಲದೆ, ಗುರಿಯಿಲ್ಲದೆ, ಅಜ್ಞಾನದಿಂದ ಕೂಡಿದ ಮನುಷ್ಯನು, ಅಜ್ಞಾನಕ್ಕೆ ವಶಿಯಾಗಿರುವಾಗ (ಆತನಲ್ಲಿ ತಪ್ಪಾದ ಗ್ರಹಿಕೆಗಳಿಂದಾಗಿ, ತಪ್ಪಾದ ಯೋಚನೆಗಳಿಂದಾಗಿ) ಮಿಥ್ಯಾ ದೃಷ್ಟಿಗಳು ಉದಯಿಸುತ್ತವೆ. ಯಾವಾಗ ಆತನಲ್ಲಿ ಮಿಥ್ಯಾದೃಷ್ಟಿಗಳು ಉದಯಿಸುತ್ತದೋ ಆಗ ಆತನಲ್ಲಿ ಮಿಥ್ಯಾ ಸಂಕಲ್ಪಗಳು ಉಂಟಾಗುತ್ತದೆ. ಮಿಥ್ಯಾ ಸಂಕಲ್ಪದಲ್ಲಿ ಮಿಥ್ಯಾ ವಾಚಾವು ಉಂಟಾಗುತ್ತದೆ. ಮಿಥ್ಯಾ ವಾಚಾ ಉಂಟಾದಾಗ

ಮಿಥ್ಯಾ ಕರ್ಮವು ಉಂಟಾಗುತ್ತದೆ. ಮಿಥ್ಯಾಕರ್ಮ ಮಾಡುವುದರಲ್ಲಿ ಮಿಥ್ಯಾ ಜೀವನವು ನೆಲೆಸುತ್ತದೆ. ಮಿಥ್ಯಾ ಜೀವನವು ನೆಲೆಸಿದಾಗ, ಆತನಲ್ಲಿ ಮಿಥ್ಯಾ ವ್ಯಾಯಾಮವು ಉಂಟಾಗುತ್ತದೆ, ಅಂತಹವನಲ್ಲಿ ಮಿಥ್ಯಾಸ್ಮೃತಿಯು ಉಂಟಾಗುತ್ತದೆ. ಮಿಥ್ಯಾಸ್ಮೃತಿಯು ಉಂಟಾದಾಗ ಆತನಲ್ಲಿ ಮಿಥ್ಯಾ ಸಮಾಧಿಯು ಉಂಟಾಗುತ್ತದೆ."

"ಆದರೆ ಸ್ಪಷ್ಟವಾಗಿ ಅರಿಯುವಿಕೆಯೇ ಕುಶಲಧಮ್ಮಗಳ ಪ್ರಾಪ್ತಿಗೆ ನಾಯಕವಾಗಿದೆ. ಪಾಪಲಜ್ಜೆ, ಪಾಪಭೀತಿಗಳಿಂದ ಕೂಡಿದ ಪ್ರಜ್ಞಾವಂತಹ ವ್ಯಕ್ತಿಯು ಸ್ಪಷ್ಟವಾದ ಅರಿಯುವಿಕೆಯಲ್ಲಿ ಮಗ್ನನಾದಾಗ ಆತನಲ್ಲಿ ಸಮ್ಮಾದೃಷ್ಟಿಕೋನವು (ದಿಟ್ಠಿ) ಉದಯಿಸುತ್ತದೆ. ಸಮ್ಮಾದಿಟ್ಠಿಯು ಉದಯಿಸಿದಾಗ ಸಮ್ಮಾ ಸಂಕಲ್ಪವು ಉದಯಿಸುತ್ತದೆ. ಸಮ್ಮಾ ಸಂಕಲ್ಪವು ಉದಯಿಸಿದಾಗ, ಸಮ್ಮಾ ವಾಚಾವು ಉಂಟಾಗುತ್ತದೆ. ಸಮ್ಮಾ ವಾಚಾವು ಉಂಟಾದಾಗ, ಸಮ್ಮಾ ಕರ್ಮಗಳು ಉಂಟಾಗುತ್ತದೆ. ಸಮ್ಮಾ ಕರ್ಮಗಳು ಉಂಟಾದಾಗ, ಸಮ್ಮಾ ಜೀವನವು ಉಂಟಾಗುತ್ತದೆ. ಸಮ್ಮಾ ಜೀವನವು ಉಂಟಾದಾಗ ಸಮ್ಮಾ ವ್ಯಾಯಾಮವು ಉಂಟಾಗುತ್ತದೆ. ಸಮ್ಮಾ ವ್ಯಾಯಾಮವು ಉಂಟಾದಾಗ ಸಮ್ಮಾಸ್ಮೃತಿಯು ಉಂಟಾಗುತ್ತದೆ. ಸಮ್ಮಾಸ್ಮೃತಿಯು ಉಂಟಾದಾಗ ಸಮ್ಮಾ ಸಮಾಧಿಯು ಉಂಟಾಗುತ್ತದೆ."

## ವಿಪಲ್ಲಾಸಗಳು (ಭ್ರಾಂತಿ)

ವಿಪಲ್ಲಾಸವೆಂದರೆ ಭ್ರಾಂತಿಗಳಾಗಿವೆ, ಮೋಹವಾಗಿದೆ, ತಪ್ಪು ಅರಿಯುವಿಕೆಯಾಗಿದೆ ಅಥವಾ ಸತ್ಯವನ್ನು ಮಿಥ್ಯವಾಗಿ, ಮಿಥ್ಯವನ್ನು ಸತ್ಯವಾಗಿ ಕಾಣುವುದಾಗಿದೆ.

**3 ವಿಪಲ್ಲಾಸಗಳು :**

1. **ಸಞ್ಞ ವಿಪಲ್ಲಾಸ :** ಗ್ರಹಿಕೆಯ ಭ್ರಾಂತಿ
2. **ಚಿತ್ತ ವಿಪಲ್ಲಾಸ :** ಯೋಚನೆಯಲ್ಲಿ ಭ್ರಾಂತಿ
3. **ದಿಟ್ಠಿ ವಿಪಲ್ಲಾಸ :** ದೃಷ್ಟಿಕೋನಗಳಲ್ಲಿ ಭ್ರಾಂತಿ

ಇವು ಮತ್ತೆ 4 ವಿಭಾಗವಾಗುತ್ತದೆ. ಅಂದರೆ :

1. ಅನಿತ್ಯವನ್ನು ನಿತ್ಯವೆಂದು
2. ದುಃಖವನ್ನು ಸುಖವೆಂದು
3. ಅನಾತ್ಮವನ್ನು ಆತ್ಮವೆಂದು
4. ಅಶುಭ (ಕುರೂಪ)ವನ್ನು ಶುಭ (ಸುಂದರ)ವೆಂದು

– ಗ್ರಹಿಸುವುದು, ಯೋಚಿಸುವುದು ಮತ್ತು ಅದೇ ಸತ್ಯವೆಂದು ಪ್ರಬಲವಾಗಿ ನಂಬುವುದು.

ಇದು ಹೇಗೆಂದರೆ ಪ್ರಾಣಿ ಪಕ್ಷಿಗಳು ಬೊಂಬೆಯನ್ನು ಮನುಷ್ಯನೆಂದು ಭಾವಿಸಿ ಓಡಿದಂತೆ ಅಥವಾ ಹಗ್ಗವನ್ನು ಹಾವೆಂದು ಬೆಚ್ಚಿ ಬೀಳುವಿಕೆ ಅಥವಾ ಯಕ್ಷಿಣಿಗಾರರು ಮಿಥ್ಯವನ್ನು ಸತ್ಯವೆಂದು ಪ್ರದರ್ಶನ ಮಾಡುವಂತೆ ಅಥವಾ ಮರೀಚಿಕೆಯಂತಿದೆ.



## ವಿಪಲ್ಲಾಸ ಸುತ್ತ :

"ಓ ಭಿಕ್ಖುಗಳೇ, ಈ ನಾಲ್ಕರಲ್ಲಿ ಸಞ್ಞವಿಪಲ್ಲಾಸ, ಚಿತ್ತವಿಪಲ್ಲಾಸ ಮತ್ತು ದಿಟ್ಠಿ ವಿಪಲ್ಲಾಸ ಆಗುತ್ತದೆ."

"ಬದಲಾಗುವ ಪರಿವರ್ತನೆಗಳಲ್ಲಿ ಬದಲಾವಣೆ (ಅನಿತ್ಯತೆ) ಕಾಣಲಾರ, ದುಃಖಗಳಲ್ಲಿ ಸುಖವನ್ನು ಕಾಣುವ, ಎಲ್ಲಿ ಆತ್ಮವು (ವ್ಯಕ್ತಿಯು) ಇಲ್ಲವೋ ಅಲ್ಲಿ ಆತ್ಮವನ್ನು ಭ್ರಮಿಸಿ ಮತ್ತು ಕುರೂಪಗಳಲ್ಲಿ ಸುಂದರತೆ ಗ್ರಾಹ್ಯ ಮಾಡುತ್ತಾನೆ."

"ಈ ರೀತಿಯಾಗಿ ಮಿಥ್ಯಾದೃಷ್ಟಿಗಳಿಂದಾಗಿ ಹಾದಿತಪ್ಪುತ್ತಾನೆ. ಈ ರೀತಿಯಾಗಿ ಜೀವಿಗಳು ತಪ್ಪು ಗ್ರಹಿಕೆಯಿಂದಾಗಿ ವಕ್ರ ಮನಸ್ಸುಳ್ಳವರಾಗುತ್ತಾರೆ."

"ಈ ರೀತಿಯಾಗಿ ಮಾರನ ಬಂಧನದಿಂದ ಬಂಧಿಯಾಗುತ್ತಾನೆ, ಆ ಜನರು ಸುರಕ್ಷತೆಯಿಂದ ದೂರವಾಗಿಯೇ ಉಳಿಯುತ್ತಾರೆ. ಆ ಜೀವಿಗಳೆಲ್ಲ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದಾರೆ. ಮತ್ತೆ ಮತ್ತೆ ಮರಣಗಳಿಂದ ಜನ್ಮ ತಾಳುತ್ತಿರುತ್ತಾರೆ."

"ಆದರೆ ಯಾವಾಗ ಅಂಧಕಾರದ ಲೋಕದಲ್ಲಿ ಬುದ್ಧರು ಉದಯಿಸಿದಾಗ, ಅವರು ಸತ್ಯ ಪ್ರಕಾಶಿಸಿ, ತಮ್ಮ ಅತ್ಯುನ್ನತ ಉದಾತ್ತ ಬೋಧನೆ ನೀಡಿದಾಗ ದುಃಖವು ಅಂತ್ಯ ಕಾಣುತ್ತದೆ."

"ಯಾರೆಲ್ಲರೂ ಆಗ ತಮ್ಮ ಪ್ರಜ್ಞಾದಿಂದಾಗಿ ಆ ಬೋಧನೆ ಕೇಳುವರೋ ಅವರು ಪುನಃಚೇತನ ಪಡೆದು ಸಮ್ಮಾದೃಷ್ಟಿಯುಳ್ಳವರಾಗುತ್ತಾರೆ."

ಅವರು ಬದಲಾಗುವಿಕೆಯಲ್ಲಿ ಅನಿತ್ಯತೆ ಕಾಣುವರು. ದುಃಖಗಳಲ್ಲಿ ದುಃಖವನ್ನೇ ವೀಕ್ಷಿಸುವರು. ಆತ್ಮವಿಲ್ಲದುದರಲ್ಲಿ 'ಅನಾತ್ಮತೆ'ಯೇ ಕಾಣುವರು; ಕುರೂಪ, ಅಸಹ್ಯತೆಯಲ್ಲಿ ಅಶುಭ (ಅಸುಂದರತೆ)ವನ್ನೇ ಕಾಣುವರು.

ಈ ರೀತಿಯಾದ ಸಮ್ಮಾದೃಷ್ಟಿಯ ಸ್ವೀಕಾರದಿಂದಾಗಿ ಅವರು ದುಃಖವೆಲ್ಲದರಿಂದ ದಾಟಿ ಹೋಗುತ್ತಾರೆ."



# II. ಮಿಥ್ಯಾದೃಷ್ಟಿಯ ಭೀಕರತೆ

## ಮಿಥ್ಯಾದೃಷ್ಟಿಯ ಭೀಕರತೆ

ಒಮ್ಮೆ ಭಗವಾನರು ಭಿಕ್ಷುಗಳಿಗೆ ಹೀಗೆ ಬೋಧನೆ ನೀಡಿದರು :

"ಓ ಭಿಕ್ಷುಗಳೇ, ಇಲ್ಲದಿದ್ದ ಅಕುಶಲ ಯೋಚನೆಗಳನ್ನು, ಪಾಪಗಳನ್ನು, ಉದಯಿಸುವಂತೆ ಆಗಲು ಮತ್ತು ಈಗಾಗಲೇ ಇರುವ ಅಕುಶಲ ಪಾಪಯುತ ಯೋಚನೆಗಳು ಬೆಳವಣಿಗೆ ಮಾಡಲು, ವೃದ್ಧಿಸಲು ಬೇರ್‍ಯಾವ ವಿಷಯಕ್ಕಿಂತ, ಪ್ರಬಲವಾದುದು ಯಾವುದಾದರೂ ಒಂದು ವಿಷಯವಿದ್ದರೆ ಅದು ಮಿಥ್ಯಾ ದೃಷ್ಟಿಯೇ ಆಗಿದೆ. ಮಿಥ್ಯಾದೃಷ್ಟಿಯಿಂದ ಇಲ್ಲದಿದ್ದ ಅಕುಶಲಗಳನ್ನು ಉದಯಿಸುವಂತೆ ಮಾಡಲ್ಪಡುತ್ತಾನೆ. ಹಾಗೆಯೇ ಇರುವಂತಹ ಅಕುಶಲವನ್ನು ಬೆಳವಣಿಗೆ ಮಾಡುತ್ತಾನೆ."

".... ಭಿಕ್ಷುಗಳೇ, ಯಾವುದಾದರೂ ಒಂದು ವಿಷಯದಿಂದಾಗಿ ಉದಯಿಸದಿದ್ದ ಅಕುಶಲಗಳು ವೃದ್ಧಿಸಿ ಹಾಗು ಉದಯಿಸಿ ಈಗಾಗಲೇ ಇದ್ದ ಕುಶಲ ಯೋಚನೆಗಳು ಮರೆಯಾಗುತ್ತವೋ ಆ ಒಂದು ವಿಷಯ ಮಿಥ್ಯಾದೃಷ್ಟಿಯೇ ಆಗಿದೆ."

"ಭಿಕ್ಷುಗಳೇ, ಯಾವ ಒಂದು ವಿಷಯದಿಂದಾಗಿ ಉದಯಿಸದ ಅಕುಶಲಗಳು ಉದಯಿಸುತ್ತದೋ ಮತ್ತು ಉದಯಿಸಿದ ಮಿಥ್ಯಾದೃಷ್ಟಿಯು ಅಪ್ರಾಜ್ಞರ ಯೋಚನೆಯಂತೆ ಬೆಳವಣಿಗೆ ಹೊಂದುವುದೋ ಆ ಮಿಥ್ಯಾದೃಷ್ಟಿಯಿಂದಾಗಿ ಭಿಕ್ಷುಗಳೇ ಅಪ್ರಾಜ್ಞರ ರೀತಿ ಯೋಚಿಸಲು ಆರಂಭಿಸಿ ಇತರ ಮಿಥ್ಯಾದೃಷ್ಟಿಗಳು ಉದಯಿಸಿ ವೃದ್ಧಿಯಾಗುವುವು."

"... ಭಿಕ್ಷುಗಳೇ, ಯಾವುದಾದರೂ ವಿಷಯದಿಂದಾಗಿ ವ್ಯಕ್ತಿಯು ದುರ್ಗತಿಯಲ್ಲಿ ಹುಟ್ಟಿ, ನರಕದಲ್ಲಿ ಸಿಲುಕುವಂತೆ ಆಗಿರುವಂತಿದ್ದರೆ ಅದು ಮಿಥ್ಯಾದೃಷ್ಟಿಯೇ ಆಗಿದೆ. ಮಿಥ್ಯಾದೃಷ್ಟಿ ಹೊಂದಿರುವ ವ್ಯಕ್ತಿ ಅದನ್ನು ಹೊಂದಿಯೇ ಮರಣಿಸಿದರೆ ಆತನು ದುರ್ಗತಿಗಳಲ್ಲಿ ಹುಟ್ಟುವನು."

"ಭಿಕ್ಷುಗಳೇ, ಒಬ್ಬ ವ್ಯಕ್ತಿಯ ಎಲ್ಲಾ ಮಾನಸಿಕ, ದೈಹಿಕ ಮತ್ತು ವಾಚದ ಕ್ರಿಯೆಗಳೆಲ್ಲಾ ನಿರ್ದೇಶಿತವಾಗುವುದು ಆತನ ದೃಷ್ಟಿಕೋನದಿಂದಲೇ ಆಗಿದೆ. ಅದರಿಂದಾಗಿಯೇ ಆತನ ಇಚ್ಛೆಗಳು, ಬಯಕೆಗಳು, ಹಾರೈಕೆಗಳು, ನಿರ್ಧಾರಗಳು ಅಸ್ತಿತ್ವಕ್ಕೆ ಬರುತ್ತದೆ. ಅವೆಲ್ಲವೂ ಅಯೋಗ್ಯವಾಗಿದ್ದರೆ, ಒಪ್ಪಲಾಗದಂತಹುದು ಆಗಿದ್ದರೆ ಮತ್ತು ಅಸುಖಕಾರಿಯಾಗಿದ್ದರೆ ಅದಕ್ಕೆ ಕಾರಣವೇನು? ಆ ಕಾರಣವೇ ಮಿಥ್ಯಾದೃಷ್ಟಿಯಾಗಿದೆ. ಭಿಕ್ಷುಗಳೇ ಹೇಗೆ ಬೇವಿನ ಬೀಜವಾಗಲಿ ಅಥವಾ ನಿಂಬೆ ಬೀಜವಾಗಲಿ ಅಥವಾ ಕೊಸಟಕಿ ಬೀಜ ಅಥವಾ ಕಹಿ ಹಣ್ಣಿನ ಬೀಜವಾಗಲಿ ಒದ್ದೆ ಮಣ್ಣಿನಲ್ಲಿ ಇದ್ದಾಗ ಬೀಜದ ಸುತ್ತಲಿನ ಮಣ್ಣು, ನೀರು, ಇನ್ನಿತರ ಸಾರವೆಲ್ಲಾ ಕಹಿಯಾಗಿಬಿಡುತ್ತದೆ. ಅದೇರೀತಿಯಾಗಿ ವ್ಯಕ್ತಿಯಲ್ಲಿ ಮಿಥ್ಯಾದೃಷ್ಟಿಯು



ಇದ್ದರೆ ಅದು ಅಯೋಗ್ಯವಾಗಿ, ನಿರಾಕರಣೆಯುತವಾಗಿ, ಅಸುಖದಿಂದ ಕೂಡಿದ್ದು, ಅಂತಹ ದೃಷ್ಟಿಯ ಮೂಲದಿಂದಾಗಿ ಆತನ ಇಚ್ಛೆಗಳಲ್ಲಿ, ಬಯಕೆಗಳಲ್ಲಿ ನಿರ್ಧಾರ ಇನ್ನಿತರ ಮಾನಸಿಕ ಕಾರ್ಯಗಳಲ್ಲಿ ಹಾಗೆಯೇ ಮಾತಿನಲ್ಲಿ ಮತ್ತು ದೈಹಿಕ ಕಾರ್ಯಗಳಲ್ಲಿ ಆ ಮಿಥ್ಯಾದೃಷ್ಟಿಯ ಪ್ರಭಾವ ಹರಡುತ್ತದೆ."

"ಭಿಕ್ಷುಗಳೇ, ಒಬ್ಬ ಮನುಷ್ಯನು ಲೋಕದ ಹಾನಿಗೆ ದುರಾದೃಷ್ಟಕ್ಕೆ (ಅಹಿತಕ್ಕೆ), ದೇವತೆಗಳ ಮತ್ತು ಮಾನವರ ಅಹಿತಕ್ಕೆ, ಅಸುಖಕ್ಕೆ ಕಾರಣನಾಗುತ್ತಾನೆ, ಯಾರು ಆ ವ್ಯಕ್ತಿ? ಆತನೇ ಮಿಥ್ಯಾ ದೃಷ್ಟಿಯಿಂದ (ಪಾಪದೃಷ್ಟಿ) ಕೂಡಿರುವವನು. ಆತನು ಸಮ್ಮಾದೃಷ್ಟಿ ಹೊಂದಿದ್ದ ಹಲವರನ್ನು ಎಳೆದು ಮಿಥ್ಯಾದೃಷ್ಟಿಯ ದುರ್ಮಾರ್ಗದಲ್ಲಿ ಸ್ಥಾಪನೆ ಮಾಡುತ್ತಾನೆ. ಆತನು ಲೋಕದ ಹಾನಿಗೆ ದೇವತೆಗಳ ಮತ್ತು ಮಾನವರ ದುರಾದೃಷ್ಟಕ್ಕೆ, ಅಹಿತಕ್ಕೆ ಮತ್ತು ಅಸುಖಕ್ಕೆ ಕಾರಣಕರ್ತನಾಗುತ್ತಾನೆ."

"ಭಿಕ್ಷುಗಳೇ, ಮಿಥ್ಯಾದೃಷ್ಟಿಯಂತಹ ಅತಿಘೋರ ನೀಚವಾದುದು ನಾನು ಕಂಡೇ ಇಲ್ಲ, ಕೆಟ್ಟದ್ದರಲ್ಲಿ ಅತಿ ನೀಚ ನಿಕೃಷ್ಟವಾದುದು ಮಿಥ್ಯಾದೃಷ್ಟಿಯಾಗಿದೆ."

"ಭಿಕ್ಷುಗಳೇ, ಮಿಥ್ಯಾದೃಷ್ಟಿಯನ್ನು ಹೊಂದಿರುವ ವ್ಯಕ್ತಿಯಿಂದ ಆಗುವ ಹಾನಿ, ಬೇರ್‍ಯಾವ ವ್ಯಕ್ತಿಯಿಂದಲೂ ಆಗುವುದಿಲ್ಲ. ಅದರಿಂದಾಗಿ, ಬಹು ದೇವತೆಗಳಲ್ಲಿ ಮತ್ತು ಮಾನವರಲ್ಲಿ ಹಾನಿ, ಅಸುಖ ಮತ್ತು ಪಾಪವು ಆಗುತ್ತದೆ. ಉದಾಹರಿಸುವುದಾದರೆ: ಮಕ್ಕಲಿ, ಹೇಗೆ ನದಿಯು ಮುಖದಲ್ಲಿ ಬಲೆಯನ್ನು ಕಟ್ಟಿದಾಗ ಹೇಗೆ ಹಲವಾರು ಮೀನುಗಳಿಗೆ ಹಾನಿಯಾಗುವುದೋ ಹಾಗೆಯೇ ಮಿಥ್ಯಾದೃಷ್ಟಿ ಉಳ್ಳವರು ಬಹುಜನ ಅಹಿತಕ್ಕೆ, ಬಹುಜನ ಅಸುಖಕ್ಕೆ, ದೇವತೆಗಳ ಮತ್ತು ಮಾನವರ ದೌರ್ಭಾಗ್ಯಕ್ಕೆ ಕಾರಣ ಉಳ್ಳವರು ಆಗುತ್ತಾರೆ."

"ಭಿಕ್ಷುಗಳೇ, ಧಮ್ಮ ಮತ್ತು ವಿನಯವನ್ನು ತಪ್ಪಾಗಿ ವಿವರಿಸಿದರೆ, ವ್ಯಾಖ್ಯಾನಿಸಿದರೆ ಅದು ವಿವರಿಸುವವನಿಗೂ ಹಾಗು ಕೇಳಿ ಅನುಸರಿಸುವವರಿಗೂ ಅಪಾರ ಪಾಪವಾಗಿ, ಹಾನಿಯಾಗುತ್ತದೆ."

"ಭಿಕ್ಷುಗಳೇ, ಯಾವಾಗ ಧಮ್ಮ ವಿನಯವು ತಪ್ಪಾಗಿ ವ್ಯಾಖ್ಯಾನಿಸಲ್ಪಟ್ಟಾಗ, ಗುರುವು ಆಳತೆಯನ್ನು ಅರಿಯಲೇಬೇಕು ಮತ್ತು ಕೇಳುಗನಲ್ಲ. ಏಕೆಂದರೆ ತಪ್ಪಾಗಿ ಧಮ್ಮ ವಿವರಿಸಲಾಗುತ್ತಿದೆ."

"ಭಿಕ್ಷುಗಳೇ, ಯಾವಾಗ ಧಮ್ಮ ವಿನಯವು ತಪ್ಪಾಗಿ ವ್ಯಾಖ್ಯಾನಿಸುವದೋ, ಒಬ್ಬನು ಅಸುಖಕ್ಕೆ ಬದ್ಧನಾಗಲು ಯತ್ನಿಸುತ್ತಾನೆ. ಏಕೆಂದರೆ ತಪ್ಪಾದ ಧಮ್ಮ ವಿವರಣೆಯಿಂದಾಗಿ."

"ಭಿಕ್ಷುಗಳೇ, ಅತಿ ಅಲ್ಪ ಮಲವು ಸಹಾ ದುರ್ನಾತ ಬೀರುತ್ತದೆ ಮತ್ತು ಅದರಿಂದ ಪ್ರಜ್ಞಾವಂತರು ಮಿಥ್ಯಾದೃಷ್ಟಿಯಿಂದ ವಿಮೋಚನೆ ಹೊಂದಲಿ, ನಾನು ಕ್ಷಣಾರ್ಧದಲ್ಲೂ ಅದಕ್ಕೆ ಸ್ಪಷ್ಟೀಕರಣ ಯೋಚಿಸುವುದಿಲ್ಲ."

"ಭಿಕ್ಷುಗಳೇ, ಹೇಗೆ ಅಲ್ಪ ಮೂತ್ರವೂ... ಲಾಲರಸವು... ರಕ್ತ, ಕೀವು... ದುರ್ನಾತ ಬೀರುವುದೋ ಮತ್ತು ಅದರಿಂದ ಪ್ರಜ್ಞಾವಂತರು ಮಿಥ್ಯಾದೃಷ್ಟಿಯಿಂದ ವಿಮೋಚನೆ ಹೊಂದಲಿ, ತಡಮಾಡದೆ ಕ್ಷಣಾರ್ಧದಲ್ಲಿ ಪಾರಾಗಲಿ."

"ಭಿಕ್ಷುಗಳೇ... ಕೆಲವರು ಮಾತ್ರ ಮಾನವರಾಗಿ ಹುಟ್ಟುವರು ಮತ್ತು ಬಹಳಷ್ಟು ಇನ್ನಿತರರು ಮಾನವರಿಗಿಂತ ದುರ್ಗತಿಯಲ್ಲಿ ಹುಟ್ಟುವರು."

"ಭಿಕ್ಷುಗಳೇ, ಕೆಲವರು ಮಾತ್ರ ಬುದ್ಧರನ್ನು ದರ್ಶಿಸುವ ಅದೃಷ್ಟವನ್ನು ಪಡೆದಿರುತ್ತಾರೆ, ಉಳಿದವರು ಅಂತಹ ಅದೃಷ್ಟವಂತರಲ್ಲ."

"ಹಾಗೆಯೇ ಭಿಕ್ಷುಗಳೇ, ಕೆಲವರಿಗೆ ಮಾತ್ರ ಧಮ್ಮವನ್ನು ಆಲಿಸುವ ಸೌಭಾಗ್ಯ ಸಿಕ್ಕಿರುತ್ತದೆ, ಹಾಗು ನೆನಪಿನಲ್ಲಿಡುತ್ತಾರೆ. ಉಳಿದವರು ಮರೆಯುತ್ತಾರೆ."

"ಭಿಕ್ಷುಗಳೇ ಕೆಲವರು ಮಾತ್ರ ಧಮ್ಮವನ್ನು ಲಕ್ಷಕೊಟ್ಟು ಕೇಳುತ್ತಾರೆ. ಉಳಿದವರಿಗೆ ಏನೆಂದು ಕೇಳಿದ್ದೇವೆ ಎಂದು ಯೋಚಿಸಲು ಸಹಾ ಆಗುವುದಿಲ್ಲ."

"ಭಿಕ್ಷುಗಳೇ, ಕೆಲವರು ಮಾತ್ರ ಬೋಧನೆಯನ್ನು ಕಲಿಯುವರು ಮತ್ತು ಅದರಂತೆ ಜೀವಿಸಲು ಪ್ರಾರಂಭಿಸುವರು. ಉಳಿದವರು ಅದನ್ನು ಲೆಕ್ಕಿಸುವುದೇ ಇಲ್ಲ."

"ಭಿಕ್ಷುಗಳೇ, ಕೆಲವರು ಸನ್ನಿವೇಶಗಳಲ್ಲಿ ಧಮ್ಮ ಉದ್ವೇಗ ತಾಳುತ್ತಾರೆ. ಉಳಿದವರು ಎಂತಹ ಸನ್ನಿವೇಶವೇ ಇರಲಿ ಅಲುಗಾಡುವುದಿಲ್ಲ."

"ಭಿಕ್ಷುಗಳೇ, ಕೆಲವರು ಧಮ್ಮ ಉದ್ವೇಗದಿಂದಾಗಿ ದುಃಖಗಳನ್ನು ದಾಟಲು ಪ್ರಯತ್ನಿಸುತ್ತಾರೆ, ಉಳಿದವರು ಏನೂ ಮಾಡುವುದಿಲ್ಲ."

"ಭಿಕ್ಷುಗಳೇ, ಕೆಲವರು ತಮ್ಮ ಧ್ಯಾನದ ವಿಷಯ ಬದಲಿಸಿ ಸಮಾಧಿ ಪ್ರಾಪ್ತಿಮಾಡುತ್ತಾರೆ. ಉಳಿದವರು ಧ್ಯಾನ ವಿಷಯ ಬದಲಾಯಿಸಿದಾಗ ಸಮಾಧಿ ಹೊಂದಲಾರರು."

"ಭಿಕ್ಷುಗಳೇ, ಹೇಗೆ ಕೆಲವರು ಉನ್ನತ ಆಹಾರವನ್ನು ತಿನ್ನುವರೋ ಮತ್ತು ಉಳಿದವರು ಸಿಕ್ಕಿದ ತುಣುಕುಗಳನ್ನು ತಿನ್ನುವರು ಹಾಗೆಯೇ ಕೆಲವರು ಮಾತ್ರ ಧಮ್ಮದ ಅರ್ಥ ಅರ್ಥೈಸಿಕೊಂಡು ವಿಮುಕ್ತಿಯ ಆನಂದ ಹೊಂದುವರು. ಉಳಿದವರು ವಿಮುಕ್ತಿಯ ಅನುಭವ ಪಡೆಯಲಾರರು. ಆದ್ದರಿಂದ ಭಿಕ್ಷುಗಳೇ ನೀವು ಧಮ್ಮದ ಅರ್ಥ ಅರ್ಥೈಸಿಕೊಂಡು ಸಾಧಿಸಿ ವಿಮುಕ್ತಿಯ ಆನಂದ ಪಡೆಯಿರಿ."

"ಭಿಕ್ಷುಗಳೇ, ಜಂಬು ದ್ವೀಪದಲ್ಲಿ ಹಲವಾರು ಹಣ್ಣು ತೋಟಗಳಿವೆ, ಕಾಡುಗಳಿವೆ. ಮಿತಿಮೀರಿದ ಭೂ ಪ್ರದೇಶಗಳಾಗಿವೆ. ವಿಶಾಲವಾಗಿ ನೀರು ಹರಿಯುವುದು. ಆದರೆ ಪ್ರತಿಬಂಧಕಗಳಿಂದ ಕೂಡಿರುವ ಅವ್ಯವಸ್ಥಿತ ಭೂಭಾಗಗಳು ಇವೆ. ನದಿಗಳು ಸಹಾ ಅತ್ಯುನ್ನತವಾಗಿ ಹರಿದು, ವಿಷಮ ಆಕಾರದ ಭೂಭಾಗಗಳು ಏರ್ಪಾಟಾಗುತ್ತದೆ. ಅದೇರೀತಿಯಲ್ಲಿ ಕೆಲವು ಮಾನವರು ತಮ್ಮ ಸಾವಿನ ನಂತರ ಪ್ರೇತಗಳಾಗಿ, ಪ್ರಾಣಿಗಳಾಗಿ ಮತ್ತು ನಿರಯಗಳಲ್ಲಿ ಹುಟ್ಟುವರು."



"ಅದೇರೀತಿಯಲ್ಲಿ ಕೆಲವರು ಮಾತ್ರ ದೇವತೆಗಳಾಗಿ, ಮಾನವರಾಗಿ ಹುಟ್ಟುವರು, ಉಳಿದವರೆಲ್ಲಾ ಪ್ರೇತಗಳಾಗಿ, ಪ್ರಾಣಿಗಳಾಗಿ, ನರಕಜೀವಿಗಳಾಗಿ ಹುಟ್ಟುವರು."

"ಭಿಕ್ಷುಗಳೇ, ಮಿಥ್ಯಾದೃಷ್ಟಿಯುಳ್ಳವರು ದುರ್ಗತಿಗಳಾದ ನರಕ ಅಥವಾ ಪ್ರಾಣಿಗಳ ಲೋಕಗಳಲ್ಲಿ ಹುಟ್ಟುವುದು ಖಚಿತವೆಂದು ನಿರೀಕ್ಷಿಸಬಹುದು."

## ಎರಡು ಬಗೆಯ ಮೂರ್ಖರು

"ಭಿಕ್ಷುಗಳೇ, ಎರಡು ಬಗೆಯ ಮೂರ್ಖರಿರುವರು. ಯಾರವರು? ಭವಿಷ್ಯದ ಬಾರವನ್ನು ಸಹಿಸುವವರು ಮತ್ತು ವರ್ತಮಾನದ ಭಾರವನ್ನು ಸಹಿಸಲಾರದವರು."

"ಭಿಕ್ಷುಗಳೇ, ಎರಡುಬಗೆಯ ಮೂರ್ಖರಿರುವರು, ಯಾರವರು? ಸರಿಯಿರುವುದರಲ್ಲಿ ಸರಿಯಿಲ್ಲ ಎಂದು ಗ್ರಹಿಸುವವರು ಮತ್ತು ಸರಿಯಿಲ್ಲದುದರಲ್ಲಿ ಸರಿ ಎಂದು ಗ್ರಹಿಸುವವರು."

ಭಿಕ್ಷುಗಳೇ, ಎರಡು ಬಗೆಯ ಮೂರ್ಖರಿರುವರು, ಯಾರವರು? ತಪ್ಪನ್ನು ತಪ್ಪಲ್ಲವೆಂದು ಗ್ರಹಿಸುವವರು ಮತ್ತು ತಪ್ಪಿಲ್ಲದುದರಲ್ಲಿ ತಪ್ಪು ಎಂದು ಗ್ರಹಿಸುವವರು."

"ಭಿಕ್ಷುಗಳೇ, ಎರಡು ಬಗೆಯ ಮೂರ್ಖರಿರುವರು, ಯಾರವರು? ಪಾಪಗಳನ್ನು ಸರಿ ಎಂದು ಗ್ರಹಿಸುವವರು ಮತ್ತು ಶೀಲಗಳನ್ನು ತಪ್ಪು ಎಂದು ಗ್ರಹಿಸುವವರು."

"ಭಿಕ್ಷುಗಳೇ, ಎರಡುಬಗೆಯ ಮೂರ್ಖರಿರುವರು, ಯಾರವರು? ವಿನಯ (ಶಿಸ್ತು)ಗಳು ಇಲ್ಲದೆಡೆ, ವಿನಯವೆಂದು ಗ್ರಹಿಸುವರು, ವಿನಯವಿರುವೆಡೆ ವಿನಯವಿಲ್ಲ ಎಂದು ಗ್ರಹಿಸುವವರು."

## ಭಯ ಸುತ್ತ

ನಾನು ಹೀಗೆ ಕೇಳಿರುವೆ, ಒಮ್ಮೆ ಭಗವಾನರು ಶ್ರಾವಸ್ತಿಯ ಅನಾಥಪಿಂಡಿಕನ ಜೇತವನದಲ್ಲಿ ವಾಸಿಸುತ್ತಿದ್ದರು. ಭಗವಾನರು ಭಿಕ್ಷುಗಳಿಗೆ ಹೀಗೆ ಸಂಬೋಧಿಸಿದರು:

"ಭಿಕ್ಷುಗಳೇ, ಎಲ್ಲಾರೀತಿಯ ಭಯಗಳು ಮೂರ್ಖರಿಂದ ಉದಯಿಸುತ್ತದೆ, ಜ್ಞಾನಿಗಳಿಂದಲ್ಲ. ಎಲ್ಲರೀತಿಯ ಸಮಸ್ಯೆಗಳು ಮೂರ್ಖರಿಂದ ಉಂಟಾಗುತ್ತದೆ, ಜ್ಞಾನಿಗಳಿಂದಲ್ಲ. ಎಲ್ಲಾರೀತಿಯ ಕಿರುಕುಳಗಳು ಮೂರ್ಖರಿಂದ ಸಂಭವಿಸುತ್ತದೆ, ಜ್ಞಾನಿಗಳಿಂದಲ್ಲ. ಜೊಂಡಿನ ಮನೆ ಅಥವಾ ಹುಲ್ಲಿನ ಮನೆಯು ಬೆಂಕಿಗೆ ಸ್ಪರ್ಶಿಸಲ್ಪಟ್ಟಾಗ ಬೆಂಕಿಯು ಛಾವಣಿಯ ಮುಖ್ಯಬಂಧಿತ ತೊಲೆಯನ್ನು ಸುಟ್ಟುಹಾಕುತ್ತದೆ. ಬೆಂಕಿಯು ಮೇಲೆ ಕೆಳಗೆ ಹಾಗೆಯೇ ಎಲ್ಲಾ ಗಳುಗಳು, ಕಿಟಕಿಗಳನ್ನೆಲ್ಲಾ ಸುಟ್ಟುಹಾಕುತ್ತದೆ. ಅದೇರೀತಿಯಲ್ಲಿ ಎಲ್ಲಾ ಭಯಗಳು ಮೂರ್ಖರಿಂದ ಉದಯಿಸುತ್ತದೆ, ಜ್ಞಾನಿಗಳಿಂದಲ್ಲ. ಆದ್ದರಿಂದ ಭಿಕ್ಷುಗಳೇ, ಮೂರ್ಖರಲ್ಲಿ ಭಯಗಳನ್ನು, ಸಮಸ್ಯೆಗಳನ್ನು, ತೊಂದರೆಗಳನ್ನು ಕಾಣಬಹುದು, ಜ್ಞಾನಿಗಳಲ್ಲಿ ಅಲ್ಲ."

“ಆದ್ದರಿಂದ ಭಿಕ್ಷುಗಳೇ, ನೀವು ಹೀಗೆ ಶಿಕ್ಷಣ ಪಡೆಯಿರಿ: ನಾವು ಮೂರ್ಖರಲ್ಲಿ ತಿಳಿಯಲ್ಪಡುವ ಮೂರು ವಿಷಯಗಳಿಂದ ಪಾರಾಗುವೆವು, ಜ್ಞಾನಿಗಳಲ್ಲಿ ಕಂಡುಬರುವ ಮೂರು ವಿಷಯಗಳನ್ನು ವೃದ್ಧಿಸುವೆವು.”

“ಭಿಕ್ಷುಗಳೇ, ಮೂರ್ಖರು ತಮ್ಮ ಕಾರ್ಯಗಳಿಂದಲೇ ತಿಳಿಯಲ್ಪಡುವವರು ಮತ್ತು ಜ್ಞಾನಿಗಳು ಸರಿಯಾದ ವೇಳೆಯಲ್ಲಿ ಪ್ರಕಾಶಿಸುವರು. ಭಿಕ್ಷುಗಳೇ, ಮೂರ್ಖರು ಮೂರು ವಿಷಯಗಳಿಂದ ತಿಳಿಯಲ್ಪಡುವವರು, ಯಾವುವು ಆ ಮೂರು? ಶಾರೀರಿಕ ವರ್ತನೆಗಳಿಂದಾಗಿ, ಮಾತಿನ ವರ್ತನೆಗಳಿಂದಾಗಿ ಮತ್ತು ಮನಸ್ಸಿನ ವರ್ತನೆಗಳಿಂದಾಗಿ ಮೂರ್ಖರು ತಿಳಿಯಲ್ಪಡುವವರು. ಭಿಕ್ಷುಗಳೇ, ಜ್ಞಾನಿಗಳು ಸಹಾ ಮೂರು ರೀತಿಯಲ್ಲಿ ತಿಳಿಯಲ್ಪಡುವವರು, ಯಾವುದದು ಮೂರು? ಶಾರೀರಿಕ ವರ್ತನೆಗಳಿಂದಾಗಿ, ಮಾತಿನ ವರ್ತನೆಗಳಿಂದಾಗಿ ಮತ್ತು ಮನಸ್ಸಿನ ವರ್ತನೆಗಳಿಂದಾಗಿ ಜ್ಞಾನಿಗಳು ತಿಳಿಯಲ್ಪಡುವವರು. ಆದ್ದರಿಂದ ಭಿಕ್ಷುಗಳೇ, ನೀವು ಹೀಗೆ ಸುಶಿಕ್ಷಣಗೊಳಿಸಿಕೊಳ್ಳಿ: ನಾವು ಮೂರ್ಖರಂತೆ ಕಾಣಿಸಿಕೊಳ್ಳುವುದನ್ನು ತಡೆಯುವೆವು ಮತ್ತು ಜ್ಞಾನಿಗಳಂತೆ ಆಗುವ ರೀತಿಯಲ್ಲಿ ವೃದ್ಧಿಗೊಳಿಸಿಕೊಳ್ಳುವೆವು.”

“ಭಿಕ್ಷುಗಳೇ, ಮೂರ್ಖರ ಮೂರು ಲಕ್ಷಣಗಳೇನು? ಭಿಕ್ಷುಗಳೇ, ಇಲ್ಲಿ ಮೂರ್ಖನು ತಪ್ಪಾಗಿ ಚಿಂತನೆ ಮಾಡುವವನು, ತಪ್ಪಾಗಿ ಮಾತನಾಡುವವನು ಮತ್ತು ತಪ್ಪಾಗಿ ಕಾರ್ಯ ಮಾಡುವವನು. ಒಂದುವೇಳೆ ಮೂರ್ಖನು ತಪ್ಪಾಗಿ ಚಿಂತನೆ ಮಾಡದಿದ್ದರೆ, ಮಾತನಾಡದಿದ್ದರೆ ಮತ್ತು ಕ್ರಿಯೆ ಮಾಡದಿದ್ದರೆ ಆತನು ಮೂರ್ಖನೆಂದು ಜ್ಞಾನಿಗೆ ಹೇಗೆ ತಿಳಿಯಲ್ಪಡುತ್ತಿತ್ತು. ಜ್ಞಾನಿಗೆ ಆತನು ಮೂರ್ಖನು ಎಂದು ಗೊತ್ತು.”

“ಭಿಕ್ಷುಗಳೇ, ಜ್ಞಾನಿಗಳ ಮೂರು ಲಕ್ಷಣಗಳೇನು? ಇಲ್ಲಿ ಭಿಕ್ಷುಗಳೇ ಜ್ಞಾನಿಯು ಸರಿಯಾಗಿ ಚಿಂತಿಸುವನು, ಸರಿಯಾಗಿ ಮಾತನಾಡುವನು ಮತ್ತು ಸರಿಯಾಗಿ ವರ್ತಿಸುವನು. ಒಂದುವೇಳೆ ಜ್ಞಾನಿಯು ಸರಿಯಾಗಿ ಚಿಂತನೆ ಮಾಡದಿದ್ದರೆ, ಮಾತನಾಡದಿದ್ದರೆ ಮತ್ತು ಕ್ರಿಯೆ ಮಾಡದಿದ್ದರೆ, ಜ್ಞಾನಿಗೆ ಈತನು ಜ್ಞಾನಿಯೆಂದು ಹೇಗೆ ಗೊತ್ತಾಗುತ್ತಿತ್ತು? ಆತನು ಸರಿಯಾಗಿ ಚಿಂತನೆ, ಸರಿಯಾದ ಸಂಭಾಷಣೆ ಮತ್ತು ಸರಿಯಾದ ವರ್ತನೆ ಮಾಡುವುದರಿಂದಲೇ ಜ್ಞಾನಿಗೆ ಈತನು ಸಹಾ ಜ್ಞಾನಿಯೆಂದು ಗೊತ್ತಾಗುತ್ತದೆ.”

“ಭಿಕ್ಷುಗಳೇ, ಮೂರು ವಿಷಯಗಳಿಂದ ಕೂಡಿದ್ದರೆ ಆತನು ಮೂರ್ಖನು ಎಂದು ತಿಳಿಯಲ್ಪಡುತ್ತದೆ, ಯಾವುದದು ಮೂರು? ತಪ್ಪನ್ನು ತಪ್ಪೆಂದು ತಿಳಿಯದಿರುವಿಕೆ, ತಪ್ಪೆಂದು ತಿಳಿದ ಮೇಲೂ ಧಮ್ಮದ ಪ್ರಕಾರ ಕ್ಷಮೆ ಯಾಚಿಸದಿರುವಿಕೆ, ಬೇರೆಯವರು ಕ್ಷಮೆ ಯಾಚಿಸಿದ ಮೇಲೂ ಧಮ್ಮದ ಪ್ರಕಾರ ಕ್ಷಮೆ ನೀಡದಿರುವಿಕೆ. ಭಿಕ್ಷುಗಳೇ ಈ ಮೂರು ವಿಷಯಗಳಿಂದ ಮೂರ್ಖನೆಂದು ತಿಳಿಯಲ್ಪಡುತ್ತಾನೆ.”

“ಭಿಕ್ಷುಗಳೇ, ಮೂರು ವಿಷಯಗಳಿಂದ ಕೂಡಿದ್ದಾಗ ಆತನು ಜ್ಞಾನಿಯೆಂದು



ತಿಳಿಯಲ್ಪಡುತ್ತಾನೆ, ಯಾವುದವು ಮೂರು? ತಪ್ಪನ್ನು ತಪ್ಪೆಂದು ತಿಳಿಯುವಿಕೆ, ತಪ್ಪೆಂದು ತಿಳಿದಾಗ, ತನ್ನ ತಪ್ಪಿಗೆ ಕ್ಷಮೆ ಯಾಚಿಸುವಿಕೆ ಮತ್ತು ಪರರು ಅವರ ತಪ್ಪಿಗೆ ಕ್ಷಮೆ ಯಾಚಿಸಿದಾಗ, ಅವರನ್ನು ಕ್ಷಮಿಸುವಿಕೆ, ಈ ಮೂರು ವಿಷಯಗಳಿಂದ ಜ್ಞಾನಿಯೆಂದು ತಿಳಿಯಲ್ಪಡುತ್ತಾನೆ.”

“ಭಿಕ್ಷುಗಳೇ, ಮೂರು ವಿಷಯಗಳಿಂದ ಕೂಡಿದ್ದಾಗ ಮೂರ್ಖನೆಂದು ತಿಳಿಯಲ್ಪಡುತ್ತಾನೆ, ಯಾವುದದು ಮೂರು? ಆತನು ಜ್ಞಾನೋಚಿತವಾಗಿ ಚಿಂತನೆ ಮಾಡದೆ ಪ್ರಶ್ನೆಯನ್ನು ವಿಕಸಿತ ಮಾಡುತ್ತಾನೆ. ಜ್ಞಾನೋಚಿತವಾಗಿ ಚಿಂತನೆ ಮಾಡದೆ ಪ್ರಶ್ನೆಗೆ ವಿವರಿಸಲು ತೊಡಗುತ್ತಾನೆ, ಬೇರೊಬ್ಬನು ಪ್ರಶ್ನೆಗೆ ಜ್ಞಾನೋಚಿತವಾಗಿ ಚಿಂತನೆ ಮಾಡಿ, ಉತ್ತಮ ಪದ ಹಾಗು ಅಕ್ಷರಗಳಿಂದ ಸುಂದರವಾಗಿ ವಿವರಿಸಿದಾಗ ಅದನ್ನು ಒಪ್ಪುವುದಿಲ್ಲ. ಭಿಕ್ಷುಗಳೇ, ಹೀಗೆ ಈ ಮೂರು ವಿಷಯಗಳಿಂದ ಮೂರ್ಖನು ತಿಳಿಯಲ್ಪಡುತ್ತಾನೆ.”

“ಭಿಕ್ಷುಗಳೇ, ಮೂರು ವಿಷಯಗಳಿಂದ ಕೂಡಿದ್ದಾಗ, ಜ್ಞಾನಿಯೆಂದು ತಿಳಿಯಲ್ಪಡುತ್ತಾನೆ. ಯಾವುವವು? ಜ್ಞಾನೋಚಿತವಾಗಿ ಚಿಂತನೆ ಮಾಡಿ ಪ್ರಶ್ನೆಯನ್ನು ವಿಕಸಿತ ಮಾಡುತ್ತಾನೆ. ಜ್ಞಾನೋಚಿತವಾಗಿ ಚಿಂತನೆ ಮಾಡಿ ಪ್ರಶ್ನೆಗೆ ವಿವರಿಸುತ್ತಾನೆ. ಬೇರೊಬ್ಬನು ಪ್ರಶ್ನೆಗೆ ಜ್ಞಾನೋಚಿತವಾಗಿ ಚಿಂತನೆ ಮಾಡಿ, ಉತ್ತಮ ಪದ ಹಾಗು ಅಕ್ಷರಗಳಿಂದ ಸುಂದರವಾಗಿ ವಿವರಿಸಿದಾಗ ಆತನು ಅದನ್ನು ಒಪ್ಪುತ್ತಾನೆ. ಭಿಕ್ಷುಗಳೇ, ಜ್ಞಾನಿಯು ಹೀಗೆ ಮೂರು ಲಕ್ಷಣಗಳಿಂದ ಕೂಡಿರುತ್ತಾನೆ.”

“ಭಿಕ್ಷುಗಳೇ, ಮೂರು ವಿಷಯಗಳಿಂದ ಮೂರ್ಖನು ತಿಳಿಯಲ್ಪಡುತ್ತಾನೆ. ಯಾವುವವು? ಶಾರೀರಿಕ ಪಾಪಗಳಿಂದ, ಮಾತಿನ ಪಾಪಗಳಿಂದ ಮತ್ತು ಮಾನಸಿಕ ಪಾಪಗಳಿಂದಾಗಿ ಹೇಗೆ ಈ ಮೂರರಿಂದಾಗಿ ಮೂರ್ಖನೆಂದು ತಿಳಿಯಲ್ಪಡುತ್ತಾನೆ.”

“ಹಾಗೆಯೇ ಭಿಕ್ಷುಗಳೇ, ಮೂರು ವಿಷಯಗಳಿಂದಾಗಿ ಜ್ಞಾನಿಯು ತಿಳಿಯಲ್ಪಡುತ್ತಾನೆ. ಯಾವುವವು? ಶಾರೀರಿಕ ಪುಣ್ಯಕರ್ಮಗಳಿಂದಾಗಿ, ಮಾತಿನ ಪುಣ್ಯ ಕರ್ಮಗಳಿಂದಾಗಿ ಮತ್ತು ಮನಸ್ಸಿನ ಪುಣ್ಯಕರ್ಮಗಳಿಂದಾಗಿ ಜ್ಞಾನಿಯೆಂದು ತಿಳಿಯಲ್ಪಡುತ್ತಾನೆ.”

“ಆದ್ದರಿಂದಾಗಿ ಭಿಕ್ಷುಗಳೇ, ನಿಮ್ಮನ್ನು ನೀವು ಹೇಗೆ ಸುಶಿಕ್ಷಿತಗೊಳಿಸಿಕೊಳ್ಳಿ: “ನಾವು ಮೂರ್ಖರೆಂದು ತಿಳಿಯಲ್ಪಡುವ ವಿಷಯಗಳನ್ನು ತಡೆಯುವೆವು, ಜ್ಞಾನಿಗಳೆಂದು ತಿಳಿಯಲ್ಪಡುವ ವಿಷಯಗಳನ್ನು ವಿಕಸಿಸುವೆವು.”

“ಭಿಕ್ಷುಗಳೇ, ಮೂರು ವಿಷಯಗಳಿಂದ ಮೂರ್ಖರೆಂದು ತಿಳಿಯಲ್ಪಡುವವರು, ಯಾವುದವು ಮೂರು? ನಿಂದನೀಯ ಶಾರೀರಿಕ ಕರ್ಮಗಳಿಂದಾಗಿ, ನಿಂದನೀಯ ಮಾತಿನ ಕರ್ಮಗಳಿಂದಾಗಿ ಮತ್ತು ನಿಂದನೀಯ ಮಾನಸಿಕ ಕರ್ಮಗಳಿಂದಾಗಿ ಮೂರ್ಖರೆಂದು ತಿಳಿಯಲ್ಪಡುವರು.”

"ಭಿಕ್ಷುಗಳೇ, ಮೂರು ವಿಷಯಗಳಿಂದಾಗಿ ಜ್ಞಾನಿಗಳೆಂದು ತಿಳಿಯಲ್ಪಡುವರು, ಯಾವುದವು ಮೂರು? ನಿಂದನೀಯವಲ್ಲದ (ಪ್ರಶಂಸಾರ್ಹ) ಶಾರೀರಿಕ ಕರ್ಮಗಳಿಂದಾಗಿ, ನಿಂದನೀಯವಲ್ಲದ ಮಾತಿನ ಕರ್ಮಗಳಿಂದಾಗಿ ಮತ್ತು ನಿಂದನೀಯವಲ್ಲದ ಮಾನಸಿಕ ಕರ್ಮಗಳಿಂದಾಗಿ ಜ್ಞಾನಿಗಳೆಂದು ತಿಳಿಯಲ್ಪಡುವರು."

"ಭಿಕ್ಷುಗಳೇ, ಮೂರು ವಿಷಯಗಳಿಂದ ಮೂರ್ಖನೆಂದು ತಿಳಿಯಲ್ಪಡುತ್ತಾನೆ. ಯಾವುವವು ಮೂರು? ತೊಂದರೆಯ ಶಾರೀರಿಕ ಕರ್ಮಗಳಿಂದಾಗಿ, ತೊಂದರೆಯ ಮಾತಿನ ಕರ್ಮಗಳಿಂದಾಗಿ ಮತ್ತು ತೊಂದರೆ ಮನಸ್ಸಿನ ಕರ್ಮಗಳಿಂದಾಗಿ ಮೂರ್ಖನೆಂದು ತಿಳಿಯಲ್ಪಡುವನು."

"ಭಿಕ್ಷುಗಳೇ, ಮೂರು ವಿಷಯಗಳಿಂದಾಗಿ ಜ್ಞಾನಿಯೆಂದು ತಿಳಿಯಲ್ಪಡುತ್ತಾನೆ ಯಾವುವವು ಮೂರು? ತೊಂದರೆಯಲ್ಲದ ಶಾರೀರಿಕ ಕರ್ಮಗಳಿಂದಾಗಿ, ತೊಂದರೆಯಲ್ಲದ ಮಾತಿನ ಕರ್ಮಗಳಿಂದಾಗಿ ಮತ್ತು ತೊಂದರೆಯಲ್ಲದ ಮನಸ್ಸಿನ ಕರ್ಮಗಳಿಂದಾಗಿ ಜ್ಞಾನಿಯೆಂದು ತಿಳಿಯಲ್ಪಡುವನು."

"ಭಿಕ್ಷುಗಳೇ, ಆದ್ದರಿಂದಾಗಿ ನೀವು ಹೀಗೆ ಸುಶಿಕ್ಷಣಗೊಳಿಸಿಕೊಳ್ಳಬೇಕು: 'ಮೂರ್ಖರೆಂದು ತಿಳಿಯಲ್ಪಡುವಂತಹ ಮೂರು ವಿಷಯಗಳನ್ನು ನಾವು ತಡೆಯುವೆವು ಮತ್ತು ಜ್ಞಾನಿಗಳೆಂದು ತಿಳಿಯಲ್ಪಡುವಂತಹ ಮೂರು ವಿಷಯಗಳನ್ನು ನಾವು ವಿಕಸಿತಗೊಳಿಸುವೆವು."

"ಭಿಕ್ಷುಗಳೇ, ಮೂರು ವಿಷಯಗಳಿಂದ ಕೂಡಿರುವ ಮೂರ್ಖನು ತನ್ನನ್ನೇ ನಾಶಗೊಳಿಸಿಕೊಂಡು, ನಿಂದೆಗೆ ಒಳಪಡುತ್ತಾನೆ, ಜ್ಞಾನಿಗಳಿಂದ ನಿಂದೆಗೆ ಒಳಪಟ್ಟು ಅಪಾರ ಪಾಪಗಳಿಕೆ ಮಾಡಿಕೊಳ್ಳುತ್ತಾನೆ, ಯಾವುದವು ಮೂರು? ಶಾರೀರಿಕ ದುರ್ವರ್ತನೆ, ಮಾತಿನ ದುರ್ವತನೆ ಮತ್ತು ಮನಸ್ಸಿನ ದುರ್ವರ್ತನೆ."

"ಭಿಕ್ಷುಗಳೇ, ಮೂರು ವಿಷಯಗಳಿಂದ ಕೂಡಿರುವ ಜ್ಞಾನಿಯು ತನ್ನನ್ನು ನಾಶಗೊಳಿಸುವುದಿಲ್ಲ ಮತ್ತು ನಿಂದೆಗೂ ಒಳಪಡುವುದಿಲ್ಲ. ಜ್ಞಾನಿಗಳಿಂದ ನಿಂದೆಗೆ ಈಡಾಗದೆ ಅಪಾರ ಪುಣ್ಯ ಗಳಿಸುತ್ತಾನೆ, ಯಾವುವವು ಮೂರು? ಶಾರೀರಿಕ ಸುವರ್ತನೆ, ಮಾತಿನ ಸುವರ್ತನೆ ಮತ್ತು ಮನಸ್ಸಿನ ಸುವರ್ತನೆ."

"ಭಿಕ್ಷುಗಳೇ, ಮೂರು ದೂಷ್ಯವನ್ನು ದೂರೀಕರಿಸಿ ಅಂತಹ ದೋಷಾತೀತ ಮಾರ್ಗದರ್ಶಿತದಲ್ಲೇ ಸಾಗಿದರೆ, ಒಬ್ಬನು ಸುಗತಿ ಸೇರುವನು, ಯಾವುದವು ದೂರೀಕರಿಸಿದ ಮೂರು? ಶೀಲವಂತನಾಗುವುದು ಹಾಗು ಪಾಪರಹಿತನಾಗಿರುವುದು, ಅಸೂಯಾ ರಹಿತನಾಗಿರುವುದು ಹಾಗು ಅಸೂಯಾ ಕಲೆಗಳಿಂದ ರಹಿತನಾಗಿರುವುದು ಮತ್ತು ನಿಸ್ವಾರ್ಥಿಯಾಗಿರುವುದು ಹಾಗು ಸ್ವಾರ್ಥದ ಕಲೆಗಳಿಂದ ಮುಕ್ತನಾಗಿರುವುದು, ಮೂರು ದೂಷ್ಯಗಳಿಂದ ತೊರೆದವನಾಗಿ, ಆ ರೀತಿಯಲ್ಲೇ ಮಾರ್ಗದರ್ಶಿತನಾಗಿ ಒಬ್ಬನು ಸುಗತಿ ಸೇರುತ್ತಾನೆ."



## ದೃಷ್ಟಿಗಳು ಉದಯಿಸಲು ತಕ್ಷಣದ ಕಾರಣ

"ಭಿಕ್ಷುಗಳೇ, ಇವೆರಡು ಕಾರಣಗಳು ಮಿಥ್ಯಾದೃಷಿಯು ಉದಯಿಸಲು ಕಾರಣವಾಗುತ್ತದೆ, ಯಾವುದವು?"

"ಇನ್ನೊಬ್ಬರ ಧ್ವನಿ ಮತ್ತು ಅಯೋಗ್ಯವಾದ ಗಮನಹರಿಸುವಿಕೆ."

"ಭಿಕ್ಷುಗಳೇ, ಇವರೆಡು ಕಾರಣಗಳು ಸಮ್ಮಾದೃಷ್ಟಿಯು ಉದಯಿಸಲು ಕಾರಣವಾಗುತ್ತದೆ, ಯಾವುವವು?

"ಇನ್ನೊಬ್ಬರ ಧ್ವನಿ ಮತ್ತು ಯೋಗ್ಯ ಗಮನಹರಿಸುವಿಕೆ."

"ಇಲ್ಲಿ ಇನ್ನೊಬ್ಬರ ಧ್ವನಿ ಎಂದರೆ ಜ್ಞಾನ ಅಥವಾ ಮಿಥ್ಯಾಜ್ಞಾನವಾಗಬಹುದು. ಅದು ಪುಸ್ತಕ ರೂಪದಲ್ಲೂ ಸಹಾ ಆಗಬಹುದು. ನಂತರ ಅದನ್ನು ಆಲಿಸಿದಾಗ ಅಥವಾ ನೋಡಿದಾಗ ಮಿಥ್ಯಾ ಜ್ಞಾನದಿಂದ ಕೂಡಿದ ಧ್ವನಿ ಆಲಿಸಿದಾಗ, ಅದನ್ನೇ ಸತ್ಯವೆಂದು ಬಗೆದಾಗ, ಅಥವಾ ಸಮ್ಮಾಜ್ಞಾನ ಆಲಿಸಿಯೂ ಯೋಗ್ಯ ಗಮನನೀಡದೆ ಹೋದಾಗ ಮಿಥ್ಯಾದೃಷ್ಟಿಯು ಸ್ಥಾಪಿತವಾಗುತ್ತದೆ.

ಅದರಂತೆಯೇ ಇನ್ನೊಬ್ಬರ ಧ್ವನಿ ಎಂದರೆ ಜ್ಞಾನದ ಬೋಧನೆ ಅಥವಾ ಪುಸ್ತಕವೂ ಆಗಬಹುದು. ಅದನ್ನು ಆಲಿಸಿದಾಗ ಅಥವಾ ಓದಿದಾಗ ಯೋಗ್ಯ ಗಮನ, ಜ್ಞಾನೋಚಿತ ಗಮನಹರಿಸಿದಾಗ ಆತನಲ್ಲಿ ಸಮ್ಮಾದೃಷ್ಟಿಯು ಸ್ಥಾಪಿತವಾಗುತ್ತದೆ."

"ಪರರನ್ನು ಮಿಥ್ಯಾದೃಷ್ಟಿಯವರಂತೆ ಮಾಡುವುದು ಸುಲಭ. ಆದರೆ ಸಮ್ಮಾದೃಷ್ಟಿಯವರಂತೆ ರೂಪಿಸುವುದು ಅತಿ ಕಡುಕಷ್ಟಕರ."



# III. ಮಿಥ್ಯಾದೃಷ್ಟಿಗಳ ವಿಧಗಳು

## ಮಿಥ್ಯಾದೃಷ್ಟಿಗಳ ಐದು ಬಗೆಗಳು

ಮಿಥ್ಯಾದೃಷ್ಟಿ ಅಥವಾ ಮಿಥ್ಯಾ ನಂಬಿಕೆಯು 52 ಚೇತಸಿಕಾಗಳಲ್ಲಿ ಒಂದಾಗಿದೆ. ಅದು ಪುನಃ ಐದು ವಿಧವಾಗಿ ಕೂಡಿದೆ.

1. **ಸಕ್ಕಾಯ ದೃಷ್ಟಿ :** ಇದು ಉಳಿದ ನಾಲ್ಕು ದೃಷ್ಟಿಗಳಿಗೆ ಆಧಾರವಾಗಿದೆ. ಇದನ್ನು ಆತ್ಮದೃಷ್ಟಿ ಎಂದೂ ಕರೆಯುತ್ತಾರೆ.
2. **ಅಂತಗ್ರಾಹದೃಷ್ಟಿ (ಅತಿರೇಕದ ದೃಷ್ಟಿಗಳು):** ಶಾಶ್ವತವಾದ ಮತ್ತು ಉಚ್ಚೇದವಾದ (ವಿನಾಶವಾದ)
3. **ಮಿಥ್ಯಾದೃಷಿ :** ಶೀಲರಹಿತನನ್ನಾಗಿಸುವ ದೃಷ್ಟಿಕೋನಗಳು.
4. **ಪಾರಾಮರ್ಶ ದೃಷ್ಟಿ :** ತಾತ್ವಿಕ ಮಿಥ್ಯಾದೃಷ್ಟಿಕೋನಗಳು
5. **ಶೀಲವ್ರತ ಪಾರಾಮರ್ಶ ದೃಷ್ಟಿಕೋನಗಳು :** ವ್ರತಾಚರಣೆಗಳಿಗೆ, ಮೂಢನಂಬಿಕೆಗಳಿಗೆ ಅಂಟಿರುವುದು.

## ಮಿಥ್ಯಾದೃಷ್ಟಿಯ ಪರ್ಯಾಯ ವರ್ಗೀಕರಣ

ಮಿಥ್ಯಾದೃಷ್ಟಿಯು ಮೂಲವಾಗಿ ಎರಡು ರೀತಿ ವರ್ಗೀಕೃತವಾಗುತ್ತದೆ:

**I. ಕರ್ಮಕ್ಕೆ ಅಥವಾ ಶೀಲಕ್ಕೆ ಸಂಬಂಧಪಟ್ಟ ಮಿಥ್ಯಾದೃಷ್ಟಿ**

**II. ಸತ್ಕಾಯ ದಿಟ್ಠಿ (ಆತ್ಮಕ್ಕೆ ಸಂಬಂಧಪಟ್ಟ ದೃಷ್ಟಿ)**

I. ಕರ್ಮಕ್ಕೆ ಸಂಬಂಧಪಟ್ಟ ಅಥವಾ ಶೀಲಕ್ಕೆ ಸಂಬಂಧಪಟ್ಟ ಮಿಥ್ಯಾದೃಷ್ಟಿಯು ಮತ್ತೆ 5 ವಿಧದಲ್ಲಿ ವರ್ಗೀಕೃತವಾಗುತ್ತದೆ.

1. **ಅಹೇತು ಮಿಥ್ಯಾದೃಷ್ಟಿ :** ಇದರ ಪ್ರಕಾರ ಜೀವಗಳ ಉದಯಕ್ಕಾಗಲಿ, ಪರಿಶುದ್ಧತೆಗಾಗಲಿ, ಸುಖ–ದುಃಖಕ್ಕಾಗಲಿ, ಉನ್ನತಿ–ಅವನತಿಗಾಗಲಿ ಕಾರಣವೇ ಇಲ್ಲ. ಎಲ್ಲಾ ವಿಧಿಯಾಟ.
2. **ಅಕ್ರಿಯ ಮಿಥ್ಯಾದೃಷ್ಟಿ :** ಇದರ ಪ್ರಕಾರ ಯಾವುದೇ ಸುಕರ್ಮಕ್ಕೆ (ದಾನ) ಅಥವಾ ಯಾವುದೇ ದುಷ್ಕರ್ಮಕ್ಕೆ (ಪಾಪ) ಫಲವೇ ಇಲ್ಲ.
3. **ನಾಸ್ತಿಕ ಮಿಥ್ಯಾದೃಷ್ಟಿ :** ಇದು ಸಹಾ ಪಾಪ–ಪುಣ್ಯಕ್ಕೆ ಫಲವಿಲ್ಲ, ಜೊತೆಗೆ ಪರಲೋಕವೂ ಇಲ್ಲ, ಪುನರ್ಜನ್ಮ–ಪೂರ್ವ ಜನ್ಮವೂ ಇಲ್ಲ. ಸತ್ತನಂತರ ಮಾನವ ನಾಶವಾಗುತ್ತಾನೆ.
4. **ಇಸ್ಸರ ನಿರ್ಮಾಣ ಹೇತು:** ಎಲ್ಲದಕ್ಕೂ ದೇವರೇ ಕಾರಣ ಎಂಬ ಮಿಥ್ಯಾದೃಷ್ಟಿ.
5. **ಪುಬ್ಬೇಕತಾ ಹೇತು:** ಹಿಂದಿನ ಜನ್ಮವೇ ಕಾರಣ ಎಂಬ ಮಿಥ್ಯಾದೃಷ್ಟಿ.



ಈ ಮಿಥ್ಯಾದೃಷ್ಟಿಗಳು ಕರ್ಮ ನಿಯಮಗಳು ಸ್ಪಷ್ಟವಾಗಿ ಅರಿತಾಗ ಪೂರ್ವ ಜನ್ಮವು ಇತ್ತು. ಕರ್ಮ ನಿಯಮದಿಂದಾಗಿ ಮುಕ್ತನಾಗದಿದ್ದರೆ ಪುನರ್ಜನ್ಮವು ಇರುತ್ತದೆ. ಪ್ರತಿಯೊಂದಕ್ಕೂ ಕಾರಣವಿದ್ದೇಯಿದೆ. ತಾನಾಗಿಯೇ ಕಲುಶಿತನಾಗುತ್ತಾನೆ, ಹಾಗೆಯೇ ಪರಿಶುದ್ಧನು ಆಗುತ್ತಾನೆ. ಸುಖ–ದುಃಖಗಳಿಗೆ, ಉನ್ನತಿ ಅವನತಿಗೆ ಎಲ್ಲಕ್ಕೂ ಕಾರಣವಿದೆ, ಪರಲೋಕವೂ ಇದೆ. ದಾನಕ್ಕೆ (ಸುಕರ್ಮಕ್ಕೆ) ಫಲವಿದೆ. ಹಾಗೆಯೇ ಶೀಲಕ್ಕೂ ಫಲವಿದೆ, ಪಾಪಕ್ಕೂ ಫಲವಿದೆ ಎಂದು ಅರಿತು ಆತನು ದಾನಿಯಾಗಿ, ಶೀಲವಂತನಾಗಿ, ಸಂಯಮಿಯಾಗಿ, ಧ್ಯಾನಿಯಾಗಿ, ಜ್ಞಾನಿಯಾಗುತ್ತಾನೆ. ಹೀಗೆ ಇವು ಕಮ್ಮಸ್ಸಕತ ಸಮ್ಮಾದೃಷ್ಟಿಯಿಂದ ಈ ಮೂರು ಮಿಥ್ಯಾದೃಷ್ಟಿಗಳನ್ನು ತೊಡೆದು ಹಾಕುತ್ತಾನೆ.

## ಮಿಥ್ಯಾದೃಷ್ಟಿಗಳು

**I. ಕರ್ಮಕ್ಕೆ ಸಂಬಂಧಪಟ್ಟ ಮಿಥ್ಯಾದೃಷ್ಟಿಗಳು**

↓

1. ಅಹೇತು ಮಿಥ್ಯಾದೃಷ್ಟಿ
2. ಅಕ್ರಿಯಾ ಮಿಥ್ಯಾದೃಷ್ಟಿ
3. ನಾಸ್ತಿಕ ಮಿಥ್ಯಾದೃಷ್ಟಿ
4. ಹಿಂದಿನ ಜನ್ಮವೇ ಕಾರಣವೆಂಬ ಮಿಥ್ಯಾದೃಷ್ಟಿ
5. ಇಸ್ಸರ ಹೇತು ಮಿಥ್ಯಾದೃಷ್ಟಿ

**II. ಸತ್ಕಾಯ ದಿಟ್ಠಿ :**

↓

1. ಶಾಶ್ವತ (ಆತ್ಮ) ಮಿಥ್ಯಾದೃಷ್ಟಿ
2. ಉಚ್ಛೇದ (ವಿನಾಶ) ಮಿಥ್ಯಾದೃಷ್ಟಿ

### ಮಿಥ್ಯಾದೃಷ್ಟಿಗಳ ನಾಶ

1. ಅಹೇತು
2. ಅಕ್ರಿಯಾ
3. ನಾಸ್ತಿಕ
4. ಇಸ್ಸರ (ದೇವರೇ ಕಾರಣ)
5. ಪೂರ್ವಕೃತ (ಹಿಂದಿನ ಜನ್ಮ ಕಾರಣ)

} ಮಿಥ್ಯಾದೃಷ್ಟಿಗಳು ← ಕಮ್ಮಸ್ಸಕತ ಸಮ್ಮಾದೃಷ್ಟಿಯಿಂದ ನಾಶವಾಗುತ್ತದೆ.

1. ಶಾಶ್ವತ
2 ಉಚ್ಛೇದ

} ಮಿಥ್ಯಾದೃಷ್ಟಿಗಳು ← ವಿಪಸ್ಸನ ಜ್ಞಾನ ಸಮ್ಮಾದೃಷ್ಟಿಯಿಂದ ದುರ್ಬಲವಾಗುತ್ತದೆ

← ಸೋತಾಪತ್ತಿ ಮಾರ್ಗ ಫಲದಿಂದ ಪೂರ್ಣವಾಗಿ ನಾಶವಾಗುತ್ತದೆ.

**II. ಸತ್ಕಾಯ ದಿಟ್ಠಿ :** ಇದು ಮತ್ತೆ ಎರಡು ವಿಧವಾಗಿ ವಿಂಗಡಿತವಾಗುತ್ತದೆ.

1. **ಶಾಶ್ವತ (ಆತ್ಮ) ದಿಟ್ಠಿ :** ಇಲ್ಲಿ ಆತ್ಮನು ಶುದ್ಧನು, ಅಮರನು, ನಿತ್ಯನು ಶಾಶ್ವತವಾಗಿ ಇರುವನೆಂದು ಬಗೆಬಗೆಯಲ್ಲಿ ಸಿದ್ಧಾಂತ ಮಂಡಿಸುತ್ತಾರೆ.

2. **ಉಚ್ಛೇದವಾದ :** ಇಲ್ಲಿ ಸತ್ತನಂತರ ಮಾನವನಿಲ್ಲ ಎಂದು ಅಥವಾ ಕೆಲ ಧ್ಯಾನದ ನಂತರ ಪೂರ್ಣವಾಗಿ ನಾಶವಾಗುತ್ತಾನೆಂದು ಸಿದ್ಧಾಂತಗಳಿವೆ.

## ಭಗವಾನರ ಕಾಲದಲ್ಲಿದ್ದ ಮಿಥ್ಯಾ ದಾರ್ಶನಿಕರು ಮತ್ತು ಅವರ ಮಿಥ್ಯಾ ಸಿದ್ಧಾಂತಗಳು:

### 1. ಪೂರಣ ಕಸ್ಸಪನ ಅಕ್ರಿಯಾವಾದ (ಅಕ್ರಿಯ ದಿಟ್ಠಿ)

ಯಾರು ಹಿಂಸಿಸುತ್ತಾನೋ ಅಥವಾ ಪರರಿಂದ ಹಿಂಸಿಸುತ್ತಾನೋ, ಯಾರು ಅಂಗವಿಚ್ಛೇದನ ಮಾಡುತ್ತಾನೋ ಅಥವಾ ಪರರಿಂದ ಮಾಡಿಸುತ್ತಾನೋ, ಯಾರು ದುಃಖ ನೀಡುತ್ತಾನೋ ಅಥವಾ ಪರರಿಂದ ನೀಡಿಸುತ್ತಾನೋ ಹಾಗೆಯೇ ಕಳ್ಳತನ, ವ್ಯಭಿಚಾರ, ಸುಳ್ಳು ಇವೆಲ್ಲಾ ಮಾಡುವುದರಿಂದ ಯಾವುದೇ ಪಾಪವಿಲ್ಲ, ಚೂಪಾಗಿರುವ ಚಕ್ರದಿಂದ ಇಡೀ ಜೀವ ಸಂಕುಲವನ್ನೇ ಹತ್ಯೆ ಮಾಡಿ ರಾಶಿ ಹಾಕಿದರೂ ಸಹಾ ಪಾಪವಿಲ್ಲ, ಪಾಪ ಫಲವಿಲ್ಲ. ಹಾಗೆಯೇ ಎಷ್ಟೇ ದಾನ ಮಾಡಲಿ, ಯಾರಿಗೆ ದಾನ ಮಾಡಲಿ ಅದರಿಂದಾಗಿ ಯಾವುದೇ ಪುಣ್ಯವಿಲ್ಲ, ಯಾವುದೇ ಲಾಭವಿಲ್ಲ. ಅದೇರೀತಿ ಸಂಯಮದಿಂದಾಗಲಿ, ಇಂದ್ರಿಯ ನಿಗ್ರಹದಿಂದಾಗಲಿ ಯಾವುದೇ ಲಾಭವಿಲ್ಲ, ಯಾವುದೇ ಪುಣ್ಯವಿಲ್ಲ.

### 2. ಮಕ್ಖಲಿ ಗೋಸಾಲನ ಅಹೇತುವಾದ (ಅಹೇತು ದಿಟ್ಠಿ):

"ತಕ್ಷಣದ ಆದಿಗಾಗಲಿ, ಮೂಲ ಆದಿಗಾಗಲಿ ಕಾರಣವೇ ಇಲ್ಲ (ಹೇತುವಿಲ್ಲ). ಕಾರಣವಿಲ್ಲದೆಯೇ ಜೀವಿಗಳು ನೀತಿಭ್ರಷ್ಟರಾಗುತ್ತಾರೆ. ಹಾಗೆಯೇ ಸುಶೀಲಕ್ಕೂ ಸಹಾ ಕಾರಣವಿಲ್ಲ. ಕಾರಣವಿಲ್ಲದೆಯೇ ಶುದ್ಧಿ ಮತ್ತು ಅಶುದ್ಧಿಗಳು ನಡೆಯುತ್ತದೆ. ಯಾವುದೇ ಸ್ಥಿತಿಯಾಗಲಿ, ತನ್ನಿಂದಾಗಲಿ, ಪರರಿಂದಾಗಲಿ ಯಾವುದೇ ಪುರುಷ ಪ್ರಯತ್ನದಿಂದಾಗಲಿ ನಡೆಯುತ್ತಿಲ್ಲ, ಪುರುಷ ಪ್ರಯತ್ನವೆಂಬುದೇ ಇಲ್ಲ. ಸರ್ವ ಮಾನವರು, ಸರ್ವ ಜೀವಿಗಳು ತಮ್ಮದೇ ಆದ ಯಾವ ಬಲವನ್ನು ಹೊಂದಿಲ್ಲ. ಕಾರಣವಿಲ್ಲದೆಯೇ, ವಿಧಿಯಾಟದಂತೆ ಎಲ್ಲವೂ ನಡೆಯುತ್ತಿದೆ. ಹೀಗಾಗಿ ಎಲ್ಲರೂ ಸುಖ-ದುಃಖ ಪಡೆಯುತ್ತಿದ್ದಾರೆ. ಜ್ಞಾನಿಗಳಾಗಲಿ ಅಥವಾ ಮೂರ್ಖರಾಗಲಿ ಎಲ್ಲರೂ ಇಲ್ಲಿ ವಿಧಿಯಾಟದಂತೆ ನಡೆಯಬೇಕಾಗುತ್ತದೆ."

### 3. ಅಜಿತ ಕೇಶಕಂಬಳಿಯ ನಾಸ್ತಿಕ ವಾದ (ನಾಸ್ತಿಕ ದಿಟ್ಠಿ)

"ದಾನಕ್ಕೆ ಫಲವಿಲ್ಲ, ಸುಕರ್ಮ ಮತ್ತು ದುಷ್ಕರ್ಮಗಳಿಗೆ ಫಲವಿಲ್ಲ, ಈ ಲೋಕದಲ್ಲೂ ಫಲವಿಲ್ಲ, ಪರಲೋಕವಿಲ್ಲ, ಅಲ್ಲೂ ಫಲವಿಲ್ಲ, ತಂದೆ-ತಾಯಿಯರಿಗೆ ಸೇವೆ ಮಾಡಿದರೂ ಯಾವ ಪುಣ್ಯವೂ ಇಲ್ಲ. ತಾನಾಗಿಯೇ ಜನ್ಮಿಸುವ ಯಾವ ಜೀವಿಯೂ ಇಲ್ಲ (ದೇವತೆ ಅಥವ ದೆವ್ವ), ಉನ್ನತಮಟ್ಟಕ್ಕೆ ಏರಿರುವ ಎನ್ನುವಂತಹ ಯಾವ ಸಮಣ ಬ್ರಾಹ್ಮಣರು



ಇಲ್ಲ ಅಭಿಜ್ಞಾಪ್ರಾಪ್ತಿ (ಅಲೌಕಿಕ ಬಲಗಳನ್ನು) ಹೊಂದಿರುವವರು ಯಾರೂ ಇಲ್ಲ. ಜ್ಞಾನಪ್ರಾಪ್ತಿ ಪಡೆದಿದ್ದೇವೆ, ಪರಲೋಕ ನೋಡಿದ್ದೇವೆ ಎನ್ನುವಂತಹವರು ಯಾರೂ ಇಲ್ಲ. ಇಲ್ಲಿ ಮಾನವ ನಾಲ್ಕು ಮಹಾಧಾತುವಿನಿಂದ ರಚಿಸಲ್ಪಟ್ಟಿದ್ದಾನೆ. ಸಾವಿನ ನಂತರ ನಾಲ್ಕು ಧಾತುಗಳು ಬಾಹ್ಯ ನಾಲ್ಕು ಧಾತುಗಳೊಂದಿಗೆ ವಿಲೀನವಾಗುತ್ತದೆ. ಸಾವಿನ ನಂತರ ಜೀವವಿಲ್ಲ, ಸತ್ತನಂತರ ಮೂರ್ಖರೂ ಮತ್ತು ಜ್ಞಾನಿಗಳೂ ಎಲ್ಲಾ ಒಂದೇ. ದಾನಕ್ಕೆ ಫಲವಿದೆ, ಪರಲೋಕವಿದೆ ಎನ್ನುವುದು ಸುಳ್ಳು."

### 4. ಪಕುದ ಕಚ್ಚಾಯನರ ಅಞ್ಞೇನ ಅಞ್ಞಂ ವಾದ :

"ಏಳು ವಿಧದ ಕಾಯಗಳಿವೆ, ಅವು ನಿರ್ಮಿತವಲ್ಲ. ಪರನಿರ್ಮಿತವೂ ಅಲ್ಲ. ಇವುಗಳ ಹೊರತು ನಿರ್ಮಾಣ ಸಾಧ್ಯವಿಲ್ಲ. ಪರ್ವತ ಶಿಖರದಂತೆ ಅಥವಾ ಶಿಲಾಸ್ತಂಭದಂತೆ ಸ್ಥಿರವಾಗಿದೆ. ಅವು ಅಚಲ, ಬದಲಾಗದಂತಹುದು, ಅವೆಂದರೆ ಪೃಥ್ವಿಕಾಯ, ಜಲಕಾಯ, ಅಗ್ನಿಕಾಯ, ವಾಯುಕಾಯ, ಸುಖಕಾಯ, ದುಃಖಕಾಯ ಮತ್ತು ಆತ್ಮಕಾಯ. ಹೀಗಾಗಿ ಇಲ್ಲಿ ಸಾಯಿಸುವವನು ಯಾರೂ ಇಲ್ಲ, ಸಾಯಲ್ಪಡುವವನೂ ಯಾರೂ ಇಲ್ಲ. ಇಲ್ಲಿ ಹೇಳುವವನು ಅಥವಾ ಕೇಳುವವನು ಇಲ್ಲ. ಇಲ್ಲಿ ಅರಿತಿರುವವನಾಗಲಿ ಅಥವಾ ವಿವರಿಸುವವನಾಗಲಿ ಇಲ್ಲ. ಇಲ್ಲಿ ಯಾರಾದರೂ ಒಬ್ಬನಿಗೆ ಕತ್ತಿ ತಿವಿದರೆ, ಅದರಿಂದಾಗಿ ಯಾರ ಪ್ರಾಣವೂ ಹೋಗುವುದಿಲ್ಲ. ಕೇವಲ 7 ಕಾಯಗಳ ಮಧ್ಯೆ ಕತ್ತಿ ಹೋಗಿದೆಯಷ್ಟೇ."

### 5. ನಿಗಂಟನಾತಪುತ್ರನ ಸಂಯಮವಾದ:

ಇವರು ನಾಲ್ಕು ವಿಧದ ಸಂಯಮ ವಾದವನ್ನು ಬೋಧಿಸುತ್ತಾರೆ. ಜಲದಿಂದ ಸಂಯಮ ತಾಳುತ್ತಾರೆ ಅಂದರೆ ಸ್ನಾನವೂ ಮಾಡುವುದಿಲ್ಲ, ಪಾಪದಿಂದ ಸಂಯಮ ತಾಳುತ್ತಾರೆ, ಆತನು ಪಾಪವೆಲ್ಲವನ್ನು ತೊಳೆದು ಹಾಕುತ್ತಾನೆ, ಪಾಪವು ದೂರವಿರುವಂತೆ ಜೀವಿಸುತ್ತಾನೆ. ಈ ರೀತಿಯ ನಾಲ್ಕು ಸಂಯಮದಿಂದಾಗಿ ಆತನು 4 ಗಂಟು (ಬಂಧನ) ಗಳಿಂದ ಬಿಡುಗಡೆ ಹೊಂದಿರುವುದರಿಂದಾಗಿ ಆತನಿಗೆ ನಿಗಂಟ ಎನ್ನುತ್ತಾರೆ ಮತ್ತು ಗಟ್ಟತೋ ಅಂದರೆ ಗುರಿಪ್ರಾಪ್ತಿ ಮಾಡಿದ್ದರಿಂದ, ಯಟ್ಟತೋ ಹೃದಯವನ್ನು ವಶಮಾಡಿದ್ದರಿಂದ ಮತ್ತು ತಿಟ್ಟತೋ (ಹೃದಯವು ಸ್ಥಿರವಾದ್ದರಿಂದ) ಆತನಿಗೆ ನಿಗಂಟ ಎನ್ನುತ್ತಾರೆ.

ಇವರ ಪ್ರಕಾರ ಶರೀರದ ತಪ್ಪೇ ಮಹತ್ವಕರವಾಗಿತ್ತು, ಕೆಟ್ಟದಾಗಿತ್ತು. ಅದಕ್ಕೆ ಮೂಲವಾದ ಮನಸ್ಸಿನ ಬಗ್ಗೆ ಅಲಕ್ಷಿಸಿದ್ದರು. ನಿಗಂಟನಾತಪುತ್ತರ ಸಿದ್ಧಾಂತ ಈ ರೀತಿಯಿತ್ತು: "ಯಾವುದೆಲ್ಲ ವ್ಯಕ್ತಿಯು (ಸುಖ, ದುಃಖ ಮತ್ತು ಸುಖವೂ ಅಲ್ಲದ ದುಃಖವೂ ಅಲ್ಲದ) ವೇದನೆಗಳನ್ನು ಅನುಭವಿಸುತ್ತಾನೋ, ಅದೆಲ್ಲವೂ ಹಿಂದಿನ ಕರ್ಮಗಳಿಂದಲೇ ಆಗಿವೆ. ಹಿಂದಿನ ಕರ್ಮಗಳನ್ನು ತಡೆಯಬೇಕಾದರೆ ಮುಂದೆ ಯಾವ ಕರ್ಮವನ್ನು ಮಾಡಬಾರದು. ಈ ರೀತಿಯಾಗಿ ಕರ್ಮದ ನಾಶವಾಗುತ್ತದೆ. ಕರ್ಮದ ನಾಶವಾಗಬೇಕಾದರೆ ನೋವುಗಳ

ನಾಶವಾಗಬೇಕು. ನೋವುಗಳ ನಾಶಕ್ಕಾಗಿ ವ್ಯಕ್ತಿ ದೇಹದಂಡನೆ ಮಾಡಬೇಕು. ಉದಾ: ನಿರ್ವಸ್ತ್ರನಾಗುವುದು, ಕೂದಲನ್ನು ಕೈಯಿಂದಲೇ ಕೀಳುವುದು, ಉಪವಾಸ ಮಾಡುವುದು, ನೋವುಕಾರಕ ತಪಸ್ಸುಗಳನ್ನು ಆಚರಿಸುವುದು ಇತ್ಯಾದಿ.

## 6. ಸಂಜಯ ಬೆಲಟ್ಟಿಪುತ್ರನ ವಿಕ್ಷೇಪವಾದ

ಈತನು ಸೋಲುವ ಭೀತಿಯಿಂದ ಹಾವು ಮೀನಿನಂತೆ ಜಾರಿಕೊಳ್ಳುತ್ತಾನೆ. ಆಶ್ಚರ್ಯವೇನೆಂದರೆ ಪರಮಪೂಜ್ಯ ಸಾರಿಪುತ್ರರು ಬುದ್ಧಶಾಸನ ಸೇರುವುದಕ್ಕೆ ಮುಂಚೆ ಈತನ ಬಳಿಯಲ್ಲಿ ಶಿಷ್ಯರಾಗಿದ್ದರು. ಈತನ ಸಿದ್ಧಾಂತವು ಹೀಗಿದೆ: "ನೀವು ನನಗೆ ಪರಲೋಕವಿದೆ ಎಂದರೆ ನನಗೂ ಹಾಗೇ ಅನಿಸಿ ಇದೆ ಎನ್ನುತ್ತಾನೆ. ಹಾಗೆಯೇ ಇಲ್ಲವೆಂದೂ ಹೇಳುವುದಿಲ್ಲ ಮತ್ತು ನನಗೆ ಅದು ಹೀಗಿದೆ ಅಥವಾ ಹಾಗಿದೆ ಎನಿಸುವುದಿಲ್ಲ ಮತ್ತು ನಾನು ನಿರಾಕರಿಸುವುದೂ ಇಲ್ಲ ಮತ್ತು ನಾನು ಪರಲೋಕವಿಲ್ಲ, ಹಾಗೆಯೇ ಇಲ್ಲದೆಯೂ ಇಲ್ಲ ಎಂದು ಹೇಳಲಾರೆ, ಹಾಗೆಯೇ ನಿರಾಕರಿಸಲಾರೆ, ಹಾಗೆಯೇ ನೀವು ನನಗೆ ಜೀವಿಗಳು ಇದ್ದಕ್ಕಿದ್ದಂತೆ ಹುಟ್ಟಿರಬಹುದೇ ಎಂದು ಕೇಳಿದರೆ ಅಥವಾ ಕರ್ಮ ಫಲವಿದೆ ಎಂದು ಕೇಳಿದರೆ ಅಥವಾ ಸಾವಿನ ನಂತರ ಸತ್ಯದರ್ಶಿಯು ಇರುವನೇ ಎಂದು ಕೇಳಿದರೆ ನನಗೂ ಹಾಗೇ ಅನಿಸುತ್ತದೆ, ಹಾಗೆಯೇ ಇಲ್ಲ ಎಂದು ಕೇಳಿದರೆ ಹಾಗೆಯೇ ಅನಿಸುತ್ತದೆ, ಎರಡೂ ನಿಜವೇ ಎಂದು ಕೇಳಿದರೆ ಅದು ಸಾಧ್ಯವೆನಿಸುತ್ತದೆ, ಹಾಗೆಯೇ ಎರಡೂ ಸಾಧ್ಯವಿಲ್ಲವೆಂದು ಅನಿಸುತ್ತದೆ. ನಾನು ಯಾವುದನ್ನೂ ನಿರಾಕರಿಸಲಾರೆ.

**7. ಸುದ್ದಿ ಅವಲಂಬನೆಕಾರರು:** ಇವರು ಕೇವಲ ಸುದ್ದಿಗಳನ್ನೇ ಅವಲಂಬಿಸಿ ಬೋಧಿಸುತ್ತಿದ್ದರು, ಇವರಿಗೆ ಪ್ರತ್ಯೇಕ ಮತವಿಲ್ಲ. ಎಲ್ಲರ ಮಿಶ್ರಣ ವಾದವನ್ನು ಬೋಧಿಸುತ್ತಿದ್ದರು.

**8. ತಾರ್ಕಿಕ ಮಿಮಾಂಸಕರು:** ಕೇವಲ ತರ್ಕ ಮತ್ತು ಮಿಮಾಂಸೆಯಿಂದ ವಾದಗಳಲ್ಲೇ ತೊಡಗುತ್ತಿದ್ದರು.

**9. ಶಾಶ್ವತವಾದಿಗಳು:** ಆತ್ಮ ಅಮರ ಮತ್ತು ನಿತ್ಯ ಪರಿಶುದ್ಧ ಎನ್ನುವವರು.

**10. ಇಸ್ಸರವಾದಿಗಳು** : ಎಲ್ಲಕ್ಕೂ ದೇವರೇ ಕಾರಣ ಎನ್ನುವವರು.

ಇತ್ಯಾದಿ.

## ಮೂರು ಬಗೆಯ ಮಿಥ್ಯಾ ಸಿದ್ಧಾಂತಗಳು

"ಭಿಕ್ಷುಗಳೇ ಮೂರು ಬಗೆಯ ಮಿಥ್ಯಾ ಸಿದ್ಧಾಂತಗಳಿವೆ. ಅವುಗಳನ್ನು ಪ್ರಾಜ್ಞರು ಗಂಭೀರವಾಗಿ ಪ್ರಶ್ನಿಸಿದಾಗ, ಪರಿಶೀಲಿಸಿದಾಗ ಮತ್ತು ಚರ್ಚಿಸಿದಾಗ, ಪಟ್ಟು ಹಿಡಿದಾಗ ಅವುಗಳ ಟೊಳ್ಳು ದೃಢೀಕೃತವಾಯಿತು. ಯಾವುದವು ಮೂರು ?



**ಪುಬ್ಬೇಕತ ಹೇತು** : (1) ಕೆಲವು ಸಮಣ ಬ್ರಾಹ್ಮಣರಿದ್ದಾರೆ. ಅವರು ಈ ರೀತಿಯ ದೃಷ್ಟಿಯನ್ನು ಹೊಂದಿರುತ್ತಾರೆ. "ಯಾವುದೆಲ್ಲವು ಸುಖ ಅಥವಾ ದುಃಖ ಅಥವಾ ತಟಸ್ಥ ವೇದನೆಗಳನ್ನು ವ್ಯಕ್ತಿಯೊಬ್ಬನು ಅನುಭವಿಸುತ್ತಾನೋ ಅದೆಲ್ಲವೂ ಆತನ ಹಿಂದಿನ ಕರ್ಮಗಳಿಂದಲೇ ಆಗುತ್ತಿವೆ.

**ಇಸ್ಸರ ನಿಮ್ಮಾನಹೇತು** : (2) ಮತ್ತೆ ಕೆಲವು ಸಮಣ ಬ್ರಾಹ್ಮಣರಿದ್ದಾರೆ ಅವರು ಈ ರೀತಿಯ ಮಿಥ್ಯಾದೃಷ್ಟಿಯನ್ನು ಬೋಧಿಸುತ್ತಾರೆ: "ಯಾವುದೆಲ್ಲವು ಸುಖ ಅಥವಾ ದುಃಖ ಅಥವಾ ತಟಸ್ಥ ವೇದನೆಗಳನ್ನು ವ್ಯಕ್ತಿಯೊಬ್ಬನು ಅನುಭವಿಸುತ್ತಿದ್ದಾನೋ ಅವೆಲ್ಲವೂ ಈಸ್ಸರ ನಿರ್ಮಾಣ ಹೇತು (ಸೃಷ್ಟಿಕರ್ತನಿಂದ) ಆಗಿದೆ.

**ಅಹೇತು** : (3) ಮತ್ತೆ ಕೆಲವು ಸಮಣ ಬ್ರಾಹ್ಮಣರು ಈ ರೀತಿಯ ಮಿಥ್ಯಾದೃಷ್ಟಿಯನ್ನು ಹೊಂದಿದಾರೆ. ಯಾವುದೆಲ್ಲವೂ ಸುಖ ಅಥವಾ ದುಃಖ ಅಥವಾ ತಟಸ್ಥತೆಯನ್ನು ವ್ಯಕ್ತಿಗಳು ಅನುಭವಿಸುತ್ತಿರುವರೋ ಅವೆಲ್ಲಕ್ಕೆ ಕಾರಣವಿಲ್ಲವಾಗಿದೆ. (ಅಕಾರಣೀಯ/ಅಹೇತುಕ ದಿಟ್ಟಿ).

"ಭಿಕ್ಷುಗಳೇ, ನಾನು ಹಿಂದಿನ ಜನ್ಮದ ಕರ್ಮಗಳೇ ಕಾರಣ ಎನ್ನುವವರ ಬಳಿಗೆ ಹೋದೆನು ಮತ್ತು ಹೀಗೆ ಹೇಳಿದೆನು: "ಇದು ನಿಜವೇ, ನೀವು ಬೋಧಿಸುವ ಪ್ರಕಾರ ವ್ಯಕ್ತಿಯೊಬ್ಬನ ಎಲ್ಲಾ ಸುಖ ಅಥವಾ ದುಃಖಗಳಿಗೆ ಹಿಂದಿನ ಜನ್ಮಗಳೇ ಕಾರಣ" ಎಂದು ಹೇಳಿರುವಿರಿ ಎಂದು ಕೇಳಿದ್ದೇನೆ. ಇದು ನಿಜವೇ?"

ಅವರು "ಹೌದು" ಎಂದು ಉತ್ತರಿಸಿದರು.

ಆಗ ನಾನು ಅವರಿಗೆ ಹೀಗೆ ಹೇಳಿದೆನು: "ಹಾಗಿದ್ದರೆ ಹಿಂದಿನ ಜನ್ಮದ ಕರ್ಮಫಲದಿಂದಲೇ ಮಾನವನು ಕೊಲೆಗಾರ, ಕಳ್ಳ, ವ್ಯಭಿಚಾರಿ, ಸುಳ್ಳ, ಮದ್ಯವ್ಯಸನಿ, ಚಾಡಿಕೋರ, ಒರಟ, ಕಾಡುಹರಟೆಗಾರ, ದುರಾಸೆಪೀಡಿತ, ದ್ವೇಷಿ ಮತ್ತು ಮಿಥ್ಯಾದೃಷ್ಟಿ ಉಳ್ಳವನಾಗುತ್ತಾನೆ. ಹೀಗಾಗಿ ಯಾರು ಕೆಲವು ಕಾರಣಗಳಿಂದಾಗಿ ಹಿಂದಿನ ಜನ್ಮದಲ್ಲಿ ಹಿಂದೆ ಬಿದ್ದಿದ್ದರೋ ಅವರಿಗೆ ಈಗಲೂ ಕಾರ್ಯ ಮಾಡುವ ಇಚ್ಛೆಯಿರುವುದಿಲ್ಲ. ಅವರು ಕಾರ್ಯಗಳನ್ನು ಮಾಡುವುದಿಲ್ಲ. ಅವರಿಗೆ ಇದು ಮಾಡಲು ಅಥವಾ ಅದು ವರ್ಜಿಸಲು ಅಗತ್ಯವೇ ಕಾಣಿಸುವುದಿಲ್ಲ. ಹೀಗಾಗಿ ನಿಮ್ಮ ಸತ್ಯದ ಪ್ರಕಾರ ಏನೂ ಸಾಧಿಸಲು ಅಥವಾ ವರ್ಜಿಸಲು ಪ್ರಯತ್ನಪಡುವ ಹಾಗೇ ಇಲ್ಲ. ಏಕೆಂದರೆ ಎಲ್ಲವೂ ಹಿಂದಿನ ಕರ್ಮದಂತೆ ನಿಗಧಿತವಾಗುತ್ತದೆ. ಹೀಗಿರುವಾಗ ನಿಮಗೆ ಶ್ರಮಣ ಜೀವನವು ಅನ್ವಯವಾಗುವುದಿಲ್ಲ. ನೀವೇ ದ್ವಂದ್ವದಲ್ಲಿ, ಅವ್ಯವಸ್ಥಿತ ಚಿತ್ತದಿಂದ (ಜೀವನದಿಂದ) ಕೂಡಿರುವಿರಿ."

"ಮತ್ತು ಭಿಕ್ಷುಗಳೇ, ಯಾರು ಇಂತಹ ಮಿಥ್ಯಾ ದೃಷ್ಟಿಗಳನ್ನು ಹೊಂದಿದ್ದರೂ ಅವರಿಗೆ ಇದು ನನ್ನ ವಿಚಾರಪೂರಿತವಾದ ಖಂಡನೆಯಾಗಿತ್ತು.

"ಮತ್ತೆ ಭಿಕ್ಷುಗಳೇ, ಯಾವ ಸಮಣ ಬ್ರಾಹ್ಮಣರು ಎಲ್ಲದಕ್ಕೂ ದೇವರೇ ಕಾರಣ ಎಂದು ಪ್ರತಿಪಾದಿಸುತ್ತಿದ್ದರೊ ಅವರ ಬಳಿಗೆ ನಾನು ಹೋದೆನು ಮತ್ತು ಹೀಗೆ ಕೇಳಿದೆನು:

"ಇದು ನಿಜವೇ? ನೀವುಗಳು ಯಾವುದೆಲ್ಲವೂ ಸುಖ-ದುಃಖಗಳನ್ನು ವ್ಯಕ್ತಿಯು ಅನುಭವಿಸುತ್ತಿರುವನೋ ಅದೆಲ್ಲವೂ ದೇವರಿಂದ (ಸೃಷ್ಟಿಕರ್ತನಿಂದ) ಆಗುತ್ತಿವೆ ಎಂದು ಹೇಳುವಿರಿ ಎಂದು ಕೇಳಿದ್ದೇನೆ. ಇದು ನಿಜವೇ?" ಅವರು ಅದಕ್ಕೆ ಹೌದೆಂದರು.

ಆಗ ನಾನು ಅವರಿಗೆ ಹೀಗೆ ಹೇಳಿದೆನು: "ನಿಮ್ಮ ಸಿದ್ಧಾಂತದ ಪ್ರಕಾರ ಮಾನವ ಕೊಲೆಗಾರನಾಗುವುದು, ಕಳ್ಳನಾಗುವುದು, ವ್ಯಭಿಚಾರಿಯಾಗುವುದು, ಸುಳ್ಳುಗಾರನಾಗುವುದು, ಮದ್ಯವ್ಯಸನಿಯಾಗುವುದು... ಇವೆಲ್ಲಕ್ಕೂ ದೇವರೇ ಕಾರಣಕರ್ತನಾಗುತ್ತಾನೆ. ಮತ್ತು ಯಾರೆಲ್ಲರೂ ದುಃಖಿತರೋ (ಹಿಂದೆ ಬಿದ್ದಿರುವರೋ) ಅದಕ್ಕೂ ದೇವರೇ ಕಾರಣಕರ್ತನಾಗುತ್ತಾನೆ. ನಿಮ್ಮ ಸಿದ್ಧಾಂತದ ಪ್ರಕಾರ ಇಲ್ಲಿ ಯಾರು ಇಚ್ಛೆಪಡಲಾರರು. ಪ್ರಯತ್ನವನ್ನು ಪಡಲಾರರು. ಹಾಗೆಯೇ ಅವರಿಗೆ ಪ್ರಯತ್ನದ ಅಗತ್ಯವಾಗಲಿ ಅಥಾ ವರ್ಜಿಸುವ ಅಗತ್ಯವಾಗಲಿ ಇಲ್ಲವೇ ಇಲ್ಲ. ನಿಮ್ಮ ವಾದದ ಪ್ರಕಾರ ನೀವು ಸಮಣ ಬ್ರಾಹ್ಮಣರಾಗುವುದು ನಿಮಗೆ ಅನ್ವಯವಾಗುವುದಿಲ್ಲ. ಏಕೆಂದರೆ ನೀವೇ ದ್ವಂದ್ವದಲ್ಲಿ ಸಿಲುಕಿರುವಿರಿ. ದಿಗ್ಭ್ರಮೆಯಲ್ಲಿ ಸಿಲುಕಿರುವಿರಿ. ಏನು ಮಾಡಬೇಕು, ಏನು ಮಾಡಬಾರದು ಎಂಬ ದ್ವಂದ್ವದಲ್ಲಿ ಸಿಲುಕಿ ಕಳೆದುಹೋಗಿರುವಿರಿ."

"ಮತ್ತೆ ಭಿಕ್ಷುಗಳೇ, ಯಾವ ಸಮಣ ಬ್ರಾಹ್ಮಣರು, ವ್ಯಕ್ತಿಯೊಬ್ಬನು ಅನುಭವಿಸುವ ಸುಖ-ದುಃಖ ಎಲ್ಲಕ್ಕೂ ಕಾರಣವೇ ಇಲ್ಲ. ಆಕಸ್ಮಿಕ ಎಂದು ಪ್ರತಿಪಾದಿಸುತ್ತಿದ್ದರೋ ಅವರ ಬಳಿಗೆ ಹೋದೆನು ಮತ್ತು ಹೀಗೆ ಹೇಳಿದೆನು: 'ಇದು ನಿಜವೇ, ನೀವು ವ್ಯಕ್ತಿಯೊಬ್ಬನ ಸುಖ-ದುಃಖ ಎಲ್ಲಕ್ಕೂ ಕಾರಣವೇ ಇಲ್ಲ, ಎಲ್ಲಾ ಆಕಸ್ಮಿಕ' ಎಂದು ಹೇಳುತ್ತಿರುವಿರಾ?" ಅವರು ಹೌದೆಂದು ಪ್ರತಿಕ್ರಿಯಿಸಿದರು.

ಆಗ ನಾನು ಅವರಿಗೆ ಹೀಗೆ ಹೇಳಿದೆನು: "ನಿಮ್ಮ ವಾದದ ಪ್ರಕಾರ ಯಾರೆಲ್ಲರೂ ಕೊಲೆ ಮಾಡುವರೋ, ಕಳ್ಳತನ ಮಾಡುವರೋ, ವ್ಯಭಿಚಾರ ಮಾಡುವರೋ, ಸುಳ್ಳು ಹೇಳುವರೋ, ಮದ್ಯಸೇವಿಸುವರೋ... ಇವೆಲ್ಲಕ್ಕೂ ಕಾರಣವೇ ಇಲ್ಲವಾಗಿದೆ ಮತ್ತು ಯಾರೆಲ್ಲರೂ ಅವನತಿಗಿಳಿದಿದ್ದಾರೋ, ದುಃಖಿತರೋ ಅದಕ್ಕೂ ಕಾರಣವೇ ಇಲ್ಲವಾಗಿದೆ. ಹೀಗಿರುವಾಗ ಮಾನವ ಏಕೆ ಇಚ್ಛಿಸಬೇಕು, ಏಕೆ ಕಾರ್ಯ ಮಾಡಬೇಕು. ಮಾನವನು ಪ್ರಯತ್ನಪಡುವ ಹಾಗಿಲ್ಲ, ಹಾಗೆಯೇ ವರ್ಜಿಸುವ ಹಾಗಿಲ್ಲ. ನಿಮಗೂ ಸಹಾ ಸಮಣ ಬ್ರಾಹ್ಮಣರೆಂಬ ಪದ ಅನ್ವಯವಾಗುವುದಿಲ್ಲ. ಏಕೆಂದರೆ ನೀವು ದ್ವಂದ್ವಕ್ಕೆ ಸಿಲುಕಿ ಅಂತಹ ಮಿಥ್ಯಾದೃಷ್ಟಿ ಹೊಂದಿದಂತಹ ಸಮಣ ಬ್ರಾಹ್ಮಣರಿಗೆ ಅದು ನನ್ನ ವಿಚಾರಪೂರಿತವಾದ ಖಂಡನೆಯಾಗಿತ್ತು ಮತ್ತು ಇವೇ ಮೂರು ಮಿಥ್ಯಾ ಸಿದ್ಧಾಂತಗಳಾಗಿವೆ ಮತ್ತು ಪ್ರಾಜ್ಞರಿಂದ ಶಿಸ್ತಿನಿಂದ ಪ್ರಶ್ನಿಸಲ್ಪಟ್ಟಾಗ, ಪರಿಶೀಲನೆಗೊಳಿಸಲ್ಪಟ್ಟಾಗ, ಚರ್ಚಿಸಲ್ಪಟ್ಟಾಗ ಅವು ಟೊಳ್ಳೆಂದು ಸಾಬೀತಾಗುತ್ತದೆ."

"ಆದರೆ ಭಿಕ್ಷುಗಳೇ, ನಾನು ಬೋಧಿಸುವ ಧಮ್ಮವು ಖಂಡಿಸುವಂತಹುದು ಆಗಿಲ್ಲ, ನಿಂದನೀಯವಲ್ಲ. ಮಲಿನವಾದುದಲ್ಲ, ಕಳಂಕ ತರುವಂತಹುದಲ್ಲ, ಪ್ರಾಜ್ಞರಿಂದ ನಿರಾಕರಿಸುವಂತಹುದಲ್ಲ ಮತ್ತು ಯಾವುದದು ಆ ಧಮ್ಮ ?"



"ದುಃಖ ಆರ್ಯಸತ್ಯ, ದುಃಖದ ಕಾರಣ ಆರ್ಯಸತ್ಯ, ದುಃಖ ನಿರೋಧ ಆರ್ಯಸತ್ಯ, ದುಃಖ ನಿರೋಧಕ್ಕೆ ಕೊಂಡೊಯ್ಯುವ ಮಾರ್ಗ ಆರ್ಯಸತ್ಯವಾಗಿದೆ."

## ಮಿಥ್ಯಾ ದೃಷ್ಟಿಗಳಿಗೆ ಬೋಧಿಸತ್ವರ ಖಂಡನೆ

ಮಿಥ್ಯಾದೃಷ್ಟಿಗಳನ್ನು ಕೇವಲ ಬುದ್ಧರು ಮಾತ್ರವಲ್ಲ, ತಮ್ಮ ಹಿಂದಿನ ಜನ್ಮಗಳಲ್ಲಿ ಬೋಧಿಸತ್ವರಾಗಿದ್ದಾಗ ಸಹಾ ಖಂಡಿಸಿದ್ದರು. ಆಗ ಪ್ರಚಲಿತವಾಗಿದ್ದ ಅಹೇತುವಾದಿ (ಕಾರಣವೇ ಇಲ್ಲ ಎನ್ನುವ ಮತ), ಇಸ್ಸರ ಕತೃವಾದಿ (ಎಲ್ಲದಕ್ಕೂ ದೇವರೇ ಕಾರಣ ಎನ್ನುವ ಮತ) ಪೂರ್ವಕೃತವಾದಿ (ಎಲ್ಲದಕ್ಕೂ ಹಿಂದಿನ ಜನ್ಮದ ಕರ್ಮಗಳೇ ಕಾರಣವೆನ್ನುವ ಮತ), ಉಚ್ಛೇದವಾದಿ (ಪರಲೋಕವಿಲ್ಲ, ಎಲ್ಲವೂ ಸತ್ತನಂತರ ನಾಶ ಎನ್ನುವ ಮತ) ಮತ್ತು ಕ್ಷತವಿಧವಾದಿಗಳಿದ್ದರು. ಅವರಿಗೆ ಬೋಧಿಸತ್ತ ಈ ಕೆಳಕಂಡಂತೆ ಖಂಡಿಸಿದ್ದರು. ಈ ಘಟನೆಯು ಮಹಾಬೋಧಿ ಜಾತಕದಲ್ಲಿ ಕಂಡುಬರುತ್ತದೆ.

**ಅಹೇತುವಾದದ ಖಂಡನೆ :** ಎಲ್ಲವೂ ಸ್ವಭಾವದಿಂದಲೋ, ಅನಿಚ್ಚೆಯಿಂದಲೋ, ಕಾರಣರಹಿತದಿಂದಲೋ, ಹೇತುವಿಲ್ಲದೆಯೇ ನಡೆಯುವುದಾದರೆ ಹತ್ಯೆಯು ಅಪರಾಧವಲ್ಲ ಎಂದಾಯಿತು, ಏಕೆಂದರೆ ಅದು ಆಕಸ್ಮಿಕ, ಇಲ್ಲಿ ಯಾರು ದೋಷಿಯಲ್ಲ."

**ಇಸ್ಸರ ಕತೃವಾದಿಯ ಖಂಡನೆ :** ಇಡೀ ಲೋಕದ ವ್ಯವಸ್ಥೆಯು ಸರ್ವಶಕ್ತ ದೇವರಿಂದಲೇ ಆಗಿದ್ದರೆ, ಆತನ ಇಚ್ಛೆಯಂತೆಯೇ ಸೌಭಾಗ್ಯ ಮತ್ತು ವಿಪತ್ತು ಬರುವುದಾದರೆ, ಒಳ್ಳೆಯದು, ಕೆಟ್ಟದ್ದು ಎಲ್ಲಕ್ಕೂ, ಪ್ರತಿಜೀವಿಯ ಸುಖ-ದುಃಖಕ್ಕೂ ಆತನೇ ಕಾರಣವೆನ್ನುವದಾಗಿದ್ದರೆ, ಮಾನವ ಕೇವಲ ನಿಮಿತ್ತ ಮಾತ್ರ, ಕೇವಲ ಆಜ್ಞಾ ಪರಿಪಾಲಕನಾಗಿದ್ದಾನೆ. ಆ ದೇವರೇ ಪಾಪದ ಕಲೆಯನ್ನು ಹೊಂದಿ ದೋಷಿಯಾಗುತ್ತಾನೆ."

**ಪೂರ್ವಕೃತವಾದಿಯ ಖಂಡನೆ:** "ಪೂರ್ವಜನ್ಮದ ಕರ್ಮದ ಕಾರಣದಿಂದಲೇ ಇಲ್ಲೂ ಸುಖ-ದುಃಖಗಳು ಉಂಟಾಗುತ್ತಿದ್ದರೆ, ಇಲ್ಲಿನ ಪಾಪಕರ್ಮವೂ ಸಹಾ, ಹಿಂದಿನ ಕರ್ಮಕ್ಕೆ ಋಣಮುಕ್ತವಾಗಲು ಕಾರಣವಾಗುತ್ತದೆ. ಹೀಗಿರುವಾಗ ಇಲ್ಲಿಯ ಪಾಪ ಯಾರನ್ನು ಯಾರಿಗೆ ಸ್ಪರ್ಶಿಸುತ್ತದೆ?"

**ಉಚ್ಛೇದವಾದಿಯ ಖಂಡನೆ :** "ನಾಲ್ಕು ಮಹಾಭೂತಗಳಿಂದ ಜೀವೋತ್ಪತ್ತಿ ಆಗುವುದು. ಇಲ್ಲಿ ಬದುಕಿರುವತನಕ ಜೀವನ, ಪರಲೋಕವಿಲ್ಲ. ಹಾಗಿರುವಾಗ ಪಾಪಫಲವಿಲ್ಲದಿರುವಾಗ ಪಾಪ ಮಾಡಿದರೂ ತಪ್ಪಿಲ್ಲದಿರುವಾಗ ಇಲ್ಲಿ ಪಾಪವು ಯಾರನ್ನು ಮುಟ್ಟುತ್ತದೆ."

**ಕ್ಷತವಿಧಿವಾದಿಯ ಖಂಡನೆ :** ಪರಲೋಕವಿಲ್ಲದಿರುವಾಗ ಬುದ್ಧಿವಂತನು ತನ್ನ ಸ್ವಾರ್ಥ ಸಾಧನೆಗೆ, ಪ್ರಯೋಜನವಿದ್ದಲ್ಲಿ ಯಾರಿಗೆ ಬೇಕಾದರೂ ಕೊಲ್ಲಬಹುದು ಎಂದು ಹೇಳುವ ಪಾಪ ಪ್ರಚೋದಕ ಸಿದ್ಧಾಂತಕ್ಕೆ ಧಿಕ್ಕಾರವಿರಲಿ" ಎಂದು ಖಂಡಿಸಿ ತಮ್ಮ ಸಿದ್ಧಾಂತ ಹೀಗೆ ಹೇಳುತ್ತಾರೆ.

**ಬೋಧಿಸತ್ವರ ಸಿದ್ಧಾಂತ :** "ಯಾವ ಮರದ ನೆರಳಿನಲ್ಲಿ ಕುಳಿತುಕೊಳ್ಳುತ್ತೇವೆಯೋ ಅಥವಾ ಮಲಗಿರುತ್ತೇವೆಯೋ ಆ ವೃಕ್ಷದ ಕೊಂಬೆಯನ್ನು ಸಹಾ ಮುರಿಯಬಾರದು. ಮಿತ್ರದ್ರೋಹಪಾತಕವಾದುದು."

**ದರ್ಶನಗಳ ತುಲನಾತ್ಮಕತೆ**

| | ಅಹೇತುವಾದ | ಅಕ್ರಿಯವಾದ | ನಾಸ್ತಿಕವಾದ | ಆಸ್ತಿಕ ವಾದ (ಇಸ್ಸರಹೇತು) | ಆತ್ಮವಾದ | ಪೂರ್ವಕೃತ ವಾದ | ಬೌದ್ಧ ವಾದ |
|---|---|---|---|---|---|---|---|
| ಪಾಪ ಪುಣ್ಯಕ್ಕೆ ಮತ್ತು ಸುಖ-ದುಃಖಗಳಿಗೆ ವಿವಿಧ ದೃಷ್ಟಿಕೋನಗಳು | ಪಾಪ ಪುಣ್ಯಕ್ಕೆ ಮತ್ತು ಸುಖ-ದುಃಖಗಳಿಗೆ ಕಾರಣವೇ ಇಲ್ಲ, ಆಕಸ್ಮಿಕ ಅಥವಾ ವಿಧಿಯಾಟ | ಪಾಪ ಪುಣ್ಯಗಳಿಗೆ ಫಲವಿಲ್ಲ, | ಪಾಪ ಪುಣ್ಯಗಳಿಗೆ ಫಲವಿಲ್ಲ, ಪರಲೋಕವೂ ಇಲ್ಲ, ಪುನರ್ಜನ್ಮವೂ ಇಲ್ಲ, ತಂದೆ-ತಾಯಿಯರ ಸೇವೆಯು ಲಾಭವಿಲ್ಲ, ಧ್ಯಾನವು ಭ್ರಮೆ, ಜ್ಞಾನಿಗಳು ಮತ್ತು ಸಂತರು ಇಲ್ಲ. | ಎಲ್ಲದಕ್ಕೂ ದೇವರೇ ಕಾರಣ | ಆತ್ಮವು ನಿತ್ಯ ಶುದ್ಧವಾದ್ದರಿಂದ ಪಾಪವೇ ಇಲ್ಲ. ಆತ್ಮವು ನಿತ್ಯ ಆನಂದವಾದ್ದರಿಂದ ದುಃಖವೇ ಇಲ್ಲ | ಎಲ್ಲದಕ್ಕೂ ಹಿಂದಿನ ಜನ್ಮವೇ ಕಾರಣ | ಪಾಪಕ್ಕೆ, ಲೋಭ, ದ್ವೇಷ ಮತ್ತು ಮೋಹವೇ ಕಾರಣ. ಪುಣ್ಯಕ್ಕೆ ಅಲೋಭ, ಅದ್ವೇಷ ಮತ್ತು ಅಮೋಹವೇ ಕಾರಣ. ಮುಕ್ತನಾಗದಿದ್ದರೆ ಪುನರ್ಜನ್ಮವೂ ಇದೆ. ಅಜ್ಞಾನ ಮತ್ತು ತನ್ಹಾವೇ ದುಃಖಕ್ಕೆ ಕಾರಣ. ಧ್ಯಾನವು ಶ್ರೇಷ್ಠ, ಜ್ಞಾನಿಗಳು ಮತ್ತು ಅರಹಂತರು ಇದ್ದಾರೆ. ಆರ್ಯ ಅಷ್ಟಾಂಗ ಮಾರ್ಗವೇ ದುಃಖವಿಮುಕ್ತಿ ಮಾರ್ಗ. |



## ಭೂರಿದತ್ತ ಜಾತಕದಲ್ಲೂ ಬೋಧಿಸತ್ವರ ಖಂಡನೆ

"ಯಾರಿಗೆ ಕಣ್ಣಿದೆಯೋ, ಆತನು ರೋಗಗ್ರಸ್ಥ ದೃಶ್ಯಗಳನ್ನು ಕಾಣುತ್ತಾನೆ. ಏತಕ್ಕಾಗಿ ಸೃಷ್ಟಿಕರ್ತನು ತನ್ನ ಜೀವಿಗಳನ್ನು ಸರಿಯಾಗಿ ಸ್ಥಾಪಿಸಲಿಲ್ಲ?

"ಏತಕ್ಕಾಗಿ ಆತನ ಮಿತಿಯೇ ಇಲ್ಲದ ವಿಶಾಲ ಶಕ್ತಿಯು ಕುಂಠಿತಗೊಂಡಿದೆ. ಏಕೆ ಆತನ ಕೈಯು ಹಾರೈಸಲು ಅಪರೂಪಕ್ಕೊಮ್ಮೆ ಮುಂದಾಗುವುದು?

"ಏತಕ್ಕಾಗಿ ಎಲ್ಲಾ ಜೀವಿಗಳು ನೋವುಗಳಿಗೆ ಬಲಿಯಾಗುತ್ತವೆ? ಏಕೆ ಆತನು ಎಲ್ಲರಿಗೂ ಸುಖವನ್ನು ನೀಡಬಾರದು?"

"ಏತಕ್ಕಾಗಿ ಮೋಸಗಾರರು, ಸುಳ್ಳುಗಾರರು ಮತ್ತು ಮೂರ್ಖರು ಉನ್ನತಿ ಪಡೆಯುತ್ತಾರೆ? ಏಕೆ ಮಿಥ್ಯವೇ ಜಯಗಳಿಸುತ್ತದೆ ಮತ್ತು ಸತ್ಯ ಹಾಗು ನ್ಯಾಯ ಸೋಲುತ್ತದೆ?"

"ನಾನು ನಿಮ್ಮ ಸೃಷ್ಟಿಕರ್ತ ದೇವರನ್ನು ಅನ್ಯಾಯಿಗಳಲ್ಲಿ ಒಬ್ಬರೆಂದು ತೀರ್ಮಾನಿಸುತ್ತೇನೆ. ಏಕೆಂದರೆ ಈ ಜಗತ್ತು ತಪ್ಪಾದ ರಕ್ಷಣೆಯಲ್ಲಿ ಇರುವಂತೆ ಸೃಷ್ಟಿಸಿದ್ದಾನೆ."

**ಬುದ್ಧರ ವಿಷಾಧ :** ದೇವದಹ ಸುತ್ತದಲ್ಲಿ ಭಗವಾನರು ಸಹಾ ದೇಹದಂಡನೆ ಮಾಡುತ್ತಿರುವ ಪಂಥಿಯರನ್ನು ಕುರಿತು ಈ ರೀತಿ ಹೇಳುತ್ತಾರೆ: "ಓ ಭಿಕ್ಷುಗಳೇ, ಜೀವಿಗಳು ಅನುಭವಿಸುತ್ತಿರುವ ಸುಖಕ್ಕೆ ಮತ್ತು ದುಃಖಕ್ಕೆ ಸೃಷ್ಟಿಕರ್ತನ ಸೃಷ್ಟಿಯ ಪರಿಣಾಮವೆಂದು ತಿಳಿಯಬಹುದಾದರೆ, ಆಗ ಖಂಡಿತವಾಗಿಯು ಈ ನಗ್ನ ಸಾಧುಗಳು ಪಾಪದಿಂದ ಕೂಡಿದ ದೇವರಿಂದಲೇ ಸೃಷ್ಟಿಯಾಗಿರಬೇಕು. ಏಕೆಂದರೆ ಅವರು ಅಂತಹ ಭಯಾನಕ ದುಃಖ ಅನುಭವಿಸುತ್ತಿದ್ದಾರೆ."

## ಅಂತಗಹಿಕಾ ಮಿಥ್ಯಾದೃಷ್ಟಿಗಳು

ಒಮ್ಮೆ ಪರಿವ್ರಾಜಕ ವಚ್ಚಗೊತ್ತನು ಆಗ ಪ್ರಚಲಿತವಾಗಿದ್ದ ದೃಷ್ಟಿಗಳ ಬಗೆಗಳನ್ನು ಭಗವಾನರಿಗೆ ತಿಳಿಸಿ 'ಇವುಗಳಲ್ಲಿ ಯಾವುದಾದರೂ ಭಗವಾನರು ಹೊಂದಿದ್ದಾರೆಯೆ?' ಎಂದು ಕೇಳಿದನು.

ಆಗ ಭಗವಾನರು ಅಂತಹ ದೃಷ್ಟಿಗಳು 'ಹೊಂದಿಲ್ಲ'ವೆಂದರು.

ಅವೆಂದರೆ:

1. ಲೋಕವು ಶಾಶ್ವತ ಇದು ಸತ್ಯ, ಮಿಕ್ಕೆಲ್ಲಾ ಮಿಥ್ಯಾ.
2. ಲೋಕವು ಅಶಾಶ್ವತ ಇದು ಸತ್ಯ, ಮಿಕ್ಕೆಲ್ಲಾ ಮಿಥ್ಯಾ.
3. ಲೋಕವು ಅಂತ್ಯವುಳ್ಳದ್ದು ಇದು ಸತ್ಯ, ಮಿಕ್ಕೆಲ್ಲಾ ಮಿಥ್ಯಾ.
4. ಲೋಕವು ಅನಂತವಾದದ್ದು, ಇದು ಸತ್ಯ, ಮಿಕ್ಕೆಲ್ಲಾ ಮಿಥ್ಯಾ.
5. ಜೀವ ಮತ್ತು ಶರೀರ ಒಂದೇ, ಇದು ಸತ್ಯ, ಮಿಕ್ಕೆಲ್ಲಾ ಮಿಥ್ಯಾ.
6. ಜೀವ ಮತ್ತು ಶರೀರ ಬೇರೆ ಬೇರೆ, ಇದು ಸತ್ಯ, ಮಿಕ್ಕೆಲ್ಲಾ ಮಿಥ್ಯಾ.
7. ತಥಾಗತರು ಸಾವಿನ ನಂತರ ಇರುತ್ತಾರೆ
8. ತಥಾಗತರು ಸಾವಿನ ನಂತರ ಇರುವುದಿಲ್ಲ.
9. ತಥಾಗತರು ಸಾವಿನ ನಂತರ ಇರುತ್ತಾರೆ ಮತ್ತು ಇಲ್ಲ.

10. ತಥಾಗತರು ಸಾವಿನ ನಂತರ ಇರುವುದಿಲ್ಲ ಮತ್ತು ಇಲ್ಲದೆಯೂ ಇಲ್ಲ.

ಆಗ ವಚ್ಚಗೊತ್ತ ಹೀಗೆ ಕೇಳಿದನು: "ಪೂಜ್ಯ ಗೋತಮರು ಈ ದೃಷ್ಟಿಗಳಲ್ಲಿ ಯಾವ ಅಪಾಯಗಳನ್ನು ಕಂಡವರಾಗಿ ಇವನ್ನು ತೊರೆದಿರುವರು?"

ಆಗ ಭಗವಾನರು ಅದಕ್ಕೆ ಹೀಗೆ ಉತ್ತರಿಸಿದರು:

"ವಚ್ಚಗೊತ್ತ, ಇವೆಲ್ಲವೂ ಕಲ್ಪನಾತ್ಮಕ ದೃಷ್ಟಿಕೋನಕ್ಕೆ ಹೋಗುತ್ತದೆ. ಸತ್ಯವಲ್ಲ, ಪೂರ್ಣ ಸತ್ಯವಲ್ಲ, ಅಂಟುವಿಕೆಗೆ ಹೋಗುತ್ತದೆ. ಇವೆಲ್ಲವೂ ಹಾದಿ ತಪ್ಪಿಸುವ ಕಾಡಿನಂತಹವು ಆಗಿದೆ, ತಿರುಚಿಸಲ್ಪಟ್ಟಿವೆ. ದೃಷ್ಟಿಗಳ ಬಂಧನಗಳಾಗಿವೆ, ದುಃಖವನ್ನು ತರುವಂತಹವು ಆಗಿವೆ, ವ್ಯಥೆಯನ್ನು ತರುತ್ತದೆ. ಕ್ಷೋಭೆಯನ್ನುಂಟು ಮಾಡುತ್ತವೆ. ಇವು ವಿಕರ್ಷಣೆಗೆ, ವಿರಾಗಕ್ಕೆ, ನಿರೋಧಕ್ಕೆ, ಉಪಶಮನಕ್ಕೆ, ಅಭಿಜ್ಞಾಗೆ, ಸಂಬೋಧಿಗೆ ಮತ್ತು ನಿಬ್ಬಾಣಕ್ಕೆ ಸ್ವಲ್ಪವೂ ಸಹಕಾರಿಯಾಗಿಲ್ಲ. ಈ ಎಲ್ಲಾ ಅಪಾಯಗಳನ್ನು ಕಂಡು ನಾನು ಈ ದೃಷ್ಟಿಗಳಿಂದ ಪೂರ್ಣವಾಗಿ ದೂರವಾಗಿದ್ದೇನೆ."

ಆಗ ಬುದ್ಧಿವಂತ ವಚ್ಚ ಅಸಾಧಾರಣ ಪ್ರಶ್ನೆ ಹಾಕುತ್ತಾನೆ: "ಪೂಜ್ಯ ಭಗವಾನರಿಗೆ ಯಾವುದಾದರೂ ದೃಷ್ಟಿಕೋನ (ಸಿದ್ಧಾಂತ/ಕಲ್ಪನಾತ್ಮಕ ಅಭಿಪ್ರಾಯ/ಸಾಕ್ಷಾತ್ಕಾರವಲ್ಲದ ಕೇವಲ ತಿಳುವಳಿಕೆ) ಇದೆಯೇ?"

ಆಗ ಭಗವಾನರು ಈ ರೀತಿ ಉತ್ತರಿಸುತ್ತಾರೆ: "ವಚ್ಚ, ದೃಷ್ಟಿಕೋನ ಇದು ತಥಾಗತರಿಗೆ ಸಂಬಂಧಪಡುವುದಿಲ್ಲ. ವಚ್ಚ, ತಥಾಗತರಿಗೆ ಸಾಕ್ಷಾತ್ಕಾರವಾಗಿರುವುದು ಏನೆಂದರೆ ದೇಹದ ಉದಯಿಸುವಿಕೆ ಮತ್ತು ಅದರ ನಾಶ. ವೇದನೆಗಳ ಉದಯಿಸುವಿಕೆ ಮತ್ತು ಅದರ ಅಳಿಯುವಿಕೆ. ಸನ್ನಾ (ಗ್ರಹಿಕೆ)ಗಳ ಉದಯಿಸುವಿಕೆ ಮತ್ತು ಅದರ ಅಳಿಯುವಿಕೆ ಮತ್ತು ಸಂಖಾರ ಮತ್ತು ವಿಜ್ಞಾನದ ಉದಯಿಸುವಿಕೆ ಮತ್ತು ಅದರ ಅಳಿಯುವಿಕೆ. ಓ ವಚ್ಚ, ಇವುಗಳ ಪ್ರತಿ ಹಂತವನ್ನು ಸ್ಪಷ್ಟವಾಗಿ ಅರಿತಿರುವುದರಿಂದಲೇ ತಥಾಗತರು ಎಲ್ಲಾ ಬಗೆಯ ದೃಷ್ಟಿಕೋನಗಳನ್ನು, ಅಹಂಕಾರಗಳನ್ನು, ಪ್ರವೃತ್ತಿಗಳನ್ನು ಕ್ಷಯಿಸಿ, ವಿರಾಗ, ನಿರೋಧ, ತ್ಯಾಗ, ವಿಮುಕ್ತಿಯನ್ನು ಹೊಂದಿದ್ದಾರೆ.

## ಸತ್ಪುರುಷನನ್ನು ಹೇಗೆ ಅರಿಯಬಹುದು? (ಚೂಲ ಪುಣ್ಣಮ ಸುತ್ತ):

ಹೀಗೆ ನಾನು ಕೇಳಿದ್ದೇನೆ – ಒಂದು ಸಮಯದಲ್ಲಿ ಭಗವಾನರು ಸಾವತ್ಥಿಯಲ್ಲಿ ಮಿಗಾರಮಾತೆಯ ಪೂರ್ವ ಆರಾಮ (ವಿಹಾರ)ದಲ್ಲಿ ವಿಹರಿಸುತ್ತಿದ್ದರು. ಅಂದು ಪೂರ್ಣಿಮೆಯಾದ್ದರಿಂದ ಉಪೋಸಥ ದಿನವಾಗಿತ್ತು. ಆಗ ಭಗವಾನರು ಹೊರಗೆ ಗಾಳಿಯಲ್ಲಿ ಕುಳಿತಿದ್ದರು. ಅವರ ಸುತ್ತಲು ಭಿಕ್ಷುಗಣವಿತ್ತು. ಭಗವಾನರು ಶಾಂತವಾಗಿದ್ದ ಭಿಕ್ಷು ಸಮೂಹಕ್ಕೆ ಹೀಗೆ ಕೇಳಿದರು:

"ಈಗ ಭಿಕ್ಷುಗಳೇ, ಅಸತ್ಪುರುಷನಿಗೆ ಅಸತ್ಪುರುಷನು ಅರಿಯಲ್ಪಡುವನೇ, ಹೇಗೆಂದರೆ 'ಈ ವ್ಯಕ್ತಿಯು ಅಸತ್ಪುರುಷನೇ?"

"ಇಲ್ಲ ಭಂತೆ."



"ಒಳ್ಳೆಯದು ಭಿಕ್ಷುಗಳೇ, ಅಸತ್ಪುರುಷನಿಗೆ 'ಈತನು ಅಸತ್ಪುರುಷ' ಎಂದು ತಿಳಿಯಲ್ಪಡುವುದಿಲ್ಲ. ಹಾಗೆಯೇ ಭಿಕ್ಷುಗಳೇ, ಅಸತ್ಪುರುಷನಿಗೆ ಸತ್ಪುರುಷನು ತಿಳಿಯಲ್ಪಡುವನೇ? ಹೇಗೆಂದರೆ 'ಈ ವ್ಯಕ್ತಿಯು ಸತ್ಪುರುಷನಿರಬಹುದೇ?"

"ಇಲ್ಲ ಭಂತೆ."

"ಒಳ್ಳೆಯದು ಭಿಕ್ಷುಗಳೇ, ಖಂಡಿತವಾಗಿಯು ಅಸತ್ಪುರುಷನಿಗೆ ಈ ವ್ಯಕ್ತಿಯು ಸತ್ಪುರುಷ' ಎಂದು ತಿಳಿಯಲಾಗುವುದಿಲ್ಲ. ಆತನಿಗೆ ಅದು ಅಸಾಧ್ಯವಾಗಿದೆ. ಓ ಭಿಕ್ಷುಗಳೇ, ಅಸತ್ಪುರುಷನು ಅಕುಶಲ ಚಿತ್ತಸ್ಥಿತಿಗಳನ್ನು ಹೊಂದಿರುತ್ತಾನೆ. ಆತನು ಕೆಟ್ಟ ಸ್ನೇಹಿತರನ್ನು ಹೊಂದಿರುತ್ತಾನೆ. ಪಾಪಿಗಳಂತೆ ಯೋಚಿಸುತ್ತಾನೆ. ಆತನು ಪಾಪಿಗಳಂತೆಯೇ ಸಲಹೆ ಬುದ್ಧಿವಾದ ನೀಡುತ್ತಾನೆ, ಪಾಪಿಗಳಂತೆ ಮಾತನಾಡುತ್ತಾನೆ, ಪಾಪಿಗಳಂತೆ ಕಾರ್ಯವನ್ನು ಮಾಡುತ್ತಾನೆ. ಅಷ್ಟೇ ಅಲ್ಲ, ಆತನು ಅಸತ್ಪುರುಷರಂತೆಯೇ ದೃಷ್ಟಿಕೋನಗಳನ್ನು ಹೊಂದಿರುತ್ತಾನೆ ಮತ್ತು ಆತನು ಅಸತ್ಪುರುಷರಂತೆಯೇ ದಾನವನ್ನು ಮಾಡುತ್ತಾನೆ."

"ಮತ್ತು ಭಿಕ್ಷುಗಳೇ, ಆತನು ಯಾವ ಅಕುಶಲ ಚಿತ್ತಸ್ಥಿತಿಗಳಿಂದ (ಅಸ್ಸಧಮ್ಮ ಸಮಾನಾಗತೋ) ಕೂಡಿರುತ್ತಾನೆ?" ಭಿಕ್ಷುಗಳೇ, ಆತನು ಶ್ರದ್ಧಾರಹಿತನಾಗಿರುತ್ತಾನೆ. ಪಾಪಲಜ್ಜೆಯಿಂದ ಕೂಡಿರುವುದಿಲ್ಲ, ಪಾಪಭಯದಿಂದಲೂ ಕೂಡಿರುವುದಿಲ್ಲ. ಆತನು ಅಲ್ಪಶ್ರುತ (ಕಡಿಮೆ ಜ್ಞಾನವನ್ನು ಕೇಳಿರುತ್ತಾನೆ) ನಾಗಿರುತ್ತಾನೆ. ಆತನು ಸೋಮಾರಿ ಆಗಿರುತ್ತಾನೆ. ಸ್ಮೃತಿಹೀನ (ಅಜಾಗರೂಕನು)ನು ಆಗಿರುತ್ತಾನೆ. ಕೆಟ್ಟ ಪ್ರಜ್ಞೆಯುಳ್ಳವ ನಾಗಿರುತ್ತಾನೆ (ಅಲ್ಪಪ್ರಜ್ಞನು). ಭಿಕ್ಷುಗಳೇ, ಈ ರೀತಿಯಲ್ಲಿ ಅಸತ್ಪುರುಷನ ಚಿತ್ತಸ್ಥಿತಿಗಳು ಇರುತ್ತದೆ."

"ಮತ್ತೆ ಭಿಕ್ಷುಗಳೇ, ಆತನು ಯಾರೊಂದಿಗೆ ಸ್ನೇಹದಿಂದಿರುತ್ತಾನೆ?"

"ಭಿಕ್ಷುಗಳೇ, ಯಾರಲ್ಲಿ ಶ್ರದ್ಧೆಯಿಲ್ಲವೋ, ಪಾಪಲಜ್ಜೆಯಿಲ್ಲವೊ, ಪಾಪಭೀತಿಯಿಲ್ಲವೊ, ಯಾರು ಅಲ್ಪಶ್ರುತರೋ, ಯಾರು ಸೋಮಾರಿಗಳೋ, ಅಜಾಗರೂಕರೋ, ಅಲ್ಪ ಪ್ರಜ್ಞರೋ ಅವರೊಂದಿಗೆಯೇ ಆತನು ಬೆರೆಯುತ್ತಾನೆ. ಅವರೊಂದಿಗೆ ಆತನು ಸ್ನೇಹದಿಂದಿರುತ್ತಾನೆ."

"ಮತ್ತೆ ಭಿಕ್ಷುಗಳೇ, ಆತನು ಅಸತ್ಪುರುಷರ ರೀತಿ ಹೇಗೆ ಯೋಚಿಸುತ್ತಾನೆ?" ಆತನು ತನಗೆ ಅಹಿತವಾಗುವಂತೆ, ಬಾಧೆಯಾಗುವಂತೆ ಚಿಂತನೆ ಮಾಡುತ್ತಾನೆ. ಹಾಗು ಆತನು ಪರರಿಗೆ ಅಹಿತವಾಗುವಂತೆ ಬಾಧೆಯಾಗುವಂತೆ ಚಿಂತನೆ ಮಾಡುತ್ತಾನೆ. ಆತನು ಉಭಯರಿಗೂ ಬಾಧೆಯಾಗುವಂತೆ ಯೋಚಿಸುತ್ತಾನೆ."

"ಮತ್ತೆ ಭಿಕ್ಷುಗಳೇ, ಆತನ ಅಸತ್ಪುರುಷರ ರೀತಿ ಹೇಗೆ ಬುದ್ಧಿವಾದ ನೀಡುತ್ತಾನೆ?" ಆತನು ತನಗೆ ಅಹಿತವಾಗುವಂತೆ, ಬಾಧೆಯಾಗುವಂತೆ ಬುದ್ಧಿವಾದ ಹೇಳಿಕೊಳ್ಳುತ್ತಾನೆ. ಆತನು ಪರರಿಗೆ ಅಹಿತವಾಗುವಂತೆ, ಬಾಧೆಯಾಗುವಂತೆ ಬುದ್ಧಿವಾದ ಹೇಳುತ್ತಾನೆ."

"ಮತ್ತೆ ಭಿಕ್ಷುಗಳೇ, ಆತನು ಅಸತ್ಪುರುಷರ ರೀತಿಯಲ್ಲಿ ಹೇಗೆ ಮಾತನಾಡುತ್ತಾನೆ?"

"ಭಿಕ್ಷುಗಳೇ, ಆತನು ಸುಳ್ಳು ಹೇಳುತ್ತಾನೆ, ಚಾಡಿ ಹೇಳುತ್ತಾನೆ, ನಿಂದಾಯುತ ಕಟುಭಾಷೆ ಮಾತನಾಡುತ್ತಾನೆ, ವ್ಯರ್ಥವಾದ ಹಾನಿಯುತ ಹರಟೆ ಮಾಡುತ್ತಾನೆ."

"ಮತ್ತೆ ಭಿಕ್ಷುಗಳೇ, ಆತನು ಅಸತ್ಪುರುಷರ ರೀತಿಯಲ್ಲಿ ಹೇಗೆ ಕರ್ಮ ಮಾಡುತ್ತಾನೆ?"

"ಇಲ್ಲಿ ಭಿಕ್ಷುಗಳೇ, ಆತನು ಜೀವಹತ್ಯೆಗಳನ್ನು ಮಾಡುತ್ತಾನೆ, ಕಳ್ಳತನ ಮಾಡುತ್ತಾನೆ, ವ್ಯಭಿಚಾರದಲ್ಲಿ ತೊಡಗುತ್ತಾನೆ. ಹೀಗೆ ಭಿಕ್ಷುಗಳೇ, ಆತನು ಅಸತ್ಪುರುಷರ ಕರ್ಮ ಮಾಡುತ್ತಾನೆ."

"ಮತ್ತೆ ಭಿಕ್ಷುಗಳೇ, ಆತನು ಅಸತ್ಪುರುಷ ರೀತಿ ಹೇಗೆ ದೃಷ್ಟಿಗಳನ್ನು ಹೊಂದಿರುತ್ತಾನೆ?"

"ಇಲ್ಲಿ ಭಿಕ್ಷುಗಳೇ, ಆತನು ಹೀಗೆ ಹಲವು ದೃಷ್ಟಿಗಳನ್ನು ಹೊಂದಿರುತ್ತಾನೆ. ಅವೆಂದರೆ: (1) ದಾನಕ್ಕೆ ಫಲವಿಲ್ಲ, ಅರ್ಪಣೆಗೆ ಫಲವಿಲ್ಲ, ತ್ಯಾಗ ಸತ್ಕಾರಗಳಿಗೆ ಫಲವಿಲ್ಲ. (2) ಸುಕಾರ್ಯಗಳಿಗೆ ಆಗಲಿ ಅಥವಾ ದುಷ್ಕಾರ್ಯಗಳಿಗಾಗಲಿ ಅಂತಹ ಕರ್ಮಗಳಿಗೆ ಫಲವಿಲ್ಲ (3) ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ. (4) ತಾಯ್ತಂದೆಗಳ ಸಲಹುವಿಕೆಯಿಂದ ಯಾವ ಲಾಭವೂ ಇಲ್ಲ. (5) ತಾಯ್ತಂದೆಗಳಿಲ್ಲದೆಯೇ ತಮಗೆ ತಾವೇ ಹುಟ್ಟುವ (ಓಪಪಾತಿಕ) ಜೀವಿಗಳಿಲ್ಲ. (6) ಯೋಗ್ಯವಾಗಿ ಜೀವಿಸಿ, ಯೋಗ್ಯವಾಗಿ ಸಾಕ್ಷಾತ್ಕರಿಸಿ, ಅಭಿಜ್ಞಾ ಸಾಕ್ಷಾತ್ಕರಿಸಿ (ಅತೀಂದ್ರಿಯ ಬಲಗಳನ್ನು ಪಡೆದು) ಈ ಲೋಕ ಮತ್ತು ಪರಲೋಕವಿದೆ ಎಂದು ಹೇಳುವ ಸಮಣ ಬ್ರಾಹ್ಮಣರು ಇಲ್ಲ, ಅಂತಹವರು ಇಲ್ಲವೇ ಇಲ್ಲ. ಹೀಗೆ ಭಿಕ್ಷುಗಳೇ, ಅಸತ್ಪುರುಷನು ದೃಷ್ಟಿಕೋನಗಳನ್ನು ಹೊಂದಿರುತ್ತಾನೆ."

"ಮತ್ತೆ ಭಿಕ್ಷುಗಳೇ, ಅಸತ್ಪುರುಷನು ಹೇಗೆ ದಾನವನ್ನು ಮಾಡುತ್ತಾನೆ?"

"ಭಿಕ್ಷುಗಳೇ, ಅಸತ್ಪುರುಷನು ಗೌರವ ಭಕ್ತಿ ಯಾವುದೂ ಇಲ್ಲದೆ ದಾನ ಮಾಡುತ್ತಾನೆ. ಆತನು ತನ್ನ ಕೈಯಿಂದ ದಾನ ಮಾಡುವುದಿಲ್ಲ, ಆತನು ಬಿಸಾಡುವಂತಹದ್ದನ್ನು ದಾನ ಮಾಡುತ್ತಾನೆ. ಆತನು ಅಗತ್ಯವಿಲ್ಲದ್ದನ್ನು, ಅಪೇಕ್ಷಿಸಪಡದಿದ್ದುದನ್ನು ದಾನ ಮಾಡುತ್ತಾನೆ. ಆತನು ಭವಿಷ್ಯವನ್ನು ಗಣನೆಗೆ ತೆಗೆದುಕೊಳ್ಳದೆ ದಾನ ಮಾಡುತ್ತಾನೆ. ಹೀಗೆ ಭಿಕ್ಷುಗಳೇ, ಅಸತ್ಪುರುಷನು ದಾನ ಮಾಡುತ್ತಾನೆ."

"ಭಿಕ್ಷುಗಳೇ, ಯಾವ ಅಸತ್ಪುರುಷನು ಪಾಪಚಿತ್ತ ಸ್ಥಿತಿಗಳನ್ನು, ಪಾಪಿ ಮಿತ್ರರನ್ನು, ಪಾಪ ಯೋಚನೆಗಳನ್ನು, ಪಾಪ ಸಲಹೆಗಳನ್ನು, ಪಾಪಯುತ ಮಾತುಗಳನ್ನು, ಪಾಪಯುತ ಕರ್ಮಗಳನ್ನು ಮತ್ತು ಪಾಪಯುತ ದೃಷ್ಟಿಕೋನಗಳನ್ನು ಹೊಂದಿರುತ್ತಾನೋ, ಆತನು ಮರಣದ ನಂತರ ಅಸತ್ಪುರುಷರೆ ಇರುವಂತಹ ಗತಿಯಲ್ಲಿ ಹುಟ್ಟುತ್ತಾನೆ. ಯಾವುದು ಆ ಗತಿ? ನಿರಯ ಇಲ್ಲವೆ ತಿರಚ್ಚನಯೋನಿ (ಪ್ರಾಣಿಗಳ ಲೋಕ)ಯಲ್ಲಿ ಜನ್ಮಿಸುತ್ತಾನೆ."

"ಈಗ ಭಿಕ್ಷುಗಳೇ, ಸತ್ಪುರುಷನಿಗೆ 'ಇಂಥಹ ವ್ಯಕ್ತಿಯು ಸತ್ಪುರುಷನು ಎಂದು ಗೊತ್ತಾಗುತ್ತದೆಯೇ?"

"ಹೌದು ಭಂತೆ."

"ಒಳ್ಳೆಯದು ಭಿಕ್ಷುಗಳೇ, ಕೆಲವು ಸನ್ನಿವೇಶಗಳು ಬರುತ್ತವೆ. ಆಗ 'ಈತನು ಸತ್ಪುರುಷ' ಎಂದು ಸತ್ಪುರುಷನಿಗೆ ಗೊತ್ತಾಗುವುದು. ಆದರೆ ಭಿಕ್ಷುಗಳೇ, ಸತ್ಪುರುಷನು ಅಸತ್ಪುರುಷನಿಗೆ ನೋಡಿದಾಗ 'ಇವನು ಅಸತ್ಪುರುಷ' ಎಂದು ಗೊತ್ತಾಗುವುದೇ?"

"ಹೌದು ಭಂತೆ ಗೊತ್ತಾಗುವುದು."

"ಒಳ್ಳೆಯದು ಭಿಕ್ಷುಗಳೇ, ಸನ್ನಿವೇಶಗಳು ಬಂದಾಗ ಸತ್ಪುರುಷನಿಗೆ 'ಇವನು ಸತ್ಪುರುಷ'



ಎಂದು ಗೊತ್ತಾಗುತ್ತದೆ. ಭಿಕ್ಷುಗಳೇ, ಸತ್ಪುರುಷನು ಕುಶಲ ಚಿತ್ತ ಸ್ಥಿತಿಗಳನ್ನು ಹೊಂದಿರುತ್ತಾನೆ. ಸತ್ಪುರುಷರ ಜೊತೆಯಲ್ಲಿ ರಮಿಸುತ್ತಾನೆ, ಸತ್ಪುರುಷರ ರೀತಿಯಲ್ಲಿ ಚಿಂತನೆ ಮಾಡುತ್ತಾನೆ. ಸತ್ಪುರುಷ ರೀತಿ ಬೋಧನೆ (ಬುದ್ಧಿವಾದ) ನೀಡುತ್ತಾನೆ. ಸತ್ಪುರುಷರ ರೀತಿ ಮಾತನಾಡುತ್ತಾನೆ. ಸತ್ಪುರುಷರ ರೀತಿ ಕರ್ಮ ಮಾಡುತ್ತಾನೆ, ಸತ್ಪುರುಷರ ರೀತಿಯಲ್ಲಿ ದೃಷ್ಟಿಕೋನಗಳನ್ನು ಹೊಂದಿರುತ್ತಾನೆ. ಸತ್ಪುರುಷ ರೀತಿಯಲ್ಲಿ ದಾನ ಮಾಡುತ್ತಾನೆ ಮತ್ತು ಭಿಕ್ಷುಗಳೇ, ಹೇಗೆ ಸತ್ಪುರುಷನು ಕುಶಲ ಚಿತ್ತಸ್ಥಿತಿಗಳನ್ನು ಹೊಂದಿರುತ್ತಾನೆ? ಇಲ್ಲಿ ಭಿಕ್ಷುಗಳೇ, ಸತ್ಪುರುಷನು ಶ್ರದ್ಧೆಯನ್ನು ಹೊಂದಿರುತ್ತಾನೆ, ಸತ್ಪುರುಷನು ಪಾಪಲಜ್ಜೆ ಹಾಗು ಪಾಪ ಭಯವನ್ನು ಹೊಂದಿರುತ್ತಾನೆ. ಸತ್ಪುರುಷನು ಬಹಳಷ್ಟು ಜ್ಞಾನವನ್ನು ಕೇಳಿರುತ್ತಾನೆ. ಸತ್ಪುರುಷನು ಪ್ರಯತ್ನಶಾಲಿಯಾಗಿರುತ್ತಾನೆ, ಆತನಲ್ಲಿ ಸ್ಮೃತಿಯು ಜಾಗರೂಕತೆಯು ಸ್ಥಾಪಿತವಾಗಿರುತ್ತದೆ. ಸತ್ಪುರುಷನು ಪ್ರಜ್ಞಾವಂತನಾಗಿರುತ್ತಾನೆ. ಈ ರೀತಿಯಾಗಿ ಭಿಕ್ಷುಗಳೇ, ಸತ್ಪುರುಷನು ಕುಶಲ ಸ್ಥಿತಿಗಳನ್ನು ಹೊಂದಿರುತ್ತಾನೆ."

"ಮತ್ತು ಭಿಕ್ಷುಗಳೇ, ಹೇಗೆ ಸತ್ಪುರುಷನು ಸತ್ಪುರುಷರೊಡನೆ ಜೊತೆಯಲ್ಲಿರುತ್ತಾನೆ?"

"ಭಿಕ್ಷುಗಳೇ, ಯಾರಲ್ಲಿ ಶ್ರದ್ಧೆಯಿರುವುದೋ, ಪಾಪಲಜ್ಜೆ, ಪಾಪಭೀತಿಯಿರುವದೋ, ಯಾರು ಬಹುಶೃತರೋ, ಪ್ರಯತ್ನಶಾಲಿಗಳೋ, ಜಾಗೃತರೋ ಮತ್ತು ಪ್ರಜ್ಞಾವಂತರೋ ಅಂತಹವರೊಡನೆ ಸತ್ಪುರುಷನು ಸ್ನೇಹ ಬೆಳೆಸಿ ಅವರೊಂದಿಗಿರುತ್ತಾನೆ."

"ಮತ್ತೆ ಭಿಕ್ಷುಗಳೇ, ಸತ್ಪುರುಷನು ಹೇಗೆ ಸತ್ಪುರುಷರಂತೆ ಚಿಂತನೆ ಮಾಡುತ್ತಾನೆ, ಇಲ್ಲಿ ಭಿಕ್ಷುಗಳೇ, ಸತ್ಪುರುಷನು ತನಗೆ ಬಾಧೆಯನ್ನು ನೀಡುವುದಿಲ್ಲ, ಹಾಗೆಯೇ ಪರರಿಗೂ ಬಾಧೆಯನ್ನು ನೀಡುವುದಿಲ್ಲ. ತನಗೆ ಮತ್ತು ಪರರಿಗೂ ಬಾಧೆ ನೀಡುವುದಿಲ್ಲ. ಹೀಗೆ ಭಿಕ್ಷುಗಳೇ, ಆತನು ಸತ್ಪುರುಷರಂತೆ ಚಿಂತಿಸುತ್ತಾನೆ."

"ಮತ್ತೆ ಭಿಕ್ಷುಗಳೇ, ಹೇಗೆ ಆತನು ಸತ್ಪುರುಷರಂತೆ ಬುದ್ಧಿವಾದ ನೀಡುವನು? ಇಲ್ಲಿ ಭಿಕ್ಷುಗಳೇ, ಸತ್ಪುರುಷನು ತನಗೆ ಹಾನಿಯಾಗುವಂತೆ ಅಥವಾ ಪರರಿಗೆ ಹಾನಿಯಾಗುವಂತೆ ಆಗಲಿ ಅಥವಾ ಈರ್ವರಿಗೂ ಹಾನಿಯಾಗುವಂತೆ ಬುದ್ಧಿವಾದ ನೀಡುವುದಿಲ್ಲ. ಹೀಗೆ ಭಿಕ್ಷುಗಳೇ, ಆತನು ಸತ್ಪುರುಷರಂತೆ ಬುದ್ಧಿವಾದ ನೀಡುತ್ತಾನೆ."

"ಮತ್ತೆ ಭಿಕ್ಷುಗಳೇ, ಹೇಗೆ ಆತನು ಸತ್ಪುರುಷರಂತೆ ಮಾತನಾಡುತ್ತಾನೆ? ಇಲ್ಲಿ ಭಿಕ್ಷುಗಳೇ, ಆತನು ಸುಳ್ಳಿನಿಂದ ದೂರವಾಗುತ್ತಾನೆ, ಚಾಡಿಯಿಂದ, ಕಟುವಾಕ್ಯದಿಂದ, ವ್ಯರ್ಥ ಹರಟೆಯಿಂದ ದೂರವಾಗುತ್ತಾನೆ. ಹೀಗೆ ಭಿಕ್ಷುಗಳೇ, ಸತ್ಪುರುಷನು ಮಾತನಾಡುತ್ತಾನೆ."

"ಮತ್ತೆ ಭಿಕ್ಷುಗಳೇ, ಹೇಗೆ ಆತನು ಸತ್ಪುರುಷರಂತೆ ಕರ್ಮ ಮಾಡುತ್ತಾನೆ? ಇಲ್ಲಿ ಭಿಕ್ಷುಗಳೇ, ಆತನು ಎಲ್ಲಾ ಜೀವಿಗಳ ಜೀವಹತ್ಯೆಯಿಂದ ದೂರನಾಗಿರುತ್ತಾನೆ, ಕಳ್ಳತನದಿಂದ, ವ್ಯಭಿಚಾರದಿಂದ ದೂರವಾಗುತ್ತಾನೆ. ಹೀಗೆ ಭಿಕ್ಷುಗಳೇ, ಸತ್ಪುರುಷನು ಕರ್ಮ ಮಾಡುತ್ತಾನೆ."

"ಮತ್ತೆ ಭಿಕ್ಷುಗಳೇ, ಹೇಗೆ ಆತನು ಸತ್ಪುರುಷರಂತೆ ದೃಷ್ಟಿಕೋನಗಳನ್ನು ಹೊಂದಿರುತ್ತಾನೆ? ಭಿಕ್ಷುಗಳೇ, ಸತ್ಪುರುಷನು ಈ ಕೆಳಕಂಡಂತೆ ಸಮ್ಮಾ ದೃಷ್ಟಿಕೋನಗಳನ್ನು ಹೊಂದಿರುತ್ತಾನೆ: "ದಾನಕ್ಕೆ ಫಲವಿದೆ, ಅರ್ಪಣೆಗೆ ಫಲವಿದೆ, ತ್ಯಾಗ ಸತ್ಕಾರಗಳಿಗೆ

ಫಲವಿದೆ, ಕುಶಲ ಕರ್ಮಗಳಿಗೆ ಹಾಗು ಪಾಪ ಕರ್ಮಗಳಿಗೆ ಫಲವಿದೆ. ಹೀಗಾಗಿ ಈ ಲೋಕವು ಇದು ಹಾಗೆಯೆ ಪರಲೋಕವೂ ಇದೆ. ತಾಯ್ತಂದೆಯರಿಗೆ ಸೇವೆ ಮಾಡುವುದರಿಂದಾಗಿ ಲಾಭವಿದೆ, ತಾಯಿ-ತಂದೆಯರಿಲ್ಲದೆಯೇ ತಾವಾಗಿಯೇ ಹುಟ್ಟುವಂತಹ ಓಪಪಾತಿಕ ಜೀವಿಗಳೂ ಇದ್ದಾರೆ. ಯೋಗ್ಯವಾಗಿ, ಸರಿಯಾಗಿ ಜೀವಿಸುವ ಸಮಣ ಬ್ರಾಹ್ಮಣರೂ ಇದ್ದಾರೆ. ತಮ್ಮ ಅಭಿಜ್ಞ ಬಲದಿಂದಾಗಿ ಈ ಲೋಕದ ಬಗ್ಗೆ, ಪರಲೋಕದ ಬಗ್ಗೆ ಹೇಳುವಂತಹ ಮಹಾನುಭಾವರು ಲೋಕದಲ್ಲಿರುವರು. ಹೀಗೆ ಭಿಕ್ಷುಗಳೇ, ಸತ್ಪುರುಷರು ಸಮ್ಮಾದೃಷ್ಟಿಗಳನ್ನು ಹೊಂದಿತ್ತಾರೆ."

"ಮತ್ತೆ ಭಿಕ್ಷುಗಳೇ, ಹೇಗೆ ಸತ್ಪುರುಷರು ದಾನವನ್ನು ಮಾಡುತ್ತಾರೆ?" ಇಲ್ಲಿ ಭಿಕ್ಷುಗಳೇ, ಸತ್ಪುರುಷರು ಗೌರವಾರ್ಪಣೆಯಿಂದ ದಾನ ಮಾಡುತ್ತಾರೆ. ತಮ್ಮ ಕೈಯಿಂದಲೇ ದಾನವನ್ನು ಮಾಡುತ್ತಾರೆ. ಪ್ರಜ್ಞಾಯುತವಾಗಿ ಶ್ರೇಷ್ಠವಾದುದನ್ನು ದಾನ ಮಾಡುತ್ತಾರೆ. ಪರಿಶುದ್ಧವಾದುದನ್ನೇ ದಾನ ಮಾಡುತ್ತಾರೆ. ಭವಿಷ್ಯವನ್ನು ಗಣನೆಗೆ ತೆಗೆದುಕೊಂಡು ದಾನ ಮಾಡುತ್ತಾರೆ. ಹೀಗೆ ಭಿಕ್ಷುಗಳೇ, ಸತ್ಪುರುಷರು ದಾನ ಮಾಡುತ್ತಾರೆ."

"ಭಿಕ್ಷುಗಳೇ, ಹೀಗೆ ಸತ್ಪುರುಷನು ಕುಶಲಚಿತ್ತ ಸ್ಥಿತಿಗಳನ್ನು ಹೊಂದಿರುತ್ತಾನೆ, ಸತ್ಪುರುಷರ ಜೊತೆಯಲ್ಲಿರುತ್ತಾನೆ, ಸತ್ಪುರುಷರಂತೆ ಚಿಂತಿಸುತ್ತಾನೆ, ಸತ್ಪುರುಷರಂತೆ ಬುದ್ಧಿವಾದನೀಡುತ್ತಾನೆ, ಸತ್ಪುರುಷರಂತೆಯೇ ಮಾತನಾಡುತ್ತಾನೆ, ಸತ್ಪುರುಷರಂತೆಯೇ ಕರ್ಮ ಮಾಡುತ್ತಾನೆ, ಸತ್ಪರುಷರಂತೆಯೇ ದೃಷ್ಟಿಕೋನಗಳನ್ನು ಹೊಂದಿರುತ್ತಾನೆ. ಸತ್ಪುರುಷರಂತೆ ದಾನವನ್ನು ಮಾಡುತ್ತಾನೆ. ಇಂತಹ ಸತ್ಪುರುಷನು ಮರಣದ ನಂತರವೂ ಸತ್ಪುರುಷರು ಇರುವಲ್ಲಿಯೇ ಜನ್ಮ ತಾಳುವನು ಅಂತಹ ಸ್ಥಿತಿ ಯಾವುದು? ಅದೇ ಮಹತ್ತರವಾದ ಸುಗತಿ ಅಥವಾ ಮಾನವರಲ್ಲಿ ಶ್ರೇಷ್ಠ ಸ್ಥಿತಿಯನ್ನು ಹೊಂದುತ್ತಾನೆ."

ಹೀಗೆ ಭಗವಾನರು ಹೇಳಿದಾಗ, ಭಿಕ್ಷುಗಳು ಆನಂದದಿಂದ ಅನುಮೋದನೆ ಮಾಡಿದರು.

## ವ್ಯಕ್ತಿಯನ್ನು ಅರಿಯುವುದು ಹೇಗೆ?

"ಭಿಕ್ಷುಗಳೇ, ಈ ನಾಲ್ಕು ಸ್ಥಿತಿಗಳಿಂದಾಗಿ ಪರರ ನಾಲ್ಕನ್ನು ಅರಿಯಬಹುದು?"

"ಭಿಕ್ಷುಗಳೇ, ಒಬ್ಬನು ಜೊತೆಯಲ್ಲಿ ಇದ್ದಾಗ, ಆತನ ಶೀಲವನ್ನು ಅರಿಯಬಹುದು. ಆಗಾಗ್ಗೆ ಭೇಟಿ ಮಾಡುವುದರಿಂದಲ್ಲ, ದೀರ್ಘಕಾಲ ಜೊತೆಯಲ್ಲಿ ಇದ್ದಾಗ, ಸಮೀಪದಿಂದ ಗಮನಹರಿಸುವುದರಿಂದ ಪ್ರಾಜ್ಞರು ಆತನ ಶೀಲವನ್ನು ಅರಿಯಬಹುದು, ಇದು ಗಮನಹರಿಸದಿದ್ದಾಗ, ಅಥವಾ ದುರ್ಬಲ ಪ್ರಾಜ್ಞರಿಗೆ ಸಾಧ್ಯವಾಗುವುದಿಲ್ಲ."

ಹಾಗೆಯೇ ದೀರ್ಘಕಾಲ ಜೀವಿಸಿದಾಗ ಆತನ ಪಾರದರ್ಶಕತೆ, ನಿಷ್ಠೆ ಅರ್ಥ ಮಾಡಿಕೊಳ್ಳಬಹುದು...

ಹಾಗೆಯೇ ವಿಷಮ ಪರಿಸ್ಥಿತಿಗಳು ಇದ್ದಾಗ ಆತನ ಧೈರ್ಯವನ್ನು (ಸಮಚಿತ್ತತೆಯನ್ನು) ಅರಿಯಬಹುದು... ಹಾಗೆಯೇ ಆತನ ಜೊತೆ ಸಂಭಾಷಣೆ ಮಾಡಿದಾಗ, ಆತನ ಪ್ರಜ್ಞಾಶೀಲತೆ (ಬುದ್ಧಿವಂತಿಕೆ) ಅರಿಯಬಹುದು. ಇವೆಲ್ಲವೂ ಒಂದೇಬಾರಿಗೆ ತಿಳಿಯುವುದಿಲ್ಲ, ದೀರ್ಘಕಾಲ, ಸಾಮೀಪ್ಯದಿಂದ ಪ್ರಜ್ಞಾವಂತನು ಗಮನಹರಿಸಿದಾಗ



ಅರಿವಾಗುತ್ತದೆ ಹೊರತು, ದುರ್ಬಲ ಪ್ರಾಜ್ಞರಿಗೆ ಮತ್ತು ಗಮನಹರಿಸದೆ ಅರಿಯಲಾಗುವುದಿಲ್ಲ."

## ಅತಿರೇಕದ ದೃಷ್ಟಿಕೋನಗಳು:

ಒಮ್ಮೆ ಭಗವಾನರು ಶ್ರಾವಸ್ತಿಯಲ್ಲಿರುವಾಗ ಬ್ರಾಹ್ಮಣನೊಬ್ಬನು ಭಗವಾನರಲ್ಲಿಗೆ ಬಂದು ವಂದಿಸಿ, ಕುಶಲಗಳನ್ನು ವಿನಿಮಯ ಮಾಡಿಕೊಂಡ ನಂತರ ಒಂದೆಡೆ ಕುಳಿತು ಈ ರೀತಿ ಪ್ರಶ್ನಿಸುತ್ತಾನೆ:

"ಭಗವಾನ್ ಕರ್ಮ ಮಾಡುವವನೇ ಅದರ ಫಲವನ್ನು ಅನುಭವಿಸುತ್ತಾನೆಯೇ?"

"ಓ ಬ್ರಾಹ್ಮಣ, ಇದು ಒಂದು ಅತಿರೇಕವಾಗಿದೆ."

"ಹಾಗಾದರೆ ಭಗವಾನ್ ಕರ್ಮ ಮಾಡುವವನೇ ಬೇರೆ ಮತ್ತು ಅದರ ಫಲವನ್ನು ಅನುಭವಿಸುವವನು ಬೇರೆಯೇ?"

"ಓ ಬ್ರಾಹ್ಮಣ, ಇದು ಒಂದು ಅತಿರೇಕವಾಗಿದೆ."

" ಓ ಬ್ರಾಹ್ಮಣ, ತಥಾಗತರು ಅತಿರೇಕಗಳನ್ನು ಮೀರಿದ್ದಾರೆ, ಅತಿರೇಕಗಳು ಮೀರಿದ ಸತ್ಯದ ಮಧ್ಯಮ ಮಾರ್ಗವನ್ನು ಬೋಧಿಸುತ್ತೇನೆ. ನಿನಗೆ ಇದು ಪೂರ್ಣವಾಗಿ ಅರ್ಥವಾಗಬೇಕಾದರೆ ಗಮನವಿಟ್ಟು ಆಲಿಸು" ಎಂದು ಪಟಿಚ್ಚಸಮುಪ್ಪಾದ ಬೋಧಿಸಿದರು.

"ಅಜ್ಞಾನದಿಂದ ಸಂಖಾರಗಳು (ಚಿತ್ತದ ಚಟುವಟಿಕೆಗಳು) ಉಂಟಾಗುತ್ತದೆ. ಸಂಖಾರಗಳಿಂದ ವಿಜ್ಞಾನ (ಅರಿವು) ಉಂಟಾಗುತ್ತದೆ. ವಿಜ್ಞಾನದಿಂದ ನಾಮರೂಪಗಳು (ಮನಸ್ಸು ಮತ್ತು ದೇಹ) ಉಂಟಾಗುತ್ತದೆ. ನಾಮರೂಪದಿಂದ ಆರು ಇಂದ್ರೀಯ ಆಧಾರಗಳು ಉಂಟಾಗುತ್ತದೆ. ಆರು ಇಂದ್ರೀಯ ಆಧಾರಗಳಿಂದ ಸ್ಪರ್ಶ ಉಂಟಾಗುತ್ತದೆ, ಸ್ಪರ್ಶದಿಂದ ವೇದನೆಗಳು ಉಂಟಾಗುತ್ತದೆ. ವೇದನೆಗಳಿಂದ ತನ್ಹಾ ಉಂಟಾಗುತ್ತದೆ, ತನ್ಹಾದಿಂದ ಅಂಟುವಿಕೆ ಉಂಟಾಗುತ್ತದೆ, ಅಂಟುವಿಕೆಯಿಂದ ಭವ ಉಂಟಾಗುತ್ತದೆ. ಭವದಿಂದ ಜನ್ಮ ಉಂಟಾಗುತ್ತದೆ. ಜನ್ಮದಿಂದ ದುಃಖರಾಶಿ ಉಂಟಾಗುತ್ತದೆ."

"ಆದರೆ ಅಜ್ಞಾನದ ನಿರೋಧದಿಂದ ಸಂಖಾರಗಳ ನಿರೋಧವಾಗುತ್ತದೆ, ಸಂಖಾರಗಳ ನಿರೋಧದಿಂದ ವಿಜ್ಞಾನದ ನಿರೋಧವಾಗುತ್ತದೆ, ವಿಜ್ಞಾನದ ನಿರೋಧದಿಂದ ನಾಮರೂಪದ ನಿರೋಧವಾಗುತ್ತದೆ. ನಾಮರೂಪದ ನಿರೋಧದಿಂದ ಆರು ಇಂದ್ರೀಯಗಳ ಆಧಾರಗಳು ನಿರೋಧವಾಗುತ್ತದೆ, ಆರು ಇಂದ್ರೀಯಗಳ ನಿರೋಧದಿಂದ ಸ್ಪರ್ಶವು ನಿರೋಧವಾಗುತ್ತದೆ, ಸ್ಪರ್ಶದ ನಿರೋಧದಿಂದ ವೇದನೆಗಳ ನಿರೋಧ ಆಗುತ್ತವೆ, ವೇದನೆಗಳ ನಿರೋಧದಿಂದ ತನ್ಹಾದ ನಿರೋಧವಾಗುತ್ತದೆ, ತನ್ಹಾದ ನಿರೋಧದಿಂದ ಅಂಟುವಿಕೆಯ ನಿರೋಧವಾಗುತ್ತದೆ, ಅಂಟುವಿಕೆಯ ನಿರೋಧದಿಂದ ಭವದ ನಿರೋಧವಾಗುತ್ತದೆ, ಭವದ ನಿರೋಧದಿಂದ ಜನ್ಮದ ನಿರೋಧವಾಗುತ್ತದೆ, ಜನ್ಮದ ನಿರೋಧದಿಂದ ದುಃಖರಾಶಿಯ ನಿರೋಧವಾಗುತ್ತದೆ"

ಇದನ್ನು ಆಲಿಸಿದ ಬ್ರಾಹ್ಮಣ ಅನುಮೋದನೆ ಮಾಡಿ ತ್ರಿರತ್ನಗಳಿಗೆ ಶರಣಾದನು.

## ಲೋಕಾಯತಿಕಾ ಬ್ರಾಹ್ಮಣರ ಪ್ರಶ್ನೆಗಳು

ಒಮ್ಮೆ ಭಗವಾನರು ಶ್ರಾವಸ್ತಿಯಲ್ಲಿ ವಿಹರಿಸುತ್ತಿದ್ದಾಗ, ಲೋಕ ಜ್ಞಾನವುಳ್ಳ ಬ್ರಾಹ್ಮಣನು ಅಲ್ಲಿಗೆ ಬಂದು ಭಗವಾನರಿಗೆ ವಂದಿಸಿ, ಕುಶಲ ವಿಚಾರಿಸಿ ನಂತರ ಹೀಗೆ 4 ಪ್ರಶ್ನೆ ಹಾಕಿದನು:

"ಭಗವಾನ್ ಸರ್ವವೂ ಇದೆಯೇ?"

"ಭಗವಾನ್ ಸರ್ವವೂ ಇಲ್ಲವೇ?"

"ಭಗವಾನ್ ಸರ್ವವೂ ಏಕವೇ?"

"ಭಗವಾನ್ ಸರ್ವವೂ ಬಹುವೇ?"

ಆಗ ಭಗವಾನರು ಇವೆಲ್ಲವೂ ಅತಿರೇಕಕ್ಕೆ ಕೊಂಡೊಯ್ಯುತ್ತದೆ, ಪಕ್ಷಪಾತಕ್ಕೆ, ಪೂರ್ವಾಗ್ರಹ ಪೀಡಿತಕ್ಕೆ ಕೊಂಡೊಯ್ಯುತ್ತದೆ ಎಂದು ಹೇಳಿ ನಿಜ ಧಮ್ಮವಾದ ಪಟಿಚ್ಚ ಸಮುಪ್ಪಾದವನ್ನು ಆತನಿಗೆ ವಿವರಿಸಿದರು.

"ಅಜ್ಞಾನದಿಂದ ಸಂಖಾರಗಳು ಉಂಟಾಗುತ್ತದೆ.........................................

............. ........................................ ಹೀಗೆ ದುಃಖರಾಶಿಯ ನಿರೋಧವಾಗುತ್ತದೆ."

ಆಗ ಆ ಬ್ರಾಹ್ಮಣನು ಆನಂದಭರಿತನಾದನು, ಸತ್ಯವನ್ನು ಗ್ರಹಿಸಿದನು. ಅನುಮೋದನೆ ಮಾಡುತ್ತ ತ್ರಿರತ್ನಗಳಿಗೆ ಶರಣು ಹೋದನು.

## ಬಲವೇ ಸತ್ಯವಲ್ಲ; ಸತ್ಯವೇ ಬಲ

"ಭಿಕ್ಷುಗಳೇ, ಇವು 3 ಪಾಪದ ಬೇರುಗಳಾಗಿವೆ. ಯಾವುದವು? ಲೋಭ, ದ್ವೇಷ ಮತ್ತು ಮೋಹ."

"ಲೋಭವು ಪಾಪವಾಗಿದೆ, ಲೋಭದಿಂದ ಮಾಡುವಂತಹ ಕಾರ್ಯ, ಮಾತು ಮತ್ತು ಯೋಚನೆಯು ಪಾಪವಾಗಿದೆ. ಒಬ್ಬನು ಲೋಭಯುಕ್ತನಾದರೆ ಅನಿಯಂತ್ರಿತನಾಗುತ್ತಾನೆ, ಆತನು ಅನ್ಯಾಯವಾಗಿ ಪರರಿಗೆ ನೋವುಂಟು ಮಾಡುತ್ತಾನೆ, ಶಿಕ್ಷೆ ನೀಡುತ್ತಾನೆ, ಬಂಧನವನ್ನುಂಟು ಮಾಡುತ್ತಾನೆ, ಐಶ್ವರ್ಯ ಹಾನಿ ಮಾಡುತ್ತಾನೆ, ನಿಂದಿಸುತ್ತಾನೆ, ಗಡಿಪಾರು ಮಾಡುತ್ತಾನೆ. ಏಕೆಂದರೆ ಆತನು "ಬಲವೇ ಸತ್ಯ" ಎಂಬ ಮಿಥ್ಯಾದೃಷ್ಟಿಯಿಂದ ಕೂಡಿರುತ್ತಾನೆ. ಅದು ಪಾಪದೃಷ್ಟಿಕೋನವಾಗಿದೆ. ಹೀಗಾಗಿ ಲೋಭದಿಂದ ಪಾಪದ ಸ್ಥಿತಿಗಳು ಉಂಟಾಗಿ ದುಃಖಕ್ಕೆ ಎಡೆಮಾಡುತ್ತದೆ. ಅದೇರೀತಿಯಲ್ಲಿ ದ್ವೇಷವು ನಾಶವಾಗಿದೆ... ಅದೇರೀತಿಯಲ್ಲಿ ಮೋಹವು ಪಾಪವಾಗಿದೆ... 'ಬಲವೇ ಸತ್ಯ' ಎಂಬ ಮಿಥ್ಯಾದೃಷ್ಟಿಯಿಂದ ದುಃಖಕ್ಕೆ ಎಡೆಮಾಡುತ್ತದೆ."

"ಭಿಕ್ಷುಗಳೇ, ಅಂತಹವನು ಭಾಷಣಕಾರನಾದರೆ ದುರಾದೃಷ್ಟಕರ ಸಂಗತಿಯಾಗುತ್ತದೆ. ಆತನು ಸುಳ್ಳನ್ನೇ, ಮಿಥ್ಯವನ್ನೇ, ಪ್ರತಿಪಾದಿಸುತ್ತಾನೆ. 'ಅಸಂಬದ್ಧವನ್ನು' ಮತ್ತು ಧಮ್ಮಕ್ಕೆ ವಿರುದ್ಧವಾದುದನ್ನು, ವಿನಯಕ್ಕೆ ಶಿಸ್ತಿಗೆ ವಿರುದ್ಧವಾದುದನ್ನೇ ಹೇಳುತ್ತಾನೆ, ಏಕೆ ಹೀಗೆ? ಏಕೆಂದರೆ ಆತನ ಪಾಪವೆಲ್ಲಾ 'ಬಲವೇ ಸತ್ಯ' ಎಂಬುದರ ಮೇಲೆ, ಆ ಮಿಥ್ಯಾದೃಷ್ಟಿಯ ಆಧಾರದ ಮೇಲೆ ನಿಂತಿದೆ... ಅಂತಹ ಮಾನವ ಸಾವಿನ ನಂತರ ದುರ್ಗತಿಯಲ್ಲಿ ಹುಟ್ಟುತ್ತಾನೆ, ಅತಿ ದುಃಖಕ್ಕೆ ಸಿಲುಕುತ್ತಾನೆ."



"ಆದರೆ 'ಸತ್ಯವೇ ಬಲ' ಎಂಬ ಸಮ್ಮಾದೃಷ್ಟಿ ಹೊಂದಿರುವವನು 'ಆರ್ಯ ಸತ್ಯಗಳನ್ನು' ಅರಿಯುತ್ತಾನೆ. ಆತನು ಲೋಭದಿಂದ, ದ್ವೇಷದಿಂದ ಮತ್ತು ಮೋಹದಿಂದ ಕೂಡಿರುವುದಿಲ್ಲ ಅವುಗಳಿಂದ ಮುಕ್ತನಾಗಿರುತ್ತಾನೆ. ಈ ಜನ್ಮದಲ್ಲೇ ಮುಕ್ತನಾಗುತ್ತಾನೆ."

## ವ್ಯಕ್ತಿ ವಿಕಾಸಕ್ಕೆ ಅಡ್ಡಿಯಾಗುವ ದೃಷ್ಟಿಕೋನಗಳು

ಬಹಳಷ್ಟು ದೃಷ್ಟಿಕೋನಗಳಿಂದಾಗಿ ನಮ್ಮ ವ್ಯಕ್ತಿತ್ವವೇ ವಿಕಾಸವಾಗದೆ, ಸಂಕುಚಿತವಾಗಿ, ಸುಶೀಲವಾಗದೆ, ಪಾಪದ ಕಡೆಗೆ ತಿರುಗುತ್ತದೆ, ಅಂತಹುವುಗಳಲ್ಲಿ ನಾನು ಈ ಮೂರನ್ನು ಮಾತ್ರ ಇಲ್ಲಿ ಉದಾಹರಿಸುತ್ತಿದ್ದೇನೆ.

(1) **"ಧ್ಯಾನದಿಂದ ಲಾಭವಿಲ್ಲ, ಇದೊಂದು ಮೌಢ್ಯ"**. ಇದು ಅತ್ಯಂತ ಅಪಾಯಕಾರಿಯಾದ ದೃಷ್ಟಿಕೋನವಾಗಿದೆ. ಇದರಿಂದಾಗಿ ಮಹತ್ತರವಾದ ಲಾಭವನ್ನು ಕಳೆದುಕೊಳ್ಳುತ್ತಾರೆ. ಮತ್ತೆ ಕೆಲವರಿಗೆ ಈ ರೀತಿಯ ದೃಷ್ಟಿಕೋನವಿರುತ್ತದೆ, ಅದೇನೆಂದರೆ ಧ್ಯಾನವು ಭಿಕ್ಷುಗಳಿಗಾಗಿ ಮಾತ್ರ, ನಮಗಲ್ಲ, ಇದು ಸಹಾ ಸರಿಯಲ್ಲ. ಇದರಿಂದಾಗಿ ವ್ಯಕ್ತಿಗತವಾಗಿ ಅಪಾರ ಹಾನಿಯಾಗುತ್ತದೆ. ಧ್ಯಾನದಿಂದ ನಮಗೆ ಆರೋಗ್ಯಕರವಾಗಿ, ಮಾನಸಿಕವಾಗಿ, ವ್ಯಕ್ತಿತ್ವ ವಿಕಾಸಿತವಾಗಿ, ಬೌದ್ಧಿಕವಾಗಿ, ಹಾರ್ದಿಕವಾಗಿ ಇತ್ಯಾದಿ ರೀತಿಯಲ್ಲಿ ಲಾಭವಿದೆ.

(2) **"ಈ ಕಾರ್ಯ ನನ್ನಿಂದ ಸಾಧ್ಯವಿಲ್ಲ. ಇದು ಅಸಾಧ್ಯವಾದುದು."** ಇದು ಅತ್ಯಂತ ಅಪಾಯಕಾರಿಯಾದ ದೃಷ್ಟಿಕೋನವಾಗಿದೆ. ಇದರಿಂದಾಗಿ ಆತನ ಚಿಂತನೆಗಳು ಹಾಗೇ ಆಗುತ್ತವೆ. ಆತನು ಸಂಕಲ್ಪರಹಿತನಾಗುತ್ತನೆ. ಆತನು ಶ್ರದ್ಧಾಹೀನನಾಗಿ, ಪ್ರಯತ್ನಹೀನನು ಆಗುತ್ತಾನೆ. ಹೀಗಾಗಿ ಆತನು ಯಾವುದೇರೀತಿಯ ಯಶಸ್ಸಿನಿಂದ ವಂಚಿತನಾಗುತ್ತಾನೆ. ನೆನಪಿಡಿ, ನೀವು ಯಾವುದೇ ಕಾರ್ಯವನ್ನು ಮತ್ತು ಪ್ರತಿಯೊಂದು ಕಾರ್ಯವನ್ನು ಮಾಡಬಲ್ಲಿರಿ. ನಿಮ್ಮ ಸುಖ ಮತ್ತು ದುಃಖಗಳಿಗೆ ನೀವೇ ಜವಾಬ್ದಾರರು. ಹಾಗೆಯೇ ನಿಮ್ಮ ಉನ್ನತಿ ಮತ್ತು ಅವನತಿಗೆ ನೀವೇ ಹೊಣೆಗಾರರು. ಹಾಗೆಯೇ ನಿಮ್ಮ ಪರಿಶುದ್ಧತೆ ಮತ್ತು ಕಲುಷಿತತೆಗೆ ಹಾಗೆಯೇ ನಿಮ್ಮ ಬಂಧನ ಮತ್ತು ಮುಕ್ತಿಗೆ ನೀವೇ ಕಾರಣಕರ್ತರಾಗಿದ್ದೀರಿ. ನಕಾರಾತ್ಮಕ ದೃಷ್ಟಿಕೋನವು ವಿಷವಿದ್ದ ಹಾಗೆ. ಅದನ್ನು ಉದಯಿಸಲು ಅವಕಾಶ ನೀಡದಿರಿ, ಉದಯಿಸಿದರೆ ಹಾಗೆಯೇ ಅವನ್ನು ನಾಶಮಾಡಿ.

(3) **"ಇವರು ಮಾತ್ರ ನಮ್ಮವರು, ಇತರರು ನಮ್ಮವರಲ್ಲ** ಎಂಬ ದೃಷ್ಟಿಕೋನ. ಇದರಿಂದಾಗಿ ನಮ್ಮಲ್ಲಿ ಸ್ವಾರ್ಥ ಬೆಳೆಯುತ್ತದೆ, ಮಾತ್ಸರ್ಯ ಬೆಳೆಯುತ್ತದೆ, ಇತರರಲ್ಲಿ ದ್ವೇಷ ಬೆಳೆಯುತ್ತದೆ. ಹಿಂಸೆಗೂ ಕಾರಣವಾಗುತ್ತದೆ."

ಮೈತ್ರಿ ದೃಷ್ಟಿಕೋನವಾದ 'ಸರ್ವರೂ ಸುಖಿಯಾಗಿರಲಿ' ಎಂಬುದನ್ನು ಮರೆಯಬಾರದು. ಒಮ್ಮೆ ಪೂಜ್ಯ ಆನಂದರವರು ಭಗವಾನರನ್ನು ಈ ರೀತಿ ಪ್ರಶ್ನಿಸಿದರು: "ಮೈತ್ರಿಯು ಭಗವಾನರ ಬೋಧನೆಯಲ್ಲಿ ಅರ್ಧದಷ್ಟು ಸ್ಥಾನ ಗಳಿಸಿದೆ ಅಲ್ಲವೇ? ಆಗ ಭಗವಾನರು ಆನಂದರವರನ್ನು "ಅರ್ಧದಷ್ಟಲ್ಲ, ಪೂರ್ತಿ ಬೋಧನೆ ಮೈತ್ರಿಯಿಂದ ಕೂಡಿದೆ." ಹೀಗಾಗಿ "ಸರ್ವರನ್ನು ನಮ್ಮಂತೆ ಕಾಣೋಣ, ಹಾಗೇಯೇ "ಯಾರಲ್ಲೂ ಅಂಟದೆ, ಮುಕ್ತರಾಗೋಣ". ಹೀಗಾದಾಗ ಲೋಕದಲ್ಲಿ ಹಿಂಸೆ ಅಳಿದು, ಕರುಣೆ ಸ್ಥಾಪಿತವಾಗುತ್ತದೆ.

## ಇರುವಾಗ ಇಲ್ಲವೆನ್ನುವುದು ತಪ್ಪು

"ಗೃಹಸ್ಥರೇ, ಯಾವ ಶ್ರಮಣ ಬ್ರಾಹ್ಮಣರು ದಾನಕ್ಕೆ ಫಲವಿಲ್ಲ... ಶೀಲಕ್ಕೆ ಫಲವಿಲ್ಲ... ಅಭಿಜ್ಞಾ ಸಂಪನ್ನ ಸಮಣ ಬ್ರಾಹ್ಮಣರು ಇಲ್ಲ... ಎಂದು ಹೇಳುತ್ತಾರೋ ಅವರಿಂದ ನಾವು ಶಾರೀರಿಕ ಸುಚಾರಿತ್ರ್ಯ, ಮಾತಿನ ಸುಚಾರಿತ್ರ್ಯ ಮತ್ತು ಮನಸ್ಸಿನ ಸುಚಾರಿತ್ರ್ಯ ನಿರೀಕ್ಷಿಸಲಾಗುವುದಿಲ್ಲ. ಬದಲಾಗಿ ಅವರಿಂದ ಶಾರೀರಿಕ ದುಶ್ಚಾರಿತ್ಯ, ಮಾತಿನ ದುಶ್ಚಾರಿತ್ಯ, ಮತ್ತು ಮನಸ್ಸಿನ ದುಶ್ಚಾರಿತ್ಯ ನಿರೀಕ್ಷಿಸಬಹುದು ಏಕೆ? ಅವರು ಮಿಥ್ಯಾದೃಷ್ಟಿ ಹೊಂದಿರುವುದರಿಂದಾಗಿ, ಪರಲೋಕ ಇರುವಾಗ, ಇಲ್ಲ ಎನ್ನುವುದು ತಪ್ಪು ತಿಳುವಳಿಕೆಯಾಗುತ್ತದೆ. ಹಾಗೆಯೇ ದಾನಕ್ಕೆ, ಶೀಲಕ್ಕೆ ಫಲವಿರುವಾಗ, ಇಲ್ಲ ಎನ್ನುವುದು ತಪ್ಪು ತಿಳುವಳಿಕೆಯಾಗುತ್ತದೆ. ಈ ಲೋಕವನ್ನು ಮತ್ತು ಪರಲೋಕವನ್ನು ತಮ್ಮ ಅಭಿಜ್ಞಾ ಸಂಪನ್ನತೆಯಿಂದ ಅರಿತಿರುವ ಸಮಣ ಬ್ರಾಹ್ಮಣರು ಇರುವಾಗ, ಇಲ್ಲ ಎನ್ನುವುದು ತಪ್ಪು ತಿಳುವಳಿಕೆ ಆಗಿರುತ್ತದೆ. ಈ ರೀತಿ ಮಾಡುವವನು ತನ್ನನ್ನು ಪ್ರಶಂಸಿಸಿಕೊಳ್ಳುತ್ತಾನೆ ಮತ್ತು ಇತರರನ್ನು ಧಿಕ್ಕರಿಸುತ್ತಾನೆ. ಆತನಲ್ಲಿ ಮಿಥ್ಯಾದೃಷ್ಟಿ, ಮಿಥ್ಯಾ ಸಂಕಲ್ಪ ಮಿಥ್ಯಾ ಮಾತು, ಉದಾತ್ತರಿಗೆ ಹಾಸ್ಯ ಮಾಡುವಿಕೆ, ಅಧಮ್ಮವೇ ಸತ್ಯವೆಂದು ಬಗೆಯುವಿಕೆ, ಈ ರೀತಿಯ ಅನೇಕ ಪಾಪಕಾರಿ ಅಕುಶಲ ಧಮ್ಮಗಳು ಎಲ್ಲವೂ ಮಿಥ್ಯಾದೃಷ್ಟಿಯ ಕಾರಣದಿಂದ ಹುಟ್ಟಿಕೊಳ್ಳುತ್ತವೆ."

## ನಿರ್ವಿವಾದ ಧಮ್ಮ

ಒಬ್ಬ ಜ್ಞಾನಿಯು ಹೀಗೆ ಯೋಚಿಸುತ್ತಾನೆ: 'ಒಂದುವೇಳೆ ಪರಲೋಕವಿದ್ದರೆ ಶೀಲ ದಾನದಿಂದ ಸಾವಿನ ನಂತರ ಸುಗತಿಯಲ್ಲಿ ಹುಟ್ಟುವನು ಅಥವಾ ಪರಲೋಕವಿಲ್ಲದಿದ್ದರೂ ಇಲ್ಲಿಯೇ ಈಗಲೇ ಜ್ಞಾನಿಗಳಿಂದ ಶೀಲ ಮತ್ತು ದಾನದ ಪ್ರಶಂಸೆ ಗಳಿಸುತ್ತಾನೆ. ಹೀಗೆ ಯೋಗ್ಯ ವ್ಯಕ್ತಿಗೆ ಎರಡು ರೀತಿಯಲ್ಲೂ ಗೆಲುವುಗಳಿವೆ. ಹೀಗೆ ಆತನು ದಾನ, ಶೀಲ ಪಾಲಿಸಿ ಇಲ್ಲಿ ಜ್ಞಾನಿಗಳಿಂದ ಪ್ರಶಂಸಿತನಾಗಿ, ಮುಂದೆ ಸುಗತಿಯಲ್ಲಿ ಹುಟ್ಟುವನು. ಹೀಗೆ ನಿರ್ವಿವಾದ ಧಮ್ಮವನ್ನು ಸಮಗ್ರವಾಗಿ ಪಾಲಿಸುತ್ತಾನೆ, ಹರಡುತ್ತಾನೆ. ಅಕುಶಲವನ್ನು ತಿರಸ್ಕರಿಸುತ್ತಾನೆ.

## ಮುಗ್ಧರಿಗೆ ಮಾಡಿದ ಪಾಪ ಖಂಡಿತ ಹಿಂತಿರುಗುತ್ತದೆ

ಕೋಕನೆಂಬ ಬೇಟೆಗಾರನಿದ್ದನು, ಆತನು ಬೇಟೆಗೆ ತನ್ನ ಬೇಟೆ ನಾಯಿಗಳೊಂದಿಗೆ ಕಾಡಿಗೆ ಹೋಗುತ್ತಿರುವಾಗ, ದಾರಿಯಲ್ಲಿ ಓರ್ವ ಭಿಕ್ಷುವು ನಗರಕ್ಕೆ ಆಹಾರಕ್ಕಾಗಿ ಬರುತ್ತಿದ್ದನು. ಆಗ ಬೇಟೆಗಾರನು ಆ ಭಿಕ್ಷುವನ್ನು ಕಂಡು ಹೀಗೆ ಹೇಳಿಕೊಂಡನು: "ಈ ಅಪಶಕುನವನ್ನು ಕಂಡಿದ್ದೇನೆ, ನನಗೆ ಇಂದು ಏನಾದರೂ ಸಿಗುವುದೋ ಇಲ್ಲವೋ" ಎಂದುಕೊಂಡು ಆತನು ಕಾಡಿಗೆ ಹೋದನು. ಅಂದು ಆತನಿಗೆ ನಿಜಕ್ಕೂ ಯಾವ ಬೇಟೆಯೂ ಸಿಗಲಿಲ್ಲ. ಆತನು ಊರಿಗೆ ಹಿಂತಿರುಗುತ್ತಿದ್ದನು. ಈಗ ಮತ್ತೆ ಅದೇ ಭಿಕ್ಷುವು ಕಾಡಿನೆಡೆಗೆ ಬರುತ್ತಿದ್ದನು. ಆ ಭಿಕ್ಷುವನ್ನು ಕಂಡು ಬೇಟೆಗಾರನಿಗೆ ಕೋಪವು ಉಕ್ಕಿ ತನ್ನ ಬೇಟೆ ನಾಯಿಗಳನ್ನು ಭಿಕ್ಷುವಿನೆಡೆಗೆ ಛೂ ಬಿಟ್ಟನು. ಜಾಗೃತನಾದ ಭಿಕ್ಷುವು ತಕ್ಷಣ ಒಂದು ಮರವೇರಿದನು. ಆತನು ನಾಯಿಗಳಿಗೆ ಸಿಗಲಿಲ್ಲ. ಈಗ ಬೇಟೆಗಾರನು ಭಿಕ್ಷುವನ್ನು ಹಿಡಿಯಲು



ಪ್ರಯತ್ನಿಸಿದನು. ಆಗ ಬೇಟೆಗಾರನು ತನ್ನ ಬಾಣದಿಂದ ಭಿಕ್ಷುವಿನ ಪಾದಕ್ಕೆ ಚುಚ್ಚಿದನು. ಆ ನೋವಿನಿಂದ ಆ ಭಿಕ್ಷುವು ಹಿಡಿದುಕೊಂಡಿದ್ದ ತನ್ನ ಉಡುಗೆಯನ್ನು ಬಿಟ್ಟುಬಿಟ್ಟನು. ಅದು ಬೇಟೆಗಾರನ ಮೇಲೆ ಬಿದ್ದಿತು. ಆಗ ಬೇಟೆ ನಾಯಿಗಳು ಭಿಕ್ಷುವೇ ಕೆಳಗೆ ಬಿದ್ದನೆಂದು ಆ ಬೇಟೆಗಾರನಿಗೆ ಸಿಕ್ಕ ಕಡೆಯೆಲ್ಲಾ ಕಚ್ಚತೊಡಗಿದವು. ಆ ಬೇಟೆಗಾರನನ್ನು ಕಾಪಾಡಲು ಭಿಕ್ಷುವು ರೆಂಬೆ ಮುರಿದು ನಾಯಿಗಳತ್ತ ಎಸೆದನು. ಆಗ ನಾಯಿಗಳಿಗೆ ಅರಿವಾಗಿ ಅವು ಕಾಡಿನತ್ತ ಓಡಿದವು. ಅವು ಹೋದನಂತರ ಭಿಕ್ಷು ಕೆಳಗೆ ಇಳಿದು, ಬೇಟೆಗಾರನನ್ನು ಪರೀಕ್ಷಿಸಿದಾಗ ಬೇಟೆಗಾರನು ಸತ್ತಿರುವುದು ಖಚಿತವಾಯಿತು.

ಆತನಿಗೆ ಬೇಟೆಗಾರನ ಸಾವಿಗೆ ತಾನೇ ಕಾರಣವಿರಬಹುದೇ ಎಂಬ ಸಂಶಯ ಕಾಡಿ ಭಗವಾನರಲ್ಲಿಗೆ ಹೋಗಿ ವಿಷಯ ತಿಳಿಸಿದನು. ಆಗ ಭಗವಾನರು ಆತನು ತಪ್ಪಿತಸ್ಥನಲ್ಲವೆಂದು ಸಮಾಧಾನಿಸಿ ಈ ಗಾಥೆಯನ್ನು ನುಡಿದರು:

"*ಯಾರು ನಿರಪರಾಧಿಯು ಮತ್ತು ಮುಗ್ಧನನ್ನು ನೋಯಿಸುತ್ತಾನೋ ಅಂತಹ ಮೂರ್ಖನಿಗೆ ಗಾಳಿಗೆ ಎಸೆದ ಧೂಳಿನಂತೆ, ಆತನಿಗೆ ಪಾಪವು ಹಿಂತಿರುಗಿ ದುಃಖ ತರುವುದು*" – ಧಮ್ಮಪದ

## ಪಾಪ ಫಲದಿಂದ ತಪ್ಪಿಸಿಕೊಳ್ಳಲಾಗುವ ಸ್ಥಳವೇ ಇಲ್ಲ

ಭಿಕ್ಷುಗಳ ಗುಂಪೊಂದು ಭಗವಾನರಿಗೆ ವಂದಿಸಲೆಂದು ಹಳ್ಳಿಯ ದಾರಿಯಲ್ಲಿದ್ದರು. ಅಲ್ಲಿಯ ಜನರು ಭಿಕ್ಷುಗಳಿಗಾಗಿ ಆಹಾರವನ್ನು ಬೇಯಿಸುತ್ತಿದ್ದರು. ಆಗ ಅಚಾತುರ್ಯದಿಂದಾಗಿ ಮನೆಯೊಂದು ಸುಟ್ಟು, ಬೆಂಕಿಯ ಜ್ವಾಲೆಯು ಮೇಲ್ಭಾಗದಲ್ಲೆಲ್ಲಾ ತೇಲಾಡಿತು. ಅದೇ ಸಮಯದಲ್ಲಿ ಕಾಗೆಯೊಂದು ಆ ಬೆಂಕಿಯ ಜ್ವಾಲೆಗೆ ಸಿಲುಕಿ ಸುಟ್ಟು ಭಸ್ಮವಾಯಿತು. ಆ ಭಿಕ್ಷುಗಳು ಭಗವಾನರ ಬಳಿಗೆ ಬಂದು ಸ್ವಲ್ಪಕಾಲದ ನಂತರ ಈ ವಿಷಯವನ್ನು ತಿಳಿಸಿ ಕಾಗೆಯ ಮರಣಕ್ಕೆ ಕಾರಣವನ್ನು ಕೇಳಿದರು. ಆಗ ಭಗವಾನರು ಆ ಕಾಗೆಯ ಹಿಂದಿನ ಜನ್ಮವನ್ನು ತಿಳಿಸಿದರು.

"ಭಿಕ್ಷುಗಳೇ, ಹಿಂದೆ ರೈತನೊಬ್ಬನ ಬಳಿ ಅತಿ ಸೋಮಾರಿಯಾದ ಎತ್ತೊಂದು ಇತ್ತು. ಇದರ ಸೋಮಾರಿತನ ಸಹಿಸಲಾರದೆ ಆ ರೈತನು ಕೋಪದಿಂದ ಆ ಎತ್ತನ್ನು ಕಟ್ಟಿಹಾಕಿ ಬೆಂಕಿ ಹಚ್ಚಿದನು, ಆ ಎತ್ತು ಸತ್ತಿತು. ಆ ಪಾಪ ಫಲದಿಂದಾಗಿ ಆ ರೈತನು ನಿರಯದಲ್ಲಿ ಹುಟ್ಟಿ ದುಃಖ ಅನುಭವಿಸಿದನು. ನಂತರ ಅಲ್ಲಿಂದ 7 ಜನ್ಮತಾಳಿ 7 ಜನ್ಮದಲ್ಲೂ ಸುಟ್ಟು ಸತ್ತನು. ಆ ಕಾಗೆಯ ಪಾಪಕರ್ಮವೇ ಈ ಹೊಸ ದುಃಖಕ್ಕೆ ಕಾರಣವಾಗಿದೆ."

ಆಗ ಅಲ್ಲೇ ಇದ್ದ ಇನ್ನೊಂದು ಭಿಕ್ಷುಗಳ ಗುಂಪು ತಮ್ಮ ಘಟನೆಯನ್ನು ಹೇಳಿದರು. ಅವರು ಸಹಾ ಬುದ್ಧರನ್ನು ಭೇಟಿ ಮಾಡಲು ಬರುತ್ತಿದ್ದರು. ಅವರು ಸಮುದ್ರ ಮಾರ್ಗವಾಗಿ ಬರುತ್ತಿರುವಾಗ, ಆ ಹಡಗು ಚಲಿಸದೆ ನಿಂತುಬಿಟ್ಟಿತು. ಆಗ ಹಡಗಿನಲ್ಲಿದ್ದವರಿಗೆ ತಮ್ಮ ಹಡಗಿನಲ್ಲಿ ಯಾರೋ ದುರಾದೃಷ್ಟವಂತರು ಇದ್ದಾರೆ ಎಂದು ಅನುಮಾನ ಬಂದು ಚೀಟಿ ಎತ್ತುವ ಮೂಲಕ ಪರೀಕ್ಷಿಸಿದರು. ಆದರೆ ಮೂರು ಬಾರಿಯು ಆ ಹಡಗಿನ

ನಾಯಕನ ಪತ್ನಿಯ ಹೆಸರೇ ಬಂದಿತು. ಆಗ ಕಠೋರನಾದ ಆ ಹಡಗಿನ ನಾಯಕರು 'ಈ ಒಬ್ಬ ದುರಾದೃಷ್ಟವಂತೆಯ ಬದಲಾಗಿ ಎಲ್ಲರೂ ಸಾಯುವುದು ಬೇಡ, ಆಕೆಯ ಕತ್ತಿಗೆ ಮರಳಿನ ಮಡಿಕೆ ಕಟ್ಟಿ, ನೀರಿಗೆ ಹಾಕಿಬಿಡಿ' ಎಂದು ಆಜ್ಞೆ ಮಾಡಿದನು. ಆಗ ಆಕೆಯನ್ನು ನೀರಿಗೆ ಎಸೆಯಲಾಯಿತು. ನಂತರ ಆ ಹಡಗು ಚಲಿಸಿತು. ಈ ಘಟನೆಗೆ ಕಾರಣವನ್ನು ಆ ಭಿಕ್ಷುಗಳು ಭಗವಾನರಲ್ಲಿಗೆ ಕೇಳಿದಾಗ ಭಗವಾನರು ಹೀಗೆ ಉತ್ತರಿಸಿದರು:

"ಭಿಕ್ಷುಗಳೇ, ಹಿಂದಿನ ಜನ್ಮದಲ್ಲಿ ಆ ಸ್ತ್ರೀಯ ಬಳಿ ನಾಯಿಯೊಂದು ಇತ್ತು. ಆಕೆ ಎಲ್ಲೇ ಹೋಗಲಿ, ಅದು ಆಕೆಯನ್ನು ಹಿಂಬಾಲಿಸುತ್ತಿತ್ತು. ಏಕೆಂದರೆ ಆ ನಾಯಿಯು ಆಕೆಯ ಹಿಂದಿನ ಜನ್ಮದಲ್ಲಿ ಆಕೆಯ ಗಂಡನಾಗಿತ್ತು. ನಾಯಿಯು ಆಕೆಯನ್ನು ಸದಾ ಹಿಂಬಾಲಿಸುವುದುನ್ನು ಕಂಡ ಕೆಲ ಪೋಕರಿಗಳು ಆಕೆಯನ್ನು ರೇಗಿಸುತ್ತಿದ್ದರು. ಇದರಿಂದ ಕ್ರುದ್ಧಳಾದ ಆಕೆಯು ನಾಯಿಯನ್ನು ಕೊಲ್ಲಲು ನಿಶ್ಚಯಿಸಿದಳು. ಆಕೆ ಮಡಿಕೆಯೊಂದಕ್ಕೆ ಮಣ್ಣನ್ನು ತುಂಬಿ ಅದನ್ನು ನಾಯಿಯ ಕೊರಳಿಗೆ ಕಟ್ಟಿ ನೀರಿನಲ್ಲಿ ಬಿಸಾಡಿದಳು, ಆ ನಾಯಿಯು ಮುಳುಗಿ ಸತ್ತಿತು. ಈ ಕರ್ಮಫಲದ ಪರಿಣಾಮದಿಂದಾಗಿ ಆಕೆಯು ದುರ್ಗತಿಯಲ್ಲಿ ಅಪಾರ ನರಳಿದಳು. ನಂತರದ ಜನ್ಮಗಳಲ್ಲಿ ಹೀಗೆಯೇ ನೀರಿನಲ್ಲಿ ಮುಳುಗಿಸಲ್ಪಟ್ಟು ಸತ್ತಳು. ಆ ಕಾರಣದಿಂದಾಗಿಯೇ ಆಕೆ ಈ ಜನ್ಮದಲ್ಲೂ ಹಾಗೇ ಸತ್ತಿದ್ದಾಳೆ."

ಆಗ ಮೂರನೆಯ ಭಿಕ್ಷುಗಳ ಗುಂಪು ತಮ್ಮ ಅನುಭವವನ್ನು ಹೇಳಿದರು: ಈ ಗುಂಪಿನ ಭಿಕ್ಷುಗಳು ಏಳು ಜನರಿದ್ದರು. ಅವರು ಬುದ್ಧರಿಗೆ ವಂದಿಸಲೆಂದು ಬರುತ್ತಿದ್ದಾಗ, ಅವರು ಗುಹೆಯೊಂದರಲ್ಲಿ ರಾತ್ರಿ ಕಳೆದರು. ಆದರೆ ಮಧ್ಯರಾತ್ರಿಯಲ್ಲಿ ದೊಡ್ಡ ಬಂಡೆಯು ಜಾರಿ ಆ ಗುಹೆಯನ್ನು ಮುಚ್ಚಿಬಿಟ್ಟಿತು. ಆಗ ಸಮೀಪದ ಭಿಕ್ಷುಗಳು ಈ ಏಳು ಭಿಕ್ಷುಗಳು ಅಲ್ಲಿರುವುದನ್ನು ಕಂಡಿದ್ದರು. ಅವರು ಈ ಏಳು ಭಿಕ್ಷುಗಳನ್ನು ಕಾಪಾಡಲು ಏಳು ಹಳ್ಳಿಗಳ ಜನರನ್ನು ಕರೆತಂದರು. ಆದರೂ ಸಹಾ ಏಳು ದಿನಗಳವರೆಗೆ ಆ ಬಂಡೆಯು ಅಲ್ಲಾಡಲಿಲ್ಲ. ಅವರು ಒಳಗೆ ಉಪವಾಸದಿಂದಿದ್ದರು. ಏಳನೆಯ ದಿನ ಆ ಬಂಡೆಯು ಆಶ್ಚರ್ಯಕರವಾಗಿ ತಾನಾಗಿಯೇ ಪಕ್ಕಕ್ಕೆ ಜಾರಿ, ಆ ಭಿಕ್ಷುಗಳು ಹೊರಬಂದರು. ಇದಕ್ಕೆ ಕಾರಣವನ್ನು ಆ ಭಿಕ್ಷುಗಳು ಭಗವಾನರಲ್ಲಿ ಕೇಳಿದರು. ಆಗ ಭಗವಾನರು ಅವರ ಹಿಂದಿನ ಜನ್ಮವನ್ನು ತಿಳಿಸಿದರು. ಹಿಂದಿನ ಜನ್ಮದಲ್ಲಿ ಅವರು ಗೋವುಗಳನ್ನು ಕಾಯುತ್ತಿದ್ದರು. ಆಗ ಅವರು ಓತಿಕೇತವೊಂದು ಬಿಲದಲ್ಲಿ ನುಗ್ಗಿರುವುದನ್ನು ಕಂಡರು. ಅವರು ಬಿಲವನ್ನು ಮುಚ್ಚಿದರು. 7 ದಿನಗಳ ನಂತರ ಅವರಿಗೆ ನೆನಪಾಗಿ ಆ ಬಿಲವನ್ನು ತೆರೆದು ಅದನ್ನು ಕಾಪಾಡಿದರು. ಆ ಕರ್ಮಫಲದ ಪರಿಣಾಮವೇ ಅವರಿಗೆ ಈ ಜನ್ಮದಲ್ಲಿ ಈ ಗತಿಯಾಗಿತ್ತು. ಹಾಗೆ ಹೇಳಿ ಭಗವಾನರು ಈ ಗಾಥೆಯನ್ನು ನುಡಿದರು.

*"ಆಕಾಶದಲ್ಲಿಯಾಗಲಿ, ಸಮುದ್ರದಲ್ಲಾಗಲಿ, ಪರ್ವತದ ಗವಿಗಳಲ್ಲಾಗಲಿ, ಇಡೀ ಪೃಥ್ವಿಯಲ್ಲಿ ಎಲ್ಲಿಯೂ ಸಹಾ ಒಬ್ಬನು ಕರ್ಮಫಲದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ"*

**– ಧಮ್ಮಪದ 127**



# IV. ಮೂಢನಂಬಿಕೆಗಳ ಖಂಡನೆ

## ಮೂಢನಂಬಿಕೆ ಬೇಡ :

ಇತಿಹಾಸದಲ್ಲಿ ಯಾರಾದರೂ ಪೂರ್ಣವಾಗಿ, ಮೊಟ್ಟಮೊದಲು ಮೂಢನಂಬಿಕೆಗಳ ಖಂಡನೆ ಮಾಡಿದ್ದರೆ, ಅದು ಭಗವಾನರೇ ಆಗಿದ್ದಾರೆ. ಒಮ್ಮೆ ಭಗವಾನರು ಧಮ್ಮ ಪ್ರವಚನ ಮಾಡುವಾಗ ಅವರು ಸೀನಿದರು. ಆಗ ಪ್ರಚಲಿತ ರೂಢಿಯಂತೆ ಭಿಕ್ಷುಗಳು 'ವಜ್ರಾಯುಸ್ಸು' ಎಂದರು. ಆಗ ಭಗವಾನರು ಅವರಿಗೆ ಕೇಳಿದರು. "ಹೀಗೆ 'ವಜ್ರಾಯುಸ್ಸು' ಎಂದರೆ ಅವರು ಆಯುಸ್ಸು ವೃದ್ಧಿಯಾಗುವುದೇ?"

"ಇಲ್ಲ ಭಗವಾನ್."

"ಹಾಗಾದರೆ ಹಾಗೆ ಹೇಳುವುದನ್ನು ನಿಲ್ಲಿಸಿ."

* * *

## ಆಹಾರದಿಂದ ಶುದ್ಧಿಯಿಲ್ಲ:

ಬಹಳಷ್ಟು ಜನರು 'ಆಹಾರದಿಂದಲೇ ಶುದ್ಧಿ' ಎಂಬ ಮೂಢನಂಬಿಕೆಗಳನ್ನು ಹೊಂದಿದ್ದಾರೆ. ಅವರ ಪ್ರಕಾರ ಮಾಂಸಾಹಾರಿಯು ಕ್ರೋಧ ಮುಂತಾದ ಕಶ್ಮಲಗಳನ್ನು ಹೊಂದಿರುತ್ತಾನೆ. ಆದರೆ ಭಗವಾನರು ಅವನ್ನೆಲ್ಲ ಖಂಡಿಸಿದರು. ಹಾಗೇನಾದರೂ ಅದು ಸತ್ಯವಾಗಿದ್ದರೆ ಸಸ್ಯಹಾರಿಯಾದ ಆನೆಯು ಸೌಮ್ಯ ಸ್ವಭಾವದ್ದಾಗಬೇಕಿತ್ತು.

ಅಷ್ಟೇ ಏಕೆ ಕ್ರೂರಿ, ಮತಾಂಧನಾಗಿದ್ದ ಹಿಟ್ಲರ್ ಸಸ್ಯಹಾರಿಯಾಗಿದ್ದ ಮತ್ತು ದಯಾಮಯಿ ಮದರ್ ಥೆರೆಸಾ ಮಾಂಸಹಾರಿಯಾಗಿದ್ದರು.

* * *

## ಪ್ರಾಣಿಗಳ ಅನುಕರಣೆಗೆ ಖಂಡನೆ :

ಭಗವಾನರ ಕಾಲದಲ್ಲಿ ಕೆಲವರು ಪ್ರಾಣಿಗಳ ರೀತಿ ಆಚರಣೆಗಳನ್ನು ಮಾಡಿ ಇದರಿಂದಲೇ ಮುಕ್ತಿ ಎಂದು ಭಾವಿಸುತ್ತಿದ್ದರು. ಕೆಲವರು ಹಸುವಿನಂತೆ, ಕೆಲವರು ನಾಯಿಯಂತೆ ವರ್ತಿಸುತ್ತಿದ್ದರು. ಭಗವಾನರು ಆಗ ಅವರನ್ನು ಖಂಡಿಸಿದ್ದರು. ಇದರಿಂದಾಗಿ ಮುಕ್ತಿ ಸಿಗಲಾರದು. ನಾಯಿಯ ಅಥವಾ ಪ್ರಾಣಿಜನ್ಮ ಅಥವಾ ನಿರಯ ಸಿಗುತ್ತದೆ ಎಂದು ಎಚ್ಚರ ನೀಡಿದರು.

## ಪ್ರಾಣಿಬಲಿಯ ಯಾಗಗಳ ಖಂಡನೆ :

ಒಮ್ಮೆ ಬ್ರಾಹ್ಮಣ ಉಜ್ಜಯನು ಭಗವಾನರನ್ನು ಈ ರೀತಿ ಪಶ್ನಿಸಿದನು:

"ಭಗವಾನರು ಯಜ್ಞಗಳನ್ನು ಪ್ರಶಂಸಿಸುವಿರಾ?"

"ಇಲ್ಲ ಬ್ರಾಹ್ಮಣ, ನಾನು ಪ್ರತಿಯೊಂದು ಯಜ್ಞಗ್ಗಳನ್ನು ಪ್ರಶಂಸಿಸಲಾರೆ. ಓ ಬ್ರಾಹ್ಮಣ ಯಾವೆಲ್ಲಾ ಯಜ್ಞಗ್ಗಳಲ್ಲಿ ಗೋವುಗಳನ್ನು, ಕುರಿಗಳನ್ನು, ಮೇಕೆಗಳನ್ನು, ಕೋಳಿಗಳನ್ನು, ಹಂದಿಗಳನ್ನು ಕಡಿಯುವರೋ, ಜೀವಹತ್ಯೆ ಮಾಡುವರೋ ಅಂತಹವನ್ನೆಲ್ಲಾ ನಾನು ಪ್ರಶಂಸಿಸುವುದಿಲ್ಲ, ಏಕೆ ಹೀಗೆ? ಬ್ರಾಹ್ಮಣನೇ, ಅಂತಹ ಯಜ್ಞಗ್ಗಳಲ್ಲಿ ಹತ್ಯೆಗಳು ನಡೆಯುವುದರಿಂದಾಗಿ ಅರಹಂತರಾಗಲಿ, ಆ ಪಥಕ್ಕೆ ಪ್ರವೇಶಿಸಿರುವವರಾಗಲಿ, ಹತ್ತಿರ ಬರಲಾರರು... ಹತ್ಯೆಗಳಿಲ್ಲದ ಯಜ್ಞವನ್ನು ನಾನು ಪ್ರಶಂಸಿಸುವೆ. ಉದಾಹರಿಸುವುದಾದರೆ: ದಾನ, ಪಿತೃಯಜ್ಞ, ಏಕೆಂದರೆ ಅಂತಹವುಗಳಲ್ಲಿ ಹತ್ಯೆಯು ಇರುವುದಿಲ್ಲ."

* * *

ಈ ವಿಷಯದ ಮೂಲವನ್ನು ತಿಳಿದು ಭಗವಾನರು ಈ ಗಾಥೆಗಳನ್ನು ನುಡಿದಿದ್ದಾರೆ: "ಯಜ್ಞಗಳಿಂದ ಕುದುರೆಗಳು, ಮನುಷ್ಯರು ಸೇರುತ್ತಾರೆ. ಹಂದಿಗಳ ಬಿಸಾಟ ಸ್ಥಳವು ಏರ್ಪಾಡಾಗುತ್ತದೆ. ಏನೋ ಜಯ ಸಾಧಿಸಿದ ಹಾಗೆ ಸಂಭ್ರಮಗಳು, ಪಾನೀಯಗಳು ಸಿದ್ಧವಾಗುತ್ತದೆ. ಇಲ್ಲಿ ಅಗುಳಿಗಳು ತೆಗೆದುಹಾಕಲ್ಪಟ್ಟಿದೆ (ಇಂದ್ರೀಯಗಳು ಸಡಿಲವಾಗಿದೆ) ಹಾಗು ಭಾರಿ ಸಂಭ್ರಮದ ಆಚರಣೆಗಳು ಸಿದ್ಧವಾಗಿದ್ದರೂ, ಇಂತಹ ಆಚರಣೆಗಳ ಮೌಢ್ಯದಿಂದಾಗಿ ಯಾವ ಫಲವಾಗಲಿ, ಸುಖವಾಗಲಿ ಸಿಗಲಾರದು."

"ಎಲ್ಲಿ ಮೇಕೆ ಮುಂತಾದವುಗಳನ್ನು ತಳ್ಳುತ್ತಿರುವವರು ಮತ್ತು ಕುರಿ, ಕರುಗಳನ್ನು ಸಿಗಿದು ಹಾಕುತ್ತಿರುವವರು, ಇಂತಹವುಗಳನ್ನು ಶ್ರೇಷ್ಠ ಆರ್ಯರು ಮಾಡುವುದು ಇಲ್ಲ, ಮಾಡಿಸುವುದೂ ಇಲ್ಲ. ಏಕೆಂದರೆ ಅವರು ಪೂರ್ಣವಾದ, ನೇರವಾದ ಹಾದಿಯಲ್ಲಿಹರು."

* * *

ಬುದ್ಧ ಭಗವಾನರು ಪ್ರಾಣಿಬಲಿಯು ಕೆಟ್ಟದೆಂದು ಬೋಧಿಸುತ್ತಿದ್ದರು. ಅದನ್ನು ಕೇಳಿದ ಕೆಲವರು ಕುಪಿತರಾಗಿ "ನಮ್ಮ ಪವಿತ್ರ ಗ್ರಂಥಗಳು ದೇವರುಗಳಿಗಾಗಿ ಬಲಿಕೊಡುವುದು ಉಚಿತವೆನ್ನುತ್ತದೆ, ನೀವೇಕೆ ಹೀಗೆ ಬೋಧಿಸುವಿರಿ?"

ಆಗ ಭಗವಾನರು ಅವರಿಗೆ ಹೀಗೆ ಬೋಧಿಸಿದರು: "ನಿಮ್ಮ ಸುಖಕ್ಕಾಗಿ ಪರರನ್ನು ದುಃಖಿತರನ್ನಾಗಿ ಮಾಡುವುದು ಸರಿಯಲ್ಲ. ಹಾಗೆ ನೀವು ಬಲಿ ಅರ್ಪಿಸಿದರೆ ನೀವೇ ಸ್ವಾರ್ಥಿಗಳಾಗುವಿರಿ ಮತ್ತು ಕ್ರೂರಿಗಳಾಗುವಿರಿ. ಸ್ವಾರ್ಥ ವ್ಯಕ್ತಿಗೆ ದುಃಖದ ವಿನಹ ಜೀವನದಲ್ಲಿ ಬೇರೇನೂ ದೊರೆಯದು ಎಂದು ನಾನು ಬೋಧಿಸುತ್ತೇನೆ."

"ಯಾವ ದೇವರೆ ಆಗಲಿ, ತಾನು ಸಹಾಯ ಮಾಡುವುದಕ್ಕೆ ಮುಂಚೆ ಪ್ರಾಣಿಯ ರಕ್ತವನ್ನು ಬಯಸಿದರೆ, ಆತನು ಕರುಣೆಯಿಲ್ಲದ ದೇವರಷ್ಟೇ. ಹೀಗಾಗಿ ಆತನು ಪೂಜೆಗೂ ಅರ್ಹನಲ್ಲ, ಆದರೆ ನೀವು ಪ್ರತಿಯೊಂದು ಜೀವಿಯ ಬಗ್ಗೆ ಕರುಣೆಯಿಂದ ವರ್ತಿಸಿದರೆ ದೇವತೆಗಳೇ ನಿಮಗೆ ಪೂಜಿಸುತ್ತಾರೆ."

ಇದನ್ನು ಆಲಿಸಿದ ಅವರು ಕ್ಷಮೆಯಾಚಿಸಿ, ಕೊಲ್ಲುವ ಸಂಪ್ರದಾಯ ತ್ಯಜಿಸಿದರು.



## ವರ್ಣ ವ್ಯವಸ್ಥೆಯ ಖಂಡನೆ (ಸಂಕ್ಷಿಪ್ತ ಅಸ್ಸಲಾಯನ ಸುತ್ತ)

ಒಮ್ಮೆ ಬ್ರಾಹ್ಮಣರು ಅಸ್ಸಲಾಯನ ಎಂಬ ಬ್ರಾಹ್ಮಣ ಯುವಕನ ನಾಯಕತ್ವದಲ್ಲಿ ಬಂದು ಹೀಗೆ ಕೇಳಿದರು:

"ಭಗವಾನ್ ಬ್ರಾಹ್ಮಣರು ಹೀಗೆ ಹೇಳುತ್ತಾರೆ: 'ಬ್ರಾಹ್ಮಣರದ್ದೇ ಶ್ರೇಷ್ಠ ಜಾತಿ, ಬೇರೆ ಜಾತಿಗಳು ತುಚ್ಛವಾದುದು. ಬ್ರಾಹ್ಮಣರದ್ದೇ ಸುವರ್ಣದ ಜಾತಿ, ಪರರದ್ದು ದುರ್ವಣವಾಗಿದ್ದು, ಬ್ರಾಹ್ಮಣರು ಮಾತ್ರ ಪರಿಶುದ್ಧರು, ಬೇರೆಯವರಲ್ಲ, ಬ್ರಾಹ್ಮಣರು ಮಾತ್ರ ಬ್ರಹ್ಮನಿಂದ ಹುಟ್ಟಿದವರು. ಆತನ ಮುಖದಿಂದ ಜನಿಸಿದವರು, ಬ್ರಹ್ಮನ ವಂಶಸ್ಥರು ಆಗಿದ್ದಾರೆ."

ಆಗ ಭಗವಾನರು ಈ ಎಲ್ಲಾ ಕಾರಣಗಳನ್ನು ನೀಡಿ ಅವರ ವಾದಗಳನ್ನು ಭಂಗ ಮಾಡುತ್ತಾರೆ.

1. ಬ್ರಾಹ್ಮಣರ ಪತ್ನಿಯರು ಸಹಾ ಎಲ್ಲರಂತೆಯೇ ಜನ್ಮ ನೀಡುತ್ತಾರೆ.
2. ಪಾಶ್ಚಿಮಾತ್ರ ರಾಷ್ಟ್ರಗಳಾದ ಯೋನ ಮತ್ತು ಕಾಂಬೋಜಗಳಲ್ಲಿ 2 ಜಾತಿಯಿದೆ. ಯಜಮಾನ ಮತ್ತು ಸೇವಕ ಅವರಲ್ಲಿಯು ಅದು ನಿತ್ಯವಲ್ಲ, ಸ್ವಾಮಿಯು ಸೇವಕನಾಗಬಹುದು, ಸೇವಕನು ಸ್ವಾಮಿಯಾಗಬಹುದು.
3. ಯಾರು ಪಾಪ ಮಾಡಿದರೂ ಸಹಾ ದುರ್ಗತಿಗೆ ಬೀಳುವರು, ಇದಕ್ಕೆ ಯಾರು ಹೊರತಲ್ಲ.
4. ಪ್ರತಿಯೊಬ್ಬರು ಪುಣ್ಯ ಆಚರಿಸಬಹುದು, ಮೈತ್ರಿ ಧ್ಯಾನಗಳಲ್ಲಿ ಪ್ರವೀಣರಾಗಬಹುದು.
5. ಪ್ರತಿಯೊಬ್ಬರು ಸ್ನಾನ ಮಾಡಿ ಶುದ್ಧರಾಗಬಹುದು.
6. ಪ್ರತಿಯೊಬ್ಬರು ಹಚ್ಚಿದರೂ ಬೆಂಕಿ ಬರುವುದು, ಅದರಿಂದ ಅದರ ಪ್ರಯೋಜನ ಪಡೆಯಬಹುದು.

"ಹೀಗಿರುವಾಗ ಬ್ರಾಹ್ಮಣರೇ ಶ್ರೇಷ್ಠರೆನ್ನುವುದಕ್ಕೆ ಆಧಾರವೇನು?" ಆದರೂ ಸಹಾ ಅವರು ಪಟ್ಟು ಹಿಡಿಯುತ್ತಾರೆ.

ಆಗ ಭಗವಾನರು ಅವರನ್ನು ಬೇರೊಂದು ಹಾದಿಯಲ್ಲಿ ಚರ್ಚೆಗೆ ಆರಂಭಿಸುತ್ತಾರೆ: "ಅಸ್ಸಾಲಾಯನ ಇದರ ಬಗ್ಗೆ ಹೇಗೆ ಯೋಚಿಸುವೆ? ಇಬ್ಬರು ಬ್ರಾಹ್ಮಣ ಯುವಕರಿರುತ್ತಾರೆ, ಒಬ್ಬ ವೇದ ಜ್ಞಾನಗಳಲ್ಲಿ ಪರಿಣಿತ ಮತ್ತೊಬ್ಬ ಅವಿದ್ಯಾವಂತ. ಇಲ್ಲಿ ಯಾರಿಗೆ ಹೆಚ್ಚು ಗೌರವ, ಆತಿಥ್ಯ ನೀಡುತ್ತಾರೆ."

"ವಿದ್ಯಾವಂತನಿಗೆ, ಅವಿದ್ಯಾವಂತನಿಗಲ್ಲ."

"ಅಸ್ಸಲಾಯನ, ಈಗ ಇಬ್ಬರು ಬ್ರಾಹ್ಮಣರಿರುತ್ತಾರೆ, ಒಬ್ಬ ವೇದ ಜ್ಞಾನದಲ್ಲಿ ಪರಿಣಿತ ಆದರೆ ದುರಾಚಾರಿ, ದುಶ್ಶೀಲನಾಗಿರುತ್ತಾನೆ ಮತ್ತು ಇನ್ನೊಬ್ಬ ಅವಿದ್ಯಾವಂತ, ಆದರೆ ಸುಶೀಲ ಚಾರಿತ್ರ್ಯವಂತನಾಗಿರುತ್ತಾನೆ. ಇವರಲ್ಲಿ ಯಾರಿಗೆ ಗೌರವ ಆತಿಥ್ಯ ಸಿಗುತ್ತದೆ?"

"ಅವಿದ್ಯಾವಂತನಾಗಿದ್ದರೂ ಶೀಲವಂತನಾದವನಿಗೆ ಗೌರವ ಆತಿಥ್ಯ ಸಿಗುತ್ತದೆ."

"ಓ ಅಸ್ಸಲಾಯನ ಮೊದಲು ಜನ್ಮದ ಬಗ್ಗೆ ಮಾತನಾಡಿದೆವು, ನಂತರ ವೇದಜ್ಞಾನ (ಮಂತ್ರಗಳ) ಬಗ್ಗೆ ಮಾತನಾಡಿದೆವು, ಕೊನೆಗೆ ಪರಿಶುದ್ಧತೆಯಿಂದಲೇ (ಶೀಲದಿಂದ) ಗೌರವ ಆತಿಥ್ಯ ಸಿಗುತ್ತದೆ ಎಂದು ನೀವು ಒಪ್ಪಿರುವಿರಿ. ನಾನು ಸಹಾ ಅದನ್ನೇ ಬೋಧಿಸುತ್ತಿರುವೆ. ನಾಲ್ಕು ವರ್ಣಗಳಲ್ಲಿ ಶೀಲವಂತರೇ ಗೌರವಕ್ಕೆ ಪಾತ್ರರು. ಯಾರು ಸಹಾ ಜನ್ಮದಿಂದ ಶ್ರೇಷ್ಠನಾಗುವುದಿಲ್ಲ, ಕರ್ಮದಿಂದ (ಶೀಲ)ದಿಂದ ಶ್ರೇಷ್ಠನಾಗುತ್ತಾನೆ."

ಇದನ್ನು ಕೇಳಿದ ಅಸ್ಸಲಾಯನು ತಲೆತಗ್ಗಿಸಿದನು.

## ಬಾಹ್ಯ ಆಚರಣೆಯಿಂದ ಶುದ್ಧಿಯಿಲ್ಲ

"ಮಾಂಸದಿಂದಾಗಲಿ, ಉಪವಾಸದಿಂದಾಗಲಿ, ನಗ್ನತೆಯಿಂದಾಗಲಿ ಅಥವಾ ಮುಂಡನದಿಂದಾಗಲಿ, ಜಟೆಯಿಂದಾಗಲಿ ಅಥವಾ ಕೊಳಕಿನಿಂದಾಗಲಿ ಅಥವಾ ಒರಟು ಚರ್ಮದಿಂದಾಗಲಿ, ಅಗ್ನಿ ಪೂಜೆಯಿಂದಾಗಲಿ ಅಥವಾ ದೇಹದಂಡನೆಯಿಂದಾಗಲಿ ಅಥವಾ ಮಂತ್ರಗಳಿಂದಾಗಲಿ ಅಥವಾ ಸ್ನಾನದಿಂದಾಗಲಿ, ಬಲಿಯಿಂದಾಗಲಿ ಅಥವಾ ಯಜ್ಞಗಳಿಂದಾಗಲಿ, ಸಮಾರಂಭಗಳಿಂದಾಗಲಿ, ಮಾನವ ಶುದ್ಧಿ ಹೊಂದಲಾರ, ಸಂಶಯಗಳಿಂದ ಕೂಡಿರುವವನು ಹೇಗೆ ಶುದ್ಧನಾಗಿರುತ್ತಾನೆ."

"ತನ್ನಿಂದಲೇ ಪಾಪವಾಗುತ್ತದೆ, ತನ್ನಿಂದಲೇ ಕಲುಶಿತನಾಗುತ್ತಾನೆ, ತನ್ನಿಂದಲೇ ಪಾಪವರ್ಜಿತವಾಗುತ್ತದೆ, ತನ್ನಿಂದಲೇ ಪರಿಶುದ್ಧನಾಗುತ್ತಾನೆ, ಪರಿಶುದ್ಧತೆ ಮತ್ತು ಪಾಪಗಳು ತನ್ನನ್ನು ಅವಲಂಬಿಸಿದೆ, ಯಾರು ಪರರನ್ನು ಶುದ್ಧಿಗೊಳಿಸಲಾರರು."

## ಸೀಲಬ್ಬತ ಪಾರಮಾಸ (ದುಃಖವಿಮುಕ್ತಿಗೆ ಮೂಢ ಮಾರ್ಗಗಳು):

ಒಮ್ಮೆ ಭಗವಾನರು ಪಾವದಲ್ಲಿನ ಮಾವಿನ ತೋಪಿನಲ್ಲಿ ತಂಗಿದ್ದರು. ಅಲ್ಲಿಗೆ ಅಕ್ಕಸಾಲಿಗನ ಮಗನಾದ ಚುಂದನು ಭಗವಾನರನ್ನು ಕಾಣಲು ಬಂದನು. ಅಲ್ಲಿಗೆ ಬಂದು ವಂದಿಸಿ ಗೌರವದಿಂದ ಒಂದೆಡೆ ಕುಳಿತನು. ಆಗ ಆತನಿಗೆ ಭಗವಾನರು ಈ ರೀತಿಯಾಗಿ ಪ್ರಶ್ನಿಸಿದರು:

"ಚುಂದ ಯಾರ ಪರಿಶುದ್ಧತೆಯ ಆಚರಣೆಗಳು ನಿನಗೆ ತೃಪ್ತಿಯನ್ನು ಕೊಟ್ಟಿವೆ?"

"ಭಗವಾನ್ ಪಶ್ಚಿಮದಲ್ಲಿನ ಬ್ರಾಹ್ಮಣರು ನೀರಿನ ಬಿಂದಿಗೆಗಳನ್ನು ತಂದು, ಕಮಲದ ಹೂಗಳ ಹಾರಗಳನ್ನು ಹಾಕಿಕೊಂಡು, ಅಗ್ನಿಯನ್ನು ಪೂಜಿಸುತ್ತ, ನೀರನ್ನು ಹಾಕಿಕೊಳ್ಳುತ್ತ ಆಚರಣೆಗಳನ್ನು ಮಾಡುತ್ತಾರೆ. ಅವರ ಬಗ್ಗೆ ನನಗೆ ತೃಪ್ತಿಯಿದೆ."

"ಓ ಚುಂದ, ಆ ಬ್ರಾಹ್ಮಣರು ನೀರಿನ ಬಿಂದಿಗೆಗಳನ್ನು ತಂದು ಯಾವರೀತಿಯಲ್ಲಿ ಆಚರಣೆ ಮಾಡುತ್ತಾರೆ?"

"ಭಗವಾನ್, ಅವರು ನೀರಿನ ಬಿಂದಿಗೆಗಳನ್ನು ತಂದು ಈ ರೀತಿ ಹಿಂಬಾಲಕರಿಗೆ ಆಜ್ಞಾಪಿಸುತ್ತಾರೆ. 'ಬಾ ಇಲ್ಲಿ ಸೋದರ, ಬ್ರಾಹ್ಮೀ ಮುಹೂರ್ತದಲ್ಲಿ ಎದ್ದೇಳು, ಭೂಮಿಗೆ ವಂದಿಸು, ಭೂಮಿಗೆ ತಲೆಬಾಗಿ ವಂದಿಸದಿದ್ದರೆ ಒದ್ದೆಯಾದ ಸಗಣಿಯನ್ನು ಸ್ಪರ್ಶಿಸು,



ಅದನ್ನು ಮುಟ್ಟದಿದ್ದರೆ ಹಸಿರು ಹುಲ್ಲನ್ನು ಸ್ಪರ್ಶಿಸು, ಹೀಗೂ ಮಾಡಲು ಸಾಧ್ಯವಾಗದಿದ್ದರೆ ಅಗ್ನಿಪೂಜೆಯನ್ನು ಮಾಡು, ಹಾಗು ಮಾಡಲು ಸಾಧ್ಯವಾಗದಿದ್ದರೆ ಸೂರ್ಯನಿಗೆ ನಮಸ್ಕರಿಸು, ಇದು ಸಾಧ್ಯವಾಗದಿದ್ದರೆ ನೀನು ಸಂಜೆ ವೇಳೆ ನೀರಿನಲ್ಲಿ ಮೂರುಬಾರಿ ಮುಳುಗಿ ಏಳು.' ಹೀಗೆ ಭಂತೆ, ಬ್ರಾಹ್ಮಣರು ನೀರಿನ ಬಿಂದಿಗೆಗಳಿಂದ ನೀರನ್ನು ಹಾಕಿಕೊಂಡು ಆಚರಣೆಗಳನ್ನು ಮಾಡುತ್ತಾರೆ. ಇದರಲ್ಲಿ ನನಗೆ ತೃಪ್ತಿಯಿದೆ."

"ಒಳ್ಳೆಯದು ಚುಂದ, ಈ ಬ್ರಾಹ್ಮಣರ ಶುದ್ಧೀಕರಣ ಆಚರಣೆಯು ಆರ್ಯ ವಿಶುದ್ಧಿಗಿಂತ ಭಿನ್ನವಾಗಿದೆ."

"ಭಗವಾನ್, ಆರ್ಯರ ವಿಶುದ್ಧಿ ಹೇಗಿರುತ್ತದೆ?"

"ಹಾಗಾದರೆ ಚುಂದ, ನಾನು ವಿವರಿಸುವೆ, ಗಮನವಿಟ್ಟು ಆಲಿಸು."

"ಸರಿ ಭಂತೆ."

"ಓ ಚುಂದ, ಶರೀರದಿಂದ ಮೂರು ಬಗೆಯಲ್ಲಿ ಕಲುಷಿತ ಕಾರ್ಯವಾಗುತ್ತದೆ. ಮಾತಿನಲ್ಲಿ ನಾಲ್ಕುಬಗೆಯ ಕಲುಷಿತವಾಗುತ್ತದೆ. ಯೋಚನೆಗಳಿಂದ ಮೂರುಬಗೆಯಲ್ಲಿ ಕಲುಷಿತವಾಗುತ್ತದೆ ಮತ್ತು ಹೇಗೆ ಶರೀರದಿಂದ ಮೂರುಬಗೆಯಲ್ಲಿ ಕಲುಶಿತತೆಯಾಗುತ್ತದೆ? ಇಲ್ಲಿ ಚುಂದ, ಒಬ್ಬನು ಜೀವಹತ್ಯೆ ಮಾಡುತ್ತಾನೆ, ಬೇಟೆಗಾರನಾಗಿರುತ್ತಾನೆ, ರಕ್ತವುಳ್ಳ ಕೈಗಳುಳ್ಳವನು ಆಗುತ್ತಾನೆ. ಜೀವಿಗಳ ದಯೆಯಿಲ್ಲದೆ ಕೊಲ್ಲುತ್ತಲೇ ಇರುತ್ತಾನೆ. ಹಾಗೆಯೇ ಒಬ್ಬನು ತನಗೆ ನೀಡದುದನ್ನು ತೆಗೆದುಕೊಳ್ಳುತ್ತಾನೆ. ಆತನು ತನಗೆ ನೀಡದ ಎಲ್ಲವನ್ನು ಕಳ್ಳತನ ಮಾಡುತ್ತಾನೆ. ಪರರಿಗೆ ಸೇರಿದ ಆಸ್ತಿಯನ್ನು ಕಬಳಿಸುತ್ತಾನೆ. ಹಾಗೆಯೇ ಒಬ್ಬನು ವ್ಯಭಿಚಾರಿಯಾಗುತ್ತಾನೆ. ಆತನು ತಂದೆ–ತಾಯಿಗಳ, ಸೋದರರ, ಬಂಧುಗಳಲ್ಲಿ ಸುರಕ್ಷಿತವಾದ ಕನ್ಯೆ ಅಥವಾ ಸ್ತ್ರೀಯಲ್ಲಿ ಅನಾಚಾರ ಮಾಡುತ್ತಾನೆ, ಇದು ದೇಹದಲ್ಲಿನ ಕಲುಶಿತತೆಯಾಗಿದೆ."

"ಮತ್ತೆ ಚುಂದ, ಆತನು ಮಾತಿನಲ್ಲಿ ಹೇಗೆ ಕಲುಷಿತನಾಗುತ್ತಾನೆ? ಇಲ್ಲಿ ಚುಂದ, ಒಬ್ಬನು ಸುಳ್ಳುಗಾರನಾಗುತ್ತಾನೆ, ಆತನು ಸಭಾ ಮಧ್ಯೆ ಅಥವಾ ನ್ಯಾಯಾಚರಣೆಯ ಸಮಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಾನೆ. ಗೊತ್ತಿರುವುದನ್ನು ಗೊತ್ತಿಲ್ಲವೆಂದು, ಗೊತ್ತಿಲ್ಲದಿರುವುದನ್ನು ಗೊತ್ತು ಎಂದು ಕಂಡಿಲ್ಲದಿರುವುದನ್ನು ಕಂಡೆ ಎಂದೂ, ಕಂಡಿರುವುದನ್ನು ಕಂಡಿಲ್ಲ ಎಂದು ಸುಳ್ಳು ಹೇಳುತ್ತಾನೆ. ಹೀಗೆ ಆತನು ತನಗಾಗಿ ಅಥವಾ ಪರರಿಗಾಗಿ ಅಥವಾ ಲೌಕಿಕ ಲಾಭಕ್ಕಾಗಿ ಅಥವಾ ಪರರ ಲೌಕಿಕ ಲಾಭಕ್ಕಾಗಿ ಸುಳ್ಳು ಹೇಳುತ್ತಾನೆ."

"ಹಾಗೆಯೇ ಒಬ್ಬನು ಚಾಡಿಕೋರನಾಗಿರುತ್ತಾನೆ. ಇಲ್ಲಿ ಕೇಳಿದ್ದನ್ನು ಅಲ್ಲಿ ಹೇಳಿ ಅಥವಾ ಅಲ್ಲಿ ಕೇಳಿದ್ದನ್ನು ಇಲ್ಲಿ ಹೇಳಿ ಜಗಳಗಳನ್ನು ತರುತ್ತಾನೆ. ಹೀಗೆ ಆತನು ವ್ಯಕ್ತಿಗಳಲ್ಲಿ ಅಥವಾ ಸಮೂಹಗಳಲ್ಲಿ ಜಗಳಗಳನ್ನು ತರುತ್ತಾನೆ. ಹೀಗೆ ಆತನು ಐಕ್ಯತೆ ಭಂಗಮಾಡುತ್ತದೆ, ಸಾಮರಸ್ಯಕ್ಕೆ ಸೌಹಾರ್ದತೆಗೆ ಭಂಗ ತರುತ್ತಾನೆ. ಹೀಗೆ ಆತನು ಸ್ನೇಹ ಭಂಗದಲ್ಲೇ ಆನಂದಿಸುತ್ತಾನೆ."

"ಹಾಗೆಯೇ ಒಬ್ಬನು ಕಟುವಾಗಿ ಒರಟಾಗಿ ಮಾತನಾಡುವವನಾಗಿರುತ್ತಾನೆ. ತನ್ನ ಮಾತಿನಿಂದ ಪರರಿಗೆ ನೋವಾಗುವಂತೆ, ಕೋಪ ಬರುವಂತೆ, ದುಃಖ ತರುವಂತೆ ಚಿತ್ತ ಕ್ಷೋಭೆ ತರುವಂತಹ ಮಾತುಗಳನ್ನು ಆಡುತ್ತಾನೆ."

"ಹಾಗೆಯೇ ಒಬ್ಬನು ಸೋಮಾರಿತನದ ಹರಟೆಗಳಲ್ಲಿ ತಲ್ಲೀನನಾಗುತ್ತಾನೆ. ಸಮಯೋಚಿತವಲ್ಲದ ಮಾತುಗಳನ್ನು ಆಡುತ್ತಾನೆ. ಅವಾಸ್ತವಿಕ ಮಾತುಗಳನ್ನು ಆಡುತ್ತಾನೆ, ಅನರ್ಥಕಾರಿ ಮಾತುಗಳನ್ನು ಆಡುತ್ತಾನೆ, ಧರ್ಮವಲ್ಲದ, ವಿನಯವಲ್ಲದ ಮಾತುಗಳನ್ನು ಆಡುತ್ತಾನೆ, ಶೇಖರಣೆಗೆ ಯೋಗ್ಯವಾದ ಮಾತುಗಳನ್ನು ಆಡುವುದಿಲ್ಲ, ವಿಚಾರಪೂರಿತ ವಲ್ಲದ ಮಾತುಗಳನ್ನು ಆಡುತ್ತಾನೆ. ಕೇಳಲು ಅರ್ಹವಾದ, ವಿವೇಚನೆಯಿಲ್ಲದ ಮತ್ತು ಲಾಭವಿಲ್ಲದ ಮಾತುಗಳನ್ನೇ ಆಡುತ್ತಾನೆ."

"ಹೀಗೆ ಚುಂದ, ಈ ನಾಲ್ಕು ರೀತಿಯಲ್ಲಿ ಮಾತು ಕಲುಶಿತದಿಂದ ಕೂಡಿರುತ್ತದೆ."

"ಮತ್ತು ಹೇಗೆ ಮನಸ್ಸು ಮೂರು ವಿಧದಲ್ಲಿ ಕಲುಷಿತದಿಂದಿರುತ್ತದೆ?"

"ಚುಂದ, ಇಲ್ಲಿ ಒಬ್ಬನು ದುರಾಸೆಯಿಂದ ಕೂಡಿರುತ್ತಾನೆ. ಆತನು ಮತ್ತೊಬ್ಬರ ಆಸ್ತಿಯ ಬಗ್ಗೆ ದುರಾಸೆಯಿಂದ ಕೂಡಿರುತ್ತಾನೆ. ಆತನು ಹೀಗೆ ಯೋಚಿಸುತ್ತಾನೆ: 'ಓ ಆತನ ಆಸ್ತಿ ನನ್ನದಾಗಿದ್ದರೆ!' ಹಾಗೆಯೇ ಒಬ್ಬನು ದ್ವೇಷವುಳ್ಳ ಚಿತ್ತದಿಂದ ಕೂಡಿರುತ್ತಾನೆ, ಆತ ಹೀಗೆ ಪರರ ಬಗ್ಗೆ ಹಾನಿ ಯೋಚಿಸುತ್ತಾನೆ: 'ಈ ಜೀವಿಗಳು ನಾಶವಾಗಲಿ, ಕೊಲ್ಲಲ್ಪಡಲಿ, ಇರದೆ ಇರಲಿ', ಹಾಗೆಯೇ ಆತನು ಮಿಥ್ಯಾ ದೃಷ್ಟಿಗಳಿಂದ ಕೂಡಿರುತ್ತಾನೆ. ಹೇಗೆಂದರೆ: 'ದಾನಕ್ಕೆ, ಸೇವೆಗೆ, ಅರ್ಪಣೆಗೆ ಲಾಭವಿಲ್ಲ. ಸುಕರ್ಮ ಅಥವಾ ಕುಕರ್ಮಗಳಿಗೆ ಫಲವಿಲ್ಲ. ಈ ಲೋಕದಲ್ಲೂ ಫಲವಿಲ್ಲ, ಪರಲೋಕವೇ ಇಲ್ಲ. ತಾಯ್ತಂದೆಗಳಿಗೆ ಮಾಡುವ ಸೇವೆಯು ಲಾಭವಲ್ಲ. ತಾವಾಗಿಯೇ ಹುಟ್ಟುವ ಜೀವಿಗಳಿಲ್ಲ, ಶೀಲವಂತರಾದ ಅಭಿಜ್ಞಾ ಸಂಪನ್ನರಾದ, ಪ್ರಜ್ಞಾರಾದ, ಸಾಕ್ಷಾತ್ಕರಿಸಿದ ಸಮಣ ಬ್ರಾಹ್ಮಣರು ಯಾರೂ ಇಲ್ಲ."

"ಹೀಗೆ ಚುಂದ, ಇವು ಮನಸ್ಸಿನ ಮೂರು ಕಲುಷಿತಗಳಾಗಿವೆ."

"ಚುಂದ, ಈ ಹತ್ತುಬಗೆಯ ಮಿಥ್ಯಾ ಕರ್ಮಗಳಿಂದ ಕಲುಷಿತನಾಗಿರುವವನು ಭೂಮಿಗೆ ನಮಸ್ಕರಿಸಿದರೂ, ಅಶುದ್ಧನಾಗಿಯೇ ಇರುತ್ತಾನೆ, ಹಾಗೆಯೇ ಒದ್ದೆ ಗೊಬ್ಬರವನ್ನು ಸ್ಪರ್ಶಿಸಿದರೂ ಅಶುದ್ಧನಾಗಿಯೇ ಇರುತ್ತಾನೆ, ಹಸಿರು ಹುಲ್ಲುಗಳನ್ನು ಸ್ಪರ್ಶಿಸಿದರೂ ಅಶುದ್ಧನಾಗಿಯೇ ಇರುತ್ತಾನೆ, ಅಗ್ನಿಪೂಜೆಯನ್ನು ಆತ ಮಾಡಿದರೂ ಅಶುದ್ಧನಾಗಿಯೇ ಇರುತ್ತಾನೆ, ಸೂರ್ಯನಿಗೆ ವಂದಿಸಿದರೂ, ನಮಸ್ಕರಿಸಿದರೂ ಅಶುದ್ಧನಾಗಿಯೇ ಇರುತ್ತಾನೆ, ನೀರಿನಲ್ಲಿ ಎಷ್ಟುಬಾರಿ ಮುಳುಗಿದರೂ, ಸ್ನಾನ ಮಾಡಿದರೂ ಅಶುದ್ಧವಾಗಿ ಇರುತ್ತಾನೆ, ಏಕೆ ಹೀಗೆ? ಏಕೆಂದರೆ ಈ 10 ಬಗೆಯ ಮಿಥ್ಯಾಕರ್ಮಗಳಿಂದ ಕಲುಷಿತನಾಗಿರುವವನು, ಕಲುಷಿತಕ್ಕೆ ಕಾರಣಕರ್ತನಾಗಿದ್ದಾನೆ, ಅಂತಹವನು ನಿರಯಗಳಲ್ಲಿ, ಪ್ರಾಣಿಗಳಲ್ಲಿ ಹುಟ್ಟುತ್ತಾನೆ, ಪ್ರೇತವಾಗುತ್ತಾನೆ ಅಥವಾ ಕೆಟ್ಟ ಪರಿಸ್ಥಿತಿಗಳಲ್ಲಿ ಹುಟ್ಟುತ್ತಾನೆ."

"ಆದರೆ ಚುಂದ, ನಾಲ್ಕುವಿಧದ ಕಾಯದಿಂದ ನಾಲ್ಕು ವಿಧದ ಮಾತಿನಿಂದ ಮತ್ತು ಮೂರುಬಗೆಯ ಚಿತ್ತದಿಂದಲೂ ಪರಿಶುದ್ಧನಾಗುವ ಬಗೆಯಿದೆ."



"ಹೇಗೆಂದರೆ ಇಲ್ಲಿ ಚುಂದ, ಒಬ್ಬನು ಜೀವಹತ್ಯೆ ಮಾಡುವುದರಿಂದ ದೂರಾಗುತ್ತಾನೆ, ದಂಡಶಸ್ತ್ರಗಳನ್ನು ಎಸೆದು, ಸಭ್ಯನಾಗಿ, ದಾನಿಯಾಗಿ, ಸರ್ವಜೀವಿಗಳಲ್ಲಿ ಕರುಣೆಯಿಂದ ಕೂಡಿರುತ್ತಾನೆ. ಹಾಗೆಯೇ ತನಗೆ ಸೇರದುದನ್ನು ತೆಗೆದುಕೊಳ್ಳದೆ, ಪರವಸ್ತು, ಪರಧನ ಮುಟ್ಟದೆ ಪ್ರಾಮಾಣಿಕನಾಗಿರುತ್ತಾನೆ. ಹಾಗೆಯೇ ಅನೀತಿಯುತ ಕಾಮದಲ್ಲಿ ತೊಡಗದೆ, (ಪತ್ನಿಯ ವಿನಃ) ಯಾವ ಸ್ತ್ರೀಯಲ್ಲಿ ಅನುರಕ್ತನಾಗದೆ, ಪರಸ್ತ್ರೀಯನ್ನು ಮುಟ್ಟದೆ, ಪರಿಶುದ್ಧವಾಗಿರುತ್ತಾನೆ. ಇದರಿಂದ ದೇಹವನ್ನು ಶುದ್ಧೀಕರಿಸುತ್ತಾನೆ. ಹಾಗೆಯೇ ಆತನು ಚಾಡಿ ಹೇಳುವಿಕೆಯಿಂದ ವಿರತನಾಗುತ್ತಾನೆ. ಆತನು ಇಲ್ಲಿ ಕೇಳಿದ ಅಥವಾ ಅಲ್ಲಿ ಕೇಳಿದ ಮಾತುಗಳನ್ನು ಯಾರಲ್ಲಿ ಹೇಳಿ ಐಕ್ಯತೆ ಭಂಗ ಮಾಡುವುದಿಲ್ಲ. ಆತ ಸದಾ ಸೌಹಾರ್ದತೆಯ, ಸಾಮರಸ್ಯ ಉಂಟುಮಾಡುವ ಮಾತುಗಳನ್ನೇ ಆಡುತ್ತಾನೆ. ಅಂತಹುದರಲ್ಲೇ ಆನಂದಿಸುತ್ತಾನೆ. ಹಾಗೆಯೇ ಆತನು ಕಟುವಾದ ಒರಟು ಭಾಷೆಯಿಂದ ವಿರತನಾಗುತ್ತಾನೆ. ಆತನು ಕಿವಿಗಳಿಗೆ ಇಂಪಾದ, ಮಧುರವಾದ, ಹೃದಯಕ್ಕೆ ಸ್ಪರ್ಶಿಸುವಂತಹ, ಸರ್ವರೂ ಒಪ್ಪುವಂತಹ, ಆನಂದ ನೀಡುವಂತಹ ಮಾತುಗಳನ್ನೇ ಆಡುತ್ತಾನೆ. ಹಾಗೆಯೇ ಒಬ್ಬನು ಸೋಮಾರಿತನದ ಹರಟೆಯಿಂದ ವಿರತನಾಗುತ್ತಾನೆ. ಆತನು ಸಮಯೋಚಿತ ಮಾತುಗಳನ್ನೇ ಆಡುತ್ತಾನೆ. ವಾಸ್ತವಿಕ ಸತ್ಯಗಳ ಮಾತುಗಳನ್ನು, ಆಡುತ್ತಾನೆ. ಗುರಿಗೆ ಸಂಬಂಧಿಸಿದಂತೆ ಮಾತುಗಳನ್ನು ಆಡುತ್ತಾನೆ. ಧರ್ಮಕ್ಕೆ ಸಂಬಂಧಪಟ್ಟ ಶಿಸ್ತಿಗೆ ಸಂಬಂಧಪಟ್ಟ, ಶೇಖರಣೆಗೆ ಯೋಗ್ಯ ಮಾತುಗಳನ್ನು ಆಡುತ್ತಾನೆ. ಕೇಳಲು ಅರ್ಹವಾದ, ವಿವೇಚನಾಭರಿತ, ಅರ್ಥಕಾರಿ, ಲಾಭಕಾರಿ ಮಾತುಗಳನ್ನೇ ಆಡುತ್ತಾನೆ."

"ಹೀಗೆ ಚುಂದ, ಇವು ನಾಲ್ಕುರೀತಿಯಲ್ಲಿ ಮಾತನ್ನು ಶುದ್ಧೀಕರಿಸುತ್ತವೆ ಮತ್ತು ಹೇಗೆ ಮನಸ್ಸನ್ನು ಮೂರು ವಿಧದಿಂದ ಶುದ್ಧೀಕರಿಸಬಹುದು?" ಇಲ್ಲಿ ಒಬ್ಬನು ದುರಾಸೆ ಪೀಡಿತನಾಗುವುದಿಲ್ಲ. ಪರರ ಸ್ವತ್ತಿಗೆ ಆಸೆಪಡುವುದಿಲ್ಲ. 'ಅವು ನನ್ನದಾಗಲಿ' ಎಂದು ಯೋಚಿಸುವುದಿಲ್ಲ. ಹಾಗೆಯೇ ಆತನು ದ್ವೇಷಿಸುವವನು ಆಗಿರುವುದಿಲ್ಲ, ಆತನ ಚಿತ್ತವು ಕಲುಶಿತವಾಗುವುದಿಲ್ಲ. ಆತನು ಹೀಗೆ ಹಾರೈಸುತ್ತಾನೆ: "ಎಲ್ಲಾ ಜೀವಿಗಳು ಸುಖವಾಗಿರಲಿ, ಶಾಂತತೆಯಿಂದಿರಲಿ, ಕ್ಷೇಮವಾಗಿರಲಿ, ದ್ವೇಷದಿಂದ ದೂರವಾಗಿರಲಿ, ದುಃಖದಿಂದ ಪೂರ್ಣವಾಗಿ ಪಾರಾಗಲಿ".

"ಹಾಗೆಯೇ ಆತನು ಸಮ್ಮಾದೃಷ್ಟಿಕೋನದಿಂದ ಕೂಡಿರುತ್ತಾನೆ. ಆತನು ವಿಶಾಲವಾದ ದೃಷ್ಟಿಕೋನದಿಂದ ಕೂಡಿರುತ್ತಾನೆ, ದಾನಕ್ಕೆ ಫಲವಿದೆ, ಶೀಲಕ್ಕೆ ಫಲವಿದೆ, ತಂದೆ–ತಾಯಿಗಳಿಗೆ ಮಾಡುವ ಸೇವೆ, ಪರಮ ಲಾಭಕಾರಿ, ಸ್ತುತಾರ್ಹ. ಸ್ವಯಂ ಹುಟ್ಟುವ ಪ್ರೇತ, ದೇವತೆಗಳು, ಧ್ಯಾನ ಜೀವಿಗಳಾದ ಬ್ರಹ್ಮರು ಇದ್ದಾರೆ. ಶೀಲವಂತರು, ಧ್ಯಾನಿಗಳು, ಜ್ಞಾನಿಗಳು, ಅಭಿಜ್ಞಾ ಸಂಪನ್ನರಾದ ಸಮಣ ಬ್ರಾಹ್ಮಣರು (ವ್ಯಕ್ತಿಗಳು) ಇದ್ದಾರೆ ಎಂಬಂತಹ ಸಮ್ಮಾದೃಷ್ಟಿಯನ್ನು ಹೊಂದಿರುತ್ತಾನೆ.

"ಹೀಗೆ ಚುಂದ, ತ್ರಿವಿಧದಲ್ಲಿ ಚಿತ್ತವಿಶುದ್ಧಿಯಾಗುತ್ತದೆ. ಪರಿಶುದ್ಧತೆಯು ಹೀಗೆ ಆಗುವುದೇ ಹೊರತು ಭೂಮಿಗೆ, ಅಗ್ನಿಗೆ, ಸೂರ್ಯನಿಗೆ ಪೂಜಿಸುವುದರಿಂದಲ್ಲ. ಸಗಣಿಯನ್ನು,

ಹುಲ್ಲನ್ನು, ಮುಟ್ಟುವುದರಿಂದಲ್ಲ, (ಸ್ನಾನ ಮಾಡುವುದರಿಂದ ಚಿತ್ತ ಶುದ್ಧಿಯಾಗದು, ದೇಹ ಶುದ್ಧಿಯಾಗುತ್ತದೆಯಷ್ಟೇ) ನೀರನ್ನು ಸ್ಪರ್ಶಿಸುವುದರಿಂದಲ್ಲ."

"ಹೀಗೆ ಚುಂದ 10 ರೀತಿಯ ಕುಶಲ ಕರ್ಮದಿಂದಾಗಿ ಪರಿಶುದ್ಧತೆ ಲಭಿಸುವುದು, ಸುಖ ಲಭಿಸುವುದು."

ಹೀಗೆ ಅದನ್ನು ಆಲಿಸಿದ ಚುಂದ ಅನುಮೋದನೆ ಮಾಡಿ ತ್ರಿರತ್ನಗಳಿಗೆ ಶರಣಾಗತನಾದನು.

## ನದಿಗಳ ಸ್ನಾನದಿಂದ ಮಾನವನ ಶುದ್ಧಿಯಾಗುವುದೇ?

ಒಮ್ಮೆ ಸುಂದರಿಕ ಭಾರದ್ವಜನು ಭಗವಾನರಲ್ಲಿ ಹೀಗೆ ಕೇಳಿದನು: "ಭಗವಾನರು ಬಾಹುಕಾ ನದಿಗೆ ಸ್ನಾನ ಮಾಡಲು ಹೋಗುವಿರೇನು?"

"ಓ ಬ್ರಾಹ್ಮಣ, ಬಾಹುಕಾ ನದಿಯಿಂದ ವಿಶೇಷ ಪ್ರಯೋಜನವೇನಾದರೂ ಇದೆಯೇ?"

"ಆದರೆ ಗೋತಮರೇ, ಬಾಹುಕಾ ನದಿಯು ಬಹಳಷ್ಟು ಜನರಿಂದ ಮೋಕ್ಷ ಸಮ್ಮತವಾದುದು, ಪವಿತ್ರನನ್ನಾಗಿಸುವುದೆಂದು ಭಾವಿಸುತ್ತಾರೆ. ಅದರಲ್ಲಿ ಮುಳುಗಿ ಎದ್ದರೆ ಅಪಾರ ಪುಣ್ಯವೆಂದು ಭಾವಿಸುತ್ತಾರೆ. ಅದರಲ್ಲಿ ಸ್ನಾನ ಮಾಡಿದರೆ ಪಾಪಕರ್ಮಗಳ ಫಲವೆಲ್ಲಾ ತೊಳೆದು ಹೋಗುವುದು ಎಂದು ಭಾವಿಸುತ್ತಾರೆ. ಇದಕ್ಕೆ ತಮ್ಮ ಅಭಿಪ್ರಾಯವೇನು?"

ಆಗ ಭಗವಾನರು ಈ ಗಾಥೆಗಳನ್ನು ಹೇಳಿದರು:

*"ಬಾಹುಕಾದಲ್ಲಿ ಮತ್ತು ಅಧಿಕಕ್ಕದಲ್ಲಿ*
*ಗಯಾದಲ್ಲಿ ಮತ್ತು ಸುಂದರಿಕಾದಲ್ಲಿ*
*ಸರಸ್ವತಿ ಹಾಗು ಬಾಹುಮತಿಯಲ್ಲಿ*
*ಮೂರ್ಖನು ನಿರಂತರ ಪ್ರವೇಶಿಸಿದರೂ*
*ಆತನ ಕಪ್ಪು (ಪಾಪ) ಕರ್ಮಗಳು ಶುದ್ಧಿಯಾಗುವುದಿಲ್ಲ."*

*"ಸುಂದರಿಕಾವು ಏನುತಾನೇ ಮಾಡೀತು?*
*ಪಯಾಗವಾಗಲಿ, ಬಾಹುಕಾವಾಗಲಿ ಏನುತಾನೇ ಮಾಡೀತು?*
*ಅವು ಪಾಪಿಯನ್ನು ತೊಳೆಯಲಾರವು*
*ಪಾಪಕರ್ಮಗಳ ಫಲವನ್ನು ತೆಗೆಯಲಾರದು*
*ಪರಿಶುದ್ಧ ವ್ಯಕ್ತಿಗೆ ಪ್ರತಿದಿನವು ಶುಭದಿನವೇ ಸರಿ,*
*ಪರಿಶುದ್ಧರಿಗೆ ಪ್ರತಿದಿನವೂ ಪವಿತ್ರವೇ ಆಗಿದೆ,*
*ಪರಿಶುದ್ಧ ಹೊಂದಿ ಪ್ರಕಾಶದ ಕರ್ಮವುಳ್ಳವರಿಗೆ ಶೀಲದ ಸಾಧನೆಯೇ ಸಂಪ್ರದಾಯವಾಗಿದೆ, ಇದರಲ್ಲಿ ಮುಳುಗಿ ಸ್ನಾನ ಮಾಡು.*



*ಬ್ರಾಹ್ಮಣ, ಇದರಿಂದಾಗಿಯೇ ಸರ್ವಜೀವಿಗಳು ಕ್ಷೇಮವಾಗಿರುವುವು, ನೀವು ಸುಳ್ಳು ಹೇಳದಿದ್ದರೆ, ಜೀವಹಿಂಸೆ ಮಾಡದಿದ್ದರೆ, ಕೊಡದಿದ್ದುದನ್ನು ತೆಗೆದುಕೊಳ್ಳದಿದ್ದರೆ, ಶ್ರದ್ಧಾವಂತನಾದರೆ, ಜಿಪುಣನಾಗದಿದ್ದರೆ, ಗಯೆಗೆ ಹೋಗಿ ಏನು ಮಾಡುವೆ? ಗಯಾ ನದಿಯು ಕೇವಲ ಭಾವಿಯಾಗಿದೆ (ನೀರಿರುವ ಸ್ಥಳವಾಗಿದೆ)."*

ಈ ವಚನಗಳಿಂದ ಭಾರದ್ವಜನು ಅರಿವನ್ನು ಪಡೆದನು. ನದಿ ನೀರಿನಿಂದ ಶುದ್ಧವಾಗುವ ಹಾಗಿದ್ದರೆ ಅಲ್ಲಿನ ಜಲಚರಗಳೆಲ್ಲಾ ಪುಣ್ಯವನ್ನು, ಮುಕ್ತಿಯನ್ನು ಪಡೆದುಬಿಡುತ್ತಿತ್ತು. ನದಿಗಳು ಸ್ನಾನಕ್ಕಾಗಿ ಮಾತ್ರ, ಚಿತ್ತಶುದ್ಧಿ ನೀಡಲಾರವು ಎಂದರಿತನು.

## ಹೆಣ್ಣು ಮಗುವು ಅಶುಭವೇ?

ಒಮ್ಮೆ ಭಗವಾನರು ಶ್ರಾವಸ್ತಿಯಲ್ಲಿದ್ದಾಗ ಮಹಾರಾಜ ಪಸೇನದಿಯು ಭಗವಾನರಲ್ಲಿಗೆ ಬಂದನು. ಮತ್ತು ವಂದಿಸಿ ಅವರೊಂದಿಗೆ ಮಾತನಾಡುತ್ತ ಕುಳಿತಿರುವಾಗ, ರಾಜದೂತರು ಅಲ್ಲಿಗೆ ಬಂದು ರಾಜನ ಕಿವಿಯಲ್ಲಿ, ಮಹಾರಾಣಿ ಮಲ್ಲಿಕಾಳು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ ಎಂದು ನುಡಿದರು. ಆಗ ಪಸೇನದಿ ಮಹಾರಾಜನು ಅಸಂತುಷ್ಟನಾದನು.

ಆಗ ಭಗವಾನರಿಗೆ ವಿಷಯ ಅರಿವಾಗಿ ಈ ಗಾಥೆ ನುಡಿದರು:

*"ಓ ಮಹಾರಾಜ, ಹೆಣ್ಣು ಮಗುವು ಗಂಡು ಮಗುವಿಗಿಂತ ಉತ್ತಮಳೆಂದು ರುಜುವಾತು ಮಾಡಬಲ್ಲಳು. ಹೇಗೆಂದರೆ ಆಕೆ ಶೀಲವಂತೆಯಾಗಿ, ಪ್ರಜ್ಞಾವಂತೆಯಾಗಿ ಬೆಳೆದು ಅತ್ತೆ ಮನೆಯಲ್ಲಿ ಗೌರವಯುತವಾಗಿದ್ದು, ನಿಜಪತ್ನಿಯಾಗಿರುತ್ತಾಳೆ. ಮಹತ್ಕಾರ್ಯಗಳನ್ನು ಮಾಡುವಂತಹ ಮಹಾ ಕ್ಷೇತ್ರಗಳನ್ನು ಆಳುವಂತಹ ಸುಪುತ್ರನನ್ನು ಹೆರುತ್ತಾಳೆ. ಅಂತಹ ಮಗನಿಗೆ, ಯೋಗ್ಯ ಪತ್ನಿ ದೊರೆತರೆ ಆಕೆ ದೇಶಕ್ಕೆ ಮಾರ್ಗದರ್ಶಿಯು ಆಗುತ್ತಾಳೆ."*

## ಯುದ್ಧದಲ್ಲಿ ಸತ್ತರೆ ಸ್ವರ್ಗ ಸಿಗುವುದೇ?

ಒಮ್ಮೆ ಒಬ್ಬ ಯೋಧ ಗುರುವು ಭಗವಾನರ ಬಳಿಗೆ ಬಂದನು, ಭಗವಾನರಿಗೆ ವಂದಿಸಿದನು. ಕುಶಲ ವಿನಿಮಯ ಮಾಡಿಕೊಂಡು ಒಂದೆಡೆ ಕುಳಿತನು. ನಂತರ ಆ ಯೋಧ ಗುರುವು ಭಗವಾನರೊಂದಿಗೆ ಹೀಗೆ ಕೇಳಿದನು:

"ಭಗವಾನ್ ಯೋಧ ಗುರುಗಳಲ್ಲಿ ಈ ಸಂಪ್ರದಾಯಸ್ಥ ಹೇಳಿಕೆಯು ಪ್ರಚಲಿತವಾಗಿದೆ ಅದೇನೆಂದರೆ 'ಯೋಧನೊಬ್ಬನು ಯುದ್ಧದಲ್ಲಿ ಪರಾಕ್ರಮಿಯಾಗಿ, ಪರಿಶ್ರಮಯುತನಾಗಿ, ವೀರತನದಿಂದ ಪರರನ್ನು ನಾಶಗೊಳಿಸುತ್ತ, ಕೊನೆಗೆ ತಾನು ಗಾಯಗೊಂಡು ನಂತರ ವೀರ ಮರಣವನ್ನು ಅಪ್ಪುತ್ತಾನೆ. ಆತನ ಸಾವಿನ ಅನಂತರ ಆತನು 'ಸರಂಜಿತ ಎಂಬ ದೇವಲೋಕದಲ್ಲಿ ಹುಟ್ಟುತ್ತಾನೆ' ಎಂದು ಕೇಳಿದ್ದೇವೆ, ಭಗವಾನರು ಇದರ ಬಗ್ಗೆ ಏನು ಹೇಳುವರು?"

"ಸಾಕು ಯೋಧನೇ! ಈ ಪ್ರಶ್ನೆಯನ್ನು ಕೇಳಬೇಡ."

ಆ ಯೋಧನು ಎರಡನೆಯಬಾರಿಯು ಹೀಗೇ ಪ್ರಶ್ನಿಸಿ, ಇದೇ ಉತ್ತರವನ್ನು ಪಡೆದನು. ನಂತರ ಮೂರನೆಯಬಾರಿಯು ಆತನು ಹೀಗೆಯೇ ಪ್ರಶ್ನಿಸಿ, ಹೇಳಲೇಬೇಕೆಂದು ಕೇಳಿಕೊಂಡನು. ಆಗ ಭಗವಾನರು ಹೀಗೆ ಹೇಳಿದರು:

"ಓ ಯೋಧನೆ, ನಾನು ನಿನ್ನ ಪ್ರಶ್ನೆಯನ್ನು ಸ್ವೀಕಾರ ಮಾಡಲಿಲ್ಲ. ಸಾಕು ಯೋಧನೆ, ಈ ಪ್ರಶ್ನೆಯನ್ನು ಪ್ರಶ್ನಿಸಬೇಡ" ಎಂದು ಹೇಳಿದೆನು. ಆದರೂ ನಿನಗೆ ಇದನ್ನು ಹೇಳುವೆನು ಆಲಿಸು."

"ಯುದ್ಧಭೂಮಿಯಲ್ಲಿ ಯೋಧನು ಪರಾಕ್ರಮಯುತನಾಗಿ ಈ ಭಾವನೆಯನ್ನು ಹೊಂದಿದ್ದರೆ: ಇವರೆಲ್ಲಾ ಚಿಂತ್ರಹಿಂಸೆಗೆ ಗುರಿಯಾಗಲಿ, ನಿರ್ನಾಮವಾಗಲಿ, ಅವರು ನಾಶ ಹೊಂದಿ ಇಲ್ಲದಂತೆ ಆಗಲಿ ಮತ್ತು ಅದೇರೀತಿಯಾಗಿ ವೀರತನ ಪ್ರದರ್ಶಿಸಿದರೆ, ಪ್ರಯತ್ನಪಟ್ಟರೆ, ಆಗ ಶತ್ರುಗಳು ಆತನಿಗೆ ಸೆರೆಹಿಡಿದು ಚಿತ್ರಹಿಂಸೆ ಮಾಡಿ, ಆತನ ಅಂತ್ಯ ಮಾಡುತ್ತಾರೆ. ಆಗ ಆತನು ಸರಂಜಿತ ಎಂಬ ನಿರಯ (ನರಕ)ದಲ್ಲಿ ಹುಟ್ಟುತ್ತಾನೆ."

"ಒಂದುವೇಳೆ ಆತನ ದೃಷ್ಟಿಕೋನವು ಹೀಗಿದ್ದರೆ: ಯಾವ ಯೋಧನು ಪರಾಕ್ರಮಬದ್ಧನಾಗಿ, ಪರರ ಅಂತ್ಯಮಾಡುತ್ತಿದ್ದರೆ, ಶತೃಗಳಿಗೆ ಚಿತ್ರಹಿಂಸೆ ನೀಡುತ್ತಿದ್ದರೆ ಹೀಗೆಯೇ ವೀರಮರಣ ಅಪ್ಪಿದರೆ ಆತನಿಗೆ ಸರಂಜಿತ (ವೀರ) ಸ್ವರ್ಗ ಸಿಗುವುದು. ಅದು ಮಿಥ್ಯಾದೃಷ್ಟಿಯಾಗಿರುತ್ತದೆ. ನಾನು ಅದನ್ನು ಮಿಥ್ಯಾದೃಷ್ಟಿ ಎನ್ನುತ್ತೇನೆ ಮತ್ತು ಯೋಧನೆ, ನಾನು ಖಚಿತವಾಗಿ ಹೇಳುವುದು ಏನೆಂದರೆ ಯಾರು ಪಾಪಯುತವಾದ ಮಿಥ್ಯಾದೃಷ್ಟಿಯನ್ನು ಹೊಂದಿರುತ್ತಾರೋ ಅವರಿಗೆ ಎರಡು ಗತಿಗಳಿರುತ್ತವೆ. ಒಂದು ನಿರಯ ಇಲ್ಲವೆ ಪ್ರಾಣಿಜನ್ಮ."

ಇದನ್ನು ಆಲಿಸಿದ ಯೋಧ ಗುರುವು ಜೋರಾಗಿ ಅಳಲು ಪ್ರಾರಂಭಿಸಿದನು. ಆಗ ಭಗವಾನರು ಆತನಿಗೆ ಹೀಗೆ ಹೇಳಿದರು: "ಓ ಯೋಧನೆ, ನೀನು ಈ ರೀತಿ ಅತಿಶೋಕಪಡುವೆ ಎಂದು ಅರಿತೇ ನಾನು ನಿನ್ನ ಪ್ರಶ್ನೆಯನ್ನು ನಿರಾಕರಿಸಿದ್ದೆನು. ಆದರೆ ಹಿತ ಗಮನಿಸಿ ಉತ್ತರಿಸುತ್ತಿದ್ದೇನೆ."

"ಆದರೆ ಭಗವಾನ್ ಇಡೀ ಜೀವನದ ಉದ್ದಕ್ಕೂ ಇದೇ ಮಿಥ್ಯಾದೃಷ್ಟಿಯೊಂದಿಗೆ ಮೋಸಹೋದೆನು, ವಂಚಿತನಾದೆನು. ಪರರು ಸಹಾ ಹೀಗೆಯೇ ಗುರುಗಳಿಂದ, ಪರಂಪರೆಗಳೊಂದಿಗೆ ಮೋಸ ಹೋಗುತ್ತಿದ್ದಾರೆ. ಯೋಧರು ಇದೇ ನಂಬಿಕೆಯಿಂದ ನಾಶವಾಗುತ್ತಿದ್ದಾರೆ. ಭಗವಾನ್ ಇಂದಿನಿಂದ ಜೀವನಪರ್ಯಂತ ನಾನು ತ್ರಿಶರಣುಗಳಿಗೆ ಶರಣು ಹೋಗುತ್ತೇನೆ, ನನಗೆ ಭಗವಾನರು ಸ್ವೀಕರಿಸಲಿ."





# V. ಸಮ್ಯಕ್ (ಸಮ್ಮಾ) ದೃಷ್ಟಿಕೋನ

## ಸಮ್ಮಾದಿಟ್ಠಿ (ಸಮ್ಯಕ್ ದೃಷ್ಟಿಕೋನ)

ಸಮ್ಯಕ್ ದೃಷ್ಟಿಕೋನ (ಸಮ್ಮಾದಿಟ್ಠಿ) ಅಂದರೆ ಯೋಗ್ಯವಾದ (ಸರಿಯಾದ) ರೀತಿಯಲ್ಲಿ ಅರಿಯುವಿಕೆ. ಅಂದರೆ ನಾಲ್ಕು ಆರ್ಯಸತ್ಯಗಳ ಯತಾರ್ಥ ಜ್ಞಾನ. ಯಾರು ಆರ್ಯ ಅಷ್ಟಾಂಗ ಮಾರ್ಗವನ್ನು ಸಾಧಿಸುವನೋ ಆತನು ನಿಬ್ಬಾಣವನ್ನು ಸಾಧಿಸುತ್ತಾನೆ. ಇದೇ ಸಮ್ಮಾದಿಟ್ಠಿಯಾಗಿದೆ. ಬುದ್ಧ ಭಗವಾನರು ಇದನ್ನು ಒಂದನೆಯ ಮೆಟ್ಟಿಲಾಗಿಸಿದ್ದಾರೆ. ಅಂದರೆ ಆರ್ಯ ಅಷ್ಟಾಂಗ ಮಾರ್ಗದಲ್ಲಿ ಮೊದಲನೆಯದೇ ಸಮ್ಮಾದಿಟ್ಠಿ. ಏಕೆಂದರೆ ಮೊದಲು ನಮಗೆ ಯೋಗ್ಯ ತಿಳುವಳಿಕೆಯಾದರೆ ಮಾತ್ರ ಮುಂದೆ ಅದನ್ನು ಸಿದ್ಧಿಸಲು ಸಂಕಲ್ಪಿಸುವೆವು. ಹಾಗೆಯೇ ಕಾರ್ಯಗತ ಮಾಡಿ ಅದನ್ನು ಸಿದ್ಧಿಸುವೆವು.

ಸಮ್ಮಾದಿಟ್ಠಿಯು ಮಹಾನಿಧಿಗೆ ಭೂಪಟವಿದ್ದಂತೆ. ಸಮ್ಮಾದಿಟ್ಠಿಯು ನಿಬ್ಬಾಣ ಮಾರ್ಗಕ್ಕೆ ಮಹಾ ದಾರಿದೀಪವಿದ್ದಂತೆ. ಯಾವಾಗ ಸಾಧಕನು ಮತ್ತು ಆರ್ಯಸತ್ಯಗಳನ್ನು ಯತಾರ್ಥವಾಗಿ ತನ್ನ ಪ್ರಜ್ಞಾಶೀಲತೆಯಿಂದ ಅರಿಯುತ್ತಾನೋ, ನಿಬ್ಬಾಣವನ್ನು ಗುರಿಯಾಗಿಸುತ್ತಾನೋ ಆಗ ಆತನಲ್ಲಿ ಅಜ್ಞಾನದ ಪ್ರವೃತ್ತಿ ನಾಶವಾಗುತ್ತದೆ. ಇದೇ ಸಮ್ಮಾದೃಷ್ಟಿಯಾಗಿದೆ.

ಸಮ್ಮಾದೃಷ್ಟಿಯ ಲಕ್ಷಣವೇನೆಂದರೆ ಯತಾರ್ಥವಾಗಿ ಅಂದರೆ (ಸತ್ಯ) ಅದು ಇರುವಂತೆಯೇ ಕಾಣುವುದು. ತೋರಿಕೆಯ ಸತ್ಯ ಮೀರಿ ಯತಾರ್ಥ ಸತ್ಯ ಅರಿಯುವುದು. ಸಮ್ಮಾದಿಟ್ಠಿಯ ಕ್ರಿಯೆ ಏನೆಂದರೆ ಸತ್ಯವನ್ನು ಪ್ರಕಾಶಿಸುವುದು. ಇದು ಅಜ್ಞಾನದ ಅಥವಾ ಮಿಥ್ಯಾದೃಷ್ಟಿಯ ನಾಶದಿಂದ ಸ್ಥಾಪಿತವಾಗುತ್ತದೆ.

## ಕುಶಲ, ಅಕುಶಲ ಮತ್ತು ಅವುಗಳಿಗೆ ಮೂಲ ಅರಿತಾಗ ಸಮ್ಮಾದೃಷ್ಟಿ

ಮಿತ್ರರೇ, ಯಾವಾಗ ಆರ್ಯ ಶ್ರಾವಕನು ಅಕುಶಲವನ್ನು ಮತ್ತು ಅಕುಶಲ ಮೂಲವನ್ನು, ಹಾಗೆಯೇ ಕುಶಲವನ್ನು ಮತ್ತು ಕುಶಲ ಮೂಲವನ್ನು ಅರಿಯುತ್ತಾನೆಯೋ ಈ ರೀತಿಯಾಗಿ ಆತನು ಸಮ್ಮಾದೃಷ್ಟಿಯುಳ್ಳವನಾಗುತ್ತಾನೆ. ಆತನ ಯೋಚನಾ ಕ್ರಮವು ನೇರಯುತ ವಾಗಿರುತ್ತದೆ, ನೇರದೃಷ್ಟಿಯಿಂದಿರುತ್ತಾರೆ. ಹಾಗು ಧಮ್ಮದಲ್ಲಿ ಪೂರ್ಣ ಶ್ರದ್ಧೆಯುಳ್ಳವ ನಾಗುತ್ತಾನೆ ಮತ್ತು ಆತನು ನಿಜಧಮ್ಮದ ಸನಿಹದಲ್ಲಿರುತ್ತಾನೆ.

ಮತ್ತು ಮಿತ್ರರೇ ಯಾವುದು ಅಕುಶಲ? ಮತ್ತು ಅವುಗಳ ಮೂಲ ಯಾವುದು. ಹಾಗೆಯೇ ಕುಶಲ ಯಾವುದು? ಮತ್ತು ಅವುಗಳ ಮೂಲ ಯಾವುದು?

ಜೀವಿಗಳ ಹತ್ಯೆ ಅಕುಶಲ
ಕೂಡದಿದ್ದುದನ್ನು ತೆಗೆದುಕೊಳ್ಳುವುದು (ಕಳ್ಳತನ) ಅಕುಶಲ

ಅನೈತಿಕತೆಯ ಕಾಮುಕತನ ಅಕುಶಲ
ಸುಳ್ಳನ್ನು ನುಡಿಯುವಿಕೆ ಅಕುಶಲ
ಚಾಡಿಯನ್ನು ನುಡಿಯುವಿಕೆ ಅಕುಶಲ
ಕಟು ನಿಂದೆಯನ್ನು ನುಡಿಯುವಿಕೆ ಅಕುಶಲ
ಕಾಡುಹರಟೆಯಲ್ಲಿ ತಲ್ಲೀನನಾಗುವಿಕೆ ಅಕುಶಲ
ದುರಾಸೆಯು ಅಕುಶಲ
ದ್ವೇಷಿಸುವಿಕೆ ಅಕುಶಲ
ಮಿಥ್ಯಾ ದೃಷ್ಟಿಯಿಂದ ಕೂಡಿರುವಿಕೆ ಅಕುಶಲ

ಇವಿಷ್ಟು ಅಕುಶಲವಾಗಿವೆ ಮತ್ತು ಯಾವುದು ಅಕುಶಲದ ಮೂಲವಾಗಿದೆ?

ಲೋಭವು, ಅಕುಶಲದ ಮೂಲವಾಗಿದೆ
ದ್ವೇಷವು ಅಕುಶಲದ ಮೂಲವಾಗಿದೆ
ಮೋಹವು ಅಕುಶಲದ ಮೂಲವಾಗಿದೆ

ಮತ್ತೆ ಯಾವುದು ಕುಶಲವಾಗಿದೆ ?

ಜೀವಹತ್ಯೆಯಿಂದ ದೂರವಾಗುವಿಕೆಯು ಕುಶಲವಾಗಿದೆ.
ಕಳ್ಳತನದಿಂದ ದೂರವಾಗುವಿಕೆಯು ಕುಶಲವಾಗಿದೆ.
ಅನೈತಿಕತೆಯ ಕಾಮುಕತನದಿಂದ ದೂರವಾಗುವಿಕೆಯು ಕುಶಲವಾಗಿದೆ.
ಸುಳ್ಳು ಸಂಭಾಷಣೆಯಿಂದ ದೂರವಾಗುವಿಕೆಯು ಕುಶಲವಾಗಿದೆ.
ಚಾಡಿಯುತ ಸಂಭಾಷಣೆಯಿಂದ ದೂರವಾಗುವಿಕೆಯು ಕುಶಲವಾಗಿದೆ.
ಕಟು ನಿಂದೆಯುತ ಸಂಭಾಷಣೆಯಿಂದ ದೂರವಾಗುವಿಕೆಯು ಕುಶಲವಾಗಿದೆ.
ಕಾಡುಹರಟೆಯುತ ಸಂಭಾಷಣೆಯಿಂದ ದೂರವಾಗುವಿಕೆಯು ಕುಶಲವಾಗಿದೆ.
ದುರಾಸೆಯಿಂದ ದೂರವಾಗುವಿಕೆಯು ಕುಶಲವಾಗಿದೆ.
ದ್ವೇಷದಿಂದ ದೂರವಾಗುವಿಕೆಯು ಕುಶಲವಾಗಿದೆ.
ಸಮ್ಮಾದೃಷ್ಟಿಯಿಂದ ಕೂಡಿರುವುದೇ ಕುಶಲವಾಗಿದೆ, ಇದೇ ಕುಶಲವಾಗಿದೆ.

ಮತ್ತೆ ಯಾವುದು ಕುಶಲಗಳ ಮೂಲ

ಅಲೋಭ ಕುಶಲಗಳ ಮೂಲವಾಗಿದೆ
ಅದ್ವೇಷ ಕುಶಲಗಳ ಮೂಲವಾಗಿದೆ
ಅಮೋಹ ಕುಶಲಗಳ ಮೂಲವಾಗಿದೆ.

ಯಾವಾಗ ಆರ್ಯ ಶ್ರಾವಕನು ಈ ರೀತಿಯಾಗಿ ಅಕುಶಲ, ಕುಶಲ ಮತ್ತು ಅವುಗಳ ಮೂಲಗಳನ್ನು ಅರಿಯುತ್ತಾನೋ ಆತನು ಲೋಭವನ್ನು ವರ್ಜಿಸುತ್ತಾನೆ, ದ್ವೇಷವನ್ನು ವರ್ಜಿಸುತ್ತಾನೆ ಮತ್ತು ಮೋಹವನ್ನು ವರ್ಜಿಸುತ್ತಾನೆ. 'ನಾನು' ಎಂಬ ಅಹಂಕಾರದಿಂದ



ವಿರತನಾಗಿ, ಅಜ್ಞಾನವನ್ನು ತ್ಯಾಗಮಾಡಿ, ಇಲ್ಲಿಯೇ ಈಗಲೇ ಸಮ್ಮಾದೃಷ್ಟಿಯುಳ್ಳವನಾಗಿ ದುಃಖದ ಅಂತ್ಯಮಾಡುತ್ತಾನೆ.

## 10 ಪುಣ್ಯ ಕ್ರಿಯ ವಸ್ತುಗಳಲ್ಲಿ ಸಮ್ಮಾದೃಷ್ಟಿಯು ಒಂದು

1. ದಾನ
2. ಶೀಲ
3. ಧ್ಯಾನ
4. ಗೌರವ
5. ಸೇವೆ
6. ಪುಣ್ಯದಾನ
7. ಪರರ ಪುಣ್ಯದಲ್ಲಿ ಆನಂದಿಸುವುದು
8. ಧಮ್ಮ ಆಲಿಸುವಿಕೆ
9. ಧಮ್ಮ ಬೋಧಿಸುವಿಕೆ
10. ಯೋಗ್ಯ ದೃಷ್ಟಿಕೋನಗಳನ್ನು (ಸಮ್ಮಾದೃಷ್ಟಿ) ನೇರಗೊಳಿಸುವಿಕೆ (ಬೆಳಸುವಿಕೆ)

## ಎಲ್ಲಿಯವರೆಗೆ ಸಮ್ಮಾದೃಷ್ಟಿ

ಒಮ್ಮೆ ಭಗವಾನರು ಶ್ರಾವಸ್ತಿಯಲ್ಲಿ ತಂಗಿರುವಾಗ ಪೂಜ್ಯ ಕಚ್ಚಾಯನರು ಅಲ್ಲಿಗೆ ಬಂದು ವಂದಿಸಿ ಗೌರವದಿಂದ ಒಂದೆಡೆ ಕುಳಿತರು. ನಂತರ ಭಗವಾನರೊಂದಿಗೆ ಹೀಗೆ ಪ್ರಶ್ನಿಸಿದರು: "ಭಗವಾನ್ 'ಸಮ್ಮಾದೃಷ್ಟಿ', 'ಸಮ್ಮಾದೃಷ್ಟಿ' ಎನ್ನುತ್ತಾರೆ, ಎಲ್ಲಿಯವರೆಗೆ 'ಸಮ್ಮಾದೃಷ್ಟಿ' ಎನಿಸುತ್ತದೆ?"

"ಓ ಕಚ್ಚಾಯನ, ಈ ಲೋಕದಲ್ಲಿ ಎರಡುರೀತಿಯ ವಿಷಯಗಳಲ್ಲಿ ದೃಷ್ಟಿಗಳು ರಚಿತವಾಗುತ್ತದೆ, ಅಸ್ತಿತ್ವದ ಬಗ್ಗೆ ಮತ್ತು ಅಸ್ತಿತ್ವವಿಲ್ಲದಿರುವ ಬಗ್ಗೆ."

"ಯಾರಿಗೆ ಯೋಗ್ಯ ದೃಷ್ಟಿಯಿರುತ್ತದೋ ಆತನು ಉದಯಿಸುವ ಲೋಕವನ್ನು ಅದು ಇರುವಂತೆ ನೋಡುತ್ತಾನೆ. ಹೀಗಾಗಿ ಆತನು 'ಅಸ್ತಿತ್ವವಿಲ್ಲ' ಎಂಬ ದೃಷ್ಟಿಕೋನಕ್ಕೆ ಅಂಟಲಾರ. ಆದರೆ ಯಾರು ಯೋಗ್ಯ ದೃಷ್ಟಿಯಿಂದ ಲೋಕವು ಅಳಿಯುವುದನ್ನು ಮರೆಯಾಗುವುದನ್ನು ಕಾಣುತ್ತಾನೋ ಆತನು 'ಅಸ್ತಿತ್ವ ಇದೆ' ಎಂಬ ದೃಷ್ಟಿಕೋನಕ್ಕೆ ಅಂಟಲಾರ."

"ಹೀಗೆ ಸಿದ್ಧಾಂತಗಳಿಗೆ ಅಂಟಿಕೊಂಡು ಅದಕ್ಕೆ ಬಂಧಿತರಾಗುತ್ತಾರೆ ಮತ್ತು ಯಾರು ಸಿದ್ಧಾಂತಗಳಿಗೆ ಅಂಟುವುದಿಲ್ಲವೋ ಪೂರ್ವಾಗ್ರಹ ಪೀಡಿತರಾಗುವುದಿಲ್ಲವೋ, ಪಕ್ಷಪಾತರಹಿತರೋ ಅವರು 'ಇದು ನನ್ನ ಆತ್ಮ' ಎಂದು ತೀರ್ಮಾನಿಸುವುದಿಲ್ಲ. ಅವರು 'ದುಃಖವು ಉದಯಿಸಿದೆ' ಮತ್ತು 'ದುಃಖವು ಅಳಿಯುತ್ತಿದೆ' ಎಂದು ವೀಕ್ಷಿಸುತ್ತಾರೆ.

ಅಂತಹವನು ಸಂಶಯಗಳಿಗೆ ಬೀಳಲಾರ, ದ್ವಂದ್ವಕ್ಕೆ ಸಿಲುಕಲಾರ. ಇಲ್ಲಿಯವರೆಗೆ ಕಚ್ಚಾಯನ ಇದು 'ಸಮ್ಮಾದೃಷ್ಟಿ' ಎನಿಸುತ್ತದೆ."

"ಪ್ರತಿಯೊಂದು ಇದೆ (ಅಸ್ತಿತ್ವದಲ್ಲಿದೆ) ಇದು ಒಂದು ಅತಿರೇಕ, ಹಾಗೆಯೇ ಯಾವುದೂ ಇಲ್ಲ (ಅಸ್ತಿತ್ವದಲ್ಲಿಲ್ಲ). ಇದು ಇನ್ನೊಂದು ಅತಿರೇಕವಾಗಿದೆ. ಆದ್ದರಿಂದಾಗಿ ತಥಾಗತರು ಮಧ್ಯಮ ಮಾರ್ಗವನ್ನು ಬೋಧಿಸುತ್ತಾರೆ. ಅದು ಹೀಗಿದೆ:"

"ಅಜ್ಞಾನದಿಂದಾಗಿ ಸಂಖಾರಗಳು (ಚಿತ್ತದ ಚಟುವಟಿಕೆಗಳು) ಉಂಟಾಗುತ್ತದೆ. ಸಂಖಾರಗಳಿಂದ ವಿಞ್ಞಾನವು (ಅರಿವು) ಉಂಟಾಗುತ್ತದೆ.

"ವಿಞ್ಞಾನದಿಂದ ನಾಮರೂಪಗಳು (ದೇಹ ಮತ್ತು ಮನಸ್ಸು) ಉಂಟಾಗುತ್ತದೆ, ನಾಮರೂಪದಿಂದ ಸಳಾಯಾತನ (ಆರು ಇಂದ್ರೀಯಗಳ ಆಧಾರಗಳು) ಉಂಟಾಗುತ್ತದೆ, ಸಳಾಯಾತನದಿಂದ ಸ್ಪರ್ಶವು ಉಂಟಾಗುತ್ತದೆ, ಸ್ಪರ್ಶದಿಂದ ವೇದನೆಗಳು ಉಂಟಾಗುತ್ತದೆ, ವೇದನೆಗಳಿಂದ ತನ್ಹಾ (ತೃಷ್ಣೆ) ಉಂಟಾಗುತ್ತದೆ, ತನ್ಹಾದಿಂದ ಅಂಟುವಿಕೆ ಉಂಟಾಗುತ್ತದೆ, ಅಂಟುವಿಕೆಯಿಂದ ಭವ ಉಂಟಾಗುತ್ತದೆ, ಭವದಿಂದ ಜನ್ಮ ಉಂಟಾಗುತ್ತದೆ, ಜನ್ಮದಿಂದ ದುಃಖರಾಶಿಯು ಉಂಟಾಗುತ್ತದೆ."

"ಹೀಗೆ ಇವುಗಳ ಉದಯದಿಂದ ಇಡೀ ದುಃಖರಾಶಿ ಉದಯಿಸುತ್ತದೆ. ಆದರೆ ಅಜ್ಞಾನದ ನಿರೋಧದಿಂದ ಸಂಖಾರದ ನಿರೋಧವಾಗುತ್ತದೆ. ಸಂಖಾರದ ನಿರೋಧದಿಂದ ವಿಞ್ಞಾನದ ನಿರೋಧವಾಗುತ್ತದೆ, ವಿಞ್ಞಾನದ ನಿರೋಧದಿಂದ ನಾಮರೂಪದ ನಿರೋಧವಾಗುತ್ತದೆ. ನಾಮರೂಪದ ನಿರೋಧದಿಂದ ಆರು ಇಂದ್ರೀಯಗಳ ಆಧಾರಗಳು ನಿರೋಧವಾಗುತ್ತದೆ, ಆರು ಇಂದ್ರೀಯಗಳ ನಿರೋಧದಿಂದ ಸ್ಪರ್ಶವು ನಿರೋಧವಾಗುತ್ತದೆ, ಸ್ಪರ್ಶದ ನಿರೋಧದಿಂದ ವೇದನೆಗಳ ನಿರೋಧ ಆಗುತ್ತವೆ, ವೇದನೆಗಳ ನಿರೋಧದಿಂದ ತನ್ಹಾದ ನಿರೋಧವಾಗುತ್ತದೆ, ತನ್ಹಾದ ನಿರೋಧದಿಂದ ಅಂಟುವಿಕೆಯ ನಿರೋಧವಾಗುತ್ತದೆ, ಅಂಟುವಿಕೆಯ ನಿರೋಧದಿಂದ ಭವದ ನಿರೋಧವಾಗುತ್ತದೆ, ಭವದ ನಿರೋಧದಿಂದ ಜನ್ಮ ನಿರೋಧವಾಗುತ್ತದೆ, ಜನ್ಮದ ನಿರೋಧದಿಂದ ಇಡೀ ದುಃಖ ನಿರೋಧವಾಗುತ್ತದೆ. ಹೀಗೆ ಇವುಗಳ ನಿರೋಧದಿಂದ ಇಡೀ ದುಃಖರಾಶಿ ನಿರೋಧವಾಗುತ್ತದೆ. ಓ ಕಚ್ಚಾಯನ ಇಷ್ಟರಮಟ್ಟಿಗೆ ಇದು ಸಮ್ಮಾದೃಷ್ಟಿಯಾಗಿದೆ."

## ಆರ್ಯ ಸತ್ಯಗಳು

ಭಗವಾನರು ಶ್ರಾವಸ್ತಿಯಲ್ಲಿರುವಾಗ ಭಿಕ್ಷುಗಳಿಗೆ ಹೀಗೆ ಬೋಧಿಸಿದರು:

"ಭಿಕ್ಷುಗಳೇ, ನಾನು ದುಃಖವನ್ನು ಬೋಧಿಸುತ್ತೇನೆ, ದುಃಖದ ಉದಯಿಸುವಿಕೆಯನ್ನು ಬೋಧಿಸುತ್ತೇನೆ ದುಃಖ ನಿರೋಧವನ್ನು ಮತ್ತು ದುಃಖ ನಿರೋಧಕ್ಕೆ ಕೊಂಡೊಯ್ಯುವ ಮಾರ್ಗವನ್ನು ಬೋಧಿಸುತ್ತೇನೆ, ಆಲಿಸಿ."



"ಭಿಕ್ಷುಗಳೇ, ಇಲ್ಲಿ ಯಾವುದು ದುಃಖ? ದುಃಖವು ಯಾವುದೆಂದರೆ ಪಂಚ ಉಪಾದಾನ ಖಂದಗಳೇ (ದೇಹ ಮತ್ತು ಮನಸ್ಸಿಗೆ ಅಂಟಿರುವುದೇ ಆಗಿದೆ) ಆಗಿದೆ. ಯಾವುದವು? ಅದೇ ಕಾಯ ಉಪಾದಾನ ಖಂದ (ಶರೀರದ ರಾಶಿಗೆ ಅಂಟಿರುವುದು), ವೇದನಾ ಉಪಾದಾನ ಖಂದ (ಅನುಭವಗಳ ರಾಶಿಗೆ ಅಂಟಿರುವುದು), ಸಞ್ಞಾ ಉಪಾದಾನ ಖಂದ (ಗ್ರಹಿಕೆಗಳ ರಾಶಿಗೆ ಅಂಟಿರುವುದು), ಸಂಖಾರ ಉಪಾದಾನ ಖಂದ (ಚಿತ್ತದ ಚಟುವಟಿಕೆಗಳಿಗೆ ಅಂಟಿರುವುದು), ವಿಞ್ಞಾನ ಉಪಾದಾನ ಖಂದ (ಅರಿವಿನ ರಾಶಿಗೆ ಅಂಟಿರುವುದು). ಇದೇ ಭಿಕ್ಷುಗಳೇ ದುಃಖವಾಗಿದೆ."

"ಮತ್ತೆ ಭಿಕ್ಷುಗಳೇ, ದುಃಖದ ಉದಯವಾಗುವಿಕೆ ಹೇಗೆ? ತನ್ಹಾ (ತೀವ್ರ ಬಯಕೆಗಳಿಂದ) ದುಃಖ ಉದಯವಾಗುತ್ತದೆ ಭಿಕ್ಷುಗಳೇ, ತನ್ಹಾಗಳು ಮೂರು ವಿಧ ಭಿಕ್ಷುಗಳೇ, ಕಾಮತನ್ಹಾ (ಇಂದ್ರೀಯ ಲಾಲಸೆ), ಭವ ತನ್ಹಾ (ಸಾಯಲೇಬಾರದು ಎಂಬ ಅಮರತ್ವದ ತೀವ್ರ ಬಯಕೆ), ವಿಭವ ತನ್ಹಾ (ಇರಲೇಬಾರದು ಎಂಬ ತೀವ್ರ ಬಯಕೆ), ಇವೇ ದುಃಖದ ಉದಯಕ್ಕೆ ಕಾರಣವಾಗಿದೆ."

"ದುಃಖದ ನಿರೋಧ ಹೇಗೆ ಭಿಕ್ಷುಗಳೇ?"

"ತನ್ಹಾಗಳನ್ನು ಪೂರ್ಣವಾಗಿ ನಿರೋಧಿಸುವುದರಿಂದ, ನಿಶ್ಶೇಷ ವಿರಾಗದಿಂದ, ತ್ಯಾಗದಿಂದ, ಬಿಟ್ಟುಬಿಡುವಿಕೆಯಿಂದ, ಮುಕ್ತಿ ಹೊಂದುವುದರಿಂದ, ತನ್ಹಾದ ಇಲ್ಲವಾಗುವಿಕೆಯಿಂದ ದುಃಖದ ನಿರೋಧವಾಗುತ್ತದೆ."

"ದುಃಖ ನಿರೋಧಕ್ಕೆ ಹೋಗುವ ಮಾರ್ಗ ಯಾವುದು?"

"ಅದೇ ಆರ್ಯ ಅಷ್ಟಾಂಗ ಮಾರ್ಗವಾಗಿದೆ. (1) ಸಮ್ಮಾದೃಷ್ಟಿ (2) ಸಮ್ಮಾಸಂಕಲ್ಪ (3) ಸಮ್ಮಾವಾಚಾ (4) ಸಮ್ಮಾಕರ್ಮ (5) ಸಮ್ಮಾ ಜೀವನೋಪಾಯ (6) ಸಮ್ಮಾ ವ್ಯಾಯಾಮ (7) ಸಮ್ಮಾಸ್ಮೃತಿ (8) ಸಮ್ಮಾ ಸಮಾಧಿ. ಇವೇ ಭಿಕ್ಷುಗಳೇ ದುಃಖ ನಿರೋಧ ಗಾಮಿನಿ ಮಾರ್ಗವಾಗಿದೆ."

## ಸಮ್ಮಾದಿಟ್ಠಿಯೇ ಮೊದಲು

ಭಿಕ್ಷುಗಳೇ, ಸಮ್ಮಾದಿಟ್ಠಿಯೇ ಮೊದಲು ಬರಬೇಕು ಮತ್ತು ಭಿಕ್ಷುಗಳೇ, ಹೇಗೆ ಸಮ್ಮಾದಿಟ್ಠಿಯೇ ಮೊದಲು ಬರಬೇಕು? ಹೇಗೆಂದರೆ ಒಬ್ಬನು ಮಿಥ್ಯಾದೃಷ್ಟಿಯನ್ನು ಮಿಥ್ಯಾದೃಷ್ಟಿಯೆಂದೇ ಅರಿತಾಗ ಸಮ್ಮಾದೃಷ್ಟಿಯನ್ನು ಸಮ್ಮಾದೃಷ್ಟಿಯೆಂದು ಅರಿಯುತ್ತಾನೆ, ಇದೇ ಸಮ್ಮಾದೃಷ್ಟಿಯಾಗಿದೆ ಮತ್ತು ಭಿಕ್ಷುಗಳೇ, ಮಿಥ್ಯಾದೃಷ್ಟಿಗಳು ಯಾವುವು?

"ದಾನಕ್ಕೆ ಫಲವಿಲ್ಲ, ಅರ್ಪಣೆಗೆ ಫಲವಿಲ್ಲ, ತ್ಯಾಗ ಸತ್ಕಾರಗಳಿಗೆ ಫಲವಿಲ್ಲ ಎಂದು ಭಾವಿಸುವುದು. ಹಾಗೆಯೇ ಕುಶಲಕರ್ಮಕ್ಕೂ ಮತ್ತು ಪಾಪಕರ್ಮಕ್ಕೂ ಫಲವಿಲ್ಲವೆಂದು ಭಾವಿಸುವುದು. ಈ ಲೋಕದಲ್ಲಿ ಫಲವಿಲ್ಲ, ಪರಲೋಕದಲ್ಲೂ ಫಲವಿಲ್ಲ. ಪರಲೋಕವೇ ಇಲ್ಲ ಎಂದು ಭಾವಿಸಬಹುದು, ತಾಯ್ತಂದೆಯರಿಗೆ ಸೇವೆ ಮಾಡುವುದರಿಂದ ಲಾಭವಿಲ್ಲ

ಎಂದು ಭಾವಿಸುವುದು. ಪರರ ಸಹಾಯವಿಲ್ಲದೆ ತಾನಾಗಿಯೇ ಜನ್ಮಿಸುವ ಜೀವಿಯಿಲ್ಲ ಎಂದು ಭಾವಿಸುವಿಕೆ, ಯೋಗ್ಯವಾಗಿ ಜೀವಿಸುವ, ಧ್ಯಾನಸಿದ್ಧರಾದ, ಜ್ಞಾನಿಗಳಾದ, ಸಾಕ್ಷಾತ್ಕರಿಸಿರುವ, ಅಭಿಜ್ಞಾ ಸಂಪನ್ನರಾದ ವ್ಯಕ್ತಿಗಳು ಇಲ್ಲ ಎಂದು ಭಾವಿಸುವಿಕೆ. ಭಿಕ್ಖುಗಳೇ, ಇದೇ ಮಿಥ್ಯಾದೃಷ್ಟಿಯಾಗಿದೆ."

**ಮಿಥ್ಯಾ ಯೋಚನೆಯಿಂದ ಮಿಥ್ಯಾದೃಷ್ಟಿ, ಮಿಥ್ಯಾದೃಷ್ಟಿಯಿಂದ ಬಂಧನ :**

ಯೋಚನೆಗಳಲ್ಲಿ ಸುರಕ್ಷಿತವಲ್ಲದವನು ಈ ರೀತಿ ಅಯೋಗ್ಯವಾಗಿ ಯೋಚಿಸುತ್ತಾನೆ.

"ನಾನು ಭೂತಕಾಲದಲ್ಲಿ ಇದ್ದೇನೆ? ಅಥವಾ ಇರಲಿಲ್ಲವೇ? ಆಗ ನಾನು ಏನಾಗಿದ್ದೆ? ಹೇಗಿದ್ದೆ? ಹೇಗಿದ್ದು ಹೇಗಾದೆ? ನಾನು ಭವಿಷ್ಯದಲ್ಲಿ ಇರುವನೇ? ನಾನು ಭವಿಷ್ಯದಲ್ಲಿ ಇರುವುದಿಲ್ಲವೇ? ಆಗ ನಾನು ಏನಾಗುತ್ತೇನೆ? ಹೇಗಿರುತ್ತೇನೆ? ಹೇಗಿದ್ದು ಹೇಗಾಗುತ್ತೇನೆ?"

ಹಾಗೆಯೇ ಆತನು ವರ್ತಮಾನದ ಬಗ್ಗೆಯು ಗೊಂದಲದಲ್ಲಿ ಬೀಳುತ್ತಾನೆ "ನಾನು ಇದ್ದೇನೆಯೇ? ನಾನು ಇಲ್ಲವೇ? ನಾನು ಏನು? ಹೇಗಿರುವೆ? ಎಲ್ಲಿಂದ ನಾನು ಬಂದೆ? ಎಲ್ಲಿಗೆ ಹೋಗುತ್ತೇನೆ?"

ಈ ರೀತಿ ಮಿಥ್ಯ ಯೋಚನೆ ಮಾಡುವವನಲ್ಲಿ 6 ವಿಧದ ಮಿಥ್ಯಾದೃಷ್ಟಿ ಉಂಟಾಗುತ್ತದೆ.

1. ನನ್ನಲ್ಲಿ ಆತ್ಮವಿದೆ
2. ನನ್ನಲ್ಲಿ ಆತ್ಮವಿಲ್ಲ
3. ಆತ್ಮನಿಂದಲೇ ಆತ್ಮನನ್ನು ಗ್ರಹಿಸುತ್ತಿದ್ದೇನೆ
4. ಆತ್ಮನಿಂದ ಅನಾತ್ಮನನ್ನು ಗ್ರಹಿಸುತ್ತಿದ್ದೇನೆ
5. ಅನಾತ್ಮನಿಂದ ಆತ್ಮನನ್ನು ಗ್ರಹಿಸುತ್ತಿದ್ದೇನೆ
6. ಇದೇ ನನ್ನ ಆತ್ಮ–ಅರಿಯುವವನು, ಮೋಕ್ಷವು, ಪುಣ್ಯ ಮತ್ತು ಪಾಪಗಳ ಫಲಗಳನ್ನು ಅನುಭವಿಸುವವನು. ಈ ನನ್ನ ಆತ್ಮವು ನಿತ್ಯವಾದುದು, ಶಾಶ್ವತವಾದುದು, ಬದಲಾವಣೆಯ ಹೊಂದದಂತಹುದು. ಅಮರವಾಗಿ, ಅನಂತವಾಗಿ ಇರುವಂತಹುದು" ಎಂಬ ಮಿಥ್ಯಾದೃಷ್ಟಿ ಪ್ರಬಲವಾಗಿ ಮೂಡುತ್ತದೆ.

ಇದೇ ದೃಷ್ಟಿಗಳ ಪೊದೆಗಳು, ದೃಷ್ಟಿಗಳ ಕಾಡು, ದೃಷ್ಟಿಗಳ ಮರುಭೂಮಿ, ದೃಷ್ಟಿಗಳ ತಿರುಚು, ದೃಷ್ಟಿಗಳ ಬಂಧನಗಳು ಆಗಿವೆ. ಈ ದೃಷ್ಟಿಗಳಿಂದ ಆತನು ಜನ್ಮ, ಜರೆ, ಜರಾ ಮತ್ತು ಮೃತ್ಯುಗಳಿಂದ ಪಾರಾಗಲಾರ, ದುಃಖಗಳಿಂದ ಪಾರಾಗಲಾರ.

**ಸಮ್ಮಾ ದೃಷ್ಟಿಯಿಂದ ಬಿಡುಗಡೆ**

ಆದರೆ ಅದೇ ಸುಶಿಕ್ಷಿತ ಆರ್ಯ ಶ್ರಾವಕರು, ಶ್ರೇಷ್ಠರು, ಯೋಗ್ಯವಾಗಿ ಚಿಂತಿಸುತ್ತಾರೆ. ಹೇಗೆಂದರೆ :

1. ಇದೇ ದುಃಖ
2. ಇದೇ ದುಃಖ ಉದಯಕ್ಕೆ ಕಾರಣ



3. ಇದೇ ದುಃಖ ನಿರೋಧ
4. ಇದೇ ದುಃಖ ನಿರೋಧದ ಮಾರ್ಗ

ಈ ರೀತಿಯಾಗಿ ಯೋಗ್ಯವಾಗಿ ಚಿಂತಿಸುವುದರಿಂದ ಆತನಲ್ಲಿ ಬಂಧನಗಳು ಕಳಚಿ ಬೀಳುತ್ತದೆ, ಮುಕ್ತನಾಗುತ್ತಾನೆ.

**ಮಿಥ್ಯಾದೃಷ್ಟಿಗಳು**

**I. ಕರ್ಮಕ್ಕೆ ಸಂಬಂಧಪಟ್ಟ ಮಿಥ್ಯಾದೃಷ್ಟಿಗಳು**
↓

1. ಅಹೇತು ಮಿಥ್ಯಾದೃಷ್ಟಿ
2. ಅಕ್ರಿಯಾ ಮಿಥ್ಯಾದೃಷ್ಟಿ
3. ನಾಸ್ತಿಕ ಮಿಥ್ಯಾದೃಷ್ಟಿ
4. ಹಿಂದಿನ ಜನ್ಮವೇ ಕಾರಣವೆಂಬ ಮಿಥ್ಯಾದೃಷ್ಟಿ
5. ಇಸ್ಸರ ಹೇತು ಮಿಥ್ಯಾದೃಷ್ಟಿ

**II. ಸತ್ಕಾಯ ದಿಟ್ಠಿ :**
↓

1. ಶಾಶ್ವತ (ಆತ್ಮ) ಮಿಥ್ಯಾದೃಷ್ಟಿ
2. ಉಚ್ಛೇದ (ವಿನಾಶ) ಮಿಥ್ಯಾದೃಷ್ಟಿ

**ಮಿಥ್ಯಾದೃಷ್ಟಿಗಳ ನಾಶ**

| | | |
|---|---|---|
| 1. ಅಹೇತು<br>2. ಅಕ್ರಿಯಾ<br>3. ನಾಸ್ತಿಕ<br>4. ಇಸ್ಸರ (ದೇವರೇ ಕಾರಣ)<br>5. ಪೂರ್ವಕೃತ (ಹಿಂದಿನ ಜನ್ಮ ಕಾರಣ) | } ಮಿಥ್ಯಾದೃಷ್ಟಿಗಳು | ← ಕಮ್ಮಾಸಕತ ಸಮ್ಮಾದೃಷ್ಟಿಯಿಂದ ನಾಶವಾಗುತ್ತದೆ. |
| ಶಾಶ್ವತ<br>ಉಚ್ಛೇದ | } ಮಿಥ್ಯಾದೃಷ್ಟಿಗಳು | ← ವಿಪಸ್ಸನ ಜ್ಞಾನ ಸಮ್ಮಾದೃಷ್ಟಿಯಿಂದ ದುರ್ಬಲವಾಗುತ್ತದೆ<br>← ಸೋತಾಪತ್ತಿ ಮಾರ್ಗ ಫಲದಿಂದ ಪೂರ್ಣವಾಗಿ ನಾಶವಾಗುತ್ತದೆ. |

**ಐದು ವಿಧವಾದ ಸಮ್ಮಾದೃಷ್ಟಿಗಳಿವೆ**

1. **ಕಮ್ಮಾಸಕತ ಸಮ್ಮಾದಿಟ್ಠಿ:** ಕರ್ಮಫಲದ ಜ್ಞಾನ ಅಂದರೆ ಮಾನವನ ಸುಕರ್ಮ ಮತ್ತು ಕುಕರ್ಮಕ್ಕೆ ಫಲವಿದೆ. ಪ್ರತಿಯೊಂದಕ್ಕೂ ಕಾರಣವಿದೆ, ಪರಲೋಕವಿದೆ, ಪ್ರತಿಯೊಂದಕ್ಕೂ ಹಿಂದಿನ ಜನ್ಮವೇ ಕಾರಣವಲ್ಲ, ಸೃಷ್ಟಿಕರ್ತ ಇಲ್ಲ ಎಂಬ ಸಮ್ಮಾದೃಷ್ಟಿ.
2. **ಪಚ್ಚವೇಕ್ಖಣ ಸಮ್ಮಾದೃಷ್ಟಿ :** ಚಿಂತನೆಯಿಂದ ಉದಯಿಸುವ ಸಮ್ಮಾದೃಷ್ಟಿ.

3. **ವಿಪಶ್ಯನ ಜ್ಞಾನ ಸಮ್ಮಾದಿಟ್ಠಿ :** ಇದರಿಂದಾಗಿ ಎಲ್ಲಾ ದಿಟ್ಠಿಗಳು ದುರ್ಬಲವಾಗುತ್ತದೆ. ಇದು ಎರಡು ಭಾಗವಾಗಿ ವಿಂಗಡಿತವಾಗುತ್ತದೆ.

   ಅ) **ನಾಮರೂಪ ಪರಿಗ್ರಹ ಸಮ್ಮಾದೃಷ್ಟಿ:** ಇಲ್ಲಿ ಸತ್ಕಾಯ ದೃಷ್ಟಿಗಳು ದುರ್ಬಲವಾಗಿ ಹೋಗುತ್ತದೆ. ಇದು ದೃಷ್ಟಿ ವಿಶುದ್ಧಿಯಾಗಿದೆ.

   ಆ) **ಹೇತು ಪಚ್ಚಾಯ ಪರಿಗ್ರಹ ಸಮ್ಮಾದೃಷ್ಟಿ :** ಇಲ್ಲಿ ಯಾವುದು ಮೂಲ ಕಾರಣಗಳು, ತತ್‌ಕ್ಷಣದ ಕಾರಣ ಯಾವುದು, ಸಹಾಯಕ ಅಂಶಗಳು ಯಾವುವು? ಎಂದೆಲ್ಲಾ ಸಮ್ಮಾದೃಷ್ಟಿ ಸಿಗುತ್ತದೆ. ಇದು ಕಂಖಾವಿತರಣ ವಿಶುದ್ಧಿಯಾಗಿದೆ. ಇಲ್ಲಿ ಎಲ್ಲಾಬಗೆಯ ಸಂಶಯಗಳು ನಿವಾರಣೆಯಾಗುತ್ತದೆ.

4. **ಲೋಕೋತ್ತರ ಮಾರ್ಗ ಸಮ್ಮಾದೃಷ್ಟಿ:** ಇಲ್ಲಿ ಮಾರ್ಗದ ಸಾಕ್ಷತ್ಕಾರದಿಂದ ಸಮ್ಮಾದಿಟ್ಠಿ ಉದಯಿಸುತ್ತದೆ.

5. **ಲೋಕೋತ್ತರ ಫಲ ಸಮ್ಮಾದೃಷ್ಟಿ:** ಇಲ್ಲಿ ಲೋಕೋತ್ತರ ಫಲ ಸಾಕ್ಷಾತ್ಕಾರದಿಂದ ಸೋತಪನ್ನನಾಗುತ್ತಾನೆ. ಇಲ್ಲಿ ಎಲ್ಲಾ ಮಿಥ್ಯಾದೃಷ್ಟಿಗಳು ನಾಶವಾಗಿರುತ್ತದೆ.

## ಐದು ವಿಷಯಗಳಿಂದ ಸಮ್ಮಾದಿಟ್ಠಿಯು ಫಲವಾಗುತ್ತದೆ

"ಭಿಕ್ಷುಗಳೇ, ಐದು ವಿಷಯಗಳಿಂದ ಸಮ್ಮಾದಿಟ್ಠಿಯು ಫಲವಾಗಿ ಚಿತ್ತವಿಮುಕ್ತಿಗೆ ಸಹಕಾರಿಯಾಗುತ್ತದೆ, ಲಾಭಕಾರಿಯಾಗುತ್ತದೆ, ಯಾವುವವು ಐದು? ಅವೆಂದರೆ: ಶೀಲ, ಕಲಿಯುವಿಕೆ, ಚರ್ಚೆ, ಪ್ರಶಾಂತತೆ ಮತ್ತು ಚಿಂತನೆ (ಅಂತರ್‌ದೃಷ್ಟಿ).

ಯಾರಿಗೆ ಧಮ್ಮವನ್ನು ಆಲಿಸಲು ಆಸೆಯಿಲ್ಲವೋ, ಕಿವಿಯಿಂದ ಗಮನ ಹರಿಸುವುದಿಲ್ಲವೋ ಅರ್ಥ ಮಾಡಿಕೊಳ್ಳಲು ಹೋಗುವುದಿಲ್ಲವೋ, ಅವರು ಧಮ್ಮದಿಂದ ಯಾವ ಲಾಭವನ್ನು ಪಡೆಯದೆ ಹೋಗುತ್ತಾರೆ. ಅರ್ಥವನ್ನು ಕಳೆದುಕೊಳ್ಳುತ್ತಾರೆ.

## ಸಮ್ಮಾದೃಷ್ಟಿ ಹೊಂದಿರುವವರ ಲಕ್ಷಣಗಳು

ಸಮ್ಮಾದೃಷ್ಟಿ ಹೊಂದಿರುವವನು:

"ಮಾತೃ ಹಂತಕನಾಗಿರುವುದಿಲ್ಲ, ಪಿತೃಹಂತಕನಾಗಿರುವುದಿಲ್ಲ, ಅರಹಂತರ ಹಂತಕನು ಆಗಿರುವುದಿಲ್ಲ, ತಥಾಗತರಿಗೆ ಗಾಯ ಮಾಡುವುದಿಲ್ಲ, ಸಂಘಬೇಧ ಮಾಡುವುದಿಲ್ಲ, ಇನ್ನೋರ್ವ ಗುರುವಿಗೆ ಶರಣು ಹೋಗುವುದಿಲ್ಲ."

"ಆತನು ಯಾವುದೇ ಆಗು–ಹೋಗುವಿಕೆಯನ್ನು ನಿತ್ಯವೆಂದು, ಶಾಶ್ವತವೆಂದು ಸ್ವೀಕರಿಸುವುದಿಲ್ಲ, ಯಾವುದೇ ಆಗು–ಹೋಗುವಿಕೆಯನ್ನು ಸುಖವೆಂದು ಸ್ವೀಕರಿಸುವುದಿಲ್ಲ, ಯಾವುದೇ ಆಗುಹೋಗುವಿಕೆಯನ್ನು ಆತ್ಮವೆಂದು ಸ್ವೀಕರಿಸುವುದಿಲ್ಲ. ಯಾವುದೇ ಸಮಾರಂಭಗಳಿಂದ ಪರಿಶುದ್ಧತೆ ಲಭಿಸುವುದು ಎಂದು ತಿಳಿಯುವುದಿಲ್ಲ. ಬುದ್ಧ ಸಂಘದ ಹೊರತು ಬೇರೆ ಸಂಘವನ್ನು ದಾನಕ್ಕೆ ಅರ್ಹವೆಂದು ಭಾವಿಸುವುದಿಲ್ಲ."



ಯಾರು ಸಮ್ಮಾದಿಟ್ಠಿಯನ್ನು ಪ್ರಾಪ್ತಿಮಾಡಿರುವವರೋ ಅವರು ಸುಖ ಹಾಗು ದುಃಖಗಳು ಸ್ವನಿರ್ಮಿತವೆಂದು ಭಾವಿಸುವುದಿಲ್ಲ. ಹಾಗೆಯೇ ಪರನಿರ್ಮಿತವೆಂದು ಭಾವಿಸುವುದಿಲ್ಲ. ಹಾಗೆಯೇ ಸ್ವ ಮತ್ತು ಪರನಿರ್ಮಿತವೆಂದು ಭಾವಿಸುವುದಿಲ್ಲ. ಹಾಗೆಯೇ ಸ್ವ ಮತ್ತು ಪರ ನಿರ್ಮಿತವಿಲ್ಲದೆ ಆಕಸ್ಮಿಕವೆಂದೂ ಹೇಳುವುದಿಲ್ಲ. ಏಕೆ ಹೀಗೆ? ಏಕೆಂದರೆ ಯಾರು ಸಮ್ಮಾದಿಟ್ಠಿಯನ್ನು ಹೊಂದಿರುತ್ತಾರೋ ಅವರು ಸುಖ–ದುಃಖಗಳ ಉದಯದ ಸ್ಪಷ್ಟವಾದ ಕಾರಣಗಳನ್ನು ಅರಿತಿರುತ್ತಾರೆ. ಪಟಿಚ್ಚ ಸಮುಪ್ಪಾದವನ್ನು ಸ್ಪಷ್ಟವಾಗಿ ಅರಿತಿರುತ್ತಾರೆ. ಆದ್ದರಿಂದಾಗಿ ಅವರು ಹೀಗೆ ಹೇಳುತ್ತಾರೆ.

"ಯಾರು ಸಮ್ಮಾದೃಷ್ಟಿಯನ್ನು ಹೊಂದಿರುವವರೋ ಅವರು ಗೌರವವಿಲ್ಲದೆ ಬಾಳುವುದಿಲ್ಲ. ಕೃತಜ್ಞತೆಯಿಲ್ಲದೆ ಬಾಳುವುದಿಲ್ಲ. ಬುದ್ಧರಲ್ಲಿ, ಧಮ್ಮದಲ್ಲಿ, ಸಂಘದಲ್ಲಿ, ಶಿಕ್ಷಣದಲ್ಲಿ ಅಪಾರವಾಗಿ ಗೌರವನಿಷ್ಠೆ, ಪಾಲನೆ ಹೊಂದಿರುತ್ತಾರೆ. **'ಪರವಾಗಿಲ್ಲ ಬಿಡು, ಏನೂ ಆಗುವುದಿಲ್ಲ'** ಎಂಬ ದೃಷ್ಟಿಯಲ್ಲಿ ಬೀಳುವುದಿಲ್ಲ. ಅವರಿಗೆ ಎಂಟನೆಯ ಜನ್ಮವಿರುವುದಿಲ್ಲ."

"ಮಿಥ್ಯಾದೃಷ್ಟಿಗಳನ್ನು ಹೊಂದಿರುವುದಿಲ್ಲ, ಸಂಶಯಗಳಿಂದ ಕೂಡಿರುವುದಿಲ್ಲ, ವಿಧಿ, ಸಂಸ್ಕಾರ, ಮೌಢ್ಯ ಆಚರಣೆಗಳಲ್ಲಿ ನಂಬಿಕೆ ಹೊಂದಿರುವುದಿಲ್ಲ, ಮಿಥ್ಯಾ ಮಾರ್ಗಕ್ಕೆ ಕರೆದೊಯ್ಯುವ ಭಾವೋದ್ರೇಕ, ದ್ವೇಷ ಮತ್ತು ಮೋಹಗಳನ್ನು ಹೊಂದಿರುವುದಿಲ್ಲ."

## ಆನಂದವೇ ಅಳುವಿಗೆ ಕಾರಣ

ಭಗವಾನರು ಶ್ರಾವಸ್ತಿಯಲ್ಲಿದ್ದಾಗ ಹೀಗೆ ಹೇಳಿದರು:

"ಭಿಕ್ಷುಗಳೇ, ಯಾರು ಶರೀರದ ಬಗ್ಗೆ ಆನಂದಿಸುವರೋ, ಅವರು ದುಃಖವನ್ನು ಪಡೆಯುತ್ತಾರೆ. ಆತನ ಬಗ್ಗೆ ನಾನು ಖಚಿತವಾಗಿ ಹೇಳುವುದು ಏನೆಂದರೆ ಆತನು ದುಃಖದಿಂದ ಮುಕ್ತನಾಗಿಲ್ಲ. ಹಾಗೆಯೇ ಯಾರು ವೇದನೆಗಳಲ್ಲಿ (ಸುಖಾನುಭವ, ದುಃಖಾನುಭವ, ತಟಸ್ಥಾನುಭವ) ಆನಂದಿಸುವನೋ, ಆತನು ದುಃಖವನ್ನು ಪಡೆಯುತ್ತಾನೆ. ಹಾಗೆಯೇ ಯಾರು ಚಿತ್ತದ ಚಟುವಟಿಕೆಗಳಲ್ಲಿ (ಸಂಖಾರಗಳಲ್ಲಿ)... ವಿಜ್ಞಾನ (ಅರಿವಿನಲ್ಲಿ) ದಲ್ಲಿ ಆನಂದಿಸುವನೋ ಆತನು ದುಃಖವನ್ನು ಪಡೆಯುತ್ತಾನೆ. ನಾನು ಖಚಿತವಾಗಿ ಹೇಳುವುದು ಏನೆಂದರೆ ಆತನು ದುಃಖದಿಂದ ಮುಕ್ತನಾಗಿಲ್ಲ. ಆದರೆ ಯಾರು ಶರೀರದಲ್ಲಿ, ವೇದನೆಗಳಲ್ಲಿ, ಗ್ರಹಿಕೆಗಳಲ್ಲಿ, ಚಿತ್ತದ ಚಟುವಟಿಕೆಗಳಲ್ಲಿ ಮತ್ತು ಅರಿವಿನಲ್ಲಿ ಆನಂದಿಸುವುದಿಲ್ಲವೋ ಆತನು ದುಃಖದಲ್ಲಿ ಆನಂದಿಸುವುದಿಲ್ಲ. ನಾನು ಆತನ ಬಗ್ಗೆ ಖಚಿತವಾಗಿ ಹೇಳುವುದು ಏನೆಂದರೆ ಆತನು ದುಃಖದಿಂದ ಮುಕ್ತನಾಗಿದ್ದಾನೆ."

# VI. ಸಕ್ಕಾಯ ದಿಟ್ಠಿ

## ಸಕ್ಕಾಯ ದಿಟ್ಠಿ

ಶ್ರಾವಸ್ಥಿಯಲ್ಲಿ ಭಗವಾನರು ಹೀಗೆ ಬೋಧಿಸಿದರು.

"ಸಮಣ ಬ್ರಾಹ್ಮಣರು ಅನೇಕ ವಿಧದಲ್ಲಿ ಆತ್ಮವನ್ನು ಅಥವಾ ವ್ಯಕ್ತಿತ್ವವನ್ನು ಅಂಟಿದ್ದಾರೆ. ಪಂಚಖಂಧಗಳಿಗೆ ಅಂಟಿರುವರು. ಈ ಕೆಳಕಂಡ ದೃಷ್ಟಿಗಳಲ್ಲಿ ಒಂದಕ್ಕೆ ಅಂಟಿರುತ್ತಾರೆ. ಯಾರು ಆರ್ಯರಲ್ಲವೋ, ಸುಶಿಕ್ಷಿತರಲ್ಲವೋ ಅವರು ದೇಹವನ್ನೇ ಆತ್ಮ ಎನ್ನುತ್ತಾರೆ ಅಥವಾ ಆತ್ಮವು ದೇಹವನ್ನು ಹೊಂದಿದೆ ಅಥವಾ ದೇಹವು ಆತ್ಮವನ್ನು ಹೊಂದಿದೆ, ದೇಹದಲ್ಲಿ ಆತ್ಮವಿದೆ ಅಥವಾ ಆತ್ಮದಲ್ಲಿ ದೇಹವಿದೆ ಎಂದು ಭಾವಿಸುತ್ತಾರೆ.

ಹಾಗೆಯೇ ವೇದನೆಯೇ ಆತ್ಮವೆಂದು ಹೇಳುತ್ತಾರೆ. ಉದಾಹರಣೆಗೆ ಆನಂದವೇ ಆತ್ಮ ಅಥವಾ ವೇದನೆಯು ಆತ್ಮವನ್ನು ಹೊಂದಿದೆ ಅಥವಾ ಆತ್ಮವು ವೇದನೆಯನ್ನು ಹೊಂದಿದೆ, ವೇದನೆಯಲ್ಲಿ ಆತ್ಮವಿದೆ, ಆತ್ಮದಲ್ಲಿ ವೇದನೆಗಳಿವೆ.

ಹಾಗೆಯೇ ಸಞ್ಞ(ಗ್ರಹಿಕೆ)ವೇ ಆತ್ಮ ಎನ್ನುತ್ತಾರೆ. ಗ್ರಹಿಕೆಯು ಆತ್ಮವನ್ನು ಹೊಂದಿದೆ ಅಥವಾ ಆತ್ಮವು ಗ್ರಹಿಕೆಯನ್ನು ಹೊಂದಿದೆ. ಆತ್ಮದಲ್ಲಿ ಗ್ರಹಿಕೆಯಿದೆ. ಅಥವಾ ಗ್ರಹಿಕೆಯಲ್ಲಿ ಆತ್ಮವಿದೆ. ಉದಾಹಣೆಗೆ ಬುದ್ಧಿಯಲ್ಲಿ ಆತ್ಮವಿದೆ ಎಂದು ಹೇಳುತ್ತಾರೆ.

ಹಾಗೆಯೇ ಸಂಖಾರಗಳೇ (ಚಿತ್ತದ ಚಟುವಟಿಕೆಗಳು) ಆತ್ಮವೆನ್ನುತ್ತಾರೆ. (ಉದಾಹರಣೆಗೆ ಪ್ರಜ್ಞಾ ಅಥವಾ ಕರುಣಾ) ಅಥವಾ ಆತ್ಮವು ಸಂಖಾರಗಳನ್ನು ಹೊಂದಿವೆ. ಅಥವಾ ಸಂಖಾರಗಳು ಆತ್ಮವನ್ನು ಹೊಂದಿದೆ. ಆತ್ಮದಲ್ಲಿ ಸಂಖಾರಗಳಿವೆ ಅಥವಾ ಹಾಗೆಯೇ ವಿಞ್ಞನವೇ (ಅರಿಯುವಿಕೆ) ಆತ್ಮವೆನ್ನುತ್ತಾರೆ. ಅಥವಾ ಆತ್ಮವು ವಿಞ್ಞಾನವನ್ನು ಹೊಂದಿದೆ. ಅಥವಾ ವಿಞ್ಞನವು ಆತ್ಮವನ್ನು ಹೊಂದಿದೆ. ಆತ್ಮದಲ್ಲಿ ವಿಞ್ಞಾನವಿದೆ ಅಥವಾ ವಿಞ್ಞಾನದಲ್ಲಿ ಆತ್ಮವಿದೆ ಎನ್ನುತ್ತಾರೆ. (ಹೀಗೆ ಪಂಚಖಂಧಗಳಲ್ಲಿ ಒಂದು ಆತ್ಮವೆಂದು, ಉಳಿದವನ್ನು ಅದರ ಅಧೀನವೆನ್ನುತ್ತಾರೆ ಅಥವಾ ಪಂಚಖಂಧಗಳಿಗೆ ಅತೀತವಾಗಿ ಆತ್ಮವಿದೆ ಎಂದು ಹೇಳಿ ಅದಕ್ಕೆ ಇವೆಲ್ಲವೂ ಅಧೀನ ಎನ್ನುತ್ತಾರೆ). 'ಇದೇ ನಾನು' ಎಂದು ಹೇಳಿ ಅದಕ್ಕೆ ಇವೆಲ್ಲವೂ ಅಧೀನ ಎನ್ನುತ್ತಾರೆ). 'ಇದೇ ನಾನು' ಎಂದು ದೃಷ್ಟಿಸುತ್ತಾನೆ. ಆತನಲ್ಲಿ ನಾನಾಬಗೆಯ ದೃಷ್ಟಿಕೋನಗಳು ಉಂಟಾಗುತ್ತದೆ. ಆತ್ಮವೇ ಎಲ್ಲವನ್ನು ನೋಡುತ್ತಿದೆ, ಕೇಳುತ್ತಿದೆ, ಅಘ್ರಾಣಿಸುತ್ತಿದೆ, ಸ್ವಾದಿಸುತ್ತಿದೆ, ಸ್ಪರ್ಶಿಸುತ್ತಿದೆ, ಯೋಚಿಸುತ್ತಿದೆ ಎಂದು ಭಾವಿಸುತ್ತಾನೆ. ಹೀಗೆ ದೃಷ್ಟಿ ಜಾಲದಲ್ಲಿ ಬೀಳುತ್ತಾನೆ. 'ಇದೇ ನಾನು' ಅಥವಾ 'ವಿಷಯಗಳು ಅಶರೀರ' ಎನ್ನುತ್ತಾನೆ. 'ವಿಷಯಗಳು ಶರೀರ ಹೊಂದಿವೆ' ಎನ್ನುತ್ತಾನೆ, 'ವಿಷಯಗಳು ಅರಿವನ್ನು ಹೊಂದಿದೆ ಅಥವಾ ವಿಷಯಗಳು ಅರಿವನ್ನು



ಹೊಂದಿಲ್ಲ' ಅಥವಾ 'ವಿಷಯಗಳು ಅರಿವನ್ನು ಹೊಂದಿಲ್ಲ, ಹೊಂದದೆಯೂ ಇಲ್ಲ' ಎಂದು ಭಾವಿಸುತ್ತಾನೆ.

ಆದರೆ ಆರ್ಯಶ್ರಾವಕನು ಯಾವಾಗ ಅಜ್ಞಾನವನ್ನು ದೂರೀಕರಿಸುತ್ತಾನೆ ಮತ್ತು ಆತನಲ್ಲಿ ಜ್ಞಾನವು ಉದಯಿಸುತ್ತದೆ, ಅಜ್ಞಾನದ ನಾಶದೊಂದಿಗೆ ಆತನಲ್ಲಿ 'ಅಹಂ', 'ನಾನು', 'ಇದೇ ನಾನು', 'ಆತ್ಮವಿದೆ', 'ಆತ್ಮವಿಲ್ಲ', 'ಆತ್ಮಕ್ಕೆ ದೇಹವಿದೆ', 'ಆತ್ಮಕ್ಕೆ ದೇಹವಿಲ್ಲ', 'ಆತ್ಮಕ್ಕೆ ಅರಿವಿದೆ', 'ಆತ್ಮಕ್ಕೆ ಅರಿವಿಲ್ಲ'. ಆತ್ಮಕ್ಕೆ ಅರಿವಿಲ್ಲ, ಇಲ್ಲದೆಯೂ ಇಲ್ಲ' ಎಂದೆಲ್ಲಾ ಮಿಥ್ಯಾದೃಷ್ಟಿಗಳು ನಾಶವಾಗುತ್ತದೆ.

## ನಿಮ್ಮದೆಲ್ಲವನ್ನು ಬಿಟ್ಟುಬಿಡಿ

ಭಗವಾನರು ಶ್ರಾವಸ್ತಿಯಲ್ಲಿದ್ದಾಗ ಹೀಗೆ ಹೇಳಿದ್ದರು:

"ಭಿಕ್ಷುಗಳೇ, ನಿಮ್ಮದೆಲ್ಲವನ್ನು ಬಿಟ್ಟುಬಿಡಿ, ಹಾಗೆ ಬಿಟ್ಟಾಗ ನೀವು ಲಾಭವನ್ನು ಮತ್ತು ಕ್ಷೇಮವನ್ನು ಪಡೆಯುವಿರಿ."

"ಭಿಕ್ಷುಗಳೇ, ನಿಮ್ಮದಲ್ಲದ್ದು ಯಾವುದು?"

ಈ ದೇಹ ನಿಮ್ಮದಲ್ಲ... ಈ ವೇದನೆಗಳು... ಈ ಗ್ರಹಿಕೆಗಳು... ಈ ಚಿತ್ತದ ಚಟುವಟಿಕೆಗಳು... ಈ ಅರಿವು ನಿಮ್ಮದಲ್ಲ. ಇವುಗಳನ್ನು ಬಿಟ್ಟುಬಿಡಿ, ಅಂಟದಿರಿ, ಇವನ್ನು ಬಿಟ್ಟಾಗ ನೀವು ಲಾಭವನ್ನು ಮತ್ತು ಕ್ಷೇಮವನ್ನು ಪಡೆಯುವಿರಿ. ಹೇಗೆಂದರೆ ಕೆಲವರು ಹುಲ್ಲನ್ನು ಮತ್ತು ಕಟ್ಟಿಗೆಗಳನ್ನು ಸುಡುತ್ತಿದ್ದರೆ ಅದು ನಿಮ್ಮನ್ನು ಸುಡುವಂತೆ ಆಗುವುದೇ?"

"ಇಲ್ಲ ಭಂತೆ."

"ಏಕೆ?"

"ಏಕೆಂದರೆ ಅದು ನಮ್ಮದಲ್ಲ, ನಾವು ಅಲ್ಲ, ನಮ್ಮ ಆತ್ಮವೂ ಅಲ್ಲ."

"ಅದೇರೀತಿಯಾಗಿ ಭಿಕ್ಷುಗೇ, ಈ ಶರೀರ ಮತ್ತು ಮನಸ್ಸನ್ನು (ವೇದನೆ) ಗ್ರಹಿಕೆ, ಚಟುವಟಿಕೆ, ಅರಿವು) ಬಿಟ್ಟಿಬಿಡಿ. ಅದು ನಿಮ್ಮದಲ್ಲ, ಇವನ್ನು ನೀವು ಬಿಟ್ಟಾಗ ಮತ್ತೆ ಅಂಟದಿದ್ದಾಗ ನೀವು ಸುಖವನ್ನು ಮತ್ತು ಕ್ಷೇಮವನ್ನು ಪಡೆಯುವಿರಿ."

## ಆತ್ಮವು ಸರ್ವಶಕ್ತವೇ? ಪರಿಶುದ್ಧವೇ? ನಿತ್ಯವೇ?

ಒಮ್ಮೆ ಸಚ್ಚಕ ಎಂಬ ಮಹಾ ವಾಗ್ಮಿಯು ಭಗವಾನರನ್ನು ವಾದದಲ್ಲಿ ಸೋಲಿಸಲು ಬಂದನು. ಆತನ ಪ್ರಕಾರ ಪಂಚಖಂಧಗಳು (ದೇಹ ಮತ್ತು ಮನಸ್ಸು) ಆತ್ಮವಾಗಿತ್ತು. ಆದರೆ ಭಗವಾನರು ಯಾವುದನ್ನು ಆತ್ಮವೆಂದು ಒಪ್ಪುತ್ತಿರಲಿಲ್ಲ.

ಸಚ್ಚಕ : "ದೇಹ ಮತ್ತು ಮನಸ್ಸನ್ನು ಅವಲಂಬಿಸಿಯೇ ಪಾಪ ಪುಣ್ಯಗಳು ಉಂಟಾಗುತ್ತದೆ."

ಭಗವಾನರು : "ಅಗ್ಗಿವೇಸನ, ನೀನು ಹೇಳುತ್ತಿರುವುದು ಈ ರೀತಿಯಾಗಿರಬಹುದೇ, ದೇಹವೇ ನನ್ನ ಆತ್ಮ, ಮನಸ್ಸೇ (ವೇದನೆ, ಸಞ್ಞ, ಸಂಖಾರ, ವಿಞ್ಞಾನ) ನನ್ನ ಆತ್ಮ."

ಸಚ್ಚಕ : "ಹೌದು."

ಭಗವಾನರು : "ಒಬ್ಬ ರಾಜನಿಗೆ ಅಪರಾಧಿಗಳಿಗೆ ಗಡಿಪಾರು ಮಾಡುವ ಅಥವಾ ಮರಣದಂಡನೆ ನೀಡುವ ಅಧಿಕಾರವಿರುತ್ತದೆ. ಏಕೆಂದರೆ ಆತನು ಅಭಿಶಕ್ತ ಸರ್ವ ಅಧಿಕಾರವನ್ನು ಹೊಂದಿರುತ್ತಾನೆ, ಅದೇರೀತಿಯಲ್ಲಿ ಆತ್ಮಕ್ಕೂ ಸಹಾ ಅಂತಹ ಶಕ್ತಿ ಇರಲೇಬೇಕು. ಈಗ ನೀನು ದೇಹವೇ ನನ್ನ ಆತ್ಮ ಎನ್ನುವುದಾದರೆ 'ನನ್ನ ದೇಹ ಬದಲಾಗದಿರಲಿ, ಬಲಿಷ್ಠವಾಗಿರಲಿ, ರೋಗಕ್ಕೆ ಈಡಾಗದಿರಲಿ, ವೃದ್ಧಾಪ್ಯ ಹೊಂದದಿರಲಿ, ಮರಣಕ್ಕೆ ಈಡಾಗದಿರಲಿ' ಎಂದರೆ ಹಾಗೆ ಆಗುತ್ತದೆಯೇ?"

ಆಗ ಸಚ್ಚಕ ನಿರುತ್ತರನಾದನು. ನಂತರ ಇಲ್ಲವೆಂದು ಒಪ್ಪಿದನು.

ಭಗವಾನರು : "ವೇದನೆಯು ನನ್ನ ಆತ್ಮ ಎನ್ನುವುದಾದರೆ ನನ್ನ ವೇದನೆಯು ಹೀಗಿರಲಿ (ಸದಾ ಸುಖಿಯಾಗಿರಲಿ), ನನ್ನ ವೇದನೆ ಹೀಗಿರದಿರಲಿ (ಎಂದು ದುಃಖಿತವಾಗದಿರಲಿ) ಎಂದರೆ ಹಾಗಾಗುವುದೇ?"

ಸಚ್ಚಕ : "ಇಲ್ಲ ಭಂತೆ."

ಭಗವಾನರು : "ಸಞ್ಞೆಯು ನನ್ನ ಆತ್ಮ ಎನ್ನುವುದಾದರೆ ಇಂತಹ ಗ್ರಹಿಕೆಯೇ ಇರಲಿ, ಇಂತಹ ಗ್ರಹಿಕೆ ಇಲ್ಲದಿರಲಿ ಎಂದರೆ ಹಾಗಾಗುವುದೇ?"

ಸಚ್ಚಕ : "ಇಲ್ಲ ಭಂತೆ."

ಭಗವಾನರು : "ಸಂಖಾರಗಳು ನನ್ನ ಆತ್ಮ ಎನ್ನುವುದಾದರೆ ನನ್ನ ಸಂಖಾರಗಳು ಹೀಗಿರಲಿ (ಮೈತ್ರಿ, ಪ್ರಜ್ಞೆ) ನನ್ನ ಸಂಖಾರಗಳು ಹೀಗಿರದಿರಲಿ (ಲೋಭ, ದ್ವೇಷ, ಮೋಹ) ಎಂದರೆ ಹಾಗಾಗುವುದೇ?"

ಸಚ್ಚಕ : "ಇಲ್ಲ ಭಗವಾನ್."

ಭಗವಾನರು : "ವಿಞ್ಞಾನವು ನನ್ನ ಆತ್ಮ ಎನ್ನುವುದಾದರೆ ನನ್ನ ಅರಿಯುವಿಕೆ ಹೀಗಿರಲಿ, ನನ್ನ ಅರಿಯುವಿಕೆ ಹೀಗಿರದಿರಲಿ ಎಂದರೆ ಹಾಗಾಗುವುದೇ?"

ಸಚ್ಚಕ : "ಇಲ್ಲ ಭಂತೆ."

ಭಗವಾನರು : "ದೇಹ ಮತ್ತು ಮನಸ್ಸುಗಳು ನಿತ್ಯವೋ ಅನಿತ್ಯವೋ?"

ಸಚ್ಚಕ : "ಅನಿತ್ಯ ಭಂತೆ."

ಭಗವಾನರು : "ಯಾವುದು ಅನಿತ್ಯವೋ ಅದು ಸುಖವೋ ಅಥವಾ ದುಃಖವೋ?"

ಸಚ್ಚಕ : "ದುಃಖ ಭಂತೆ."



ಭಗವಾನರು : "ಯಾವುದು ಅನಿತ್ಯವೋ, ದುಃಖಕರವೋ ಅದನ್ನು ಇದು ನಾನು, ಇದು ನನ್ನದು ಮತ್ತು ಇದೇ ನನ್ನ ಆತ್ಮವೆಂದು ಹೇಳಬಹುದೇ?"

ಸಚ್ಚಕ : "ಇಲ್ಲ ಭಂತೆ."

ಭಗವಾನರು : "ಅಗ್ಗಿವೇಸನ, ಇದರ ಬಗ್ಗೆ ನೀನು ಹೇಗೆ ಯೋಚಿಸುತ್ತೀಯೆ, ಯಾವಾಗ ಒಬ್ಬನು ದುಃಖವನ್ನು ಒಪ್ಪಿ, ಅವಲಂಬಿಸಿದರೆ, ದುಃಖವನ್ನೇ ನಾನು ಎಂದು ಭಾವಿಸಿ, ದುಃಖವನ್ನು ನನ್ನದು ಎಂದು ಭಾವಿಸಿ, ದುಃಖವನ್ನೇ ನನ್ನ ಆತ್ಮ ಎಂದು ಪರಿಗಣಿಸಿದರೆ ಆತನು ಎಂದಾದರೂ ಪೂರ್ಣವಾಗಿ ದುಃಖದಿಂದ ಮುಕ್ತನಾಗಲು ಸಾಧ್ಯವೇ?"

ಸಚ್ಚಕ : "ಇಲ್ಲ ಭಂತೆ."

ಭಗವಾನ್ : "ಇಲ್ಲಿ ಯಾವ ಭಿಕ್ಷುವು ಪಂಚಖಂಧಗಳನ್ನು (ದೇಹ ಮತ್ತು ಮನಸ್ಸು) ದುಃಖವೆಂದು ಸಮ್ಮಾಪ್ರಜ್ಞೆಯಿಂದ ಕಂಡು ಯಾವ ಬಂಧನಕ್ಕೂ ಅಂಟದೆ ಮುಕ್ತನಾಗುತ್ತಾನೆ. ಈ ರೀತಿಯಾಗಿ ಅರಹಂತನಾಗುತ್ತಾನೆ."

ಆಗ ಸಚ್ಚಕನು ಭಗವಾನರಲ್ಲಿ ಕ್ಷಮೆ ಯಾಚಿಸಿ, ಆಹಾರಕ್ಕೆ ಆಹ್ವಾನಿಸುತ್ತಾನೆ.

## ಆತ್ಮರಹಿತ ಸ್ಪಷ್ಟವಾದ ಅರಿವು

ಭಗವಾನರು ಶ್ರಾವಸ್ತಿಯಲ್ಲಿ ಇದ್ದರು. ಆಗ ಅವರು ನಾಲ್ಕುರೀತಿಯ ಆಹಾರಗಳಾದ ಭೌತಿಕ ಆಹಾರ, ಸ್ಪರ್ಶ, ಇಚ್ಛೆ ಮತ್ತು ವಿಞ್ಞಾನ (ಅರಿವು) ಇವುಗಳ ಬಗ್ಗೆ ಬೋಧಿಸುತ್ತಿದ್ದರು. ಆಗ ಪೂಜ್ಯ ಮೋರಿಯ ಫಾಲ್ಗುಣರು ಈ ರೀತಿ ಪ್ರಶ್ನಿಸಿದರು: "ಭಗವಾನ್ ಯಾರು ವಿಞ್ಞಾನದ ಆಹಾರವನ್ನು ಸೇವಿಸುತ್ತಿರುವುದು?"

ಭಗವಾನರು : "ಇದು ಪ್ರಶ್ನಿಸಬೇಕಾದ ರೀತಿಯಲ್ಲ, ನಾನು ಯಾರೋ ಆಹಾರವನ್ನು ಸೇವಿಸುತ್ತಿರುವವನು ಎಂದು ಬೋಧಿಸುತ್ತಿಲ್ಲ. ನಾನು ಆ ಅರ್ಥದಲ್ಲಿ ಬೋಧಿಸುತ್ತಿಲ್ಲ. ಪ್ರಶ್ನೆಯನ್ನು ಈ ರೀತಿಯಲ್ಲಿ ಕೇಳಬೇಕು: 'ವಿಞ್ಞಾನವು ಪೋಷಿತವಾದ ನಂತರ ಏನಾಗುವುದು? ಮತ್ತು ಅದಕ್ಕೆ ತಕ್ಕ ಉತ್ತರವೆಂದರೆ ವಿಞ್ಞಾನವು ಪೋಷಿತವಾದಾಗ ಭವವು ಉಂಟಾಗುತ್ತದೆ, ಭವದಿಂದ ಜನ್ಮವು ಉಂಟಾಗುತ್ತದೆ. ಜನ್ಮದಲ್ಲಿ ಆರು ಇಂದ್ರೀಯ ಆಧಾರಗಳು ಉಂಟಾಗುತ್ತದೆ. ಆರು ಇಂದ್ರೀಯ ಆಧಾರಗಳಿಂದ ಸ್ಪರ್ಶವು ಉಂಟಾಗುತ್ತದೆ."

ಆಗ ಫಾಲ್ಗುಣನು ಮತ್ತೆ ಈ ರೀತಿ ಪ್ರಶ್ನಿಸುತ್ತಾನೆ: "ಭಗವಾನ್, ಯಾರು ಸ್ಪರ್ಶವನ್ನು ಪಡೆಯುತ್ತಿರುವುದು?"

ಭಗವಾನರು: "ಓ ಫಾಲ್ಗುಣ ಇದು ಪ್ರಶ್ನಿಸಬೇಕಾದ ರೀತಿಯಲ್ಲ, ನಾನು ಯಾರೋ ಸ್ಪರ್ಶವನ್ನು ಪಡೆಯುತ್ತಿರುವವನು ಎಂದು ಬೋಧಿಸುತ್ತಿಲ್ಲ. ನಾನು ಹಾಗೆ ಹೇಳುತ್ತಿದ್ದರೆ ಈ ಪ್ರಶ್ನೆಯು ಸರಿಯಾಗುತ್ತಿತ್ತು. ನೀನು ಹೀಗೆ ಪ್ರಶ್ನೆ ಕೇಳಬೇಕಿತ್ತು 'ಸ್ಪರ್ಶದ

ಪರಿಣಾಮವೇನಾಗುವುದು' ಮತ್ತು ಅದಕ್ಕೆ ತಕ್ಕ ಉತ್ತರ ಏನೆಂದರೆ ಸ್ಪರ್ಶದಿಂದಾಗಿಯೇ ವೇದನೆಗಳು ಉಂಟಾಗುತ್ತವೆ."

ಆಗ ಫಾಲ್ಗುಣ ಮತ್ತೆ ಈ ರೀತಿ ಪ್ರಶ್ನಿಸಿದನು: "ಭಗವಾನ್ ಯಾರು ವೇದನೆಗಳನ್ನು ಅನುಭವಿಸುತ್ತಿರುವುದು?"

ಭಗವಾನ್: "ಓ ಫಾಲ್ಗುಣ, ಇದು ಪ್ರಶ್ನಿಸಬೇಕಾದ ರೀತಿಯಲ್ಲ, ನಾನು ಯಾರೋ ವೇದನೆಗಳನ್ನು ಅನುಭವಿಸುತ್ತಿದ್ದಾನೆ ಎಂದು ಬೋಧಿಸುತ್ತಿಲ್ಲ, ಹಾಗೆ ಹೇಳಿದ್ದರೆ ಈ ಪ್ರಶ್ನೆ ಉಚಿತ ಆಗಿರುತ್ತಿತ್ತು. ಮತ್ತು ನಾನು ಹಾಗೆ ಬೋಧಿಸಿಲ್ಲದುದರಿಂದಾಗಿ ನೀನು ಹೀಗೆ ಪ್ರಶ್ನೆ ಕೇಳಬೇಕಿತ್ತು: 'ವೇದನೆಗಳ ಪರಿಣಾಮವು ಏನಾಗುತ್ತದೆ, ಭಗವಾನ್?' ಮತ್ತು ಅದಕ್ಕೆ ಯೋಗ್ಯ ಉತ್ತರವೆಂದರೆ ವೇದನೆಗಳಿಂದಾಗಿ ತನ್ಹಾ (ತೀವ್ರ ಬಯಕೆ) ಉಂಟಾಗುತ್ತದೆ."

ಫಾಲ್ಗುಣ: "ಭಗವಾನ್ ಯಾರು ತನ್ಹಾ (ತೀವ್ರ ಬಯಕೆ) ಪಡುತ್ತಿರುವುದು?"

ಭಗವಾನ್: "ಓ ಪಾಲ್ಗುಣ, ಇದು ಪ್ರಶ್ನಿಸಬೇಕಾದ ರೀತಿಯಲ್ಲ, ನಾನು ಯಾರೋ ತೀವ್ರ ಬಯಕೆ (ತನ್ಹಾ) ಪಡುತ್ತಿದ್ದಾನೆ ಎಂದು ಬೋಧಿಸುತ್ತಿಲ್ಲ. ಹಾಗೆ ಬೋಧಿಸಿದ್ದರೆ, ನೀನು ಹೀಗೆ ಕೇಳುವುದು ಉಚಿತವಾಗುತ್ತಿತ್ತು. ನಾನು ಆ ರೀತಿ ಬೋಧಿಸದ ಕಾರಣ, ನೀನು ಹೀಗೆ ಪ್ರಶ್ನಿಸಬೇಕು: 'ತನ್ಹಾದ ಪರಿಣಾಮವೇನಾಗುವುದು ಭಗವಾನ್'. ಆಗ ಅದಕ್ಕೆ ತಕ್ಕ ಉತ್ತರವೇನೆಂದರೆ ತನ್ಹಾದಿಂದ ಅಂಟುವಿಕೆಯು ಉಂಟಾಗುತ್ತದೆ."

ಫಾಲ್ಗುಣ: "ಭಗವಾನ್ ಯಾರು ಅಂಟುವಿಕೆಯನ್ನು ವ್ಯಕ್ತಿಪಡಿಸುತ್ತಿರುವುದು?"

ಭಗವಾನ್: "ಇದು ಪ್ರಶ್ನಿಸಬೇಕಾದ ರೀತಿಯಲ್ಲ, ನಾನು ಯಾರೋ ಅಂಟುತ್ತಿರುವನು ಎಂದು ಬೋಧಿಸುತ್ತಿಲ್ಲ, ಹಾಗೆ ಬೋಧಿಸಿದ್ದರೆ, ನೀನು ಹೀಗೆ ಕೇಳುವುದು ಉಚಿತವಾಗಿರುತ್ತಿತ್ತು. ನಾನು ಹಾಗೆ ಬೋಧಿಸದ ಕಾರಣ ನೀನು ಹೀಗೆ ಪ್ರಶ್ನಿಸಬೇಕು: 'ಅಂಟುವಿಕೆಯ ಪರಿಣಾಮ ಏನಾಗುತ್ತದೆ?' ಆಗ ಅದಕ್ಕೆ ತಕ್ಕ ಉತ್ತರ ಏನೆಂದರೆ ಅಂಟುವಿಕೆಯಿಂದ ಭವ ಉಂಟಾಗುತ್ತದೆ, ಭವದಿಂದ ಜನ್ಮ, ಜನ್ಮದಿಂದ ಮುಪ್ಪು, ರೋಗ, ಮರಣ, ಶೋಕ, ಪ್ರಲಾಪ, ದುಃಖ, ನಿರಾಶೆ ಮುಂತಾದ ದುಃಖರಾಶಿಯೇ ಉಂಟಾಗುತ್ತದೆ."

"ಆದರೆ ಫಾಲ್ಗುಣ ಆರು ಇಂದ್ರೀಯಗಳ ನಿರೋಧದಿಂದ ಸ್ಪರ್ಶದ ನಿರೋಧ ಉಂಟಾಗುತ್ತದೆ. ಸ್ಪರ್ಶದ ನಿರೋಧದಿಂದ ವೇದನೆಗಳ ನಿರೋಧವಾಗುತ್ತದೆ, ವೇದನೆಗಳ ನಿರೋಧದಿಂದ ತನ್ಹಾದ ನಿರೋಧವಾಗುತ್ತದೆ, ತನ್ಹಾದ ನಿರೋಧದಿಂದ ಅಂಟುವಿಕೆಯ ನಿರೋಧವಾಗುತ್ತದೆ, ಅಂಟುವಿಕೆಯ ನಿರೋಧದಿಂದ, ಭವದ ನಿರೋಧವಾಗುತ್ತದೆ, ಭವದ ನಿರೋಧದಿಂದ, ಜನ್ಮದ ನಿರೋಧವು, ಜನ್ಮದ ನಿರೋಧದಿಂದ ಇಡೀ ದುಃಖರಾಶಿಯ ನಿರೋಧವಾಗುತ್ತದೆ.



## ಆತ್ಮದ ಬಗ್ಗೆ ಚರ್ಚೆ

ಒಮ್ಮೆ ಭಗವಾನರು ಶ್ರಾವಸ್ತಿಯ ಜೇತವನದಲ್ಲಿದ್ದರು. ಅಲ್ಲಿ ಪೊಟ್ಟಪಾದ ಎಂಬ ಸಮಣನೊಂದಿಗೆ ನಡೆದ ಚರ್ಚೆಯಿದು. ಭಗವಾನರು ಅಲ್ಲಿ ಆತನಿಗೆ ಧಮ್ಮ ಬೋಧಿಸುತ್ತಾರೆ. ಆಗ ಆತನಿಗೆ ಈ ಪ್ರಶ್ನೆ ಉಂಟಾಗುತ್ತದೆ. "ಭಂತೆ ಸಞ್ಞಾ(ಗ್ರಹಿಕೆಯು)ವು ಮೊದಲು ಉದಯಿಸಿ, ನಂತರ ಜ್ಞಾನವು ಉದಯಿಸುವುದೋ ಅಥವಾ ಜ್ಞಾನವು ಮೊದಲು ಉದಯಿಸಿ ನಂತರ ಸಞ್ಞಾ(ಗ್ರಹಿಕೆ) ಉಂಟಾಗುವುದೋ ಅಥವಾ ಎರಡೂ ಒಟ್ಟಿಗೆ ಉದಯಿಸುವುದೋ ಅಥವಾ ಎರಡೂ ಮೊದಲು ಹಾಗು ನಂತರ ಉಂಟಾಗುವುದಿಲ್ಲವೋ?"

"ಓ ಪೊಟ್ಟಪಾದ ಮೊದಲು ಸಞ್ಞಾ (ಗ್ರಹಿಕೆ) ಉಂಟಾಗಿ ನಂತರ ಜ್ಞಾನವು ಉಂಟಾಗುತ್ತದೆ ಮತ್ತು ಜ್ಞಾನವು ಗ್ರಹಿಕೆಗೆ (ಸಞ್ಞಾ) ಅವಲಂಬಿಸಿರುತ್ತದೆ. ಇದರಿಂದಾಗಿ ಗೊತ್ತಾಗುವುದು ಏನೆಂದರೆ ಜ್ಞಾನವು ಉಂಟಾಗುವುದಕ್ಕೂ ಕಾರಣವಿದೆ."

"ಹಾಗಾದರೆ ಭಂತೆ, ಸಞ್ಞಾ(ಗ್ರಹಿಕೆ)ಯು ಮತ್ತು ಆತ್ಮವು ಒಂದೆಯೇ ಅಥವಾ ಸಞ್ಞಾವೇ ಬೇರೆ ಮತ್ತು ಆತ್ಮವು ಬೇರೆಯೇ?"

"ಓ ಪೊಟ್ಟಪಾದ, ಮತ್ತೆ ನೀನು ಆತ್ಮದ ಹಿಂದೆ ಬಿದ್ದೆಯಾ?"

"ಭಂತೆ ಅಂದರೆ ಭೌತಿಕ ಆತ್ಮ ಅದಕ್ಕೆ ಆಕಾರವಿದ್ದು (ಸೂಕ್ಷ್ಮ ಶರೀರ) ನಾಲ್ಕು ಮಹಾಭೂತಗಳಿಂದ ರಚಿತವಾಗಿರುವಂತಹುದು ಮತ್ತು ಘನ ಆಹಾರದಿಂದ ಪೋಷಿತವಾಗುವಂತಹುದು."

"ಓ ಪೊಟ್ಟಪಾದ, ಅಂತಹ ಆತ್ಮವು ಇದ್ದಿದ್ದರೆ ನಿನ್ನ ಸಞ್ಞಾವೇ ಬೇರೆ ಮತ್ತು ಆತ್ಮವು ಬೇರೆಯಾಗುತ್ತಿತ್ತು..."

"ಹಾಗಾದರೆ ಭಂತೆ, ನಾನು ಆತ್ಮವು ಮನೋಮಯವೆಂದು (ಮನಸ್ಸಿನಿಂದ ನಿರ್ಮಾಣ) ಭಾವಿಸುತ್ತೇನೆ. ಅದರ ಎಲ್ಲಾ ಪ್ರಧಾನ ಮತ್ತು ಅಪ್ರಧಾನ ಅಂಗಗಳು ಪೂರ್ಣವಾಗಿರುತ್ತದೆ, ಯಾವುದೇ ಕೊರತೆಯಿಂದ ಕೂಡಿರುವುದಿಲ್ಲ."

"ಆಗಲೂ ಪೊಟ್ಟಪಾದ, ನಿನಗೆ ಇಂತಹ ಆತ್ಮವಿದ್ದರೆ, ಅದೇ ಚರ್ಚೆಯು ಅನ್ವಯವಾಗುವುದು."

"ಹಾಗಾದರೆ ಭಂತೆ, ನಾನು ಆಕಾರವಿಲ್ಲದ (ಅರೂಪಿ), ಸಞ್ಞಾಮಯ (ಗ್ರಹಿಕೆಯಿಂದಲೇ ಕೂಡಿದ) ಆತ್ಮವಿದೆ ಎನ್ನುತ್ತೇನೆ."

"ಆಗಲೂ ಪೊಟ್ಟಪಾದ, ನಿನಗೆ ಇಂತಹ ಆತ್ಮವಿದ್ದರೆ, ಅದೇ ಚರ್ಚೆಯು ಅನ್ವಯವಾಗುವುದು."

"ಆದರೆ ಭಂತೆ, ನನಗೆ ಇದು ಅರ್ಥವಾಗುತ್ತದೆಯೇ? ಸಞ್ಞಾವೇ ಆತ್ಮವಾಗಿದೆಯೇ ಅಥವಾ ಎರಡೂ ಬೇರೆ ಬೇರೆಯೇ?"

"ಓ ಪೊಟ್ಟಪಾದ, ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರುವ, ವಿಭಿನ್ನ ಉದ್ದೇಶವನ್ನು ಹೊಂದಿರುವ, ವಿಭಿನ್ನವಾಗಿ ಶಿಕ್ಷಣ ಪಡೆದಿರುವ, ವಿಭಿನ್ನ ಸಿದ್ಧಾಂತಗಳನ್ನು ಹೊಂದಿರುವ ನೀನು ಸತ್ಯವನ್ನು ಅದರ ಯಥಾಭೂತ ಸ್ಥಿತಿಯಲ್ಲಿ ಅರಿಯಲಾರೆ."

"ಹಾಗಾದರೆ ಭಂತೆ ನನಗೆ ತಿಳಿಸಿ: 'ಈ ಲೋಕ ಶಾಶ್ವತವೆ ಅಥವಾ ಅಶಾಶ್ವತವೇ? ಅಥವಾ ಅನಂತವೇ ಅಥವಾ ಅಂತ್ಯವುಳ್ಳದ್ದೇ ಅಥವಾ ದೇಹ ಮತ್ತು ಆತ್ಮ ಒಂದೆಯೇ ಅಥವಾ ದೇಹ ಮತ್ತು ಆತ್ಮ ಬೇರೆ ಬೇರೆಯೇ? ಅಥವಾ ತಥಾಗತರು ಸಾವಿನನಂತರ ಇರುವರೇ, ಇರುವುದಿಲ್ಲವೇ? ಎರಡೂ ಸತ್ಯವೇ, ಅಥವಾ ಯಾವುದೂ ಇಲ್ಲವೇ?"

"ಓ ಪೊಟ್ಟಪಾದ, ಇದಕ್ಕೂ ಸಹಾ ನಾನು ಯಾವ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾರೆ!"

"ಭಗವಾನ್, ತಾವು ಏತಕ್ಕೆ ಅಂತಹ ಅಭಿಪ್ರಾಯಗಳನ್ನು ಹೊಂದಿಲ್ಲ?"

"ಏಕೆಂದರೆ ಈ ಪ್ರಶ್ನೆಗಳು ಅನರ್ಥಕಾರಿಯಾದವು. ಧಮ್ಮಕ್ಕೆ ಸಂಬಂಧಪಟ್ಟಿದ್ದಲ್ಲ. ಬ್ರಹ್ಮಚರ್ಯೆ ಜೀವನಕ್ಕೆ, ವಿಶುದ್ಧಿಗೆ, ಪರಮಶಾಂತತೆಗೆ, ವಿರಾಗಕ್ಕೆ, ನಿರೋಧಕ್ಕೆ ಮತ್ತು ನಿಬ್ಬಾಣಕ್ಕೆ ಸಹಕಾರಿಯಲ್ಲ. ಆದ್ದರಿಂದ ನಾನು ಅಂತಹ ಅಭಿಪ್ರಾಯಗಳನ್ನು ಹೊಂದಿಲ್ಲ."

"ಹಾಗಾದರೆ ಭಗವಾನರು ಯಾವುದನ್ನು ಬೋಧಿಸುತ್ತಾರೆ?"

"ನಾನು ನಾಲ್ಕು ಆರ್ಯಸತ್ಯಗಳನ್ನು ಬೋಧಿಸುತ್ತೇನೆ..."

"ಓ ಪೊಟ್ಟಪಾದ, ಕೆಲವು ಸಮಣ ಬ್ರಾಹ್ಮಣರಿದ್ದಾರೆ, ಅವರು ಈ ರೀತಿಯ ಸಿದ್ಧಾಂತ ಹೊಂದಿದ್ದರು: 'ಆತ್ಮವು ಆನಂದಮಯ ಮತ್ತು ಸಾವಿನ ನಂತರ ಸ್ವಸ್ತಿಯಾಗಿರುತ್ತದೆ.' ನಾನು ಅವರ ಬಳಿಗೆ ಹೋಗಿ ಹೀಗೆ ಕೇಳಿದೆನು: 'ಆತ್ಮವು ಆನಂದಮಯವೇ ಆಗಿದ್ದರೆ, ಲೋಕದ ಜನರೆಲ್ಲಾ ಸುಖಿಗಳಾಗಿ, ಆನಂದಭರಿತರಾಗಿ ಇರಬೇಕಿತ್ತು, ಅವರೆಲ್ಲಾ ಹಾಗಿದ್ದಾರೆಯೇ."

"ಇಲ್ಲ ಭಂತೆ."

"ಹೋಗಲಿ, ನೀವು ಇಡೀ ರಾತ್ರಿ ಅಥವಾ ಇಡೀ ಹಗಲು ಆನಂದದಿಂದ ಕೂಡಿರುವಿರಾ?"

"ಇಲ್ಲ ಭಂತೆ."

"ಹೋಗಲಿ, ನಿಮಗೆ ಆನಂದದಿಂದ ಕೂಡಿರುವಂತಹ ಮಾರ್ಗ ತಿಳಿದಿದೆಯೇ?"

"ಇಲ್ಲ ಭಂತೆ."

"ಅಥವಾ ನಿಮಗೆ ಯಾವುದಾದರೂ ದೇವತೆ ಬಂದು ಈ ರೀತಿ ಜೀವಿಸಿದರೆ ಆನಂದಮಯವಾಗಿ ಸಾವಿನ ನಂತರ ಇರಬಹುದು, ನಾವು ಹೀಗೆ ಜೀವಿಸಿ ಹೀಗಾಗಿರುವೆವು ಎಂದು ಹೇಳಿದೆಯೇ?"



"ಇಲ್ಲ ಭಂತೆ" ಎಂದು ಅವರು ಹೇಳಿದರು.

"ನಿನಗೆ ಏನು ಅನಿಸುತ್ತದೆ? ಈ ಸಮಣ ಬ್ರಾಹ್ಮಣರು ಉತ್ತಮ ನೆಲೆಯಲ್ಲಿದ್ದು ಮಾತನಾಡುತ್ತಿರುವರೇ?"

"ಇಲ್ಲ ಭಂತೆ."

"ಮೂರು ರೀತಿಯಲ್ಲಿ ಆತ್ಮವನ್ನು ವಿವರಿಸುತ್ತಾರೆ. ಅದೆಂದರೆ: ಭೌತಿಕ, ಮನೋಮಯಿ ಮತ್ತು ಅರೂಪಿ (ಅಶರೀರ). ಮೊದಲನೆಯದು ನಾಲ್ಕು ಮಹಾಭೂತಗಳಿಂದಾದ, ಆಹಾರದಿಂದ ಪೋಷಿತವಾದ ಶರೀರ, ಎರಡನೆಯದು ಮನೋಮಯ ಮನಸ್ಸಿನಿಂದಲೇ ನಿರ್ಮಾಣವಾಗಿರುವಂತಹ, ಮನೋ ಕಾರ್ಯಗಳನ್ನು ಮಾಡುವಂತಹುದು, ಎಲ್ಲಾ ಪ್ರಧಾನ ಮತ್ತು ಅಪ್ರಧಾನ ಅಂಗಗಳನ್ನು ಹೊಂದಿರುವಂತಹ ಸೂಕ್ಷ್ಮ ಶರೀರಿಯಾಗಿದೆ ಮತ್ತು ಮೂರನೆಯದು ಅರೂಪಿ (ಅಶರೀರ) ಶರೀರವೇ ಇಲ್ಲದ ಕೇವಲ ಸಞ್ಞವನ್ನು ಹೊಂದಿರುವಂತಹುದು."

ಆಗ ಅಲ್ಲಿಯೇ ಇದ್ದ ಚಿತ್ತನೆಂಬುವವನು ಈ ರೀತಿ ಪ್ರಶ್ನಿಸಿದನು: "ಭಗವಾನ್, ಈ ಮೂರು ರೀತಿಯ ಆತ್ಮಗಳಲ್ಲಿ ಒಮ್ಮೆ ಒಂದನ್ನು ಮಾತ್ರ ಹೊಂದಲು ಸಾಧ್ಯ. ಹಾಗಾದಾಗ ಮಿಕ್ಕ ಎರಡು ಅಸತ್ಯವೇ? ಒಂದು ಮಾತ್ರ ಸತ್ಯವೇ?"

"ಓ ಚಿತ್ತ, ಈ ಮೂರರಲ್ಲಿ ಒಂದು ಮಾತ್ರ ಒಂದು ಸಮಯದಲ್ಲಿ ಇರುವುದು, ಮಿಕ್ಕವು ಇರುವುದಿಲ್ಲ, ಇದು ಕೇವಲ ನಾಮಮಾತ್ರವಾಗಿದೆ. ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ."

"ಚಿತ್ತ, ನಿನಗೆ ಯಾರಾದರೂ ಹೀಗೆ ಕೇಳುತ್ತಾರೆ: 'ನೀನು ಹಿಂದೆ ಇದ್ದೆಯೋ ಅಥವಾ ಇಲ್ಲವೋ; ನೀನು ಮುಂದೆ ಇರುವೆಯೋ ಅಥವಾ ಇಲ್ಲವೋ? ನೀನು ಈಗ ಇದ್ದೀಯೋ ಅಥವಾ ಇಲ್ಲವೋ?' ಆಗ ನೀನು ಹೇಗೆ ಉತ್ತರಿಸುವೆ?"

"ನಾನು ಹೀಗೆ ಉತ್ತರಿಸುವೆ, ನಾನು ಹಿಂದೆ ಇದ್ದೆನು, ಇಲ್ಲದೆ ಇರಲಿಲ್ಲ. ಹಾಗೆಯೇ ಮುಂದೆಯೂ ಇರುವೆನು, ಇಲ್ಲದೆ ಇರುವುದಿಲ್ಲ. ಮತ್ತು ನಾನು ಈಗ ಇರುವೆನು, ಇಲ್ಲದೆ ಇಲ್ಲ."

"ಆಗ ಅವರು ಹೀಗೆ ಹೇಳುತ್ತಾರೆ 'ಹಾಗದರೆ ಹಿಂದೆ ಇದ್ದ ಆತ್ಮ ಮಾತ್ರ ಸತ್ಯವೇ; ಮುಂದೆ ಬರುವ ಮತ್ತು ಈಗಿರುವ ಆತ್ಮ ಮಿಥ್ಯವೇ? ಅಥವಾ ಭವಿಷ್ಯದ ಆತ್ಮ ಮಾತ್ರ ಸತ್ಯವೇ; ಹಿಂದಿನ ಮತ್ತು ಈಗಿರುವ ಆತ್ಮ ಮಿಥ್ಯವೇ ಅಥವಾ ಈಗಿನ ಆತ್ಮ (ವ್ಯಕ್ತಿತ್ವ) ಮಾತ್ರ ಸತ್ಯ; ಹಿಂದಿನ ಮತ್ತು ಮುಂದಿನ ಆತ್ಮ ಮಿಥ್ಯವೇ?" ಆಗ ನೀನು ಏನೆಂದು ಉತ್ತರಿಸುವೆ?"

"ಆಗ ನಾನು ಹೀಗೆ ಉತ್ತರಿಸುವೆ: 'ಅತೀತಕಾಲ (ಭೂತಕಾಲ)ದಲ್ಲಿ ಆ ಆತ್ಮವೇ ನನಗೆ ಸತ್ಯವಾಗಿತ್ತು, ಉಳಿದಿದ್ದು ಮಿಥ್ಯವಾಗಿತ್ತು; ಮತ್ತು ಅದೇರೀತಿ ಈಗಿನ ಆತ್ಮವೇ

ನನಗೆ ಸತ್ಯವಾಗಿದೆ, ಉಳಿದಿದ್ದು ಮಿಥ್ಯವಾಗಿತ್ತು. ಹಾಗೆಯೇ ಭವಿಷ್ಯದಲ್ಲಿ ಆ ಆತ್ಮವೇ ಸತ್ಯವಾಗುತ್ತದೆ, ಉಳಿದಿದ್ದು ಮಿಥ್ಯವಾಗುತ್ತದೆ."

"ಚೆನ್ನಾಗಿ ಹೇಳಿದೆ ಚಿತ್ತ, ಯಾವಾಗ ಒಂದು ಆತ್ಮ (ವ್ಯಕ್ತಿತ್ವ) ಸಾಗುತ್ತಿರುವುದೋ ಆಗ ಅದು ಉಳಿದ ವಿಭಾಗಕ್ಕೆ ಬರುವುದಿಲ್ಲ. ಹೇಗೆಂದರೆ ಚಿತ್ತ ಹಸು ಹಾಲು ನೀಡುತ್ತದೆ ಮತ್ತು ಹಾಲಿನಿಂದ ಮೊಸರಾಗುತ್ತದೆ. ಮೊಸರಿನಿಂದ ಬೆಣ್ಣೆ, ಬೆಣ್ಣೆಯಿಂದ ತುಪ್ಪ, ತುಪ್ಪದಿಂದ ತಿಂಡಿಗಳು ಸಿದ್ಧವಾಗುತ್ತವೆ. ಆದರೆ ಯಾವಾಗ ಹಾಲಿರುತ್ತದೋ ಆಗ ಅದನ್ನು ಮೊಸರೆಂದಾಗಲಿ ಅಥವಾ ಬೆಣ್ಣೆಯೆಂದಾಗಲಿ ಅಥವಾ ತುಪ್ಪವೆಂದಾಗಲಿ ಅಥವಾ ತಿಂಡಿಯೆಂದಾಗಲಿ ಕರೆಯುವುದಿಲ್ಲ. ಮತ್ತು ಯಾವಾಗ ಅದು ಮೊಸರಾಗಿರುತ್ತದೋ ಆಗ ಅದನ್ನು ಬೇರೆ ಅವಸ್ಥೆಗಳ ಹೆಸರಿನಿಂದ ಕರೆಯುವುದಿಲ್ಲ, ಹಾಗೆಯೇ ಬೆಣ್ಣೆಯಾಗಿರುವಾಗ.... ಅದೇರೀತಿಯಲ್ಲಿ ಚಿತ್ತ, ಯಾವಾಗ ಮೂರು ರೀತಿಗಳ ಮನಸ್ಸು ಒಂದು ಅವಸ್ಥೆಯಲ್ಲಿ ಸಾಗುತ್ತಿರುವುದೋ ಆಗ ಅದಕ್ಕೆ ಬೇರೆ ಹೆಸರಿನಿಂದಾಗಲಿ ಕರೆಯಲಾಗುವುದಿಲ್ಲ. ಏಕೆಂದರೆ ಹೆಸರುಗಳು, ವ್ಯಕ್ತಿತ್ವಗಳು, ಸಂಭಾಷಣೆಯಾಗುತ್ತದೆ, ಜಗತ್ತಿನಲ್ಲಿ ಅಂಕಿತವು ಸಾಧಾರಣ ಸಂಗತಿಯಾಗಿದೆ ಮತ್ತು ತಥಾಗತರು ಮಾತ್ರ ಅದರ ಯೋಗ್ಯ ಬಳಕೆ ಮಾಡುತ್ತಾರೆ. ಅದರಿಂದ ಜನರು ಹಾದಿ ತಪ್ಪುವುದಿಲ್ಲ."

ಆಗ ಪೊಟ್ಟಪಾದನು ಭಗವಾನರಿಗೆ ನಾನಾರೀತಿಯಲ್ಲಿ ಹೊಗಳಿದನು. ನಂತರ ತ್ರಿರತ್ನಗಳಿಗೆ ಶರಣು ಹೋದನು. ಆದರೆ ಚಿತ್ತ, ಸಂಘಕ್ಕೆ ಸೇರಲು ಅನುಮತಿ ಪಡೆದನು. ಮುಂದೆ ಆತನು ಅರಹಂತನು ಆಗುತ್ತಾನೆ.





# VII. ಬ್ರಹ್ಮಜಾಲ ಸುತ್ತ

ಬ್ರಹ್ಮಜಾಲ ಸುತ್ತವು ನನಗೆ ನಾನಾಕಾರಣಗಳಿಂದ ಇಷ್ಟವಾಗುತ್ತದೆ, ಮೊದಲನೆಯದಾಗಿ ಬುದ್ಧರಿಗೆ ನಿಂದಿಸಿದಾಗ, ಯಾವರೀತಿ ಉದ್ವೇಗ, ಉದ್ರೇಕ ತಾಳದೆ ಸತ್ಯ ಹೇಗೆ ಮನವರಿಕೆ ಮಾಡಬೇಕು ಎನ್ನುವುದು, ಎರಡನೆಯದಾಗಿ ಭಗವಾನರ ಶೀಲದ ವರ್ಣನೆ, ಅವರ ಜೀವನೋಪಾಯ ಹೇಗೆ ಉತ್ಕೃಷ್ಟ, ಹಾಗೆಯೇ 62 ಆಧಾರಗಳಿಂದ ಮಿಥ್ಯಾ ದೃಷ್ಟಿಗಳು ವಿವರಣೆ, ಅವುಗಳಿಗೆ ಕಾರಣ ಮತ್ತು ನಿವಾರಣೆ ಇವುಗಳಿಂದಾಗಿ ಭಗವಾನರಿಗೆ ಹೇಗೆ ಶ್ರೇಷ್ಠಕರವಾಗಿ ಪ್ರಶಂಸಿಸಬಹುದು ಎಂದು ಅರಿವಾಗುತ್ತದೆ.

* * *

ನಾನು ಹೀಗೆ ಕೇಳಿದ್ದೇನೆ. ಒಮ್ಮೆ ಭಗವಾನರು ಸುಮಾರು 500 ಭಿಕ್ಷುಗಳ ಬೃಹತ್ ಸಮೂಹದೊಂದಿಗೆ ರಾಜಗೃಹ ಮತ್ತು ನಳಂದದ ಹೆದ್ದಾರಿಯಲ್ಲಿ ಹೋಗುತ್ತಿದ್ದರು. ಅದೇರೀತಿಯಲ್ಲಿ ಸುಪ್ಪಿಯನೆಂಬ ಪರಿವ್ರಾಜಕ ಮತ್ತು ಆತನ ಯುವ ಶಿಷ್ಯನಾದ ಬ್ರಹ್ಮದತ್ತನು ಅದೇದಾರಿಯಲ್ಲಿ ಹೋಗುತ್ತಿದ್ದರು. ಆಗ ಸುಪ್ಪಿಯನು ಭಗವಾನರ ಬಗ್ಗೆ, ಧಮ್ಮದ ಬಗ್ಗೆ ಮತ್ತು ಸಂಘದ ಬಗ್ಗೆ ನಿಂದೆ ಮಾಡತೊಡಗಿದನು. ಆದರೆ ಯುವ ಬ್ರಹ್ಮದತ್ತನು ಬುದ್ಧರ ಬಗ್ಗೆ, ಧಮ್ಮದ ಬಗ್ಗೆ ಮತ್ತು ಸಂಘದ ಬಗ್ಗೆ ನಾನಾರೀತಿಯಲ್ಲಿ ಪ್ರಶಂಸೆ ಮಾಡತೊಡಗಿದನು.

ಹೀಗೆ ಗುರುಶಿಷ್ಯರು ತಮ್ಮ ಅಭಿಪ್ರಾಯಗಳನ್ನು ಎತ್ತಿಹಿಡಿಯುತ್ತ ನೇರವಾಗಿ ಪರಸ್ಪರ ವಿರೋಧಿಸುತ್ತಿದ್ದರು. ಹಾಗು ಭಿಕ್ಷುಗಣವನ್ನು ಹಿಂಬಾಲಿಸುತ್ತಲೇ ಹೀಗೆ ಮಾಡತೊಡಗಿದರು.

ಈಗ ಭಗವಾನರು ಅಂಬಿಲಟ್ಟಿಕಾ ಎಂಬ ಮಾವಿನ ಮರದ ಸಮೀಪದ ರಾಜ ವಾಸ ಮಂದಿರದಲ್ಲಿ ರಾತ್ರಿ ಕಳೆಯಲು ತಂಗಿದರು. ಅವರ ಜೊತೆಗೆ ಅವರ ಭಿಕ್ಷುವು ಸಹಾ ಇತ್ತು. ಅಲ್ಲಿ ಸಮೀಪದಲ್ಲಿಯೇ ಸುಪ್ಪಿಯ ಮತ್ತು ಬ್ರಹ್ಮದತ್ತನು ಸಹಾ ತಂಗಿ ತಮ್ಮ ಚರ್ಚೆಯ ವಿಷಯವನ್ನು ಮತ್ತೆ ಪ್ರಾರಂಭಿಸಿದರು. ತ್ರಿರತ್ನದ ನಿಂದೆ ಮತ್ತು ಪ್ರಶಂಸೆಯಲ್ಲಿ ರಾತ್ರಿ ಕಳೆದರು.

ಮಾರನೆಯ ದಿನದ ಮುಂಜಾನೆ ಭಿಕ್ಷುಗಳು ಎದ್ದು ಡೇರೆಯಲ್ಲಿ ಸೇರಿದರು. ಅವರಲ್ಲಿ ಈ ಬಗೆಯ ಮಾತುಕತೆಗಳು ಆರಂಭವಾಯಿತು. "ಎಷ್ಟು ಅದ್ಭುತ, ಭಿಕ್ಷುಗಳೇ ಭಗವಾನರು ಎಷ್ಟು ವಿಶಿಷ್ಟ ಅಪರಿಚಿತ. ಅವರು ಎಲ್ಲವನ್ನೂ ಬಲ್ಲವರು ಮತ್ತು ಕಾಣುವವರು. ತಥಾಗತರು ಆಗಿದ್ದಾರೆ. ಮಾನವನಲ್ಲಿನ ಪ್ರವೃತ್ತಿ ಹಾಗು ಪ್ರತಿಭೆಗಳನ್ನು ಸ್ಪಷ್ಟವಾಗಿ ಕಾಣುವವರು ಆಗಿದ್ದಾರೆ. ನೋಡಿ ಹೇಗೆ ಸುಪ್ಪಿಯಾ ಪರಿವ್ರಾಜಕನು ತ್ರಿರತ್ನವನ್ನು

ಹಲವುರೀತಿಯಲ್ಲಿ ನಿಂದಿಸಿದನು. ಹಾಗೆಯೇ ಬ್ರಹ್ಮದತ್ತನು ನಾನಾರೀತಿಯಲ್ಲಿ ತ್ರಿರತ್ನವನ್ನು ಪ್ರಶಂಸಿಸಿದನು. ಹೀಗೆ ಈ ಗುರುಶಿಷ್ಯರು ಭಗವಾನರಿಗೆ ಮತ್ತು ಭಿಕ್ಷುವನ್ನು ಹಿಂಬಾಲಿಸುತ್ತಲೇ ನೇರವಾಗಿ ಪರಸ್ಪರ ವಿರೋಧಿಸುತ್ತಿದ್ದರು."

ನಂತರ ಭಗವಾನರು ಅವರ ಮಾತುಕತೆಯ ದಿಶೆ ಯಾವುದೆಂದು ಗುಡಾರಕ್ಕೆ ಅರಿತು ಹೋಗಿ, ತಮಗಾಗಿ ಸಿದ್ಧಪಡಿಸಿದ್ದ ಆಸನದಲ್ಲಿ ಕುಳಿತರು; ನಂತರ ಹೀಗೆ ಕೇಳಿದರು: "ಯಾವ ವಿಷಯದ ಮಾತುಕತೆಯಿಂದಾಗಿ ನೀವು ಹೀಗೆ ನೆಲೆದಿರುವಿರಿ ಮತ್ತು ನಿಮ್ಮ ಸಂಭಾಷಣೆಯ ವಿಷಯ ಯಾವುದಾಗಿದೆ? ಮತ್ತು ಅವರು ವಿಷಯವೆಲ್ಲಾ ಹೇಳಿದರು. ಆಗ ಭಗವಾನರು ಭಿಕ್ಷು ಹೀಗೆ ಬುದ್ಧಿವಾದ ನೀಡಿದರು.

"ಭಿಕ್ಷುಗಳೇ ಪರರು ನನ್ನ ವಿರುದ್ಧ ನುಡಿಯಬಹುದು. ಅಥವಾ ಧಮ್ಮದ ವಿರುದ್ಧ ಅಥವಾ ಸಂಘದ ವಿರುದ್ಧ ನುಡಿಯಬಹುದು. ಆದರೆ ಅದಕ್ಕಾಗಿ ನೀವು ದ್ವೇಷವಾಗಲಿ, ಮತ್ಸರವಾಗಲಿ, ದುಃಖವಾಗಲಿ ಆಳ ಅಪ್ರಿಯ ವೇದನೆಯಾಗಲಿ ಪಡಬಾರದು, ಸಹಿಸಿಕೊಳ್ಳಬೇಕು. ನೀವು ಅದರಿಂದಾಗಿ ಕೋಪವಾಗಲಿ ಅಥವಾ ದುಃಖಿತರಾದರೆ ಅದರಿಂದಾಗಿ ನಿಮ್ಮ ಸ್ವ-ಸಂಶೋಧನೆಗೆ ತೊಡಕಾಗುತ್ತದೆ. ಯಾವಾಗ ಪರರು ನಮ್ಮ ವಿರುದ್ಧ ನುಡಿದಾಗ, ನೀವು ಕೋಪಗೊಂಡರೆ ಮತ್ತು ಅಸಂತೃಪ್ತರಾದರೇ ನೀವು ಅವರ ನುಡಿಯುವಿಕೆಯಲ್ಲಿ ಎಷ್ಟು ಒಳಿತಿದೆ ಅಥವಾ ಕೆಡಕಿದೆ ಎಂದು ಮೌಲ್ಯಮಾಪನ ಮಾಡಬಲ್ಲಿರಾ?"

"ಹಾಗೆ ಮಾಡುವುದಕ್ಕೆ ಆಗುವುದಿಲ್ಲ ಭಂತೆ."

"ಆದರೆ ಹಾಗೆಯೇ ಪರರು ನನ್ನನ್ನು ಅಥವಾ ಧಮ್ಮವನ್ನು ಅಥವಾ ಸಂಘವನ್ನು ದೂಷಿಸಿದಾಗ, ನೀವು ಆ ಗೋಜನ್ನು ಬಿಡಿಸಬೇಕು. ಯಾವುದು ಸುಳ್ಳಾಗಿದೆಯೋ ಮತ್ತು ತಪ್ಪಾಗಿದೆಯೋ ಅದನ್ನು ಎತ್ತಿತೋರಿಸಿ "ಈ ಅಥವಾ ಆ ಕಾರಣದಿಂದಾಗಿ ಇದು ಸತ್ಯವಲ್ಲ, ವಾಸ್ತವವಲ್ಲ, ಅದು ಹಾಗಲ್ಲ, ಅಂತಹ ವಿಷಯ ನಮ್ಮಲ್ಲಿಲ್ಲ. ಅಂತಹದನ್ನು ನಿಮ್ಮಲ್ಲಿ ಹುಡುಕಲು ಆಗುವುದಿಲ್ಲ" ಎಂದು ಮನವರಿಕೆ ಮಾಡಿಸಬೇಕು."

ಆದರೆ ಹಾಗೆಯೇ ಭಿಕ್ಷುಗಳು ಪರರು ತಮಗೆ ಅಥವಾ ಧಮ್ಮಕ್ಕೆ ಅಥವಾ ಸಂಘಕ್ಕೆ ಪ್ರಶಂಸಿಸಬಹುದು, ಆದರೆ ಅದರಿಂದಾಗಿ ಸಂತೋಷಿತರಾಗಬಾರದು ಅಥವಾ ಆನಂದಿಸಬಾರದು ಅಥವಾ ಆನಂದಭರಿತರಾಗಿ ಉಬ್ಬಿಹೋಗಬಾರದು, ಹಾಗೇನಾದರೂ ನೀವು ಮಾಡಿದರೆ ನಿಮ್ಮ ಸ್ವ-ಸಂಶೋಧನೆಗೆ ಅದು ತೊಡಕಾಗುವುದು.

ಹಾಗೆಯೇ ಯಾವಾಗ ಪರರು ನಿಮ್ಮನ್ನು ಪ್ರಶಂಸಿಸಿದಾಗ, ಅಥವಾ ಧಮ್ಮವನ್ನು ಪ್ರಶಂಸಿಸಿದಾಗ ಅಥವಾ ಸಂಘವನ್ನು ಪ್ರಶಂಸಿಸಿದಾಗ, ನೀವು ಅದನ್ನು ಆಲಿಸಿ ಅದರಲ್ಲಿನ ಸತ್ಯಾಂಶಗಳನ್ನು ಒಪ್ಪಬೇಕು. ವಾಸ್ತವಗಳನ್ನು ಒಪ್ಪಬೇಕು. "ಈ ಅಥವಾ ಆ ಕಾರಣಗಳಿಂದಾಗಿ ಇದು ಸತ್ಯವಾಗಿದೆ, ಅಂತಹುದು ನಮ್ಮಲ್ಲಿ ಹುಡುಕಬಹುದು, ನಮ್ಮಲ್ಲಿ ಆ ಅಂಶವಿದೆ" ಎಂದು ಒಪ್ಪಬೇಕು."



"ಇದು ಕೇವಲ ಕ್ಷುಲ್ಲಕ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ. ಅಲ್ಪ ಮೌಲ್ಯಗಳಿಗೆ ಸಂಬಂಧಿಸಿದ್ದಾಗಿದೆ. ಕೇವಲ ಶೀಲಗಳಿಗೆ ಸಂಬಂಧಿಸಿದ್ದಾಗಿದೆ. ಅದು ಪರಿವರ್ತಿತನಾಗದ ಮನುಷ್ಯ ತಥಾಗತರಿಗೆ ಪ್ರಶಂಸಿಸುವಾಗ ಹೇಳುವಂತಹದ್ದಾಗಿದೆ ಮತ್ತು ಯಾವರೀತಿಯಲ್ಲಿ ಆತನು ಪ್ರಾಥಮಿಕವಾಗಿ ಮತ್ತು ಕೇವಲ ಶೀಲಗಳನ್ನು ಪ್ರಶಂಸಿಸುತ್ತಾನೆ."

## ಶೀಲಗಳು ಭಾಗ-1

## ಚಿಕ್ಕ ಶೀಲಗಳು :

"ಜೀವಿಗಳ ಹತ್ಯೆಯಿಂದಾಗಿ ದೂರಾಗಿ ಗೋತಮರು ದಂಡಶಸ್ತ್ರಗಳನ್ನು ಪಕ್ಕಕ್ಕೆ ಇಟ್ಟಿದ್ದಾರೆ. ಒರಟುತನಕ್ಕೆ ನಾಚಿಕೆಪಟ್ಟು, ಅನುಕಂಪದಿಂದ ಕೂಡಿದವರಾಗಿ, ಸರ್ವಜೀವಿಗಳ ಬಗ್ಗೆ ಕರುಣೆಯಿಂದ ಕೂಡಿದ್ದು ವಿಹರಿಸುವರು, ಜೀವವಿರುವ ಸರ್ವಜೀವಿಗಳ ಬಗ್ಗೆ ದಯೆವುಳ್ಳವರಾಗಿರುತ್ತಾರೆ" ಹೀಗೆ ಪರಿವರ್ತಿತನಾಗದ ಮನುಷ್ಯನು ತಥಾಗತರ ಬಗ್ಗೆ ಪ್ರಶಂಸಿಸಬಹುದು."

"ಅಥವಾ ಅವರು ಹೀಗೂ ಹೇಳಬಹುದು: "ತನಗೆ ನೀಡದಿದ್ದನ್ನು ತೆಗೆದು ಕೊಳ್ಳುವುದನ್ನು ತೊರೆದಿರುವ ಗೋತಮರು, ತಮ್ಮದಲ್ಲದ್ದನ್ನು ಹಿಡಿಯದೆ ಪ್ರತ್ಯೇಕವಾಗಿ ಜೀವಿಸುತ್ತಾರೆ, ಅವರು ಕೊಟ್ಟಿದ್ದನ್ನು ಮಾತ್ರ ಸ್ವೀಕರಿಸುತ್ತಾರೆ. ಈ ರೀತಿ ಪ್ರಾಮಾಣಿಕವಾಗಿ ಜೀವಿಸುತ್ತಾರೆ. ಪರಿಶುದ್ಧ ಹೃದಯದವರಾಗಿರುತ್ತಾರೆ."

ಅಥವಾ ಅವರು ಹೀಗೂ ಹೇಳಬಹುದು: "ಅಪವಿತ್ರತೆಯನ್ನು ದೂರೀಕರಿಸುವ ಗೋತಮರು ಬ್ರಹ್ಮಚರ್ಯೆಯಿಂದ, ಪರಿಶುದ್ಧತೆಯಿಂದ ಇರುತ್ತಾರೆ. ಅವರು ತುಚ್ಛವಾದ ಆಚರಣೆಯಿಂದ, ದೂರವಾಗಿ ಜೀವಿಸುತ್ತಾರೆ.

"ಅಥವಾ ಅವರು ಹೀಗೂ ಹೇಳಬಹುದು: "ಅಸತ್ಯತೆಯ ಮಾತುಗಳಿಂದ ದೂರವಾಗಿರುವ ಗೋತಮರು, ಸುಳ್ಳಿನಿಂದ ದೂರವಾಗಿರುವರು. ಅವರು ಸದಾ ಸತ್ಯವನ್ನೇ ಹೇಳುವರು. ಸತ್ಯದಿಂದ ಎಂದಿಗೂ ಅವರು ದೂರವಾಗುವುದಿಲ್ಲ. ನಂಬಿಕೆಗೆ ಅರ್ಹರು, ಲೋಕಕ್ಕೆ ನೀಡಿದ ಮಾತುಗಳನ್ನು ತಪ್ಪದವರು ಆಗಿದ್ದಾರೆ."

ಅಥವಾ ಅವರು ಹೀಗೂ ಹೇಳಬಹುದು: "ಚಾಡಿಯಿಂದ ದೂರವಾಗಿರುವ ಗೋತಮರು ಕಳಂಕ ಹಚ್ಚುವುದರಿಂದ ರಹಿತರಾಗಿದ್ದಾರೆ. ಯಾವುದನ್ನು ಅವರು ಇಲ್ಲಿ ಕೇಳುತ್ತಾರೊ ಅದನ್ನು ಮತ್ತೊಂದೆಡೆ ಹೇಳಿ ಜಗಳವನ್ನು, ಐಕ್ಯತೆ ಭಂಗವನ್ನು ಮಾಡುವುದಿಲ್ಲ, ಬೇರೆಡೆ ಕೇಳಿದ್ದನ್ನು ಇಲ್ಲಿ ಹೇಳಿ ಜಗಳವನ್ನು ಐಕ್ಯತೆ ಭಂಗವನ್ನು ಮಾಡುವುದಿಲ್ಲ, ಹೀಗೆ ಅವರು ಪ್ರತ್ಯೇಕವಾಗಿರುವವರನ್ನು ಒಗ್ಗೂಡಿಸುತ್ತಾರೆ ಮತ್ತು ಅವರು ಮಿತ್ರರನ್ನು, ಶಾಂತಿ ನಿರ್ಮಿಸುವವರನ್ನು, ಶಾಂತಿಪ್ರಿಯರನ್ನು, ಪ್ರೋತ್ಸಾಹಿಸುವವ ರಾಗಿದ್ದಾರೆ. ಶಾಂತಿದಾಯಕ ಪದಗಳನ್ನು ನುಡಿಯುವವರಾಗಿದ್ದಾರೆ."

ಅಥವಾ ಅವರು ಹೀಗೂ ಹೇಳಬಹುದು: "ಮಾತಿನ ಒರಟುತನದಿಂದ ದೂರವಿರುವ ಗೋತಮರು, ಕಟುನಿಂದನೀಯ ಭಾಷೆಯಿಂದ ರಹಿತರಾಗಿರುವರು, ಯಾವುದೆಲ್ಲವೂ ನಿಂದಾತೀತವೋ, ಕಿವಿಗಳಿಗೆ ಆನಂದನೀಡುವಂತಹುದು, ಜನರಿಗೆ ಸುಖವನ್ನುಂಟು ಮಾಡುವ ಪ್ರಿಯವಾಗಿರುವಂತಹ ಮಾತುಗಳನ್ನು ಅವರು ಆಡುವರು."

ಅಥವಾ ಅವರು ಹೀಗೂ ಹೇಳಬಹುದು: "ನಿಷ್ಫಲವಾದ, ತಿರುಳಿಲ್ಲದ ಹರಟೆಯಿಂದ ದೂರವಾಗಿರುವ ಗೋತಮರು ವ್ಯರ್ಥವಾದ ಸಂಭಾಷಣೆಯಿಂದ ರಹಿತರಾಗಿದ್ದಾರೆ, ಯೋಗ್ಯ ಸಮಯದಲ್ಲಿ ಮಾತ್ರ ಮಾತನಾಡುತ್ತಾರೆ. ಸತ್ಯಗಳನ್ನು, ವಾಸ್ತವಗಳನ್ನು ಹೇಳುವಂತಹವರು, ಅರ್ಥಬದ್ಧ ಪದಗಳನ್ನು ಹೇಳುವವರು, ಧಮ್ಮವನ್ನು ಮತ್ತು ವಿನಯುವನ್ನು ಹೇಳುವವರಾಗಿದ್ದಾರೆ ಮತ್ತು ಯೋಗ್ಯವಾದ ಕಾಲದಲ್ಲಿ ಹೇಳುವವರಾಗಿದ್ದಾರೆ. ಒಬ್ಬನ ಮನಸ್ಸಿನಲ್ಲಿ ಪರಿಣಾಮಕಾರಿಯಾಗುವಂತಹ, ವಿವರವಾದ, ವಿಶ್ಲೇಷಿತವಾದ, ಗಮ್ಯಕ್ಕೆ ಸೇರಿಸುವಂತಹ ಮಾತುಗಳನ್ನು ಆಡುತ್ತಾರೆ."

ಅಥವಾ ಪರರು ಹೀಗೂ ವರ್ಣಿಸಬಹುದು: "ಸಮಣ ಗೋತಮರು ಸಸ್ಯಗಳಿಗೆ ಅಥವಾ ಬೀಜಗಳಿಗೂ ಹಾನಿ ಮಾಡುವುದರಿಂದ ದೂರಾಗಿದ್ದಾರೆ. ಅವರು ದಿನದಲ್ಲಿ ಕೇವಲ ಒಂದು ಹೊತ್ತು ಮಾತ್ರ ಊಟ ತೆಗೆದುಕೊಳ್ಳುತ್ತಾರೆ. ಹಾಗೆಯೇ ಮಧ್ಯಾಹ್ನದ ನಂತರ ಆಹಾರ ಸೇವಿಸುವುದಿಲ್ಲ ಹಾಗು ರಾತ್ರಿಯ ಹೊತ್ತು ತಿನ್ನುವುದಿಲ್ಲ."

"ಅವರು ಜಾತ್ರೆಗಳನ್ನು, ನೃತ್ಯಗಳನ್ನು ನೋಡುವುದು ಹಾಗು ಹಾಡುಗಳನ್ನು ಮತ್ತು ಸಂಗೀತ ಆಲಿಸುವುದನ್ನು ಸಹಾ ಮಾಡುವುದಿಲ್ಲ."

"ಹಾಗೆಯೇ ಅವರು ಹೂಹಾರಗಳನ್ನು ಧರಿಸುವುದು, ಶೃಂಗಾರ ಮಾಡಿಕೊಳ್ಳುವುದು, ಆಭರಣ ಧರಿಸುವುದು ಹಾಗು ಸೌಗಂಧ ದ್ರವ್ಯಗಳನ್ನು ಹಾಕಿಕೊಳ್ಳುವುದು ಮಾಡುವುದಿಲ್ಲ. ಅವರು ಅಗಲವಾದ ಮತ್ತು ಎತ್ತರವಾದ ಹಾಸಿಗೆಗಳನ್ನು ಬಳಸುವುದಿಲ್ಲ. ಅವರು ಬೆಳ್ಳಿಯಾಗಲಿ ಅಥವಾ ಚಿನ್ನವಾಗಲಿ (ಹಣವಾಗಲಿ) ಸ್ವೀಕರಿಸುವುದಿಲ್ಲ. ಅವರು ಬೇಯಿಸಿದ ಧಾನ್ಯಗಳನ್ನು ಸ್ವೀಕರಿಸುವುದಿಲ್ಲ. ಅವರು ಹಸಿ ಮಾಂಸವನ್ನು ಸ್ವೀಕರಿಸುವುದಿಲ್ಲ. ಅವರು ಕನ್ಯೆಯರನ್ನಾಗಲಿ ಅಥವಾ ಸ್ತ್ರೀಯರನ್ನಾಗಲಿ ಸ್ವೀಕರಿಸುವುದಿಲ್ಲ."

"ಅವರು ಸೇವಕ ಅಥವಾ ಸೇವಕಿಯರನ್ನು ಸ್ವೀಕರಿಸುವುದಿಲ್ಲ. ಅವರು ಕುರಿ ಅಥವಾ ಮೇಕೆಗಳನ್ನು ಸಹಾ ಸ್ವೀಕರಿಸುವುದಿಲ್ಲ. ಅವರು ಕೋಳಿಗಳನ್ನಾಗಲಿ ಅಥವಾ ಹಂದಿಗಳನ್ನಾಗಿ ಸ್ವೀಕರಿಸುವುದಿಲ್ಲ. ಹಾಗೆಯೇ ಅವರು ಆನೆಗಳಾಗಲಿ, ಆಕಳುಗಳಾಗಲಿ, ಕುದುರೆಗಳಾಗಲಿ, ಹೆಣ್ಣು ಕುದುರೆಗಳಾಗಲಿ ಸ್ವೀಕರಿಸುವುದಿಲ್ಲ. ಹಾಗೆಯೇ ಅವರು ಕೃಷಿ ಭೂಮಿಯನ್ನಾಗಲಿ ಅಥವಾ ಅಕೃಷಿ ಭೂಮಿಯನ್ನಾಗಲಿ ಸ್ವೀಕರಿಸುವುದಿಲ್ಲ. ಅವರು ಇಬ್ಬರ ನಡುವೆ ದೂತರಾಗಿ ಕಾರ್ಯ ಮಾಡುವುದಿಲ್ಲ. ಅವರು ಕ್ರಯ-ವಿಕ್ರಯಗಳಂತಹ ವ್ಯಾಪಾರದಲ್ಲೂ ತೊಡಗುವುದಿಲ್ಲ. ಅವರು ತೂಕ, ಅಳತೆ, ಮುಂತಾದವುಗಳಲ್ಲಿ ಮೋಸವು ಮಾಡುವುದಿಲ್ಲ, ಅದರಲ್ಲಿ ತೊಡಗುವುದಿಲ್ಲ. ಅವರು ವಕ್ರ ಮಾರ್ಗಗಳಾದ ಲಂಚ,



ಮೋಸ, ವಂಚನೆಗಳಲ್ಲಿ ತೊಡಗುವುದಿಲ್ಲ. ಹಾಗೆಯೇ ಅವರು ಕೈಕಾಲು ಮುರಿಯುವುದು (ಅಂಗಭೇದ), ಕೊಲೆ, ಸಂಕೋಲೆ, ಡಕಾಯಿತಿ, ಹಿಂಸೆ ಇಂತಹ ನೀಚ ಕೃತ್ಯಗಳಲ್ಲಿ ತೊಡಗುವುದಿಲ್ಲ.

## ಮಧ್ಯಮ ಶೀಲಗಳು :

ಅಥವಾ ಪರರು ಹೀಗೆ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಶ್ರದ್ಧಾಳುಗಳಿಂದ ಆಹಾರಗಳನ್ನು ಸ್ವೀಕರಿಸಿದರೂ ಸಹಾ, ಬೀಜಗಳನ್ನು ಅಥವಾ ಸಸ್ಯಗಳನ್ನು ನಾಶಮಾಡುತ್ತಾರೆ. ಬೇರುಗಳಿಂದ, ಗಂಟುಗಳಿಂದ, ಮಣ್ಣಿನಿಂದ ಕಸಿ ಮಾಡುವಿಕೆಯಿಂದ ಸಸ್ಯಗಳನ್ನು ಬೆಳೆಯುತ್ತಾರೆ. ಆದರೆ ಸಮಣ ಗೋತಮರು ಅಂತಹವುಗಳಿಂದ ದೂರವಿದ್ದಾರೆ." ಅಥವಾ ಹೀಗೂ ಹೇಳಬಹುದು: ಕೆಲವು ಸಮಣ ಬ್ರಾಹ್ಮಣರು ಶ್ರದ್ಧಾಳುಗಳಿಂದ ಆಹಾರ ಪಡೆದು ಜೀವಿಸುತ್ತಿದ್ದರೂ ಸಹಾ ನಾನಾ ವಸ್ತುಗಳ ಸಂಗ್ರಹಣೆ ಮಾಡುತ್ತಾರೆ. ಹೇಳುವುದಾದರೆ ಆಹಾರಗಳು, ಪಾನೀಯಗಳು, ವಸ್ತ್ರಗಳು, ಹಾಸಿಗೆಗಳು, ಸುಗಂಧ ದ್ರವ್ಯಗಳು, ಧಾನ್ಯಗಳು ಮತ್ತು ಇತ್ಯಾದಿ. ಆದರೆ ಸಮಣ ಗೋತಮರು ಅಂತಹವುಗಳಿಂದ ದೂರವಿದ್ದಾರೆ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ಶ್ರದ್ಧೆಯಿಂದ ನೀಡುವ ಆಹಾರದಿಂದ ಜೀವಿಸಿದರೂ ಸಹಾ ಕೆಲವುರೀತಿಯ ಪ್ರದರ್ಶನಗಳಿಗೆ ಭೇಟಿ ನೀಡುತ್ತಾರೆ. ಅವೆಂದರೆ ನೃತ್ಯಗಳು, ಗೀತೆಗಳು, ವಾದನಗಳು, ಜಾತ್ರೆಗಳ ಪ್ರದರ್ಶನಗಳು, ಲಾವಣಿ ಪದಗಳ ಹಾಡುವಿಕೆ, ಕೈಗಳಿಂದ ನುಡಿಯುವ ಸಂಗೀತ, ಕವಿಗೋಷ್ಠಿ, ಗಾಯನಗೋಷ್ಠಿ, ಕುಂಭ ಧೂನಂ (ಘಟವಾದನ), ಶೋಭನಗರಕಂ (ನಾಟಕ ದೃಶ್ಯಗಳ ಸೃಷ್ಠಿ), ನಾಟಕ, ಚಂಡಾಲ ವಂಶಜರ ದೊಂಬರಾಟ, ಪ್ರಾಣಿಗಳ (ಆನೆ, ಕುದುರೆ, ಕೋಣ, ಗೂಳಿ, ಕುರಿ, ಮೇಕೆ, ಹುಂಜ ಮತ್ತು ಪುರಲಿ ಹಕ್ಕಿಯ) ಕಾಳಗ ವೀಕ್ಷಿಸುವುದು, ದೊಣ್ಣೆವರಸೆ, ಮುಷ್ಠಿಯುದ್ಧ ಕುಸ್ತಿ ಇತ್ಯಾದಿಗಳ ಪಂದ್ಯಗಳು ವೀಕ್ಷಿಸುವುದು, ನಾನಾರೀತಿಯ ಕಾಳಗ ಇತ್ಯಾದಿಗಳ ಪ್ರದರ್ಶನಗಳನ್ನು ನೋಡುವುದಿಲ್ಲ.

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ನೀಡುವ ಆಹಾರದಿಂದ ಜೀವಿಸಿದರೂ ಸಹಾ ಕೆಲವು ರೀತಿಯ ಆಟಗಳಲ್ಲಿ, ವಿನೋದಗಳಲ್ಲಿ ತಲ್ಲೀನರಾಗುತ್ತಾರೆ. ಅವೆಂದರೆ: 8 ಅಥವಾ 10 ಸಾಲಿನ ಚೌಕಗಳ ಫಲಕಗಳ ಆಟ (ಚದುರಂಗ), ಅದೇರೀತಿಯ ಆಟಗಳನ್ನು ಕಾಲ್ಪನಿಕ ಆಕಾಶದಲ್ಲಿ ಕಲ್ಪಿಸಿ ಆಡುವಿಕೆ. ಭೂಮಿಯಲ್ಲಿ ರೇಖಾಚಿತ್ರಗಳನ್ನು ರಚಿಸಿ ಎಲ್ಲೆಲ್ಲಿ ಹೆಜ್ಜೆ ಹಾಕಬೇಕು ಎಂಬ ಆಟ, ರಾಶಿಯಲ್ಲಿ ಚೂರೊಂದನ್ನು ಉಗುರಿನಿಂದ ತೆಗೆದುಹಾಕುವುದು ಅಥವಾ ಬೇರೊಂದನ್ನು ರಾಶಿಯಲ್ಲಿ ಅಲುಗಾಡಿಸದೆ ಅಡಗಿಸುವುದು, ದಾಳ (ಪಗಡೆ)ಗಳನ್ನು ಎಸೆಯುವುದು, ಗಿಲ್ಲಿದಾಂಡು ಆಟ, ಕೈಯನ್ನು ಬಣ್ಣಗಳ ಅಸಿಟಿನಲ್ಲಿ ಅದ್ದಿ ಗೋಡೆಗಳಲ್ಲಿ ಆಕಾರಗಳನ್ನು ರಚಿಸುವ ಆಟ, ಚೆಂಡಾಟ, ಎಲೆಗಳಿಂದ ಕೊಳವೆಗಳನ್ನು ರಚಿಸಿ ಊದುವ

ಆಟ, ಆಟದ ಗೊಂಬೆಗಳಿಂದ ನೇಗಿಲು ಹೊಡೆಯುವಿಕೆ, ಪಲ್ಟಿಗಳನ್ನು ಹೊಡೆಯುವುದು, ತಾಳೆಯ ಎಲೆಗಳಿಂದ ಗಾಳಿಯಂತ್ರಗಳನ್ನು ರಚಿಸಿ ಆಡುವ ಆಟ, ತಾಳೆ ಎಲೆಗಳಿಂದ ಗೊಂಬೆ ಮಾಡಿ ಆಡುವ ಆಟ, ಆಟಿಕೆಯ ಬಂಡಿ ಅಥವಾ ಬಿಲ್ಲನ್ನು ರಚಿಸಿ ಆಡುವುದು, ಗಾಳಿಯಿಂದ ಅಕ್ಷರಗಳನ್ನು ಊಹಿಸುವುದು ಅಥವಾ ಬೆನ್ನ ಮೇಲೆ ನೋಡಿ ಅಕ್ಷರಗಳನ್ನು ಊಹಿಸುವುದು, ಪರರ ಯೋಚನೆಗಳನ್ನು ಊಹಿಸುವುದು, ಪರರ ಧ್ವನಿ, ಹಾವಭಾವ ಅನುಕರಿಸುವುದು ಇಂತಹ ಆಟಗಳಲ್ಲಿ ಅಥವಾ ವಿನೋದಗಳಲ್ಲಿ ಸಮಣ ಗೋತಮರು ತಲ್ಲೀನರಾಗಿರುವುದಿಲ್ಲ.

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಪರರು ನೀಡುವ ಆಹಾರ ಸೇವಿಸುತ್ತ ಜೀವಿಸಿಯು ಎತ್ತರವಾದ ಮತ್ತು ಅಗಲವಾದ ಹಾಸಿಗೆಗಳನ್ನು ಬಳಸುತ್ತಾರೆ. ಯಾವುವೆಂದರೆ: ಚಲಿಸುವ ಉದ್ದದ ಸೋಫಾಗಳಲ್ಲಿ ಆನಂದಿಸುವುದು, ಪ್ರಾಣಿ ಚಿತ್ರಗಳ, ಇನ್ನಿತರ ಕಲಾತ್ಮಕ ಫಲಂಗಗಳನ್ನು ಬಳಸುವಿಕೆ, ತುಪ್ಪಳದಿಂದ ಕೂಡಿದ ಮಂಚ, ವರ್ಣವರ್ಣದ ಕಲಾತ್ಮಕ ಹಾಸಿಗೆ, ಶ್ವೇತಕಂಬಳಿ, ಉಣ್ಣೆ ಮತ್ತು ಹೂಗಳಿಂದಾದ ಹಾಸಿಗೆ, ಹತ್ತಿಯಿಂದಾದ ಗಾದಿ, ಕಲಾತ್ಮಕ ಕುಸುರಿ ಕಲೆಯ ಹಾಸಿಗೆಯ ಹೊರಪದರ, ಉಣ್ಣೆ ತುಪ್ಪಳ ಇತ್ಯಾದಿಗಳಿಂದ ಹಾಸಿಗೆ, ಎರಡುಕಡೆಯು ಉಣ್ಣೆ ತುಪ್ಪಳದಿಂದಾದ ಹಾಸಿಗೆ, ರತ್ನಗಳಿಂದಾದ ಅಲಂಕೃತವಾದ ಹಾಸಿಗೆ, ರೇಷ್ಮೆಯ ಹಾಸಿಗೆ, ರತ್ನಗಂಬಳಿ, ಜಿಂಕೆ ಚರ್ಮದ ಹಾಸಿಗೆ, ಗುಡಾರ ಸಮೇತ ಹಾಸಿಗೆ, ಕೆಂಪು ದಿಂಬುಗಳಿಂದ ಕೂಡಿದ ಹಾಸಿಗೆ, ಇಂತಹ ಯಾವುದನ್ನು ಸಮಣ ಗೋತಮರು ಬಳಸುವುದಿಲ್ಲ, ಹೊಂದುವುದಿಲ್ಲ!"

ಅಥವಾ ಅವರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ನೀಡುವ ಆಹಾರ ಸೇವಿಸುತ್ತ ಜೀವಿಸಿಯು ಸಹಾ ತುಚ್ಛವಾದ ಈ ರೀತಿಯ ಸಂಭಾಷಣೆಗಳಲ್ಲಿ ತಲ್ಲೀನರಾಗಿರುತ್ತಾರೆ. ಅವೆಂದರೆ: ಯುದ್ಧಗಳ, ಕಥೆಗಳು, ಯುದ್ಧಗಳ ಭಯಾನಕತೆಯ ವಿಷಯಗಳು... ಆಹಾರ ಪಾನೀಯಗಳ ಮಾತುಕತೆ, ವಸ್ತ್ರಗಳ, ಹಾಸಿಗೆಗಳ, ಹಾರಗಳ, ಸೌಗಂಧದ್ರವ್ಯಗಳ ಮಾತುಕತೆ.... ಸಂಬಂಧಗಳ ಚರ್ಚೆ, ಪ್ರವಾಸಗಳ, ಹಳ್ಳಿಗಳ, ಪಟ್ಟಣ, ನಗರಗಳ ಮತ್ತು ದೇಶಗಳ ಬಗ್ಗೆ ಮಾತುಕತೆ; ಸ್ತ್ರೀಯರ ಬಗ್ಗೆ, ವೀರರ ಬಗ್ಗೆ ಕಥೆಗಳು, ಬೀದಿಗಳ, ನೀರಿನ ಸ್ಥಳಗಳ ಬಗ್ಗೆ, ದೆವ್ವಗಳ ಬಗ್ಗೆ ಮಾತುಕತೆ, ಅಸಂಬದ್ಧ ವಿಷಯಗಳು ಭೂ ಸೃಷ್ಟಿಯ ಬಗ್ಗೆ, ಸಾಗರ ಸೃಷ್ಟಿಯ ಬಗ್ಗೆ ಚರ್ಚೆಗಳು, ಇರುವಿಕೆಯ ಬಗ್ಗೆ ಅಥವಾ ಇಲ್ಲದಿರುವಿಕೆಯ ಬಗ್ಗೆ ಚರ್ಚೆ ಮಾಡುತ್ತಿರುತ್ತಾರೆ. ಆದರೆ ಸಮಣ ಗೋತಮರು ಅಂತಹ ನಿರರ್ಥಕ ಚರ್ಚೆ, ಕತೆ, ಮಾತುಕತೆಗಳಲ್ಲಿ ತೊಡಗುವುದಿಲ್ಲ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ನೀಡುವ ಆಹಾರದಿಂದ ಜೀವಿಸಿಯು ವಾದವಿವಾದದಲ್ಲಿ ತೊಡಗುತ್ತ ಈ ರೀತಿ ಕೂಗಾಡುವರು:

"ನಿನಗೆ ಈ ಸತ್ಯ (ಸಿದ್ಧಾಂತ) ಮತ್ತು ಶಿಸ್ತು ತಿಳಿದಿಲ್ಲ ಅಂದರೆ ನನಗೆ ತಿಳಿದಿದೆ."



"ನಿನಗೆ ಹೇಗೆತಾನೆ ಸಿದ್ಧಾಂತ ಮತ್ತು ಶಿಸ್ತು ತಿಳಿದೀತು ?"

"ನೀನು ಮೂಢನಂಬಿಕೆಗಳಲ್ಲಿ ಬಿದ್ದಿದ್ದೀಯೆ, ನಾನೇ ಸರಿಯಾಗಿದ್ದೇನೆ."

"ನಾನು ವಿಷಯದ ಸಾರದಲ್ಲೇ ಮಾತನಾಡುತ್ತಿರುವೆನು. ಆದರೆ ನೀನು ಹಾಗಿಲ್ಲ."

"ನೀನು ಮೊದಲು ಹೇಳಬೇಕಾದುದನ್ನು ಕೊನೆಗೆ ಹೇಳುತ್ತಿರುವೆ ಮತ್ತು ಕೊನೆಗೆ ಹೇಳಬೇಕಾಗಿರುವುದನ್ನು ಮೊದಲು ಹೇಳುತ್ತಿರುವೆ."

"ನೀನು ತುಂಬಾ ಉದ್ದವಾಗಿ ಪರ್ಯಾಲೋಚನೆ (ಕಲ್ಪನೆ) ಮಾಡುತ್ತಿರುವೆ, ಅದು ಎಲ್ಲವನ್ನು ಹಾಳು (ತಲೆಕೆಳಕಾಗಿಸುವುದು) ಮಾಡುವುದು."

"ನಿನ್ನ ಸವಾಲನ್ನು ಸ್ವೀಕರಿಸಿರುವೆ."

"ನೀನು ತಪ್ಪೆಂದು ದೃಢಪಡಿಸಲಾಗಿದೆ."

"ನಿನ್ನ ತಪ್ಪು ದೃಷ್ಟಿಕೋನಗಳನ್ನು ದೂರೀಕರಿಸಲು ಶ್ರಮಪಡು."

"ಈ ಗೋಜುಗಳಿಂದ ಸಾಮರ್ಥ್ಯವಿದ್ದರೆ ಬಿಡಿಸಿಕೋ"

"ಆದರೆ ಸಮಣ ಗೋತಮರು ಈ ರೀತಿ ಅಹಂಕಾರದಿಂದ, ನಿರರ್ಥಕ ವಾದವಿವಾದಗಳಲ್ಲಿ ತೊಡಗುವುದಿಲ್ಲ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು, ಪರರು ಶ್ರದ್ಧೆಯಿಂದ ನೀಡುವ ಆಹಾರದಿಂದ ಜೀವಿಸುತ್ತಿದ್ದರೂ, ದೂತರಾಗಿ ಕಾರ್ಯನಿರ್ವಹಿಸುವರು. ಇಲ್ಲಿಯ ಸಂದೇಶ ಅಲ್ಲಿಗೆ ತಲುಪಿಸುವರು, ಅಲ್ಲಿಯದನ್ನು ಇಲ್ಲಿ ನುಡಿಯುವರು, ಮಧ್ಯವರ್ತಿಯಾಗಿ ಕಂಡುಬರುವರು, ಅವರು ರಾಜರ, ಮಂತ್ರಿಗಳ, ಕ್ಷತ್ರಿಯರ, ಬ್ರಾಹ್ಮಣರ, ಯುವಕರ ದೂತರಂತೆ ಕೆಲಸ ಮಾಡುವರು. ಅವರು ಇವರಿಗೆ ಹೀಗೆ ಹೇಳುವರು: 'ಅಲ್ಲಿಗೆ ಹೋಗು, ಇಲ್ಲಿಗೆ ಬಾ, ಇದನ್ನು ನಿನ್ನೊಂದಿಗೆ ಕೊಂಡು ಹೋಗು, ಅದನ್ನು ಅಲ್ಲಿಂದ ತಾ'. ಆದರೆ ಸಮಣ ಗೋತಮರು ಇಂತಹವನ್ನೆಲ್ಲಾ ಮಾಡುವುದಿಲ್ಲ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ನೀಡುವ ಆಹಾರದಿಂದ ಜೀವಿಸಿಯೂ ವಿದೂಷಕತೆಯನ್ನು ಪ್ರದರ್ಶಿಸುವವರು, ಸೋಮಾರಿಗಳು, ಶಕುನ ಹೇಳುವವರು, ದೆವ್ವ ಬಿಡಿಸುವವರು ಆಗಿರುತ್ತಾರೆ. ಆದರೆ ಸಮಣ ಗೋತಮರು ಇಂಥ ನೀಚ ವಿದ್ಯೆಗಳಿಂದ ಹೊರತಾಗಿರುತ್ತಾರೆ.

## ಮಹಾ ಶೀಲಗಳು:

"ಅಥವಾ ಪರರು ಹೀಗೂ ಹೇಳಬಹುದು, ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ನೀಡುವ ಆಹಾರ ತಿಂದು ಜೀವಿಸಿಯೂ ಸಹಾ ಮಿಥ್ಯಾ ಜೀವನದಿಂದ ಸಿಗುವ ಅರ್ಥದಿಂದ ಜೀವನೋಪಾಯ ನಡೆಸುತ್ತಾರೆ. ಅವು ಯಾವುವೆಂದರೆ: ಹಸ್ತಸಾಮುದ್ರಿಕಾ, ಶಕುನಶಾಸ್ತ್ರ, ಮಿಂಚು ಮುಂತಾದ ಆಕಾಶಕಾಯಗಳ ಉತ್ಪಾದಗಳನ್ನು

ಗಮನಿಸಿ ಶಕುನ ನುಡಿಯುವುದು, ಸ್ವಪ್ನಫಲ ಶಾಸ್ತ್ರ, ಶರೀರದ ಅಂಗರಚನೆ ನೋಡಿ ಭವಿಷ್ಯ ನುಡಿಯುವುದು, ಇಲಿಯು ಬಟ್ಟೆ ಕಡಿದಾಗ ಅದನ್ನು ಗಮನಿಸಿ ಭವಿಷ್ಯ ನುಡಿಯುವುದು, ಅಗ್ನಿಹೋಮ (ಅಗ್ನಿಗೆ ಆಹುತಿ ನೀಡುವುದು), ಡಬ್ಬ (ಚರ್ಮದಿಂದ) ಹೋಮ ಆಚರಿಸುವುದು, ಯಜ್ಞ ಕುಂಡದಲ್ಲಿ ದೇವತೆಗಳಿಗೆ ಕುಂಕುಮ, ಧಾನ್ಯ, ಹೊಟ್ಟು, ತುಪ್ಪ, ಎಣ್ಣೆ ಇತ್ಯಾದಿಗಳನ್ನು ಸುರಿಸುವುದು, ಬಾಯಿಯಿಂದ ಯಗ್ನಕುಂಡಕ್ಕೆ ಸಾಸುವೆಗಳನ್ನು ಕಕ್ಕುವುದು, ಮೊಣಕಾಲಿನ ರಕ್ತವನ್ನು ದೇವತೆಗಳಿಗೆ ಅರ್ಪಿಸುವುದು, ಬೆರಳಿನ ಗಿಣ್ಣು ನೋಡಿಯೇ ಆತನು ಅದೃಷ್ಟವಂತನೋ ಅಥವಾ ದುರಾದೃಷ್ಟವಂತನೋ ಎಂದು ಹೇಳುವುದು, ಭೂಮಿ ನೋಡಿ ಇದು ಅದೃಷ್ಟಕರವೋ ಅಥವಾ ದುರಾದೃಷ್ಟಕರವೋ ಎಂದು ಹೇಳುವುದು, ಕ್ಷೇತ್ರ (ಭೂ) ವಿದ್ಯೆಗಳು, ಶಿವವಿದ್ಯೆ (ನರಿಗಳ ಕೂಗು ಕೇಳಿ ಶಕುನ ನುಡಿಯುವಿಕೆ), ಭೂತವಿದ್ಯೆ (ವಾಮಾಚಾರ), ಭೂರಿವಿದ್ಯೆ (ಮನೆಯಲ್ಲಿ ಬಳಸುವ ಮಂತ್ರವಿದ್ಯೆ) ಅಹಿವಿದ್ಯೆ (ಸರ್ಪಗಳ ವಶೀಕರಣ ವಿದ್ಯೆ), ವಿಷ ಇಳಿಸುವ ವಿದ್ಯೆ), ಚೇಳಿನ ಕಡಿತದ ನಿವಾರಣೆ ವಿದ್ಯೆ, ಇಲಿಯ ಭಾಷೆ ವಿದ್ಯೆ, ಪಕ್ಷಿ ಭಾಷೆ ವಿದ್ಯೆ, ಕಾಗೆಯ ಕೂಗಿನ ಶಕುನ ವಿದ್ಯೆ, ಆಯಸ್ಸನ್ನು ಹೇಳುವ ವಿದ್ಯೆ, ಬಾಣಗಳಿಂದ ತಪ್ಪಿಸಿಕೊಳ್ಳುವ ಮಂತ್ರವಿದ್ಯೆ, ಎಲ್ಲಾ ಮೃಗಗಳ ಭಾಷೆ ವಿದ್ಯೆ ಇಂತಹ ಎಲ್ಲಾ ನೀಚ ವಿದ್ಯೆಗಳಿಂದ ಸಮಣ ಗೋತಮರು ದೂರವಿರುತ್ತಾರೆ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಜನರು ಶ್ರದ್ಧೆಯಿಂದ ನೀಡುವ ಆಹಾರ ಸೇವಿಸುತ್ತ ಜೀವಿಸಿಯು ಮಿಥ್ಯಾ ಜೀವನೋಪಾಯ ನಡೆಸುತ್ತಾರೆ ಅವೆಂದರೆ: ಕೆಲವು ವಸ್ತುಗಳು ಮತ್ತು ಜೀವಿಗಳ ಲಕ್ಷಣಗಳನ್ನು ಗಮನಿಸಿ ಅದರಿಂದ ಅದೃಷ್ಟ ಅಥವಾ ದುರಾದೃಷ್ಟ ಎಂದು ಭವಿಷ್ಯ ನುಡಿಯುವಿಕೆ. ಉದಾಹರಿಸುವುದಾದರೆ, ಹರಳುಗಳು, ರತ್ನಗಳು, ದೋಣಿಯ ಅಥವಾ ಪಿಪಾಯಿಯ ರಂಧ್ರಗಳನ್ನು ನೋಡಿ ಭವಿಷ್ಯ ನುಡಿಯುವುದು, ಹಾಗೆಯೇ ವಸ್ತ್ರಗಳು, ಖಡ್ಗಗಳು, ಬಾಣಗಳು, ಬಿಲ್ಲುಗಳು, ಶಸ್ತ್ರಗಳು, ಸ್ತ್ರೀ ಪುರುಷ, ಬಾಲಕ, ಬಾಲಕಿ, ಸೇವಕ, ಸೇವಕಿ, ಗಜ, ಅಶ್ವ, ಕೋಣ, ಕುರಿ, ಮೇಕೆ, ಕೋಳಿ, ಹುಂಜ, ಉಡ, ಆಮೆ ಮತ್ತಿತರ ಪ್ರಾಣಿಗಳ ಲಕ್ಷಣ ಗಮನಿಸಿ ಶುಭ ಅಶುಭ ಎಂದು ನುಡಿಯುವಿಕೆ. ಆದರೆ ಸಮಣ ಗೋತಮರು ಇಂತಹ ನೀಚ ವಿದ್ಯೆಗಳಲ್ಲಿ ನಿರತರಾಗುವುದಿಲ್ಲ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಶ್ರದ್ಧೆಯಿಂದ ಪರರು ನೀಡುವ ಆಹಾರ ತಿಂದು ಜೀವಿಸಿಯು ಮಿಥ್ಯಾ ಮಾರ್ಗಗಳಿಂದ ಜೀವನೋಪಾಯ ಮಾಡುತ್ತಿದ್ದಾರೆ. ಅವೆಂದರೆ: ಸೇನಾನಾಯಕರು ಇಂತಹ ವೇಳೆಯಲ್ಲೇ ಹೊರ ಹೋಗುವರು, ಹಿಂತಿರುಗುವರು, ದೇಶ ಸೈನ್ಯ ಇಂತಹ ವೇಳೆಯಲ್ಲೇ ಆಕ್ರಮಣ ಮಾಡುವರು ಮತ್ತು ಶತ್ರುಸೈನ್ಯ ಇಂತಹ ವೇಳೆಯಲ್ಲೇ ಪಲಾಯನ ಮಾಡುವರು. ಅಥವಾ ಇಂತಹ ವೇಳೆಯಲ್ಲೇ ಶತ್ರುಸೈನ್ಯ ಆಕ್ರಮಣ ಮಾಡುವರು ಹಾಗು ದೇಶ



ಸೈನ್ಯವು ಪಲಾಯನ ಮಾಡುವರು, ಇಲ್ಲಿಯವರು ಗೆಲ್ಲುವರು, ಪರರು ಸೋಲುವರು ಅಥವಾ ಪರರು ಗೆಲ್ಲುವರು, ಇಲ್ಲಿಯವರು ಸೋಲುವರು ಎಂದೆಲ್ಲಾ ಭವಿಷ್ಯ ನುಡಿಯುವರು. ಆದರೆ ಸಮಣ ಗೋತಮರು ಇಂತಹ ನೀಚವೃತ್ತಿಗಳಲ್ಲಿ ತೊಡಗುವುದಿಲ್ಲ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ನೀಡುವ ದಾನ ಸ್ವೀಕರಿಸಿಯೂ ಸಹಾ ಮಿಥ್ಯಾ ಮಾರ್ಗದಿಂದ ಜೀವನೋಪಾಯ ನಡೆಸುತ್ತಾರೆ. ಹೇಳುವುದಾದರೆ: ಇಂತಹ ದಿನದಲ್ಲಿ ಚಂದ್ರಗ್ರಹಣ, ಸೂರ್ಯಗ್ರಹಣ, ನಕ್ಷತ್ರಗ್ರಹಣ, ಚಂದ್ರನ ಪಥ ಭ್ರಷ್ಟತೆ, ಸೂರ್ಯನ ಪಥ ಭ್ರಷ್ಟತೆ, ಪುನಃ ನಿಗದಿತ ಪಥಚಲನೆ, ನಕ್ಷತ್ರಗಳ ಪಥಭ್ರಷ್ಟತೆ, ಪುನಃ ನಿಗಧಿತ ಪಥಚಲನೆ ಆಗುತ್ತದೆ ಎಂದು ಭವಿಷ್ಯ ನುಡಿಯುವುದು, ಹಾಗೆಯೇ ಉಲ್ಕೆಗಳ ಬೀಳುವಿಕೆ, ಕಾಡ್ಗಿಚ್ಚು ಮುನ್ಸೂಚನೆ, ಭೂಕಂಪ, ಸಿಡಿಲಿನ ಬಗ್ಗೆ ಹೇಳುವಿಕೆ. ಹಾಗೆಯೇ ಸೂರ್ಯ, ಚಂದ್ರ, ನಕ್ಷತ್ರಗಳ ಉದಯಕಾಲ, ಅಸ್ತಕಾಲ, ಪ್ರಕಾಶಕಾಲ, ಮಂಪುಕಾಲ... ಹೀಗೆ ಈ ಆಕಾಶಕಾಯಗಳ ಬಗ್ಗೆ ಸ್ಥಿತಿಗತಿ, ಪರಿಣಾಮವೆಲ್ಲಾ ವಿವರಿಸುವಂತಹ ನೀಚ ವೃತ್ತಿಗಳಲ್ಲಿ ಸಮಣ ಗೋತಮರು ತೊಡಗುವುದಿಲ್ಲ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ನೀಡುವ ಆಹಾರದಿಂದ ಜೀವಿಸುತ್ತ ಇದ್ದರೂ ಸಹಾ, ನಾನಾರೀತಿಯ ಮಿಥ್ಯಾ ಮಾರ್ಗದಲ್ಲಿ ಜೀವನೋಪಾಯ ನಡೆಸುತ್ತ ನೀಚ ವೃತ್ತಿಗಳಲ್ಲಿ ತೊಡಗುತ್ತಾರೆ ಅವೆಂದರೆ: ಹೇರಳವಾದ ಮಳೆಯ ಬಗ್ಗೆ ಮುನ್ಸೂಚನೆ, ಮಳೆಯ ಕೊರತೆಯ ಬಗ್ಗೆ ಮುನ್ಸೂಚನೆ, ಹೇರಳ ಪೈರಿನ ಬಗ್ಗೆ ಮುನ್ಸೂಚನೆ, ಆಹಾರದ ಕೊರತೆಯಲ್ಲಿ ಭವಿಷ್ಯ ನುಡಿಯುವಿಕೆ, ಶಾಂತ ಸಾಮಾಜಿಕ ಜೀವನದ ಬಗ್ಗೆ, ಜೀವನದಲ್ಲಿ ಬರುವ ತೊಂದರೆಗಳ ಬಗ್ಗೆ, ಅಂಟುರೋಗಗಳ ಬಗ್ಗೆ ಆರೋಗ್ಯಕರ ಋತುವಿನ ಬಗ್ಗೆ, ಮುದ್ರೆಗಳ ಬಗ್ಗೆ, ಸಾಂಖ್ಯಗಳ ಬಗ್ಗೆ, ಕಾವ್ಯಗಳ ಬಗ್ಗೆ, ಲೇಖನಗಳ ಬಗ್ಗೆ, ಲೋಕಾಯತದ ಬಗ್ಗೆ, ಇನ್ನಿತರ ಶಾಸ್ತ್ರದಲ್ಲಿ ತೊಡಗುವಂತಹ ನೀಚ ವೃತ್ತಿಗಳಲ್ಲಿ ತೊಡಗುತ್ತಾರೆ. ಆದರೆ ಸಮಣ ಗೋತಮರು ಇಂತಹ ನೀಚ ವೃತ್ತಿಗಳಲ್ಲಿ ತೊಡಗುವುದಿಲ್ಲ."

ಅಥವಾ ಪರರು ಹೀಗೂ ಹೇಳಬಹುದು: "ಕೆಲವು ಸಮಣ ಬ್ರಾಹ್ಮಣರು, ಪರರು ಶ್ರದ್ಧೆಯಿಂದ ನೀಡುವ ಆಹಾರದಿಂದ ಜೀವಿಸಿದರೂ ಸಹಾ, ಮಿಥ್ಯಾ ಮಾರ್ಗದಲ್ಲಿ ಜೀವನೋಪಾಯು ನಡೆಸುತ್ತಾರೆ. ಅವೆಂದರೆ : ವಧು-ವರರಿಗೆ ಶುಭದಿನ ಗೊತ್ತುಮಾಡುವುದು, ಅವರ ಆಗಮನ, ನಿರ್ಗಮನಕ್ಕೆ ಶುಭದಿನ ಗೊತ್ತುಮಾಡುವಿಕೆ, ಶಾಂತಿ ಮಾಡಿಸುವಿಕೆ, ದ್ವೇಷ ಶಮನಕ್ಕೆ ಶುಭದಿನ ನಿರ್ಧರಿಸುವಿಕೆ, ಸಾಲ ತೆಗೆದುಕೊಳ್ಳಲು, ತೀರಿಸಲು ಶುಭ ದಿನವನ್ನು ದಾಳಗಳಿಂದ ನಿರ್ಧರಿಸುವುದು, ಹಣ ಖರ್ಚು ಮಾಡಲು ಶುಭದಿನ ನಿಗದಿಮಾಡುವುದು. ಜನರ ಶುಭಕ್ಕಾಗಿ ಮಂತ್ರ ಪ್ರಯೋಗ, ಜನರಿಗೆ ಹಾಳು ಮಾಡಲು ಮಂತ್ರ ಪ್ರಯೋಗ, ಗರ್ಭಪಾತವಾಗಲು ಮಂತ್ರ ಪ್ರಯೋಗ, ಕಿವುಡನಾಗಲು

ಮಾಟ, ದವಡೆ ತೆರೆಯದಂತೆ ಮಾಟ, ಕೈಗಳು ಬಿದ್ದುಹೋಗಲು ಮಾಟ, ಮೂಕನಾಗಿಸಲು ಮಾಟ, ಮಾಯ ಕನ್ನಡಿಯಲ್ಲಿ ದೇವತೆಗಳಿಂದ ಪ್ರಶ್ನೆಗಳ ಉತ್ತರ ಪಡೆಯುವ ಅದಾಸಪನ್ಹೊ, ಕುಮಾರಿಯಲ್ಲಿ ದೇವತೆಗೆ ಅವಾಹಿಸಿ ಉತ್ತರ ಪಡೆಯುವಿಕೆ, ದೇವತೆಗಳಿಂದ ನೇರವಾಗಿ ಉತ್ತರ ಪಡೆಯುವಿಕೆ, ಸೂರ್ಯನ ಆರಾಧನೆ (ಆದಿಕ್ಕುಪಟ್ಥನಂ) ಮಹಾ (ಬ್ರಹ್ಮನ) ಆರಾಧನೆ, ಬಾಯಿಂದ ಜ್ವಾಲೆಗಳನ್ನು ತರಿಸುವಿಕೆ, ಸಿರಿದೇವಿ (ಲಕ್ಷ್ಮಿ)ಯನ್ನು ಆವಾಹಿಸುವಿಕೆ, ಇಂತಹವನ್ನೆಲ್ಲಾ ಮಾಡುವರು. ಆದರೆ ಸಮಣ ಗೋತಮರು ಇಂಥ ನೀಚ ವೃತ್ತಿಗಳಿಂದ ದೂರವಿರುತ್ತಾರೆ.

ಅಥವಾ ಪರರು ಹೀಗೂ ಹೇಳಬಹುದು: “ಕೆಲವು ಸಮಣ ಬ್ರಾಹ್ಮಣರು ಪರರು ಶ್ರದ್ಧೆಯಿಂದ ನೀಡುವ ಆಹಾರದಿಂದ ಜೀವಿಸಿಯೂ ಮಿಥ್ಯಾ ಜೀವನೋಪಾಯದಿಂದ ಜೀವಿಸುತ್ತಾರೆ. ಮೂಢನಂಬಿಕೆಗಳಿಂದ ಜೀವಿಸುತ್ತಾರೆ. ಹೇಗೆಂದರೆ: ದೇವತೆಗಳಲ್ಲಿ ಹರಕೆ ಹೊತ್ತುವಿಕೆ, ಕಾರ್ಯವಾದ ನಂತರ ಆ ಹರಕೆಗಳನ್ನು ತೀರಿಸುವಿಕೆ, ಮಣ್ಣಿನ ಮನೆಯಲ್ಲಿ ಮಂತ್ರಗಳನ್ನು ಪಠಿಸುವಿಕೆ, ಪೌರುಷತ್ವ ಪಡೆಯುವಂತೆ ಮಾಡುವುವು, ನಪುಂಸತ್ವ ಮೂಡಿಸುವಿಕೆ, ವಾಸಿಸಲು ಭಾಗ್ಯಯುತ ಮನೆ ಹುಡುಕುವಿಕೆ; ವಾಸ್ತುವಿದ್ಯೆ, ಬಾಯಿ ಮುಕ್ಕಳಿಸುವ ಸಮಾರಂಭ, ಸ್ನಾನ ಸಮಾರಂಭ, ಯಾಗ-ಯಜ್ಞ, ವಾಂತಿ-ಬೇಧಿ ಮಾಡಿಸುವಿಕೆ, ಸೀನಿಸುವಿಕೆ, ಕಿವಿಯಲ್ಲಿ ಎಣ್ಣೆ ಬಿಡುವಿಕೆ, ಕಣ್ಣಿಗೆ ಮದ್ದು ಹಾಕುವಿಕೆ, ಮೂಗಿಗೆ ಔಷಧಿಜಲ ಬಿಡುವಿಕೆ, ಕಣ್ಣಿಗೆ ಅಂಜನ ಬಳಿಯುವಿಕೆ ಮತ್ತು ಔಷಧಿಯ ಲೇಪನ ಹಾಕುವಿಕೆ, ನೇತ್ರಜ್ಞನಾಗುವಿಕೆ, ಶಸ್ತ್ರವೈದ್ಯನಾಗುವಿಕೆ, ಮಕ್ಕಳ ತಜ್ಞನಾಗುವಿಕೆ, ಗಿಡಮೂಲಿಕೆ ಔಷಧಿಗಳನ್ನು ನಿರ್ವಹಿಸುವಿಕೆಗಳನ್ನೆಲ್ಲಾ ಮಾಡುತ್ತಾರೆ. ಆದರೆ ಸಮಣ ಗೋತಮರು ಇಂತಹ ಅಲ್ಪ ವೃತ್ತಿಗಳಿಂದ ಜೀವನೋಪಾಯ ಮಾಡುವುದಿಲ್ಲ.”

ಇವೇ ಭಿಕ್ಖುಗಳೇ, ಕ್ಷುಲ್ಲಕ ವಿಷಯಗಳಾಗಿವೆ. ಇವು ಕೇವಲ ಶೀಲಗಳ ಸಂಕ್ಷಿಪ್ತ ವಿವರಣೆಯಾಗಿದೆ. ಇಂತಹ ಉದಾಹರಣೆಗಳಿಂದ ಪರಿವರ್ತಿತನಾಗದ ಮನುಷ್ಯನೊಬ್ಬನು ತಥಾಗತರಿಗೆ ಪ್ರಶಂಸಿಸುತ್ತಾನೆ.

“ಭಿಕ್ಖುಗಳೇ, ಕೆಲವು ಬೇರೆ ವಿಷಯಗಳಿವೆ. ಅವು ಉದಾತ್ತವಾದುದು, ಅರಿಯಲು ಕಷ್ಟಕರವಾದುದು, ಪ್ರಶಾಂತವಾದುದು, ಮಧುರವಾದುದು, ತರ್ಕಾತೀತವಾದುದು, ಪರಮ ಸೂಕ್ಷ್ಮವಾದುದು, ಕೇವಲ ಜ್ಞಾನಿಗಳಿಂದಲೇ ಅರಿಯುವಂತಹುದು. ಈ ವಿಷಯಗಳೆಲ್ಲ ತಥಾಗತರು ತಮ್ಮಿಂದಲೇ ನೇರವಾಗಿ ಸಾಕ್ಷಾತ್ಕರಿಸಿಕೊಂಡಿದ್ದಾರೆ ಮತ್ತು ಈ ರೀತಿಯಾಗಿ ಯಾರು ತಥಾಗತರಿಗೆ ಪ್ರಶಂಸಿಸುವರೋ ತಥಾಗತರಿಗೆ ಅವರು ಸತ್ಯಕ್ಕೆ ಅನುಸಾರವಾಗಿ ಹೇಳುವರು ಮತ್ತು ಅವು ಯಾವುವು?

“ಭಿಕ್ಖುಗಳೇ, ಕೆಲವು ಸಮಣ ಬ್ರಾಹ್ಮಣರಿದ್ದಾರೆ, ಅವರು ಚರಮ ಆದಿಯ ವಿಷಯಗಳನ್ನು ಮರು ನಿರ್ಮಿಸಲು ಹೊರಟಿದ್ದಾರೆ. ಅವರ ಊಹಾಪೋಹಗಳ ದೃಷ್ಟಿಕೋನಗಳು ಕೇವಲ ಹಿಂದಿನದನ್ನು ಮಹತ್ವ ನೀಡಿದೆ ಮತ್ತು ಇದಕ್ಕಾಗಿ ಅವರು



ಹದಿನೆಂಟು ಆಧಾರಗಳನ್ನು (ನೆಲೆಗಳನ್ನು) ನೀಡುತ್ತಾರೆ ಮತ್ತು ಯಾವುದರ ಬಗ್ಗೆ, ಯಾವುದನ್ನು ಉಲ್ಲೇಖಿಸುತ್ತಾರೆ. ಇವುಗಳ ಬಗ್ಗೆ ಅವರೇನು ಹೇಳುವರು.”

## 4 ಬಗೆಯ ಶಾಶ್ವತವಾದ

“ಕೆಲವರಿದ್ದಾರೆ ಭಿಕ್ಖುಗಳೆ, ಕೆಲವು ಸಮಣ ಬ್ರಾಹ್ಮಣರು ಶಾಶ್ವತವಾದವನ್ನು ಮಂಡಿಸುತ್ತಾರೆ ಮತ್ತು ಅವರಿಗೆ ಹಾಗೆ ಹೇಳಲು ನಾಲ್ಕು ನೆಲೆಗಳಿವೆ. ಇದರಿಂದಾಗಿ ಅವರು ಆತ್ಮವೂ ಶಾಶ್ವತ ಮತ್ತು ಲೋಕವು ಶಾಶ್ವತ ಎನ್ನುತ್ತಾರೆ. ಯಾವುದರ ನೆಲೆಯಿಂದಾಗಿ ಅವರು ಹೀಗೆ ವಾದ ಮಂಡಿಸುತ್ತಾರೆ.”

“ಇಲ್ಲಿ ಕೆಲವು ಸಮಣ ಬ್ರಾಹ್ಮಣರು ಧ್ಯಾನದಿಂದಾಗಿ, ಎಚ್ಚರಿಕೆಯಿಂದಾಗಿ, ಯೋಗ್ಯವಾದ ಗಮನಹರಿಸುವಿಕೆಯಿಂದಾಗಿ, ಚೇತೋ ಸಮಾಧಿಯನ್ನು ಪಡೆಯುತ್ತಾರೆ. ಅಂತಹ ಸಮಾಹಿತವಾದ ಚಿತ್ತದಿಂದಾಗಿ ಅವರು ತಮ್ಮ ಹಿಂದಿನ ಜನ್ಮಗಳನ್ನು ಸ್ಮರಿಸಿಕೊಳ್ಳುತ್ತಾರೆ. ಹಾಗೆಯೇ ಒಂದು ಜನ್ಮ, ಎರಡು ಅಥವಾ ಮೂರು ಅಥವಾ ನಾಲ್ಕು ಅಥವಾ ಐದು ಅಥವಾ ಹತ್ತು ಜನ್ಮಗಳನ್ನು ಅಥವಾ ಇಪ್ಪತ್ತು ಜನ್ಮಗಳನ್ನು ಮೂವತ್ತು ಅಥವಾ ನಲವತ್ತು ಅಥವಾ ಐವತ್ತು ಅಥವಾ ನೂರು ಅಥವಾ ಸಾವಿರ ಅಥವಾ ಲಕ್ಷ ಹೀಗೆ ಜನ್ಮಗಳನ್ನು ಸ್ಮರಿಸುತ್ತಾನೆ. ಆಗ ಹೀಗೆ ಯೋಚಿಸುತ್ತಾನೆ: “ಅಲ್ಲಿ ಆ ಜನ್ಮದಲ್ಲಿ ನನಗೆ ಅಂತಹ ಹೆಸರಿತ್ತು, ಅಂತಹ ವಂಶವಿತ್ತು, ಅಂತಹ ಗೋತ್ರವಿತ್ತು, ಇಂತಿಂತಹ ಆಹಾರವನ್ನು ನಾನು ಆಗ ಸೇವಿಸಿದ್ದೆನು. ಇಂತಿಂಥ ಸುಖ-ದುಃಖಗಳನ್ನು ಅನುಭವಿಸಿದ್ದೆನು. ಇಷ್ಟಿಷ್ಟು ಕಾಲ ಜೀವಿಸಿದ್ದೆನು ಮತ್ತು ಅಲ್ಲಿಂದ ಮರಣಿಸಿ, ಇನ್ನೊಂದೆಡೆ ಜನ್ಮಿಸಿದೆನು. ಅಲ್ಲಿಯೂ ಹೀಗೆ ಸುಖ-ದುಃಖಗಳನ್ನು ಅನುಭವಿಸಿ, ಇಷ್ಟು ವರ್ಷಕಾಲ ಜೀವಿಸಿದ್ದೆನು. ಅಲ್ಲಿಂದ ಜಾರಿ ಇಲ್ಲಿ ಜನ್ಮಿಸಿದೆನು.” ಹೀಗೆ ಆತನು ವಿವರವಾಗಿ ಸ್ಥಿತಿಗಳನ್ನು ಎಲ್ಲವನ್ನು ವೀಕ್ಷಿಸಿ, ತನಗೆತಾನೇ ಹೀಗೆ ಹೇಳಿಕೊಳ್ಳುತ್ತಾನೆ: “ಆತ್ಮವು ಶಾಶ್ವತವಾಗಿದೆ ಮತ್ತು ಲೋಕವು ಸಹಾ ಶಾಶ್ವತವಾಗಿದೆ. ಇಲ್ಲಿ ಯಾವುದೇ ಹೊಸತನಕ್ಕೆ ಜನ್ಮ ನೀಡಲಿಲ್ಲ. ಇವೆಲ್ಲವೂ ಪರ್ವತ ಶಿಖರದ ಹಾಗೆ ಅಥವಾ ಸ್ಥಂಭದ ಹಾಗೆ ಸ್ಥಿರವಾಗಿದೆ ಮತ್ತು ಜೀವಿಗಳು ಪದೇಪದೇ ಪುನರ್ಜನ್ಮಿಸಬಹುದು, ಸಾಯಬಹುದು. ಆದರೂ ಸಹಾ ಅವು ಎಂದಿಗೂ ಎಂದೆಂದಿಗೂ ಇರುತ್ತವೆ ಮತ್ತು ಏಕೆ ಹೀಗೆ? ಏಕೆಂದರೆ ನಾನು ಧ್ಯಾನದಿಂದ, ಎಚ್ಚರಿಕೆಯಿಂದ, ಯೋಗ್ಯವಾದ ಗಮನಹರಿಸುವಿಕೆಯಿಂದ ಸಮಾಧಿ ಸಾಧಿಸಿ ನನ್ನ ಮನಸ್ಸನ್ನು ಹಿಂದಿನ ಜನ್ಮಗಳನ್ನು ಸ್ಮರಿಸಿ ಅಸಂಖ್ಯಾತ ಜನ್ಮಗಳನ್ನು ವೀಕ್ಷಿಸಿದ್ದೇನೆ. ಆದ್ದರಿಂದಾಗಿ ನಾನು ಆತ್ಮವು ಶಾಶ್ವತ ಮತ್ತು ಲೋಕವು ಶಾಶ್ವತ ಎಂದು ಹೇಳುತ್ತಿದ್ದೇನೆ. ಇಲ್ಲಿ ಯಾವುದು ಹೊಸದಾಗಿ ಜನ್ಮ ನೀಡಲಾರದು ಪರ್ವತಶಿಖರದಂತೆ ಅಥವಾ ದೃಢ ಸ್ತಂಭದಂತೆ ಶಾಶ್ವತವಾಗಿದೆ. ಇಲ್ಲಿ ಜೀವಿಗಳು ಪುನರ್ಜನ್ಮಿಸುತ್ತಲೇ ಇರುತ್ತವೆ. ಮರಣಿಸುತ್ತ ಪುನಃ ಜನಿಸುತ್ತಿರುತ್ತದೆ. ಹೀಗಾಗಿ ಅವು ಎಂದೆಂದಿಗೂ ಇರುತ್ತದೆ.”

“ಇದೇ ಭಿಕ್ಖುಗಳೇ, ವಿಷಯಗಳ ಪ್ರಥಮ ಸ್ಥಿತಿಯಾಗಿದೆ. ಇದರಿಂದಾಗಿಯೇ

ಕೆಲವು ಸಮಣ ಬ್ರಾಹ್ಮಣರು ಶಾಶ್ವತವಾದಿಗಳಾಗಿ ಆತ್ಮವು ಶಾಶ್ವತ ಮತ್ತು ಲೋಕವು ಶಾಶ್ವತ ಎಂದು ಪ್ರತಿಪಾದಿಸುತ್ತಾರೆ."

(ಎರಡನೆಯ ಅವಸ್ಥೆಯಲ್ಲಿ ಮೊದಲಿನ ಹಾಗೆ ಎಲ್ಲವೂ ಹಾಗೇ ಇರುತ್ತದೆ. ಆದರೆ ಇಲ್ಲಿ ಪೂರ್ವ ಜನ್ಮಗಳಿಗೆ ಸ್ಮರಣೆ ಇಲ್ಲಿ ದಶಲೋಕ ಕಲ್ಪಗಳನ್ನು ಸ್ಮರಣೆ ಮಾಡಿಕೊಳ್ಳುತ್ತಾರೆ).

(ಮೂರನೆಯ ಅವಸ್ಥೆಯಲ್ಲಿ ಮೊದಲಿನ ಹಾಗೇ ಎಲ್ಲವೂ ಹಾಗೆಯೇ ಇರುತ್ತದೆ. ಆದರೆ ಇಲ್ಲಿ ಪೂರ್ವಜನ್ಮಗಳ ಸ್ಮರಣೆ 40 ಲೋಕ ಕಲ್ಪಗಳಷ್ಟು (ಸಂವಿಟ್ಟ–ವಿವಟ್ಟ) ನೆನೆಸಿಕೊಳ್ಳುತ್ತಾನೆ.)

(ನಾಲ್ಕನೆಯ ಅವಸ್ಥೆಯಲ್ಲಿ, ಭಿಕ್ಷುಗಳೇ, ಇಲ್ಲಿ ಸಮಣ ಬ್ರಾಹ್ಮಣರು ತರ್ಕ ಮತ್ತು ವಿಮರ್ಶೆಗೆ ಅಂಟಿದ್ದು, ತರ್ಕ ಲೆಕ್ಕಾಚಾರವೆಲ್ಲಾ ಹಾಕಿ ಕೊನೆಗೆ ಈ ನಿರ್ಧಾರ ತಲುಪುತ್ತಾರೆ. ಅದೇನೆಂದರೆ "ಆತ್ಮವು ಶಾಶ್ವತ ಮತ್ತು ಲೋಕವು ಶಾಶ್ವತ, ಇಲ್ಲಿ ಹೊಸದೊಂದು ಯಾವುದೂ ಸೃಷ್ಟಿಯಾಗುತ್ತಿಲ್ಲ. ಹೇಗೆ ಪರ್ವತಶಿಖರ ಅಥವಾ ದೃಢಸ್ಥಂಭದ ಹಾಗೆ ಎಲ್ಲವೂ ಶಾಶ್ವತವಾಗಿ, ಎಲ್ಲಾ ಜೀವಿಗಳು ಮರಣಿಸಿ ಪುನಃ ಇನ್ನೊಂದು ಸ್ಥಿತಿಯಲ್ಲಿ ಜನಿಸುತ್ತದೆ. ಈ ಕ್ರಿಯೆ ಹೀಗೆ ನಿರಂತರ ನಡೆಯುತ್ತಲೇ ಇರುತ್ತದೆ."

"ಇದೇ ಭಿಕ್ಷುಗಳೇ, ಈ ನೆಲೆಗಳಿಂದಾಗಿ ಕೆಲವು ಸಮಣ ಬ್ರಾಹ್ಮಣರು ತಮ್ಮ ಶಾಶ್ವತವಾದವಾದ ಆತ್ಮವು ಶಾಶ್ವತ ಮತ್ತು ಲೋಕವು ಶಾಶ್ವತ ಎಂದು ಪ್ರತಿಪಾದಿಸುತ್ತಾರೆ."

"ಇದೇ ಭಿಕ್ಷುಗಳೇ, ಯಾವ ಸಮಣ ಬ್ರಾಹ್ಮಣರು ಶಾಶ್ವತವಾದವನ್ನು ಪ್ರತಿಪಾದಿಸುತ್ತಾರೋ ಅವರು ನಾಲ್ಕು ಆಧಾರಗಳಿಂದ ಆತ್ಮವೂ ಮತ್ತು ಲೋಕವು ಶಾಶ್ವತ ಎಂದು ಹೇಳುತ್ತಾರೆ. ಯಾರೆಲ್ಲರೂ ಹೀಗೆ ಹೇಳುತ್ತಾರೋ ಅವರಿಗೆ ಈ ನಾಲ್ಕರ ಅಥವಾ ಇವುಗಳಲ್ಲಿ ಒಂದರ ಆಧಾರದಲ್ಲಿ ಹೀಗೆ ಹೇಳುತ್ತಾರೆ. ಇದರ ಹೊರತು ಅವರ ಅಭಿಪ್ರಾಯಗಳಿಗೆ ಬೇರೆ ಹಾದಿಯಿಲ್ಲ."

"ಈಗ ಇವುಗಳಲ್ಲಿ ಭಿಕ್ಷುಗಳೇ, ಈ ಊಹಾಪೋಹಗಳು, ಸಿದ್ಧಾಂತಗಳು ಹೇಗೆ ಬಂದಿತು ಮತ್ತು ಹೇಗೆ ದೃಢವಾಯಿತು, ಅವುಗಳ ಪರಿಣಾಮಗಳೇನು? ಯಾವುದನ್ನು ನಂಬಿದವರಿಂದಾಗಿ ಎಂತೆಂತಹ ಪರಿಣಾಮಗಳು ಅವರಿಗೆ ಭವಿಷ್ಯದಲ್ಲಿ ದೊರಕುವುವು ಎಂದೆಲ್ಲಾ ತಥಾಗತರಿಗೆ ತಿಳಿದಿದೆ. ಇವುಗಳನ್ನು ಅರಿತಿರುವುದಷ್ಟೇ ಅಲ್ಲ, ಇದನ್ನು ಮೀರಿದ, ದಾಟಿದ ಇನ್ನೆಷ್ಟೋ ವಿಷಯಗಳನ್ನು ತಥಾಗತರು ಅರಿತಿದ್ದಾರೆ. ಆದರೆ ಅಂತಹ ಗಂಭೀರ ಜ್ಞಾನದಿಂದಲೂ ಅವರು ಉಬ್ಬಿಹೋಗುವುದಿಲ್ಲ ಮತ್ತು ಹೀಗೆ ಯಾರಿಗೂ ಅವಲಂಬಿತವಾಗದೆ, ತಮಗೆ ತಾವೇ ಆಧಾರವಾಗಿರುತ್ತಾರೆ. ಪರರಿಗಾಗಿ ವಿಮುಕ್ತಿಯ ಹಾದಿಯನ್ನು ಸಾಕ್ಷಾತ್ಕರಿಸಿದ್ದಾರೆ, ಅರಿತಿದ್ದಾರೆ. ಸತ್ಯವನ್ನು ಅದು ಹೇಗಿದೆಯೋ ಹಾಗೆಯೇ ಅರಿತಿದ್ದಾರೆ. ಅವುಗಳ ಉದಯ ವ್ಯಯವನ್ನು, ಅವುಗಳ ರುಚಿ, ಅವುಗಳ ಅಪಾಯ, ಅವು ಹೇಗೆ ನಂಬಿಕೆಗೆ ಅರ್ಹವಲ್ಲವೆಂಬುದನ್ನು ಅರಿತು, ಅವುಗಳಲ್ಲಿ ಯಾವುದಕ್ಕೂ ಅಂಟದೆ ತಥಾಗತರು ಮುಕ್ತರಾಗಿದ್ದಾರೆ."



"ಇದೇ ಭಿಕ್ಷುಗಳೇ, ಆ ಪರ ವಿಷಯಗಳು, ಉದಾತ್ತವಾದುದು, ಅರಿಯಲು ಕಡುಕಷ್ಟವಾಗಿರುವಂತಹುದು, ಪ್ರಶಾಂತತೆ ನೀಡುವಂತಹುದು, ಮಧುರವಾದುದು, ಕೇವಲ ತರ್ಕದಿಂದಲೇ ಹಿಡಿತಕ್ಕೆ ಸಿಗಲಾರದಂತಹುದು, ಪರಮಸೂಕ್ಷ್ಮವಾದುದು, ಕೇವಲ ಪ್ರಾಜ್ಞರಿಂದಲೇ ಅರಿಯುವಂತಹುದು, ಅದನ್ನು ತಥಾಗತರು ತಾವಾಗಿಯೇ, ನೇರವಾಗಿ ಎದುರುಬದುರಾಗಿ ಸಾಕ್ಷಾತ್ಕರಿಸಿರುವರು ಮತ್ತು ಈ ವಿಷಯಗಳಲ್ಲಿ ನಿಜಕ್ಕೂ ಯೋಗ್ಯವಾಗಿ ತಥಾಗತರನ್ನು ಸತ್ಯಕ್ಕೆ ಅನುಗುಣವಾಗಿ ಜ್ಞಾನಿಗಳು ಪ್ರಶಂಸುತ್ತಿದ್ದಾರೆ."

## ನಾಲ್ಕುಬಗೆಯ ಏಕಚ್ಚ ಶಾಶ್ವತವಾದಿಗಳು (ಪಾರ್ಶ ಶಾಶ್ವತವಾದಿಗಳು):

"ಇಲ್ಲಿ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರಿದ್ದಾರೆ, ಅವರು ಕೆಲವು ವಿಷಯಗಳಿಗೆ ಶಾಶ್ವತವಾದಿಗಳಾಗಿದ್ದಾರೆ. ಮತ್ತೆ ಕೆಲವು ವಿಷಯಗಳಿಗೆ ಶಾಶ್ವತವಾದಿಗಳಾಗಿಲ್ಲ. ಅವರು ತಮ್ಮ ಈ ಪಾರ್ಶ್ವ ಶಾಶ್ವತವಾದಕ್ಕೆ ನಾಲ್ಕು ಆಧಾರಗಳನ್ನು ಮಂಡಿಸುತ್ತಾರೆ. ಮತ್ತು ಅವರು ಈ ತೀರ್ಮಾನಕ್ಕೆ ಬರಲು ಕಾರಣವೇನು? ಅದು ಹೇಗೆ ಆರಂಭವಾಯಿತು, ಅವಲಂಬಿತವಾಯಿತು ಮತ್ತು ನಿರ್ಧರಿತವಾಯಿತು?"

"ಒಂದು ಕಾಲ ಬರುತ್ತದೆ ಭಿಕ್ಷುಗಳೇ, ಆಗ ಬೇಗನೆಯೋ ಅಥವಾ ನಿಧಾನವೊ, ಕಾಲನಂತರದಲ್ಲಿ ಈ ಲೋಕವ್ಯವಸ್ಥೆಯು ಅಂತ್ಯವಾಗುತ್ತದೆ ಮತ್ತು ಯಾವಾಗ ಹೀಗೆ ಆಗುವುದೋ, ಆಗ ಇಲ್ಲಿರುವ ಜೀವಿಗಳೆಲ್ಲಾ ಪ್ರಕಾಶವುಳ್ಳ ಲೋಕದಲ್ಲಿ (ಅಭ್ಯಸ್ಸರ) ಜನಿಸುತ್ತಾರೆ. ಅಲ್ಲಿ ಅವರು ಮನಸ್ಸಿನಿಂದಲೇ ನಿರ್ಮಿತವಾಗಿ ವಿಹರಿಸುತ್ತಾರೆ. ಆನಂದದಿಂದಲೇ ಅವಲಂಬಿತರಾಗಿ (ಸೇವಿಸಿ) ಸ್ವಯಂ ಪ್ರಭಾರಾಗಿ (ತಮ್ಮಲ್ಲೇ ಪ್ರಕಾಶವನ್ನು ವಿಸ್ತರಿಸುತ್ತ), ಅಂತರಿಕ್ಷದಲ್ಲಿ ಚಲಿಸುವವರಾಗಿ, ಭವ್ಯತೆಯನ್ನು ಮುಂದುವರೆಸುತ್ತ, ಹೀಗೆ ಅಪಾರ ಕಾಲದಲ್ಲಿ ಇರುತ್ತಾರೆ."

"ಓ ಭಿಕ್ಷುಗಳೇ, ಒಂದು ಕಾಲವು ಬರುತ್ತದೆ. ಆಗ ಬೇಗನೆಯೋ, ನಿಧಾನವಾಗಿಯೋ ಈ ಲೋಕ ವ್ಯವಸ್ಥೆಯು ಮರುಸ್ಥಾಪಿತವಾಗುತ್ತದೆ ಮತ್ತು ಯಾವಾಗ ಹೀಗೆ ಆಗುವುದೋ ಆಗ ಬ್ರಹ್ಮನ ಅರಮನೆಯು ಪ್ರತ್ಯಕ್ಷವಾಗುತ್ತದೆ. ಆದರೆ ಅದು ಶೂನ್ಯವಾಗಿರುತ್ತದೆ ಮತ್ತು ಆಗ ಒಂದು ಜೀವಿ ಪ್ರಕಾಶವುಳ್ಳ ಲೋಕದಿಂದ ಆಯುಕ್ಷೀಣವಾಗಿ ಅಥವಾ ಪುಣ್ಯಕ್ಷೀಣವಾಗಿ ಅಲ್ಲಿಂದ ಬಿದ್ದು, ಬ್ರಹ್ಮನ ಅರಮನೆಯಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಲಿಯೂ ಸಹಾ ಅದು ಮನಸ್ಸಿನಿಂದಲೇ ನಿರ್ಮಿತರಾಗಿ ಜೀವಿಸುತ್ತಾರೆ. ಆನಂದದಿಂದಲೇ ಅವಲಂಬಿತರಾಗಿ, ಪ್ರಕಾಶವನ್ನು ಬೀರುತ್ತ, ಅಂತರಿಕ್ಷದಲ್ಲಿ ಚಲಿಸುವವರಾಗಿ, ಭವ್ಯತೆಯನ್ನು ಮುಂದುವರೆಸುತ್ತ, ಹೀಗೆಯೇ ಅಪಾರ ಕಾಲದವರೆಗೂ ಇರುತ್ತದೆ."

"ಈಗ ಅಲ್ಲಿರುವ ಆ ಏಕೈಕ ಜೀವಿಗೆ, ಏಕಾಂತವಾಗಿದ್ದು, ಅತೃಪ್ತಿಯಾಗುತ್ತದೆ. ಅದು ಪರಜೀವಿಗಳನ್ನು ಹೀಗೆ ಬಯಸುತ್ತದೆ. "ಓ ಬೇರೆ ಜೀವಿಗಳು ಈ ಅರಮನೆಯಲ್ಲಿಯೇ ನನ್ನೊಡನೆ ಸೇರುವ ಹಾಗಿದ್ದರೆ!" ಮತ್ತು ಆಗ ಪುಣ್ಯಕ್ಷಯದಿಂದಲೂ ಅಥವಾ ಆಯು ಕ್ಷೀಣಿಸಿಯೋ ಪ್ರಕಾಶಲೋಕದ ಜೀವಿಗಳು ಅಲ್ಲಿಂದ ಜಾರಿ ಬ್ರಹ್ಮನ ಅರಮನೆಯಲ್ಲಿ ಕಾಣಿಸಿಕೊಂಡು ಆತನಿಗೆ ಸಹಚರರಾಗಿ ಗೌರವಿಸುತ್ತ ಅಲ್ಲಿ ನೆಲೆಸುತ್ತಾರೆ."

"ಈ ರೀತಿಯಾಗಿ ಭಿಕ್ಷುಗಳೇ, ಅಲ್ಲಿ ಮೊದಲು ಜನಿಸಿದ ಜೀವಿಯು ತನಗೆತಾನೇ ಈ ರೀತಿಯಾಗಿ ಯೋಚಿಸುತ್ತದೆ: 'ನಾನು ಬ್ರಹ್ಮ, ಮಹಾಬ್ರಹ್ಮನಾಗಿದ್ದೇನೆ, ಮಹಾಬಲಿಷ್ಠನೂ, ಸರ್ವವನ್ನು ಕಾಣುವವನು, ಆಳುವವನು, ಸರ್ವರಿಗೂ ಸ್ವಾಮಿಯು, ನಿರ್ಮಾತನು, ಸೃಷ್ಠಿಕರ್ತನು, ನಾಯಕನು, ಒಡೆಯನು, ತಂದೆಯು ಆಗಿದ್ದೇನೆ ಮತ್ತು ಏತಕ್ಕೆ ಹೀಗೆ? ಏಕೆಂದರೆ ಕೇವಲ ನನ್ನ ಇಚ್ಛೆಯಂತೆ ಈ ಜೀವಿಗಳೆಲ್ಲ ಇಲ್ಲಿ ಕಾಣಿಸಿಕೊಂಡರು."

"ಅಷ್ಟೇ ಅಲ್ಲ, ಅಲ್ಲಿರುವ ಜೀವಿಗಳು ಸಹಾ ಹೀಗೆಯೇ ಯೋಚಿಸುತ್ತವೆ: 'ಈತನು ಬ್ರಹ್ಮನೇ ಆಗಿದ್ದಾನೆ, ಮಹಾಬ್ರಹ್ಮನೇ ಆಗಿದ್ದಾನೆ, ಶ್ರೇಷ್ಠನಾಗಿದ್ದಾನೆ. ಮಹಾ ಬಲಿಷ್ಠನಾಗಿದ್ದಾನೆ, ಸರ್ವವನ್ನು ವೀಕ್ಷಿಸುವವನು, ಆಳುವವನು, ಸರ್ವರ ಪ್ರಭುವು, ನಿರ್ಮಾತನು, ಸೃಷ್ಠಿಕರ್ತನು, ನಾಯಕನು ಆಗಿದ್ದಾನೆ. ಸರ್ವರಿಗೂ ತಮ್ಮ ಸ್ಥಾನದಲ್ಲಿರುವಂತೆ ಅರಮನೆಯಲ್ಲಿ ನೇಮಿಸಿದ್ದಾನೆ. ಅಪಾರ ಕಾಲದಿಂದಲೂ ತಂದೆಯಂತೆ ಇದ್ದಾನೆ. ನಾವೆಲ್ಲರೂ ಆತನಿಂದಲೇ ಸೃಷ್ಠಿಸಲ್ಪಟ್ಟಿದ್ದೇವೆ ಮತ್ತು ಏಕೆ ಹೀಗೆ. ಏಕೆಂದರೆ ನಾವು ಇಲ್ಲಿಗೆ ಬಂದಾಗ ಆತನೊಬ್ಬನೇ ಇಲ್ಲಿದ್ದನು ಮತ್ತು ನಾವು ನಂತರ ಬಂದೆವು."

"ಭಿಕ್ಷುಗಳೇ, ಈ ರೀತಿಯಾಗಿ ಮೊದಲು ಬಂದಂತಹ ಜೀವಿಯು ಪರರಿಗೆ ಹೋಲಿಸಿದರೆ ದೀರ್ಘಾಯುವು, ಭವ್ಯತೆಯುಳ್ಳದ್ದು, ಮಹಾಶಕ್ತಿಶಾಲಿಯು ಆಗಿತ್ತು. ಆನಂತರದಲ್ಲಿ ಬಂದಿದ್ದ ಜೀವಿಗಳು ಅಲ್ಲಿಂತ ಚ್ಯುತರಾಗಿ, ಇಲ್ಲಿ ಜನಿಸುತ್ತದೆ. ಇಲ್ಲಿರುವಾಗ ಗೃಹತ್ಯಾಗ ಮಾಡಿ ಸಮಣನಾಗಿ ಧ್ಯಾನದಲ್ಲಿ ತೊಡಗಿದಾಗ, ಎಚ್ಚರಿಕೆಯಿಂದ, ಯೋಗ್ಯರೀತಿಯಲ್ಲಿ ಗಮನಹರಿಸಿದಾಗ, ಚೇತೋಸಮಾಧಿ ಸಿದ್ಧಿಸಿದಾಗ, ಅದು ತನ್ನ ಹಿಂದಿನ ಜನ್ಮವನ್ನು ಸ್ಮರಿಸುತ್ತದೆ. ಆಗ ಅದು ಹೀಗೆ ಹೇಳಿಕೊಳ್ಳುತ್ತದೆ: "ಈತನೇ ಬ್ರಹ್ಮ, ಮಹಾಬ್ರಹ್ಮ, ಪರಮಶ್ರೇಷ್ಠನು, ಬಲಿಷ್ಠನು, ಸರ್ವವನ್ನು ವೀಕ್ಷಿಸುವವನು, ಆಳುವವನು, ಸರ್ವಾಧಿಪತಿಯು, ನಿರ್ಮಾತನು, ಸೃಷ್ಠಿಕರ್ತನು, ಸರ್ವರ ಒಡೆಯನು ಆಗಿದ್ದಾನೆ. ನಾವೆಲ್ಲಾ ಆತನಿಂದಲೇ ಸೃಷ್ಟಿಯಾಗಿದ್ದೇವೆ. ಆತನು ನಿತ್ಯವಾಗಿ, ದೃಢವಾಗಿ, ಧೃವವಾಗಿ ನೆಲೆಸಿದ್ದಾನೆ. ಆತನು ಹೀಗೆಯೇ ಎಂದೆಂದಿಗೂ ಬದಲಾವಣೆ, ಹೊಂದದೆ ಇರುತ್ತಾನೆ. ಆದರೆ ಆತನಿಂದ ಸೃಷ್ಟಿಸಲ್ಪಟ್ಟ ನಾವು ನಿತ್ಯದಲ್ಲಿ ಪರಿಮಿತರಾಗಿರುವೆವು."

ಇದೇ ಭಿಕ್ಷುಗಳೇ, ಮೊದಲ ಆಧಾರವಾಗಿದ್ದು ಅದರಿಂದಾಗಿ ಕೆಲವು ಸಮಣ ಬ್ರಾಹ್ಮಣರು, ಕೆಲವೊಂದಕ್ಕೆ ಶಾಶ್ವತವಾದಿಯಾಗಿ ಮಿಕ್ಕೆಲ್ಲ ವಿಷಯಕ್ಕೆ ಅಶಾಶ್ವತವಾದಿಗಳಾಗಿ, ಆತ್ಮವೂ ಮತ್ತು ಲೋಕವೂ ಭಾಗಶಃ ಶಾಶ್ವತ ಮತ್ತು ಭಾಗಶಃ ಅಶಾಶ್ವತ ಎಂದು ತೀರ್ಮಾನಕ್ಕೆ ಬರುತ್ತಾರೆ."

"ಮತ್ತು ಎರಡನೆಯ ಆಧಾರ ಯಾವುದು?"

"ಓ ಭಿಕ್ಷುಗಳೇ, 'ಖಿದ್ದ-ಪದೊಸಿಕಾ' ಎಂಬ ದೇವತೆಗಳಿರುತ್ತಾರೆ, ಅವರಿಗೆ ಹಾಸ್ಯ, ಮೋದ, ರಾಗಗಳಿಂದ ಅವರ ಆಯುವು ಕ್ಷೀಣಿಸಿ, ತಮ್ಮ ಸ್ವಸ್ಥಾನದಿಂದ ಬೀಳುತ್ತವೆ."



"ಈಗ ಆ ಜೀವಿಗಳು ಅಲ್ಲಿಂದ ಬಿದ್ದು, ಇಲ್ಲಿ ಜನಿಸುತ್ತವೆ. ಆ ಜೀವಿಯು ಸಮಣ ಬ್ರಾಹ್ಮಣನಾಗಿ, ಧ್ಯಾನದಲ್ಲಿ ತೊಡಗಿ, ತನ್ನ ಹಿಂದಿನ ಜನ್ಮವನ್ನು ನೆನಪಿಸಿಕೊಳ್ಳುತ್ತಾನೆ. ಮತ್ತು ಆಗ ಆತನಿಗೆ ಹೀಗೆ ಅನಿಸುತ್ತದೆ: "ಯಾವೆಲ್ಲಾ ಜೀವಿಗಳು ಸುಖಕ್ಕೆ, ಮೋದಕ್ಕೆ, ರಾಗಕ್ಕೆ, ಬಿದ್ದಿಲ್ಲವೋ ಅವೆಲ್ಲಾ ದೃಢವಾಗಿ, ಧೃವವಾಗಿ, ಅಚಲವಾಗಿ, ಯಾವುದೇ ಬದಲಾವಣೆ ಇಲ್ಲದೆ ಎಂದೆಂದಿಗೂ ಶಾಶ್ವತವಾಗಿಯೇ ಇರುತ್ತವೆ. ಆದರೆ ನಾನು ಸ್ವನಿಯಂತ್ರಣ ತಪ್ಪಿ ಸುಖ-ರಾಗಗಳಿಗೆ ಬಲಿಯಾಗಿ ಹೀಗೆ ಬದಲಾವಣೆಗೆ, ಅಶಾಶ್ವತವಾದ ಜೀವನಕ್ಕೆ ಪರಿಮಿತವಾದ ಜೀವನಕ್ಕೆ ಬಲಿಯಾದೆನು."

"ಮತ್ತು ಮೂರನೆಯ ಆಧಾರ ಯಾವುದು?"

"ಇಲ್ಲಿ ಭಿಕ್ಷುಗಳೇ, 'ಮನೋ-ಪದೊಸಿಕಾ'ವೆಂಬ ದೇವತೆಗಳು ಇರುತ್ತಾರೆ. ಅವು ನಿರಂತರ ಅಸೂಯಾಪರರಾಗಿ, ತಮ್ಮತಮ್ಮಲ್ಲೇ ದ್ವೇಷಿಸತೊಡಗುತ್ತವೆ. ಅವರ ಚಿತ್ತಗಳು ಅಸೂಯೆ ಮತ್ತು ದ್ವೇಷದಿಂದ ತುಂಬಿಕೊಳ್ಳುತ್ತವೆ. ಅದರ ಪರಿಣಾಮವಾಗಿ, ಅವುಗಳ ದೇಹಗಳು ದುರ್ಬಲವಾಗಿ, ಮನಸ್ಸು ದುರ್ಬಲವಾಗಿ, ಅವು ತಮ್ಮ ಸ್ಥಾನದಿಂದಾಗಿ ಚ್ಯುತರಾಗುತ್ತವೆ."

"ಈಗ ಈ ರೀತಿಯಾಗಿ, ಆ ಲೋಕದಿಂದಾಗಿ ಚ್ಯುತರಾದ ಜೀವಿಗಳು ಆ ಸ್ಥಿತಿಯಿಂದ ಇಲ್ಲಿಗೆ ಬರುತ್ತವೆ. ಅವು ಸಮಣ ಬ್ರಾಹ್ಮಣರಾದಾಗ ಧ್ಯಾನಿಸಿ, ಹಿಂದಿನ ಜನ್ಮದ ಸ್ಮರಣೆ ಮಾಡಿದರೆ, ಆತನು ಈ ರೀತಿಯ ತೀರ್ಮಾನ ತೆಗೆದುಕೊಳ್ಳುತ್ತಾನೆ: "ಆ ದೇವತೆಗಳು ಅಸೂಯೆಯಿಂದಾಗಿ, ದ್ವೇಷದಿಂದಾಗಿ ಭ್ರಷ್ಟರಾಗದೆ ಇದ್ದಿದ್ದರೆ, ಅವುಗಳು ದುರ್ಬಲವಾಗಿ ಚ್ಯುತರಾಗಿ ಇಲ್ಲಿ ಹುಟ್ಟುತ್ತಿರಲಿಲ್ಲ. ಅವು ಅಲ್ಲೇ ಇದ್ದಿದ್ದರೆ ನಿತ್ಯವಾಗಿ ಬದಲಾವಣೆಯಿಲ್ಲದೆ ಅಮರವಾಗಿ, ಶಾಶ್ವತವಾಗಿ ಅಲ್ಲೇ ಇರುತ್ತಿದ್ದರು. ಆದರೆ ನಾವು ಚಿತ್ತ ಕಲುಷಿತರಾಗಿ, ಅಸೂಯೆಪರರಾಗಿ, ಹೀಗೆ ದುಃಸ್ಥಿತಿಗೆ ಒಳಗಾಗಿ ಅಶಾಶ್ವತವುಳ್ಳವರು, ಪರಿಮಿತ ಆಯುಷ್ಯಿನ ಜೀವಿಗಳಾಗಿರುವೆವು." ಇದೇ ಭಿಕ್ಷುಗಳೇ ಮೂರನೆಯ ಆಧಾರ."

"ಮತ್ತು ನಾಲ್ಕನೆಯ ಆಧಾರ ಯಾವುದು ?"

"ಇಲ್ಲಿ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ತರ್ಕ ಮತ್ತು ವಿಚಾರಶೀಲತೆಯಲ್ಲಿ ಮಗ್ನರಾಗುತ್ತಾರೆ. ನಂತರ ಆತನು ತನ್ನದೇ ಆದ ತೀರ್ಮಾನದಿಂದ ವಾದಮಂಡನೆಯಲ್ಲಿ ಈ ರೀತಿ ತೊಡಗುತ್ತಾನೆ." ಈ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಶರೀರವು ಅಶಾಶ್ವತವಾಗಿದೆ. ಪರಿವರ್ತನೀಯ ಧಮ್ಮದ್ದು ಆಗಿದ್ದು, ಆದರೆ ಅದರ ಚಿತ್ತವು (ವಿಜ್ಞಾನವು) ನಿತ್ಯವಾಗಿದೆ, ಬದಲಾಗದ ಧಮ್ಮದ್ದು ಮತ್ತು ಶಾಶ್ವತವಾಗಿದೆ."

"ಇದೇ ಭಿಕ್ಷುಗಳೇ, ಸಮಣ ಭಿಕ್ಷುಗಳು ನೀಡುವ ಪಾರ್ಶಶಾಶ್ವತ ವಾದಕ್ಕೆ ನಾಲ್ಕನೆಯ ಆಧಾರವಾಗಿದೆ. ಈ ನಾಲ್ಕು ವಿಧದಿಂದಾಗಿ ಅಥವಾ ನಾಲ್ಕರಲ್ಲಿ ಒಂದು ಅಥವಾ ಎರಡನ್ನು ಬಳಸಿ ಕೆಲವು ಶಾಶ್ವತ ಮತ್ತು ಕೆಲವು ನಶ್ವರ ಎಂದು ಪ್ರತಿಪಾದಿಸುತ್ತಾರೆ."

"ಇವುಗಳ ಬಗ್ಗೆ ಭಿಕ್ಷುಗಳೇ, ತಥಾಗತರಿಗೆ ಈ ಊಹಾಪೋಹಗಳು, ಸಿದ್ಧಾಂತಗಳು ಹೇಗೆ ಅಸ್ತಿತ್ವಕ್ಕೆ ಬಂದಿತು, ಮುಂದುವರೆಯಿತು ಮತ್ತು ಅವುಗಳ ಪರಿಣಾಮಗಳು ಏನೇನು ಆಯಿತು, ಅದನ್ನು ನಂಬಿದವರು ಏನಾದರೂ ಅವೆಲ್ಲವೂ ಗೊತ್ತು. ಅಷ್ಟೇ ಅಲ್ಲ, ತಥಾಗತರಿಗೆ ಅವುಗಳಿಗೆ ಮೀರಿದ ಸತ್ಯಗಳು ತಿಳಿದಿವೆ. ಈ ರೀತಿಯ ಜ್ಞಾನದಿಂದಲೂ ಅವರು ಉಬ್ಬಿಹೋಗುವುದಿಲ್ಲ. ಆದರೆ ಆ ವಿಧವಾದ ಮಿಥ್ಯಾದೃಷ್ಟಿಗಳಿಗೆ ಅಂಟಿಕೊಳ್ಳದೆ, ತಮಗೆ ತಾವೇ ನಿರವಲಂಬನೆ ಸಾಧಿಸುತ್ತಾರೆ. ಇವೆಲ್ಲದರ ಉದಯವನ್ನು ಅರಿಯುತ್ತಾರೆ. ಇವುಗಳ ಪರಿಣಾಮ, ಇವುಗಳ ಅಳಿವನ್ನು ಕಾಣುತ್ತಾರೆ. ಇವುಗಳ ರುಚಿಯನ್ನು ಹಾಗೆಯೇ ಇವುಗಳ ಅಪಾಯವನ್ನು, ಇವುಗಳು ಹೇಗೆ ನಂಬಿಕೆಗೆ ಅರ್ಹವಾಗಿದೆ ಎಂಬುದನ್ನು ಅರಿತು, ಇವ್ಯಾವುದಕ್ಕೂ ಅಂಟಿಕೊಳ್ಳದೆ ತಥಾಗತರು ಮುಕ್ತರಾಗಿದ್ದಾರೆ."

"ಇವೇ ಭಿಕ್ಷುಗಳೇ, ಆ ಇನ್ನಿತರ ವಿಷಯಗಳು ಉದಾತ್ತವಾಗಿದೆ. ಅರಿಯಲು ಕಷ್ಟಕರವಾಗಿದೆ, ಪ್ರಶಾಂತತೆ ಉಂಟುಮಾಡುವಂತಹುದು, ಮಧುರವಾದುದು, ತರ್ಕಕ್ಕೆ ಸಿಗಲಾರದಂತಹುದು, ಪರಮಸೂಕ್ಷ್ಮವಾದುದು, ಕೇವಲ ಜ್ಞಾನಿಗಳಿಂದಲೇ ಅರಿಯುವಂತಹುದು, ಆದರೆ ತಥಾಗತರು ಅವುಗಳನ್ನು ನೇರವಾಗಿ, ಮುಖಾಮುಖಿಯಾಗಿ ಸಾಕ್ಷಾತ್ಕರಿಸಿ, ಪ್ರಕಟಿಸಿರುತ್ತಾರೆ. ಈ ವಿಷಯಗಳಲ್ಲಿ ತಥಾಗತರನ್ನು ಪ್ರಶಂಸಿಸಿದರೆ ಅದು ನಿಜಕ್ಕೂ ಯೋಗ್ಯವಾದ ಪ್ರಶಂಸೆ ಆಗಿರುತ್ತದೆ. ಸತ್ಯಕ್ಕೆ ಅನುಗುಣವಾದ ಪ್ರಶಂಸೆ ಆಗಿರುತ್ತದೆ."

## ನಾಲ್ಕುಬಗೆಯ ಅಂತಅನಂತವಾದ

"ಭಿಕ್ಷುಗಳೇ, ಇಲ್ಲಿ ಕೆಲವು ಸಮಣ ಬ್ರಾಹ್ಮಣರಿದ್ದಾರೆ. ಅವರು ಅಂತಾನಂತ ವಾದಿಗಳಾಗಿರುತ್ತಾರೆ ಮತ್ತು ಅವರು ನಾಲ್ಕುರೀತಿಯಲ್ಲಿ ತಮ್ಮ ವಾದದಂತೆ ಲೋಕವು ಅನಂತ ಇಲ್ಲವೇ ಲೋಕವು ಅಂತ ಎಂದು ಪ್ರತಿಪಾದಿಸುತ್ತಾರೆ ಮತ್ತು ಅವರು ಯಾವುದರ ಆಧಾರದ ಮೇಲೆ ಈ ರೀತಿ ವಾದಗಳನ್ನು ಮಂಡಿಸುತ್ತಾರೆ?"

"ಭಿಕ್ಷುಗಳೇ, ಇಲ್ಲಿ ಕೆಲವು ಸಮಣ ಬ್ರಾಹ್ಮಣರು, ಧ್ಯಾನದಲ್ಲಿ ಪರಿಶ್ರಮಯುತರಾಗಿ, ಎಚ್ಚರಿಕೆಯುಳ್ಳವರಾಗಿ, ಯೋಗ್ಯವಾದ ಗಮನಹರಿಸುವಿಕೆಯಿಂದಾಗಿ, ಆತನು ಲೋಕಗಳನ್ನು ವೀಕ್ಷಿಸುತ್ತಾನೆ. ಆಗ ಆತನಿಗೆ ಲೋಕವು ಅಂತ್ಯವುಳ್ಳದ್ದಾಗಿದೆ ಎಂದು ಭಾಸವಾಗುತ್ತದೆ. ಆಗ ಆತನು ಲೋಕವು ಅಂತವುಳ್ಳದ್ದು ಎಂಬ ತೀರ್ಮಾನಕ್ಕೆ ಬರುತ್ತಾನೆ. ಏಕೆಂದರೆ ಆತನು ಧ್ಯಾನದಲ್ಲಿ ಪರಿಶ್ರಮಪಟ್ಟಿದವನಾಗಿ, ಚಿತ್ತವನ್ನು ಲೋಕಗಳಿಗೆ ಹರಿಸಿದ್ದರಿಂದಾಗಿ 'ಲೋಕವು ಅಂತ' ಎಂಬ ತೀರ್ಮಾನಕ್ಕೆ ಬರುತ್ತಾನೆ."

ಇದೇ ಭಿಕ್ಷುಗಳೇ ಮೊದಲ ಆಧಾರವಾಗಿದೆ.

"ಎರಡನೆಯ ಆಧಾರವು ಸಹಾ ಅದೇರೀತಿಯಾಗಿದೆ. ಆದರೆ ಉಪಸಂಹಾರವು ಮಾತ್ರ ವಿಭಿನ್ನವಾಗಿ ಹೀಗಿದೆ: ಈ ಲೋಕವು ಯವುದೇ ಮಿತಿಯಿಲ್ಲದೆ ಅನಂತವಾಗಿದೆ, ಯಾವ ಸಮಣ ಬ್ರಾಹ್ಮಣರು ಲೋಕಕ್ಕೆ ಅಂತವಿದೆ ಎಂದು ಹೇಳುತ್ತಾರೋ ಅವರು ತಪ್ಪಾಗಿದ್ದಾರೆ, ಏಕೆಂದರೆ ಮಾರ್ಗವು ವೃತ್ತಾಕಾರವಾಗಿ ಪತ್ತೆಹಚ್ಚಲಾಗಿದೆ."



"ಮೂರನೆಯ ಆಧಾರವು ಸಹಾ ಅದೇರೀತಿಯಾಗಿದೆ, ಆದರೆ ಉಪ ಸಂಹಾರವು ಮಾತ್ರ ವಿಭಿನ್ನವಾಗಿ ಹೀಗಿದೆ: ಇಲ್ಲಿ ಆತನು ಉರ್ದ್ವಾ ಮತ್ತು ಅದೋದಿಕ್ಕು ಮಾತ್ರ ಪರಿಮಿತವೆಂದು ಕಲ್ಪಿಸಿಕೊಳ್ಳುತ್ತಾನೆ. ಆದರೆ ಸುತ್ತಲು ಅನಂತವೆಂದು ಭಾವಿಸಿ ಆತನು ತನ್ನದೇ ಸತ್ಯವೆಂದು ಪ್ರತಿಪಾದಿಸಿ ಹಿಂದಿನ ಸಿದ್ಧಾಂತಗಳನ್ನು ತಪ್ಪೆಂದು ನಿರ್ಣಯಿಸುತ್ತಾನೆ."

"ನಾಲ್ಕನೆಯ ಆಧಾರ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ತಮ್ಮ ತರ್ಕ ಮತ್ತು ವಿಚಾರಶೀಲತೆಯಿಂದ ಅದರಲ್ಲೇ ತಲ್ಲೀನರಾಗಿ ತಮ್ಮ ವಿಚಾರವನ್ನು ಈ ರೀತಿ ಮಂಡಿಸುತ್ತಾರೆ: 'ಈ ಲೋಕಕ್ಕೆ ಅಂತವೂ ಇಲ್ಲ, ಹಾಗೆಯೇ ಅನಂತವೂ ಇಲ್ಲ. ಯಾರು ಲೋಕಕ್ಕೆ ಅಂತವಿದೆ, ಅಥವಾ ಅನಂತವೆಂದು ಹೇಳುತ್ತಾರೋ ಅಥವಾ ಅಂತಅನಂತ ವೆಂದೂ ಹೇಳುವರು, ಅವೆಲ್ಲ ಸುಳ್ಳು. ಈ ಲೋಕಕ್ಕೆ ಅಂತವೂ ಇಲ್ಲ, ಹಾಗೆಯೇ ಅನಂತವೂ ಇಲ್ಲ. ಇದೇ ಭಿಕ್ಷುಗಳೇ ನಾಲ್ಕನೆಯ ಆಧಾರವಾಗಿದೆ."

"ಭಿಕ್ಷುಗಳೇ, ಯಾವ ಸಮಣ ಬ್ರಾಹ್ಮಣರು ಅನಂತಂತವಾದವನ್ನು ಮಂಡಿಸುವರೋ ಅವರು ಈ ನಾಲ್ಕುರೀತಿಯಲ್ಲಿ ಪ್ರತಿಪಾದಿಸುತ್ತಾರೆ. ಅಥವಾ ಈ ನಾಲ್ಕರಲ್ಲಿ ಒಂದನ್ನು ಹೇಳುತ್ತಾರೆ ಮತ್ತು ಇದರ ಹೊರತು ಪ್ರತಿವಾದಿಸಲು ಬೇರೆ ಯಾವ ಹಾದಿಯೂ ಇಲ್ಲ.

ಈಗ ಇದರಲ್ಲಿ ಭಿಕ್ಷುಗಳೇ, ತಥಾಗತರಿಗೆ ಈ ಊಹಾಪೋಹಗಳು, ಮಿಥ್ಯಾದೃಷ್ಟಿಗಳು ಹೇಗೆ ಅಸ್ಥಿತ್ವಕ್ಕೆ ಬಂದಿತೊ ಗೊತ್ತಿದೆ. ಹಾಗು ಹೇಗೆ ನೆಲೆಯೂರುತ್ತವೆ ಎಂಬುದು ಗೊತ್ತಿದೆ. ಹಾಗೆಯೇ ಅವುಗಳನ್ನು ನಂಬಿದರೆ ಪರಿಣಾಮಗಳು ಭವಿಷ್ಯದಲ್ಲಿ ಹೇಗೆ ಆಗುತ್ತದೆ ಎಂಬುದು ಗೊತ್ತಿದೆ. ಅಷ್ಟೇ ಅಲ್ಲ, ತಥಾಗತರು ಇದರ ಆಚೆಯದನ್ನು ಅರಿತಿರುವರು. ಜ್ಞಾನವನ್ನು ತಿಳಿದಿದ್ದರೂ ಸಹಾ ಅವರು ಉಬ್ಬಿಹೋಗುವುದಿಲ್ಲ ಮತ್ತು ಹಾಗೆಯೇ ಅವುಗಳಿಗೆ ಅಂಟುವುದೂ ಇಲ್ಲ. ಹಾಗೆಯೇ ಯಾವುದಕ್ಕೂ ಅಂಟದೆ ತಮಗೆ ತಾವೇ ವಿಮುಕ್ತಿ ಸಾಧಿಸಿರುವರು. ತಥಾಗತರಿಗೆ ಈ ಮಿಥ್ಯಾದೃಷ್ಟಿಗಳು ಹೇಗೆ ಉದಯಿಸುತ್ತದೆ ಮತ್ತು ಹೇಗೆ ಅಳಿಯುತ್ತದೆ ಎಂಬುದು ತಿಳಿದಿದೆ. ಇವುಗಳ ರುಚಿಯನ್ನು, ಹಾಗೆಯೇ ಇವುಗಳ ಅಪಾಯವನ್ನು, ಹೇಗೆ ಇವು ನಂಬಿಕೆಗೆ ಅರ್ಹವೆಂದು ತಿಳಿದು ಯಾವುದಕ್ಕೂ ಅಂಟದೆ ತಥಾಗತರು ಮುಕ್ತರಾಗಿದ್ದಾರೆ.

"ಇವೇ ಭಿಕ್ಷುಗಳೇ, ಆ ಬೇರೆಯ ವಿಷಯಗಳು, ಉದಾತ್ತವಾದುದು ಅರಿಯಲು ಕಷ್ಟಕರವಾದುದು, ಸಾಕ್ಷಾತ್ಕರಿಸಲು ಕಠಿಣವಾದುದು, ಪ್ರಶಾಂತವಾದುದು, ಮಧುರ ವಾದುದು, ತರ್ಕಾತೀತವಾದುದು, ಪರಮಸೂಕ್ಷ್ಮವಾದುದು, ಕೇವಲ ಜ್ಞಾನಿಗಳಿಂದಲೇ ಅರಿಯುವಂತಹುದು. ಅವುಗಳನ್ನು ತಥಾಗತರು ನೇರವಾಗಿ ಅಭಿಮುಖವಾಗಿ ಸಾಕ್ಷಾತ್ಕರಿಸಿರುವರು ಮತ್ತು ಪ್ರಕಟಪಡಿಸಿರುವರು. ಇವಕ್ಕೆ ಸಂಬಂಧಿಸಿದಂತೆ ಪ್ರಶಂಸಿಸಿದರೆ, ತಥಾಗತರಿಗೆ ಸತ್ಯಕ್ಕೆ ಅನುಗುಣವಾಗಿ ಪ್ರಶಂಸಿಸಿದಂತೆ ಆಗುತ್ತದೆ."

## ನಾಲ್ಕುಬಗೆಯ ಅಮರ ವಿಕ್ಷೇಪ ವಾದ

"ಭಿಕ್ಷುಗಳೇ, ಇಲ್ಲಿ ಕೆಲವು ಸಮಣ ಬ್ರಾಹ್ಮಣರಿದ್ದಾರೆ. ಅವರು ಹಾವುಮೀನಿನಂತೆ ಜಾರುವವರಾಗಿದ್ದಾರೆ. ಅವರಿಗೆ ಪ್ರಶ್ನೆ ಹಾಕಲ್ಪಟ್ಟಾಗ ಅವರು ಈ ರೀತಿಯಾಗಿ ಅಥವಾ ಆ ರೀತಿಯಾಗಿ ದ್ವಂದ್ವಾರ್ಥದ ಸಂಭಾಷಣೆ ನೀಡಿ ಹಾವುಮೀನಿನಂತೆ ನಾಲ್ಕು ರೀತಿಯಲ್ಲಿ ಜಾರಿಹೋಗುತ್ತಾರೆ."

"ಈಗ ಅವರು ಯಾವ ಆಧಾರದಿಂದಾಗಿ ಹೀಗೆ ಮಾಡುವರೋ ಅರಿಯೋಣ."

"ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ಒಳಿತನ್ನು ಅರಿಯಲಾರರು, ಅವರು ಒಳಿತಿನ ನಿಜಸ್ವರೂಪವಾಗಲಿ ಅಥವಾ ಕೆಟ್ಟ ಸ್ವರೂಪವಾಗಲಿ ಅರಿಯಲಾರರು ಮತ್ತು ಅವರು ಹೀಗೆ ಯೋಚಿಸುತ್ತಾರೆ: 'ನನಗೆ ಒಳಿತಾಗಲಿ ಅಥವಾ ಕೆಡುಕಾಗಲಿ ಅದರಂತೆಯೇ ತಿಳಿದಿಲ್ಲ. ಆ ವ್ಯಕ್ತಿಯಂತೆ ನಾನೂ ಸಹಾ ಒಳ್ಳೆಯದೆ ಅಥವಾ ಕೆಟ್ಟದ್ದು ಎಂದು ಎಚ್ಚರಿಸುತ್ತೇನೆ. ನಾನು ಭಾವೋದ್ರೇಕ ತಾಳಿರಬಹುದು ಮತ್ತು ಪರಿಸ್ಥಿತಿಯ ಒತ್ತಡದಿಂದಾಗಿ ನಾನು ತಪ್ಪಿರಲುಬಹುದು ಮತ್ತು ತಪ್ಪಿತಸ್ಥನಾದ್ದರಿಂದಾಗಿ ನನಗೆ ಪಶ್ಚಾತ್ತಾಪದ ನೋವು ಉಂಟಾಗಬಹುದು ಮತ್ತು ಪಶ್ಚಾತ್ತಾಪವೇ ನನಗೆ ತಡೆಯಾಗಿದೆ.' ಹೀಗೆ ಆತನು ಭೀತಿಪಡುತ್ತಾ ಅಭಿಪ್ರಾಯ ವ್ಯಕ್ತಪಡಿಸಲು ನಿರಾಕರಿಸುತ್ತಾ ಆತನು ಯಾವುದನ್ನು ಒಳ್ಳೆಯದೆಂದು ಅಥವಾ ಕೆಟ್ಟದೆಂದು ನಿರ್ಣಯಿಸಲಾರ. ಆದರೆ ಆತನಿಗೆ ಪ್ರಶ್ನಿಸಲ್ಪಟ್ಟಾಗ ಆತನು ಹಾವು–ಮೀನಿನಂತೆ ಜಾರಿಕೊಳ್ಳುತ್ತ ಹೀಗೆ ಹೇಳುತ್ತಾನೆ: 'ನಾನು ಹೀಗೆ ತೆಗೆದುಕೊಳ್ಳಲಾರೆ, ನಾನು ಬೇರೆ ವಿಧವಾಗಿಯು ತೆಗೆದುಕೊಳ್ಳಲಾರೆ. ಆದರೆ ನಾನು ಬೇರೆ ಅಭಿಪ್ರಾಯವನ್ನು ಹೇಳಲಾರೆ ಮತ್ತು ನಿಮ್ಮದನ್ನು ನಿರಾಕರಿಸಲಾರೆ ಮತ್ತು ನಾನು ಇದೇ ಸರಿ ಅಥವಾ ಅದೇ ಸರಿ ಎಂದು ಹೇಳಲಾರೆ.' ಹೀಗೆ ಭಿಕ್ಷುಗಳೇ, ಈ ಒಂದುರೀತಿ ಹೇಳುವರು ಮತ್ತು ಎರಡನೆಯ ಆಧಾರ ಯಾವುದು?"

(ಹಿಂದಿನಂತೆಯೇ...) "ಇಂತಹ ಪರಿಸ್ಥಿತಿಗಳಲ್ಲಿ ನಾನು ಚಿತ್ತವನ್ನು ಹಿಡಿಯುವಿಕೆಯಲ್ಲಿ ಬೀಳಬಹುದು. ಅದರಿಂದಾಗಿ ಪುನರ್ಜನ್ಮ ಸಿಗಬಹುದು ಮತ್ತು ನನಗೆ ಪಶ್ಚಾತ್ತಾಪ ಉಂಟಾಗಬಹುದು ಮತ್ತು ಪಶ್ಚಾತ್ತಾಪವೇ ನನಗೆ ತಡೆಯಾಗಬಹುದು.' ಹೀಗೆ ಭೀತನಾಗಿ ಮತ್ತು ಆ ಸ್ಥಿತಿಯಿಂದ ಬೀಳಲು ಒಪ್ಪದೆ ಆತನು ಯಾವುದನ್ನು ನಿರ್ಣಯಿಸಲಾರನು. ಇದೇ ಎರಡನೆಯ ರೀತಿಯಾಗಿದೆ."

"ಮತ್ತು ಮೂರನೆಯ ರೀತಿ ಯಾವುದು? (ಹಿಂದಿನಂತೆಯೇ...) ಮತ್ತು ಆತನು ಹೀಗೆ ಯೋಚಿಸುವನು: 'ನನಗೆ ಒಳಿತು ಗೊತ್ತಿಲ್ಲ. ಹಾಗೆಯೇ ಕೆಡಕು ಸಹಾ. ಈಗ ಈ ಸಮಣ ಬ್ರಾಹ್ಮಣರು ಚಾಣಾಕ್ಷರಾಗಿದ್ದಾರೆ. ಸೂಕ್ಷ್ಮಮತಿಗಳಾಗಿದ್ದಾರೆ, ವಾಗ್ಮಿಗಳಾಗಿದ್ದಾರೆ. ತಲೆಗೂದಲನ್ನು ಸೀಳುವವರಾಗಿದ್ದಾರೆ. ನಾನು ವಾದಿಸಿದರೆ ನನಗೆ ಅವರು ಬುದ್ಧಿಯಿಂದಾಗಿ ನುಚ್ಚುನೂರು ಮಾಡಬಲ್ಲರು. ನಾನೇನಾದರೂ ಇದೇ ಸರಿ ಅಂದರೆ ಅಥವಾ ಅದು ಸರಿಯಲ್ಲ ಎಂದರೆ ಈ ಜನರು ನನ್ನೊಂದಿಗೆ ವಾದಿಸಲು ತೊಡಗುತ್ತಾರೆ.



ಅದಕ್ಕೆ ಕಾರಣಗಳನ್ನು ಕೇಳುತ್ತಾರೆ. ನನ್ನ ತಪ್ಪುಗಳನ್ನು ತೋರಿಸುತ್ತಾರೆ. ಈ ರೀತಿಯಾದರೆ ನಾನು ವಿವರಿಸಲು ಅಸಮರ್ಥನಾಗುವೆ. ಇದರಿಂದಾಗಿ ನನಗೆ ಪಶ್ಚಾತ್ತಾಪ ಉಂಟಾಗುತ್ತದೆ, ಅದೇ ನನಗೆ ತಡೆಯಾಗುತ್ತದೆ.' ಹೀಗೆ ಭೀತನಾಗಿ ಆತನು ಯಾವ ಪಕ್ಷದ ಪರವು ವಾದಿಸದೆ, ಯಾವುದನ್ನು ನಿಭಾಯಿಸಲಾರನು. ಇದೇ ಮೂರನೇ ವಾದವಾಗಿದೆ."

"ಮತ್ತು ನಾಲ್ಕನೆಯದು ಯಾವುದು?"

"ಭಿಕ್ಷುಗಳೇ, ಇಲ್ಲಿ ಕೆಲವು ಸಮಣ ಬ್ರಾಹ್ಮಣರು ಮೂರ್ಖರಾಗಿರುತ್ತಾರೆ, ದಡ್ಡರಾಗಿರುತ್ತಾರೆ ಮತ್ತು ತಮ್ಮ ಈ ಮೂರ್ಖತ್ವದಿಂದಾಗಿ ಅವರಿಗೆ ಪ್ರಶ್ನೆ ಕೇಳಿದಾಗ ಅವರು ಹೀಗೆ ಅಥವಾ ಹಾಗೆ ಹಾವುಮೀನಿನಂತೆ ಜಾರಿಕೊಳ್ಳುತ್ತಾರೆ. ಉದಾಹರಿಸುವುದಾದರೆ: "ನೀವು ನನಗೆ ಇನ್ನೊಂದು ಲೋಕವು ಇದೆ ಎಂದು ಕೇಳಿದರೆ, ನನಗೂ ಇದೆ ಎನಿಸಿ, ಹಾಗೆಯೇ ಹೇಳುತ್ತೇನೆ. ನಾನು ಇಲ್ಲವೆನ್ನುವುದಿಲ್ಲ ಮತ್ತು ನಾನು ಅದು ಹೀಗಿದೆ ಅಥವಾ ಹಾಗಿದೆ ಎನ್ನುವುದಿಲ್ಲ ಮತ್ತು ನಾನು ಬೇರೆರೀತಿ ಯೋಚಿಸುವುದಿಲ್ಲ ಮತ್ತು ನಾನು ನಿರಾಕರಿಸುವುದೂ ಇಲ್ಲ ಮತ್ತು ನಾನು ಇಲ್ಲವೆನ್ನುವುದಿಲ್ಲ. ಹಾಗೆಯೇ ಇಲ್ಲದೆಯೂ ಇಲ್ಲ ಎಂದು ಹೇಳುವುದಿಲ್ಲ. ಹೀಗಾಗಿ ಆತನು ಈ ಕೆಳಗಿನ ದ್ವಂದ್ವಾರ್ಥದ ಹೇಳಿಕೆಗಳನ್ನು ನೀಡುತ್ತಾನೆ."

I. (1) ಪರಲೋಕವಿದೆ (2) ಪರಲೋಕವಿಲ್ಲ (3) ಪರಲೋಕವಿದೆ ಹಾಗು ಇಲ್ಲ (4) ಪರಲೋಕವಿಲ್ಲ, ಪರಲೋಕವಿಲ್ಲದೆಯೂ ಇಲ್ಲ.

II. (1) ಒಪಪಾತಿಕ ಜೀವಿಗಳು (ತಂದೆ–ತಾಯಿ ಇಲ್ಲದೆ ಹಾಗೆಯೇ ಜನ್ಮಿಸುವ ಜೀವಿಗಳು) ಇವೆ. (2) ಒಪಪಾತಿಕ ಜೀವಿಗಳು ಇಲ್ಲ (3) ಒಪಪಾತಿಕ ಜೀವಿಗಳು ಇವೆ ಮತ್ತು ಇಲ್ಲ (4) ಒಪಪಾತಿಕ ಜೀವಿಗಳು ಇಲ್ಲ, ಇಲ್ಲದೆಯೂ ಇಲ್ಲ.

III. (1) ಪುಣ್ಯ ಮತ್ತು ಪಾಪಕರ್ಮಗಳಿಗೆ ಫಲವಿದೆ (2) ಫಲವಿಲ್ಲ (3) ಫಲವಿದೆ ಮತ್ತು ಫಲವಿಲ್ಲ (4) ಫಲವಿಲ್ಲ, ಫಲವಿಲ್ಲದೆಯೂ ಇಲ್ಲ.

IV. (1) ತಥಾಗತರು ಸಾವಿನ ನಂತರ ಇರುತ್ತಾರೆ (2) ಇರುವುದಿಲ್ಲ (3) ಇರುತ್ತಾರೆ ಮತ್ತು ಇಲ್ಲ (4) ಇರುವುದಿಲ್ಲ, ಇಲ್ಲದೆಯೂ ಹೋಗುವುದಿಲ್ಲ.

ಇದೇ ಭಿಕ್ಷುಗಳೇ, ಅವರ ನಾಲ್ಕನೆಯ ವಾದ.

"ಹೀಗೆ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು... ಹಾವುಮೀನಿನಂತೆ ಜಾರಿಕೊಳ್ಳುತ್ತಾರೆ.... ನಾಲ್ಕು ರೀತಿಯಲ್ಲಿ... ಬೇರೆ ಯಾವುದೇ ರೀತಿಯಲ್ಲಿ ಹೇಳುವುದಿಲ್ಲ."

"ಭಿಕ್ಷು ತಥಾಗತರಿಗೆ ಈ ಎಲ್ಲಾ ಊಹಾಪೋಹಗಳ, ಮಿಥ್ಯಾದೃಷ್ಟಿಗಳು ಹೇಗೆ ಅಸ್ತಿತ್ವಕ್ಕೆ ಬಂದಿತು ತಿಳಿಯದೆ... ಮುಂದುವರಿಯುವಿಕೆ... ನಂಬುವವರ ಪರಿಣಾಮ... ಯಾವುದಕ್ಕೂ ಅಂಟುವುದಿಲ್ಲ... ರುಚಿ ಅಪಾಯ ತಿಳಿದಿರುತ್ತಾರೆ... ಮುಕ್ತರಾಗಿದ್ದಾರೆ."

"ಇವೇ ಭಿಕ್ಷುಗಳೇ, ಬೇರೆಯ ವಿಷಯಗಳು... ಈ ರೀತಿಯಾಗಿ ಹೇಳಿದರೆ ತಥಾಗತರನ್ನು ಸತ್ಯಕ್ಕೆ ಅನುಗುಣವಾಗಿ ಪ್ರಶಂಸಿಸಿದಂತೆ ಆಗುವುದು."

## ಎರಡುರೀತಿಯ ಅಧಿಚ್ಛ ಸಮುಪ್ಪನ್ನಿಕಾ ವಾದ (ಆಕಸ್ಮಿಕ ಉತ್ಪನ್ನ ವಾದಿಗಳು)

"ಭಿಕ್ಷುಗಳೇ, ಇಲ್ಲಿ ಕೆಲವು ಸಮಣ ಬ್ರಾಹ್ಮಣರು ಆಕಸ್ಮಿಕ ಉತ್ಪನ್ನವಾದಿಗಳಾಗಿರುತ್ತಾರೆ. ಅಂದರೆ ಇವರು ಎರಡು ರೀತಿಯಿಂದ ಆತ್ಮವು ಮತ್ತು ಲೋಕವು ಯಾವುದೇ ಕಾರಣವಿಲ್ಲದೆ, ಇದ್ದಕ್ಕಿದ್ದಂತೆ ಉದ್ಭವಿಸಿದವು ಎಂದು ವಾದಿಸುತ್ತಾರೆ. ಹಾಗೆ ಅವರು ಹೇಳಲು ಕಾರಣವೇನು, ಆಧಾರವೇನು?"

"ಇಲ್ಲಿ ಭಿಕ್ಷುಗಳೇ, ಅಸಞ್ಞ (ಗ್ರಹಿಕೆಯಿಲ್ಲದಿರುವ ಧ್ಯಾನಲೋಕ) ಜೀವಿಗಳಿರುತ್ತಾರೆ. ಅವರಲ್ಲಿ ಗ್ರಹಿಕೆ ಉಂಟಾದ ಕ್ಷಣದಲ್ಲೇ ಅವರು ಅಲ್ಲಿಂದ ಚ್ಯುತರಾಗಿ ಇಲ್ಲಿ ಜನ್ಮಿಸುತ್ತಾರೆ. ಇಲ್ಲಿ ಅವರು ಸಮಣ ಅಥವಾ ಬ್ರಾಹ್ಮಣರಾದಾಗ ಹಾಗು ಧ್ಯಾನದಲ್ಲಿ ತೊಡಗಿ ತಮ್ಮ ಹಿಂದಿನ ಜನ್ಮವನ್ನು ಸ್ಮರಿಸುತ್ತಾರೆ. ಆಗ ಅವರಿಗೆ ತಮ್ಮ ಹಿಂದಿನ ಅಸ್ತಿತ್ವವೇ ಕಾಣಲಾಗದು. ಆಗ ಅವರು ಈ ನಿರ್ಧಾರಕ್ಕೆ ಬರುತ್ತಾರೆ. ಏನೆಂದರೆ: 'ಇದ್ದಕ್ಕಿದ್ದಂತೆ ಆಕಸ್ಮಿಕವಾಗಿ ಆತ್ಮವೂ ಮತ್ತು ಲೋಕವು ಉದ್ಭವಿಸಿವೆ. ಏಕೆಂದರೆ ಹಿಂದೆ ನಾನಿರಲಿಲ್ಲ. ಆದರೆ ಈಗ ಇದ್ದೇನೆ. ಇಲ್ಲದಿದ್ದ ನಾನು ಈಗ ಜನ್ಮಿಸಿರುವೆ."

"ಇದೇ ಭಿಕ್ಷುಗಳೇ, ಆಕಸ್ಮಿಕ ಉತ್ಪನ್ನವಾದಿಗಳು ನೀಡುವ ಪ್ರಥಮ ಆಧಾರವಾಗಿದೆ. ಮತ್ತು ಎರಡನೆಯದು ಯಾವುದು?"

"ಭಿಕ್ಷುಗಳೇ, ಇಲ್ಲಿ ಕೆಲವು ಸಮಣ ಬ್ರಾಹ್ಮಣರು ತರ್ಕ ಮತ್ತು ವಿಚಾರತೆಯಲ್ಲಿ ಮುಳುಗುತ್ತಾರೆ. ಹೀಗೆ ತರ್ಕಿಸಿ ತಮ್ಮ ವಾದ ಹೀಗೆ ಮಂಡಿಸುತ್ತಾರೆ."

"ಇಲ್ಲಿ ಆತ್ಮವು ಮತ್ತು ಲೋಕವು ಯಾವುದೇ ಕಾರಣವಿಲ್ಲದೆ ಆಕಸ್ಮಿಕವಾಗಿ, ಇದ್ದಕ್ಕಿದ್ದಂತೆ ಉದ್ಭವಿಸಿತು."

"ಇದೇ ಭಿಕ್ಷುಗಳೇ, ಎರಡನೆಯ ಆಧಾರ. "ಭಿಕ್ಷುಗಳೇ, ತಥಾಗತರಿಗೆ ಈ ಊಹಾಪೋಹಗಳು ಮಿಥ್ಯದೃಷ್ಟಿಗಳು ಹೇಗೆ ಬಂದಿತು ತಿಳಿದಿದೆ.... ರುಚಿ... ಅಪಾಯ... ತಿಳಿದು ಮುಕ್ತರಾಗಿದ್ದಾರೆ."

"ಭಿಕ್ಷುಗಳೇ, ಯಾವ ಬೇರೆ ವಿಷಯಗಳು ಉದಾತ್ತವಾಗಿದೆಯೋ... ಇವುಗಳಿಗೆ ಸಂಬಂಧಿಸಿದಂತೆ ಪ್ರಶಂಸಿಸಿದರೆ ಅವರು ಸತ್ಯಕ್ಕೆ ಅನುಗುಣವಾಗಿ ಪ್ರಶಂಸಿಸಿದಂತಾಗುತ್ತದೆ."

"ಇವೇ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರ ಆದಿಯ ಬಗೆಗಿನ ವಾದ ಮಂಡನೆಗಳು. ಅವರು ಚರಮ ಆದಿಯ ಬಗ್ಗೆ ಈ ರೀತಿ 18 ವಾದ ಮಂಡನೆಗಳನ್ನು ಮಂಡಿಸಿರುವರು ಮತ್ತು ಯಾರೆಲ್ಲರೂ ಆದಿಯನ್ನು ವಿವರಿಸುವರೋ ಅವರೆಲ್ಲ ಹೀಗೆ 18ರಲ್ಲಿ ಒಂದಲ್ಲ ಒಂದನ್ನು ಹೇಳಿರುವರು, ಬೇರೇನಿಲ್ಲ."



"ಇವುಗಳಲ್ಲಿ ಭಿಕ್ಷುಗಳೇ, ತಥಾಗತರಿಗೆ ಈ ವಾದಗಳೆಲ್ಲವೂ ಹೇಗೆ ಅಸ್ತಿತ್ವಕ್ಕೆ ಬಂದಿತೋ ತಿಳಿದಿದೆ.... ಪರಿಣಾಮ ತಿಳಿದಿದೆ... ಅದರ ಆಚೆಗಿನದು ತಿಳಿದಿದೆ... ರುಚಿ... ಅಪಾಯ ತಿಳಿದಿದೆ... ಮುಕ್ತರಾಗಿದ್ದಾರೆ."

"ಭಿಕ್ಷು ಅನ್ಯ ವಿಷಯಗಳು ಗಹನವಾಗಿದೆ, ಉದಾತ್ತವಾಗಿದೆ... ಸತ್ಯಕ್ಕೆ ಅನುಗುಣವಾಗಿ ಪ್ರಶಂಸಿಸಿದಂತಾಗುತ್ತದೆ."

## ಅಪರನ್ತಕಪ್ಪಿಕಾ

"ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ಭವಿಷ್ಯದಲ್ಲಿ ಹೀಗಾಗುವುದು, ಹೀಗಿರುವುದು ಎಂದು ನಾನಾರೀತಿಯ ಊಹಾಪೋಹಗಳ ಸಿದ್ಧಾಂತಗಳನ್ನು 44 ರೀತಿಯಲ್ಲಿ ವಾದಿಸುವರು ಮತ್ತು ಯಾವುದರಿಂದ ಅವರು ಹಾಗೆ ವಾದಿಸುವರು?"

## 16 ಬಗೆಯ ಸಞ್ಞೀವಾದ :

ಇಲ್ಲಿ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ಸಾವಿನ ನಂತರ ಭವಿಷ್ಯದಲ್ಲಿ ಆತ್ಮ ಹೀಗಿರುವುದು ಎಂದು 16 ವಾದಗಳಲ್ಲಿ ಹೇಳುತ್ತಾರೆ. ಯಾವ ಆಧಾರದಿಂದ ಅವರು ಹಾಗೆ ಹೇಳುವರು? ಅವರು ಆತ್ಮದ ಬಗ್ಗೆ ಹೀಗೆ ಹೇಳುವರು: ಸಾವಿನ ನಂತರ ಆತ್ಮ ಶಿಥಿಲವಾಗುವುದಿಲ್ಲ ಮತ್ತು ಅರಿವನ್ನು ಹೊಂದಿರುತ್ತದೆ. (1) ಆಕಾರವಿದೆ (2) ಆಕಾರವಿಲ್ಲ (3) ಆಕಾರವಿದೆ ಹಾಗು ಇಲ್ಲ (4) ಆಕಾರವಿಲ್ಲ, ಇಲ್ಲದೆಯೂ ಇಲ್ಲ (5) ಅಂತವಿದೆ (6) ಅನಂತ (7) ಅಂತಅನಂತ ಎರಡೂ (8) ಎರಡೂ ಅಲ್ಲ (9) ಒಂದುಬಗೆಯ ಅರಿವನ್ನು ಹೊಂದಿರುತ್ತದೆ (10) ನಾನಾಬಗೆಯ ಅರಿವನ್ನು ಹೊಂದಿರುತ್ತದೆ (11) ಪರಿಮಿತ ಅರಿವನ್ನು ಹೊಂದಿರುತ್ತದೆ (12) ಅನಂತ ಅರಿವನ್ನು ಹೊಂದಿರುತ್ತದೆ (13) ಪೂರ್ಣವಾಗಿ ಸುಖಕರವಾಗಿರುತ್ತದೆ (14) ಪೂರ್ಣವಾಗಿ ದುಃಖಕರವಾಗಿರುತ್ತದೆ (15) ಸುಖ-ದುಃಖಗಳಿಂದ ಇರುತ್ತದೆ (16) ಸುಖದಿಂದಾಗಲಿ ಅಥವಾ ದುಃಖದಿಂದಾಗಲಿ ಇರುವುದಿಲ್ಲ.

"ಇವೇ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ಹೊಂದಿರುವ ಮರಣದ ನಂತರದ ಆತ್ಮದ ದೃಷ್ಟಿಯಾಗಿದೆ ಮತ್ತು ಅವರು ಈ 16 ರೀತಿಯಲ್ಲಿ ಪ್ರತಿಪಾದಿಸುತ್ತಾರೆ ಮತ್ತು ಯಾರೆಲ್ಲರೂ ಹಾಗೆ ಮಾಡುವರೋ ಅವರು ಈ 16ರಲ್ಲಿ ಒಂದನ್ನು ಆಯ್ಕೆ ಮಾಡುತ್ತಾರೆ."

"ಇವುಗಳು ಭಿಕ್ಷುಗಳೇ, ಇವೆಲ್ಲಾ ಮಿಥ್ಯಾದೃಷ್ಟಿಗಳು ಯಾವುದರಿಂದ ಹೇಗೆ ಅಸ್ಥಿತ್ವಕ್ಕೆ ಬಂದಿತು ಗೊತ್ತಿದೆ... ಇದಕ್ಕೆ ಮೀರಿದುದು ಸಹಾ ಗೊತ್ತಿದೆ.... ರುಚಿ... ಅಪಾಯ... ತಥಾಗತರು ಮುಕ್ತರಾಗಿದ್ದಾರೆ."

"ಇವು ಭಿಕ್ಷುಗಳೇ, ಆ ಬೇರೆಯ ವಿಷಯಗಳಾಗಿವೆ. ಉದಾತ್ತವಾದುದು, ಗಂಭೀರವಾದುದು, ಅರಿಯಲು ಕಷ್ಟಕರವಾದುದು, ಸಾಕ್ಷಾತ್ಕರಿಸಲು ಕಡುಕಷ್ಟಕರವಾದುದು, ಪ್ರಶಾಂತತೆಯನ್ನುಂಟುಮಾಡುವುದು, ಮಧುರವಾದುದು... ಇದರ ಬಗ್ಗೆ ಪ್ರಶಂಸಿಸಿದಾಗ ತಥಾಗತರಿಗೆ ಯೋಗ್ಯವಾಗಿ ಪ್ರಶಂಸಿಸಿದಂತೆ ಆಗುತ್ತದೆ.

## ಎಂಟುಬಗೆಯ ಅಸಞ್ಞೀ ವಾದ :

"ಕೆಲವು ಸಮಣ ಬ್ರಾಹ್ಮಣರಿದ್ದಾರೆ ಭಿಕ್ಷುಗಳೇ, ಅವರು ಅಸ್ಸಞ್ಞಿವಾದಿಗಳಾಗಿದ್ದಾರೆ. ಅಂದರೆ ಸಾವಿನ ನಂತರ ಗ್ರಹಿಕೆಯಿಲ್ಲದಿರುವ ಅಸ್ತಿತ್ವವಿದೆ ಎಂದು ಪ್ರತಿಪಾದಿಸುವವರಾಗಿದ್ದಾರೆ. ಅವರು ತಮ್ಮ ಈ ಸಿದ್ಧಾಂತವನ್ನು ಎಂಟುರೀತಿಯಲ್ಲಿ ಪ್ರಕಟಪಡಿಸುತ್ತಾರೆ ಮತ್ತು ಯಾವುವವು?"

ಅವರು ಹೇಳುವಂತೆ ಸಾವಿನ ನಂತರ ಆತ್ಮವು ಶಿಥಿಲವಾಗುವಿಕೆಗೆ, ಒಳಪಡುವುದಿಲ್ಲ ಮತ್ತು ಗ್ರಹಿಕೆಗೆ ಅತೀತವಾಗಿರುತ್ತದೆ. (1) ದೇಹವಿರುತ್ತದೆ (ರೂಪ) (2) ದೇಹವಿರುವುದಿಲ್ಲ (ಅರೂಪ) (3) ದೇಹವಿರುತ್ತದೆ ಮತ್ತು ಇರುವುದಿಲ್ಲ (ರೂಪ ಮತ್ತು ಅರೂಪ) (4) ದೇಹವಿಲ್ಲ, ದೇಹವಿಲ್ಲದೆಯೂ ಇಲ್ಲ (5) ಅಂತವಿರುತ್ತದೆ (6) ಅನಂತವಾಗಿರುತ್ತದೆ (7) ಅಂತ ಮತ್ತು ಅನಂತ ಎರಡೂ ಸಹಾ (8) ಅಂತವಲ್ಲ ಹಾಗೆಯೇ ಅನಂತವೂ ಅಲ್ಲ."

"ಇಲ್ಲಿ ಭಿಕ್ಷುಗಳೇ, ಯಾವ ಸಮಣ ಬ್ರಾಹ್ಮಣರು ಅಸಞ್ಞಿವಾದಿಗಳಾಗಿರುವ್ರೋ ಅವರು 8 ವಿಧದಿಂದ ಸಾವಿನನಂತರ ಆತ್ಮವು ಅಸಞ್ಞಾದಿಂದ ಕೂಡಿರುತ್ತದೆ ಎಂದು ವಾದಿಸುತ್ತಾರೆ ಮತ್ತು ಯಾರೆಲ್ಲರೂ ಹಾಗೆ ವಾದಿಸುವರೋ ಅವರು ಈ ಎಂಟರಲ್ಲಿ ಒಂದನ್ನು ಒತ್ತುಕೊಟ್ಟು ವಾದಿಸುವರು, ಹೊರತು ಬೇರಲ್ಲ."

"ಭಿಕ್ಷುಗಳೇ, ಈ ಎಲ್ಲಾ ಮಿಥ್ಯಾದೃಷ್ಟಿಗಳು ಹೇಗೆ ಅಸ್ತಿತ್ವಕ್ಕೆ ಬಂದಿತೋ ತಥಾಗತರಿಗೆ ತಿಳಿದಿದೆ.... ತಥಾಗತರು ಮುಕ್ತರಾಗಿದ್ದಾರೆ."

"ಇವು ಭಿಕ್ಷುಗಳೇ, ಆ ಬೇರೆಯ ಉದಾತ್ತ ಗಂಭೀರ ವಿಷಯಗಳಾಗಿವೆ... ತಥಾಗತರು ಪ್ರಶಂಸಿಸಿದಂತೆ ಆಗುತ್ತದೆ."

## ಎಂಟು ಬಗೆಯ ನೇವಸಞ್ಞೀನಾಸಞ್ಞೀ ವಾದ

"ಇದು ಸಹಾ ಮೇಲಿನಂತೆಯೇ. ಆದರೆ ಅಸಞ್ಞಿ ಬದಲು ನೇವಸಞ್ಞಿನಸಞ್ಞಿ ಬಳಸುತ್ತಾರೆ ಅಷ್ಟೇ. ಅಂದರೆ ಇಲ್ಲಿ ಸಾವಿನ ನಂತರ ಆತ್ಮವು 'ಗ್ರಹಿಕೆಯಿಲ್ಲ, ಗ್ರಹಿಕೆ ಇಲ್ಲದೆಯೂ ಇಲ್ಲ' ಎಂಬ ಸ್ಥಿತಿಯಲ್ಲಿದ್ದು ಮೇಲಿನಂತೆ 8 ರೀತಿಯಲ್ಲಿ ಪ್ರಕಟಪಡಿಸುತ್ತಾರೆ."

"ಇವು ಭಿಕ್ಷುಗಳೇ, ಆ ಬೇರೆಯ ಉದಾತ್ತ ಗಂಭೀರ ವಿಷಯಗಳಾಗಿವೆ... ತಥಾಗತರು ಪ್ರಶಂಸಿಸಿದಂತೆ ಆಗುತ್ತದೆ."

## ಏಳು ಬಗೆಯ ಉಚ್ಚೇದವಾದ (ವಿನಾಶವಾದಿಗಳು)

"ಕೆಲವು ಸಮಣ ಬ್ರಾಹ್ಮಣರಿದ್ದಾರೆ, ಭಿಕ್ಷುಗಳೇ, ಅವರು ಉಚ್ಚೇದ (ವಿನಾಶ)ವಾದಿಗಳಾಗಿದ್ದಾರೆ. ಅವರು ಜೀವಿಯ ವಿನಾಶವನ್ನು ಏಳು ರೀತಿಯಲ್ಲಿ ಪ್ರಕಟಪಡಿಸುತ್ತಾರೆ. ಯಾವುದರಿಂದಾಗಿ ಅವರು ಆ ರೀತಿ ಮಾಡುತ್ತಾರೆ?"



"ಇಲ್ಲಿ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ಈ ರೀತಿಯ ಅಭಿಪ್ರಾಯವನ್ನು ಹೊಂದಿರುತ್ತಾರೆ: 'ಇಲ್ಲಿ ಭಂತೆ, ಈ ಆತ್ಮಕ್ಕೆ ರೂಪವಿದೆ (ದೇಹವಿದೆ) ಈ ದೇಹವು ನಾಲ್ಕು ಮಹಾಭೂತಗಳಿಂದ ನಿರ್ಮಿತವಾಗಿದೆ ಮತ್ತು ಇದು ತಂದೆ–ತಾಯಿಗಳಿಂದ ಹುಟ್ಟಿದೆ. ಆದರೆ ಇದು ಸಾವಿನ ನಂತರ ಶರೀರದೊಂದಿಗೆ ಆತ್ಮವು ಸಹಾ ನಾಶವಾಗಿ ಹೋಗುತ್ತದೆ.' ಹೀಗೆ ಕೆಲವು ಸಮಣ ಬ್ರಾಹ್ಮಣರು ಜೀವಿಯ ವಿನಾಶವಾದವನ್ನು ಮಂಡನೆ ಮಾಡುತ್ತಾರೆ."

"ಆಗ ಬೇರೆಯವರು ಹೀಗೂ ಹೇಳುತ್ತಾರೆ: 'ಭಂತೆ, ನೀವು ಈ ರೀತಿಯ ಆತ್ಮವನ್ನು ವರ್ಣಿಸಿದಿರಿ, ನಾನು ನಿರಾಕರಿಸಲಾರೆ. ಆದರೆ ಇಡಿಯ ಆತ್ಮವು ಪೂರ್ಣವಾಗಿ ನಾಶ ಹೊಂದಲಾರದು, ಅದರ ಜೊತೆಗೆ ಇನ್ನೊಂದು ಆತ್ಮವಿದೆ. ಅದು ದಿವ್ಯವಾದುದು, ರೂಪವನ್ನು ಹೊಂದಿದೆ ಮತ್ತು ಅದು ಇಂದ್ರೀಯಗ್ರಾಹ್ಯ ಉಳ್ಳದ್ದಾಗಿದೆ. ಘನ ಆಹಾರದಿಂದ ಸೇವಿತವಾಗಿದೆ. ಅದನ್ನು ನೀವು ಅರಿತಿಲ್ಲ, ನಿಮಗೆ ಗೊತ್ತೂ ಇಲ್ಲ, ಆದರೆ ನನಗೆ ಗೊತ್ತಿದೆ ಮತ್ತು ನಾನು ಅನುಭವವನ್ನು ಪಡೆದಿದ್ದೇನೆ. ಸಾವಿನ ನಂತರ ದೇಹದ ಜೊತೆಗೆ ಈ ಆತ್ಮವು ಸಹಾ ವಿನಾಶವಾಗುತ್ತದೆ. ನಂತರ ಉಳಿಯಲಾರದು. ಹೀಗೆ ಪೂಜ್ಯರೇ, ಆತ್ಮವು ಪೂರ್ಣವಾಗಿ ವಿನಾಶವಾದುದು.' ಹೀಗೆ ಕೆಲವರು ವಿನಾಶವಾದವನ್ನು ಮಂಡಿಸುವರು."

"ಆಗ ಆತನಿಗೆ ಪರರು ಹೀಗೆ ಹೇಳುವರು: 'ಪೂಜ್ಯರೇ, ನೀವು ಹೇಳಿದಂತಹ ಆತ್ಮವನ್ನು ನಾನು ನಿರಾಕರಿಸಲಾರೆ. ಆದರೆ ಇಡೀ ಆತ್ಮವು ಪೂರ್ಣವಾಗಿ ವಿನಾಶವಾಗಲಾರದು. ಜೊತೆಗೆ ಒಂದು ಆತ್ಮವಿರುತ್ತದೆ. ಅದು ದಿವ್ಯವಾದುದು, ದೇಹವನ್ನು ಹೊಂದಿರುವುದು, ಮನೋಮಯವಾಗಿರುವುದು (ಮನಸ್ಸಿನಿಂದ ನಿರ್ಮಿತ), ಅದರ ಎಲ್ಲಾ ಪ್ರಮುಖ ಮತ್ತು ಚಿಕ್ಕ ಅಂಗಗಳು ಪೂರ್ಣವಾಗಿರುತ್ತದೆ. ಯಾವುದೇ ಅಂಗದ ಕೊರತೆಯಿರುವುದಿಲ್ಲ. ಇದು ನಿಮಗೆ ಗೊತ್ತಿಲ್ಲ. ಹಾಗು ಇದನ್ನು ಗ್ರಹಿಸಿಯೂ ಇಲ್ಲ. ಆದರೆ ನನಗೆ ಗೊತ್ತಿದೆ ಮತ್ತು ನಾನು ಇದನ್ನು ಅನುಭವಿಸಿದ್ದೇನೆ ಮತ್ತು ಇದು ಸಾವಿನ ನಂತರ ದೇಹ ನಾಶವಾಗುತ್ತದೆ. ಹೀಗೆ ಆತ್ಮವು ವಿನಾಶವಾಗುತ್ತದೆ."

"ಆತನಿಗೆ ಬೇರೊಬ್ಬ ಹೀಗೆ ಹೇಳುತ್ತಾನೆ: 'ಪೂಜ್ಯರೇ, ನೀವು ಹೇಳಿದಂತಹ ಆತ್ಮವಿದೆ. ನಾನು ನಿರಾಕರಿಸಲಾರೆ. ಆದರೆ ಇಡೀ ಆತ್ಮ ಆಗಲೇ ಪೂರ್ಣವಾಗಿ ನಾಶವಾಗಲಾರದು. ಅಲ್ಲಿ ಆತ್ಮವಿರುವುದು ಅದು. ದೇಹದ ಎಲ್ಲಾ ಗ್ರಹಿಕೆಗಳಿಂದ ಆಚೆಗಿನದು. ಅದು ಇಂದ್ರೀಯ ಗ್ರಹಿಕೆಗಳನ್ನು ದೇಹದ ಸಂಜ್ಞೆಗಳನ್ನು ಮೀರಿ 'ಆಕಾಶ ಅನಂತ' ಎಂಬ ಆಧಾರ (ಆಯಾತನ)ದಲ್ಲಿ ನೆಲೆಸುತ್ತದೆ. ಇದು ನಿಮಗೆ ಗೊತ್ತಿಲ್ಲ. ಹಾಗೆಯೇ ಗ್ರಹಿಸಿಯೂ ಇಲ್ಲ. ಆದರೆ ನನಗೆ ಗೊತ್ತಿದೆ ಮತ್ತು ಅನುಭವಿಸಿಯೂ ಇದ್ದೇನೆ ಮತ್ತು ಇದು ಸಹಾ ಮರಣದ ನಂತರ ದೇಹದ ಜೊತೆಗೆ ಆತ್ಮವೂ ಸಹಾ ನಾಶವಾಗುವುದು.' ಇದನ್ನು ಕೆಲವರು ಹೀಗೆ ಪ್ರತಿಪಾದಿಸುವರು."

"ಆತನಿಗೆ ಬೇರೊಬ್ಬ ಹೀಗೆ ಹೇಳುತ್ತಾನೆ: 'ಪೂಜ್ಯರೇ, ನೀವು ಹೇಳುವಂತಹ ಆತ್ಮವಿದೆ. ನಾನು ನಿರಾಕರಿಸುವುದಿಲ್ಲ. ಆದರೆ ಇಡೀ ಆತ್ಮವು ಪೂರ್ಣವಾಗಿ ವಿನಾಶವಾಗಲಾರದು. ಅಲ್ಲಿ ಆತ್ಮವಿರುತ್ತದೆ. ಅದು ಆಕಾಶ ಅನಂತ ಆಯಾತನವನ್ನು ದಾಟಿ ವಿಜ್ಞಾನ ಅನಂತ ಆಯತನದಲ್ಲಿ ನೆಲೆಸುತ್ತದೆ. ಇದು ನೀವು ಗ್ರಹಿಸಿಲ್ಲ ಮತ್ತು ನಿಮಗೆ ಗೊತ್ತೂ ಇಲ್ಲ. ಆದರೆ ನನಗೆ ಗೊತ್ತಿದೆ ಮತ್ತು ನಾನು ಅನುಭವಿಸಿದ್ದೇನೆ ಮತ್ತು ಯಾವಾಗ ಮರಣ ಸಂಭವಿಸುತ್ತದೆಯೋ ಆಗ ಆತ್ಮವು ಮರಣವನ್ನಪ್ಪುತ್ತದೆ.' ಈ ರೀತಿಯಾಗಿ ಕೆಲವರು ಉಚ್ಛೇದವಾದವನ್ನು ಪ್ರತಿಪಾದಿಸುತ್ತಾರೆ."

"ಆತನಿಗೆ ಬೇರೊಬ್ಬ ಹೀಗೆ ಹೇಳುತ್ತಾನೆ: 'ಪೂಜ್ಯರೆ, ನೀವು ಹೇಳುವ ಆತ್ಮವನ್ನು ನಾನು ನಿರಾಕರಿಸಲಾರೆ, ಆದರೆ ಇಡೀ ಆತ್ಮವು ವಿನಾಶವಾಗಲಾರದು, ಅಲ್ಲಿ ಆತ್ಮವಿರುತ್ತದೆ. ಅದು ಈ ಹಿಂದಿನ ಆಯಾತನಗಳನ್ನು ದಾಟಿ ಅಕಿಂಚಯಾತನದಲ್ಲಿ ನೆಲೆಸುತ್ತದೆ. ಇದು ನೀವು ಗ್ರಹಿಸಿಲ್ಲ ಮತ್ತು ನಿಮಗೆ ಗೊತ್ತೂ ಇಲ್ಲ. ಆದರೆ ನನಗೆ ಗೊತ್ತಿದೆ ಮತ್ತು ನಾನು ಅನುಭವಿಸಿದ್ದೆನೆ ಮತ್ತು ಯಾವಾಗ ಮರಣ ಸಂಭವಿಸುತ್ತದೆಯೋ ಆಗ ಆತ್ಮವು ಮರಣವಪ್ಪುತ್ತದೆ."

"ಆಗ ಮತ್ತೊಬ್ಬ ಹೀಗೆ ಹೇಳುತ್ತಾನೆ : 'ಪೂಜ್ಯರೇ, ನೀವು ಹೇಳುವ ಆತ್ಮವನ್ನು ನಾನು ನಿರಾಕರಿಸುವುದಿಲ್ಲ. ಆದರೆ ಇಡೀ ಆತ್ಮವು ಪೂರ್ಣವಾಗಿ ವಿನಾಶವಾಗಲಾರದು. ಅಲ್ಲಿ ಆತ್ಮವಿರುತ್ತದೆ. ಅದು ಹಿಂದಿನ ಪರಿಧಿಗಳನ್ನೆಲ್ಲಾ ದಾಟಿ ನೇವಸಞ್ಞನಸಞ್ಞಾ ಆಯಾತನದಲ್ಲಿ (ಗ್ರಹಿಕೆಯಿಲ್ಲ, ಗ್ರಹಿಕೆಯಿಲ್ಲದೆಯೂ ಇಲ್ಲ) ನೆಲೆಸುತ್ತದೆ. ಇದು ನಿಮಗೆ ಗೊತ್ತಿಲ್ಲ ಮತ್ತು ಗ್ರಹಿಸಿಯೂ ಇಲ್ಲ. ಆದರೆ ನನಗೆ ಗೊತ್ತಿದೆ ಮತ್ತು ನಾನು ಅನುಭವಿಸಿಯೂ ಇದ್ದೇನೆ. ಮತ್ತು ಯಾವಾಗ ಆತ್ಮವು ಶರೀರದಿಂದ ಬೇರೆಯಾಗುತ್ತದೋ, ಶರೀರವು ನಾಶವಾಗುವುದೋ, ಆಗ ಆತ್ಮವು ಸಹಾ ನಾಶವಾಗುವುದು.

ಈ ರೀತಿಯಾಗಿ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ಯಾರು ಉಚ್ಛೇದವಾದಿಗಳಾಗಿರುವರೋ ಅವರು ಏಳು ವಿಧದಲ್ಲಿ ವಿನಾಶವಾದವನ್ನು ಮಂಡಿಸುತ್ತಾರೆ ಮತ್ತು ಯಾರೆಲ್ಲರೂ ಹೀಗೆ ಹೇಳುವರು. ಅವರು ಈ ಏಳು ವಿಧದಲ್ಲಿ ಒಂದನ್ನು ಹೇಳುತ್ತಾರೆ, ಹೊರತು ಬೇರಲ್ಲ."

"ಇವು ಭಿಕ್ಷುಗಳೇ, ಆ ಬೇರೆಯ ಉದಾತ್ತ ಗಂಭೀರ ವಿಷಯಗಳಾಗಿವೆ... ತಥಾಗತರು ಪ್ರಶಂಸಿಸಿದಂತೆ ಆಗುತ್ತದೆ."

## ಐದು ಬಗೆಯ ದಿಟ್ಠಧಮ್ಮ ನಿಬ್ಬಾನವಾದ

"ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರಿದ್ದಾರೆ. ಅವರು ಈ ಜೀವಿತದಲ್ಲೇ ಸುಖದ ಸಿದ್ಧಾಂತ ಮಂಡಿಸುತ್ತಾರೆ. ಅವರು ಐದು ವಿಧದಲ್ಲಿ ಈ ಲೋಕದಲ್ಲೇ ಪೂರ್ಣ ವಿಮೋಚನೆಯನ್ನು ಹೇಳುತ್ತಾರೆ. ಮತ್ತು ಯಾವುದನ್ನು ಅವಲಂಬಿಸಿ, ಯಾವುದರಿಂದ ಅವರು ಹೀಗೆ ಹೇಳುತ್ತಾರೆ?"



"ಇಲ್ಲಿ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ಈ ರೀತಿಯ ದೃಷ್ಟಿಯನ್ನು ಹೊಂದಿರುತ್ತಾರೆ: ಯಾರೆಲ್ಲರೂ ಆತ್ಮವನ್ನು ಹೊಂದಿದ್ದಾರೋ, ಐದು ಇಂದ್ರೀಯಗಳಿಂದ ಆನಂದ ಅನುಭವಿಸುತ್ತಿದ್ದಾರೋ ಅವರು ಈ ಜಗತ್ತಿನಲ್ಲಿಯೇ ಶ್ರೇಷ್ಠವಾದ ನಿಬ್ಬಾಣ ಪಡೆದಿದ್ದಾರೆ (ಅಂದರೆ ಅವರ ಲೆಕ್ಕದಲ್ಲಿ ಇಂದ್ರೀಯ ಸುಖವೇ ನಿಬ್ಬಾಣವಾಗಿದೆ). ಹೀಗೆ ಕೆಲವರು ಈ ಲೋಕದ ಸುಖದ ಬಗ್ಗೆ ಹೇಳುತ್ತಾರೆ."

"ಆಗ ಆತನಿಗೆ ಬೇರೊಬ್ಬ ಹೀಗೆ ಹೇಳುತ್ತಾನೆ: 'ಪೂಜ್ಯರೇ, ನೀವು ಹೇಳುವಂತಹ ಆತ್ಮ ನಾನು ನಿರಾಕರಿಸಲಾರೆ. ಆದರೆ ಆತ್ಮವೊಂದೇ ಶ್ರೇಷ್ಠ ನಿಬ್ಬಾಣವನ್ನು ಪಡೆಯಲಾರದು? ಮತ್ತು ಏಕಿಲ್ಲ? ಏಕೆಂದರೆ ಪೂಜ್ಯರೆ, ಇಂದ್ರೀಯಾನಂದವು ಕ್ಷಣಿಕವಾಗಿದೆ, ದುಃಖದಿಂದ ಕೂಡಿದೆ, ಕ್ಷಣಿಕದಿಂದಲೇ ಶೋಕ, ಪ್ರಲಾಪ, ನೋವು, ದೋಮನಸ್ಸುಗಳು ಉದಯಿಸುತ್ತವೆ. ಆದರೆ ಯಾರೇ ಆಗಲಿ ಇಂದ್ರೀಯ ಸುಖಗಳನ್ನು ದೂರೀಕರಿಸುವನೋ ಹಾಗು ಅಕುಶಲ ವಿತರ್ಕಗಳನ್ನು ದೂರ ಮಾಡಿರುವನೋ ಆತನು ಮಾತ್ರ ಪ್ರಥಮ ಧ್ಯಾನವನ್ನು ಪ್ರಾಪ್ತಿಮಾಡುತ್ತಾನೆ. ಆ ಸಮಾಧಿಯು ವಿತರ್ಕ ವಿಚಾರ ಪೀತಿ, ಸುಖ ಏಕಾಗ್ರತೆಯಿಂದ ಕೂಡಿರುತ್ತದೆ. ಹೀಗೆ ಪೂಜ್ಯರೇ, ಈ ಲೋಕದಲ್ಲೇ ಶ್ರೇಷ್ಠವಾದ ಈ ನಿಬ್ಬಾಣವನ್ನು ಪಡೆಯುತ್ತಾರೆ (ಇಲ್ಲಿ ಪ್ರಥಮ ಸಮಾಧಿಯನ್ನೇ ನಿಬ್ಬಾಣವೆಂದು ಇವರು ಭಾವಿಸುವರು). ಹೀಗೆ ಅವರು ತಮ್ಮ ವಾದವನ್ನು ನುಡಿಯುತ್ತಾರೆ."

"ಆಗ ಆತನಿಗೆ ಬೇರೊಬ್ಬರು ಹೀಗೆ ಹೇಳುತ್ತಾರೆ: 'ಪೂಜ್ಯರೇ, ನೀವು ಹೇಳಿದಂತಹ ಆತ್ಮವನ್ನು ನಾನು ನಿರಾಕರಿಸಲಾರೆ. ಆದರೆ ಆತ್ಮವೊಂದೇ ಶ್ರೇಷ್ಠ ನಿಬ್ಬಾಣ ಪಡೆಯಲಾರದು ಮತ್ತು ಏಕಿಲ್ಲ? ಏಕೆಂದರೆ, ವಿಚಾರ ಮತ್ತು ವಿತರ್ಕಗಳು ಸ್ಥೂಲವಾಗಿದೆ. ಆದರೆ ಆತ್ಮವು ವಿಚಾರ ಮತ್ತು ವಿತರ್ಕವನ್ನು ಮೀರಿ ದ್ವಿತೀಯ ಧ್ಯಾನಕ್ಕೆ ಪ್ರವೇಶಿಸಿದಾಗ, ಪ್ರೀತಿ, ಸುಖ ಮತ್ತು ಏಕಾಗ್ರತೆಯಿಂದ ಕೂಡಿರುವ ಸಮಾಧಿ ಪಡೆಯುತ್ತಾನೆ. ಇದೇ ಪೂಜ್ಯರೇ, ಈ ದೃಷ್ಟಿಸಲ್ಪಡುವ ಲೋಕದಲ್ಲಿ ಆತ್ಮ ಪಡೆಯುವ ಪರಮ ನಿಬ್ಬಾಣವಾಗಿದೆ.' (ಇಲ್ಲಿ ಇವರು ದ್ವಿತೀಯ ಸಮಾಧಿಗೆ ನಿಬ್ಬಾಣವೆಂದು ಭಾವಿಸುತ್ತಾರೆ) ಹೀಗೆ ಕೆಲವರು ಈ ಲೋಕದಲ್ಲೇ ವ್ಯಕ್ತವಾಗುವ ಈ ಸುಖವನ್ನು ಹೀಗೆ ಹೇಳುತ್ತಾರೆ."

"ಆಗ ಆತನಿಗೆ ಬೇರೊಬ್ಬ ಹೀಗೆ ಹೇಳುತ್ತಾನೆ: 'ಪೂಜ್ಯರೇ, ನೀವು ಹೇಳುವಂತಹ ಆತ್ಮವಿದೆ. ನಾನು ನಿರಾಕರಿಸುವುದಿಲ್ಲ. ಆದರೆ ಕೇವಲ ಆತ್ಮವೇ ಉನ್ನತವಾದ ನಿಬ್ಬಾಣವನ್ನು ಪ್ರಾಪ್ತಿಮಾಡಲಾರದು ಮತ್ತು ಏಕಿಲ್ಲ? ಏಕೆಂದರೆ ಪೀತಿ (ಆನಂದ)ಯು ಸ್ಥೂಲವಾಗಿದೆ. ಆದರೆ ಯಾವ ಆತ್ಮವು ಪೀತಿಗೆ ಅತೀತವು ಅಂತಹ ಆತ್ಮವು ಸಮಚಿತ್ತತೆಯಿಂದ ಜಾಗರೂಕತೆಯಿಂದ ಸುಖ ಅನುಭೂತಿಯಿಂದ ಕೂಡಿರುತ್ತದೆ. ಅದನ್ನು ಧ್ಯಾನಿಗಳು ಹೀಗೆ ಹೇಳುತ್ತಾರೆ: 'ಪ್ರಶಾಂತತೆ ಮತ್ತು ಸುಖದಿಂದ' ಕೂಡಿರುವ ಸುಖದ ಪೀತಿಯ ಧ್ಯಾನವನ್ನು ಪ್ರಾಪ್ತಿಮಾಡುತ್ತಾನೆ, ಇದೇ ನಿಬ್ಬಾಣವಾಗಿದೆ. (ಅವರು ತೃತೀಯ ಧ್ಯಾನವನ್ನು

ನಿಬ್ಬಾಣವೆಂದು ಭಾವಿಸುತ್ತಾರೆ). ಹೀಗೆ ಕೆಲವರು ಇಂತಹ ಪೂರ್ಣ ಸುಖವನ್ನೇ ಗೋಚರಿಸುವಂತಹ ನಿಬ್ಬಾಣ ಎನ್ನುತ್ತಾರೆ."

"ಆಗ ಆತನಿಗೆ ಬೇರೊಬ್ಬ ಹೀಗೆ ಹೇಳುತ್ತಾನೆ: 'ಪೂಜ್ಯರೇ, ನೀವು ಹೇಳುವಂತಹ ಆತ್ಮವಿದೆ, ನಾನು ನಿರಾಕರಿಸುವುದಿಲ್ಲ. ಆದರೆ ಆತ್ಮವೊಂದೇ ಉನ್ನತವಾದ ನಿಬ್ಬಾಣವನ್ನು ಪ್ರಾಪ್ತಿಮಾಡಲಾರದು, ಏಕಿಲ್ಲ? ಏಕೆಂದರೆ ಅದರಲ್ಲಿರುವ ಸುಖವು ಸ್ಥೂಲವಾಗಿದೆ. ಹೀಗೆ ಪೂಜ್ಯರೇ, ಆತ್ಮವೂ ಸುಖವನ್ನು ಮತ್ತು ನೋವುಗಳನ್ನು ಮೀರಿ ಪರಿಶುದ್ಧವಾದ ನಾಲ್ಕನೆಯ ಧ್ಯಾನವಾದ ಸಮಚಿತ್ತತೆ ಮತ್ತು ಏಕಾಗ್ರತೆಯಿಂದಾದ ಆ ದಿವ್ಯ ಸ್ಥಿತಿಯನ್ನು ಪ್ರಾಪ್ತಿಮಾಡುತ್ತಾನೆ. ಇವೇ ಗೋಚರಿಸುವಂತಹ ಉನ್ನತ ನಿಬ್ಬಾಣವಾಗಿದೆ. (ಇಲ್ಲಿ ಅವರು ನಾಲ್ಕನೆಯ ಧ್ಯಾನಕ್ಕೆ ನಿಬ್ಬಾಣವೆಂದು ಭಾವಿಸುತ್ತಾರೆ). ಹೀಗೆ ಕೆಲವರು ಗೋಚರಿಸುವಂತಹ ನಿಬ್ಬಾಣವೆಂದು ಪ್ರತಿಪಾದಿಸುತ್ತಾರೆ."

"ಇವೇ ಭಿಕ್ಷುಗಳೇ, ಕೆಲವು ಸಮಣ ಬ್ರಾಹ್ಮಣರು ಐದು ರೀತಿಯಲ್ಲಿ ದಿಟ್ಠಧಮ್ಮ ನಿಬ್ಬಾಣವಾದವನ್ನು ಮಂಡಿಸುತ್ತಾರೆ. ಹೀಗೆ ಅವರು ಐದರಲ್ಲಿ ಒಂದು ಎತ್ತಿಹಿಡಿದು ವಾದಿಸುತ್ತಾರೆ.

"ಇವು ಭಿಕ್ಷುಗಳೇ, ಆ ಬೇರೆಯ ಉದಾತ್ತ ಗಂಭೀರ ವಿಷಯಗಳಾಗಿವೆ... ತಥಾಗತರನ್ನು ಪ್ರಶಂಸಿಸುತ್ತಾರೆ."

"ಇವೇ ಭಿಕ್ಷುಗಳೇ, ಯಾವ ಸಮಣ ಬ್ರಾಹ್ಮಣರು ಭವಿಷ್ಯವನ್ನು ಊಹಾಪೋಹಗಳಿಂದ, ಮಿಥ್ಯಾದೃಷ್ಟಿಗಳಿಂದ 44 ಆಧಾರಗಳಿಂದ ಇವುಗಳಲ್ಲಿ ಒಂದನ್ನು ಪ್ರತಿಪಾದಿಸುತ್ತಾರೆ ಹೊರತು ಬೇರಲ್ಲ."

"ಇವು ಭಿಕ್ಷುಗಳೇ, ಆ ಬೇರೆಯ ಉದಾತ್ತ ಗಂಭೀರ ವಿಷಯಗಳಾಗಿವೆ... ಹೀಗೆ ತಥಾಗತರನ್ನು ಯೋಗ್ಯವಾಗಿ ಪ್ರಶಂಸಿಸಿದಂತಾಗುತ್ತದೆ."

"ಇವೇ ಭಿಕ್ಷುಗಳೇ, ಸಮಣ ಬ್ರಾಹ್ಮಣರು, ಭೂತಕಾಲದಿಂದ ಅಥವಾ ಭವಿಷ್ಯ ಕಾಲದಲ್ಲಿ ಹೀಗಿರುತ್ತದೆ ಎಂದು ತಮ್ಮ ತರ್ಕ, ಊಹೆ ಮತ್ತು ಸೀಮಿತ ಅನುಭವದಿಂದ 62 ರೀತಿಯಲ್ಲಿ ಒಂದನ್ನು ನೀಡಿ, ವಾದಿಸುತ್ತಾರೆ ಹೊರತು ಬೇರಲ್ಲ."

........................

........................

1. **"ಭಿಕ್ಷುಗಳೇ, ಇಲ್ಲಿ ಯಾವ ಸಮಣ ಬ್ರಾಹ್ಮಣರು ಶಾಶ್ವತವಾದಿಗಳು ಆಗಿದ್ದಾರೋ ಅವರು ನಾಲ್ಕುರೀತಿಯಲ್ಲಿ ಲೋಕವು ಮತ್ತು ಆತ್ಮವು ಶಾಶ್ವತ ಎಂದು ವಾದಿಸುತ್ತಾರೆ."**
2. **"ಭಿಕ್ಷುಗಳೇ, ಇಲ್ಲಿ ಯಾವ ಸಮಣ ಬ್ರಾಹ್ಮಣರು ಪಾರ್ಶ್ವ ಶಾಶ್ವತವಾದಿಗಳು ಆಗಿದ್ದಾರೋ, ಅವರು ನಾಲ್ಕುರೀತಿಯಲ್ಲಿ ಲೋಕವೂ ಮತ್ತು ಆತ್ಮವೂ ಭಾಗಶಃ ಶಾಶ್ವತ ಮತ್ತು ಅಶಾಶ್ವತ ಎಂದು ವಾದಿಸುತ್ತಾರೆ."**



3. **"ಯಾರು ಅಂತಅನಂತವಾದಿಗಳು ಆಗಿದ್ದಾರೋ ಅವರು ನಾಲ್ಕುರೀತಿಯಲ್ಲಿ ಲೋಕವು ಅನಂತ ಅಥವಾ ಅಂತವೆಂದು ವಾದಿಸುತ್ತಾರೆ."**
4. **"ಯಾರು ಹಾವುಮೀನಿನಂತೆ ಜಾರಿಕೊಳ್ಳುವವರೋ ಅವರು ನಾಲ್ಕುರೀತಿಯಲ್ಲಿ ಸಂಭಾಷಿಸಿ ಜಾರಿಕೊಳ್ಳುತ್ತಾರೆ."**
5. **"ಯಾರು ಆಕಸ್ಮಿಕ ಉತ್ಪನ್ನವಾದಿಗಳಾಗಿರುವರೋ ಅವರು ಎರಡು ರೀತಿಯಲ್ಲಿ ಲೋಕವು ಮತ್ತು ಆತ್ಮವು ಕಾರಣವಿಲ್ಲದೆ ಇದ್ದಕ್ಕಿದ್ದಂತೆ ಉತ್ಪನ್ನವಾಯಿತು ಎಂದು ವಾದಿಸುತ್ತಾರೆ."**

   **"ಇವೇ ಭಿಕ್ಷುಗಳೇ, 18 ರೀತಿಯಲ್ಲಿ ಭೂತಕಾಲದ ರಚನೆ ಮಾಡುವರು."**
6. **"ಯಾರು ಸಞ್ಞೀವಾದಿಗಳೋ ಅವರು 16 ವಿಧಗಳಿಂದ ಆತ್ಮಕ್ಕೆ ಸಾವಿನ ನಂತರ (ಅರಿವು) ಗ್ರಹಿಕೆಯಿರುತ್ತದೆ ಎಂದು ವಾದಿಸುತ್ತಾರೆ."**
7. **ಯಾರು ಅಸಞ್ಞೀವಾದಿಗಳೋ ಅವರು 8 ವಿಧಗಳಿಂದ ಆತ್ಮಕ್ಕೆ ಸಾವಿನ ನಂತರ ಅರಿವಿರುವುದಿಲ್ಲ (ಗ್ರಹಿಕೆಯಿರುವುದಿಲ್ಲ) ಎಂದು ವಾದಿಸುತ್ತಾರೆ.**
8. **ಯಾರು ನೇವಸನ್ಯಾನಸನ್ಯಾದಾದಿಗಳೋ ಅವರು 8 ವಿಧಗಳಿಂದ ಆತ್ಮಕ್ಕೆ ಸಾವಿನ ನಂತರ ಗ್ರಹಿಕೆಯಿರುವುದಿಲ್ಲ, ಹಾಗೆಯೇ ಇಲ್ಲದೆಯೂ ಇರುವುದಿಲ್ಲ ಎಂದು ವಾದಿಸುತ್ತಾರೆ.**
9. **ಯಾರು ಉಚ್ಛೇದ (ವಿನಾಶ) ವಾದಿಗಳೋ ಅವರು 7 ವಿಧಗಳಿಂದ ಆತ್ಮವು ಸಾವಿನ ನಂತರ ಇನ್ನಿಲ್ಲವಾಗುತ್ತದೆ ಎಂದು ವಾದಿಸುತ್ತಾರೆ.**
10. **ಯಾರು ದಿಟ್ಠಧಮ್ಮ ನಿಬ್ಬಾಣ ವಾದಿಗಳೋ ಅವರು 5 ವಿಧಗಳಿಂದ ಈ ಲೋಕದಲ್ಲೇ ಗೋಚರವಾಗುವ ನಿಬ್ಬಾಣವನ್ನು ವಾದಿಸುತ್ತಾರೆ. ಹೀಗೆ 44 ರೀತಿಗಳಲ್ಲಿ ಭವಿಷ್ಯದ ಬಗ್ಗೆ ವಾದಿಸುತ್ತಾರೆ.**

ಇವರೆಲ್ಲರ ದೃಷ್ಟಿಕೋನಗಳು ಕೇವಲ ಸೀಮಿತ ವ್ಯಕ್ತಿಗತ ಅನುಭವಗಳಿಂದ ಬಂದಿದುದ್ದಾಗಿದೆ. ಇದರ ಪರಿಣಾಮವು ನೋವಿನಿಂದ ದುಃಖಗಳಿಂದ ಕೂಡಿದೆ. ಯಾವ ಸಮಣ ಬ್ರಾಹ್ಮಣರು ಇವುಗಳ ಪರಿಣಾಮಗಳು ತಿಳಿಯಲಾರರೋ ಅವರೆಲ್ಲರೂ ತನ್ಹಾಕ್ಕೆ ಸಿಲುಕುತ್ತಾರೆ (ತನ್ಹಾವೇ ದುಃಖಕ್ಕೆ ಕಾರಣವಾಗಿದೆ).

ಅವರೆಲ್ಲರ ಅನುಭವವು ಸ್ಪರ್ಶದಿಂದ ಅವಲಂಬಿತವಾಗಿದೆ. ಅವರು ಸ್ಪರ್ಶವಿಲ್ಲದಿದ್ದರೆ ಈ ಅನುಭವವನ್ನು ಪಡೆಯುತ್ತಿರಲಿಲ್ಲ. ಅವರೆಲ್ಲರೂ ಈ ಅನುಭವಗಳನ್ನು ನಿರಂತರ ಸ್ಪರ್ಶದಿಂದಾಗಿ ಪಡೆದಿದ್ದಾರೆ. ಈ ಅನುಭವದ ಪರಿಣಾಮವು ತೃಷ್ಣೆಯಾಗಿದೆ, ತೃಷ್ಣೆಯ ಪರಿಣಾಮವು ಉಪಾದಾನ ಮತ್ತು ಭವವಾಗಿದೆ. ಭವವಿರುವಾಗ ಜನ್ಮವು ಮತ್ತೆ ಮತ್ತೆ ತಾಳುತ್ತಾರೆ. ಜನ್ಮ ತಾಳಿದಾಗ ಅವರು ದುಃಖರಾಶಿಯನ್ನು ಅನುಭವಿಸಬೇಕಾಗುತ್ತದೆ. ಆದರೆ ಯಾವ ಆರ್ಯಶ್ರಾವಕನು ಇದನ್ನು ಇದು ಇರುವಂತೆಯೇ ಅರಿಯುತ್ತಾನೋ ಅವುಗಳ ಆದಿ ಮತ್ತು ಅಂತ್ಯವನ್ನು, ಅವುಗಳ ರುಚಿ ಮತ್ತು ಅಪಾಯಗಳನ್ನು ಅರಿತಾಗ ಆತನು ಆರು ಇಂದ್ರೀಯಗಳ ಸ್ಪರ್ಶದಿಂದ ಅತೀತನಾಗುತ್ತಾನೆ. ಹೀಗೆ ಆತನು ಈ ಎಲ್ಲಾ ದೃಷ್ಟಿಜಾಲದಿಂದ ಆಚೆಗೆ ಹೋಗುತ್ತಾನೆ."

"ಭಿಕ್ಷುಗಳೇ, ಯಾರೆಲ್ಲರೂ ಸಮಣಬ್ರಾಹ್ಮಣರೋ ಈ ರೀತಿಯಾಗಿ ಭೂತ ಅಥವಾ ಭವಿಷ್ಯದ ಬಗ್ಗೆ ಅಥವಾ ಎರಡರ ಬಗ್ಗೆ ತಮ್ಮ ಊಹಾಪೋಹದ ದೃಷ್ಟಿಕೋನಗಳಿಂದ ಮತ್ತು ಸೀಮಿತ ಅನುಭವದಿಂದ ಪ್ರತಿಪಾದಿಸುತ್ತಿರುವರೋ ಅವರೆಲ್ಲರೂ ಈ 62 ದೃಷ್ಟಿಜಾಲಗಳಲ್ಲಿ ಸಿಲುಕಿರುವರು. ಈ ರೀತಿಯಾಗಿ ಅಥವಾ ಆ ರೀತಿಯಾಗಿ ಮುಳುಗಿ ಹೋಗಿದ್ದಾರೆ. ಕೆಸರಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ, ಸಿಲುಕಿ ಹೋಗಿದ್ದಾರೆ.

"ಹೇಗೆ ಭಿಕ್ಷುಗಳೇ, ಕುಶಲ ಮೀನುಗಾರನು ಬಲೆಯನ್ನು ಬೀಸುವಾಗ ಹೀಗೆ ಯೋಚಿಸುತ್ತಾನೆ: 'ಇಲ್ಲಿ ಯಾವುದೇ ಅಳತೆಯ ಮೀನುಗಳಿರಲಿ, ಅವೆಲ್ಲವು ನನ್ನ ಬಲೆಗೆ ಸಿಲುಕುತ್ತವೆ, ನಾನು ಹಿಡಿದೇ ತೀರುತ್ತೇನೆ.' ಅದೇರೀತಿಯಲ್ಲಿ ಯಾರೆಲ್ಲರೂ ಭೂತ ಮತ್ತು ಭವಿಷ್ಯದ ದೃಷ್ಟಿಕೋನಗಳಲ್ಲಿ ಬಿದ್ದಿರುವರೋ, ಅವರೆಲ್ಲರೂ ದೃಷ್ಟಿಜಾಲದಲ್ಲಿ ಸಿಲುಕಿದ್ದಾರೆ."

"ಓ ಭಿಕ್ಷುಗಳೇ, ತಥಾಗತರ ಬಾಹ್ಯರೂಪವು ನಿಮ್ಮ ಮುಂದೆ ಇದೆ. ಅವರಲ್ಲಿ ಪುನರ್ಜನ್ಮಕ್ಕೆ ಕಾರಣವಾದುದೆಲ್ಲ ಕತ್ತರಿಸಲ್ಪಟ್ಟಿದೆ. ಎಲ್ಲಿಯವರೆಗೆ ಅವರಿಗೆ ಶರೀರವಿದೆಯೋ ಅಲ್ಲಿಯವರೆಗೆ ಅವರನ್ನು ದೇವತೆಗಳು ಮತ್ತು ಮಾನವರು ಪೂಜಿಸುತ್ತಾರೆ. ಆದರ ಅವರ ಮಹಾ ಪರಿನಿಬ್ಬಾಣದ ನಂತರ, ಶರೀರದ ಕರಗುವಿಕೆಯ ನಂತರ ದೇವತೆಗಳಾಗಲಿ ಅಥವಾ ಮಾನವರೇ ಆಗಲಿ, ಯಾರೂ ಅವರನ್ನು ಕಾಣಲಾರರು."

"ಓ ಭಿಕ್ಷುಗಳೇ, ಹೇಗೆ ಮಾವಿನ ಮರದ ಕೊಂಬೆಯನ್ನು ಕತ್ತರಿಸಿದರೂ ಸಹಾ, ಆ ಕತ್ತರಿಸಲ್ಪಟ್ಟ ಕೊಂಬೆಗೆ ಮಾವುಗಳು ನೇತಾಡುತ್ತಲೇ ಇರುತ್ತವೆ. ಅದೇರೀತಿಯಲ್ಲಿ ಭಿಕ್ಷುಗಳು ತಥಾಗತರ ಬಾಹ್ಯ ಸ್ವರೂಪವು ನಿಮ್ಮ ಮುಂದಿದ್ದರೂ ಸಹಾ, ಅವರ ಪುನರ್ಜನ್ಮಕ್ಕೆ ಕಾರಣವಾದುದೆಲ್ಲವೂ ಕತ್ತಿರಿಸಲ್ಪಟ್ಟಿದೆ. ಎಲ್ಲಿಯವರೆಗೆ ಶರೀರವಿದೆಯೋ ಅಲ್ಲಿಯವರೆಗೆ ದೇವತೆಗಳು ಮತ್ತು ಮಾನವರು ಅವರನ್ನು ಪೂಜಿಸುತ್ತಾರೆ. ಆದರೆ ಮಹಾ ಪರಿನಿಬ್ಬಾಣದ ನಂತರ ದೇಹ ಕರಗಿದ ನಂತರ ದೇವತೆಗಳಾಗಲಿ ಅಥವಾ ಮಾನವರಾಗಲಿ ಅವರನ್ನು ಕಾಣಲಾರರು."

ಹೀಗೆ ಭಗವಾನರು ಹೇಳಿದ ನಂತರ ಪೂಜ್ಯ ಆನಂದರವರು ಭಗವಾನರೊಂದಿಗೆ ಹೀಗೆ ಹೇಳಿದರು: "ಅದ್ಭುತ ಭಂತೆ, ಆಶ್ಚರ್ಯ ಭಗವಾನ್. ಇದು ನಿಜಕ್ಕೂ ಪರಮಾದ್ಭುತವಾಗಿದೆ. ಈ ಸತ್ಯಭರಿತ ಸುತ್ತಕ್ಕೆ ಏನೆಂದು ಹೆಸರಿಡೋಣ?"

"ಆನಂದ, ನಿನಗೆ ನೆನಪಿರಬಹುದು, ಈ ಸುತ್ತವು ಅರ್ಥಕ್ಕೆ ಸಂಬಂಧಿಸಿದುದ್ದಾಗಿದೆ. ಆದ್ದರಿಂದ ಇದಕ್ಕೆ 'ಅರ್ಥ ಜಾಲಾ' ಅಥವಾ 'ಧಮ್ಮಜಾಲಾ' ಎನ್ನಬಹುದು ಅಥವಾ 'ಬ್ರಹ್ಮಜಾಲಾ' ಅಥವಾ 'ದೃಷ್ಟಿಜಾಲಾ' ಎಂದು ಕರೆಯಬಹುದು ಅಥವಾ 'ಅನುತ್ತರ ಸಂಗ್ರಾಮ ವಿಜಯ' ಎಂದು ಕರೆಯಬಹುದು".

ಹೀಗೆ ಭಗವಾನರು ಹೇಳಿದಾಗ ಎಲ್ಲಾ ಭಿಕ್ಷುಗಳು ಆನಂದದಿಂದ ಅನುಮೋದನೆ ಮಾಡಿದರು ಮತ್ತು ಈ ಸುತ್ತ ಪ್ರವಚಿಸಿದಾಗ ದಶಸಹಸ್ರ ಲೋಕಧಾತುಗಳು ಕಂಪಿಸಿದವು.



# VIII. ತಡೆಯುಂಟುಮಾಡುವ ಐದು ಸಂಶಯಗಳು ಮತ್ತು 10 ತಡೆಗಳು

"ಇಲ್ಲ ಭಿಕ್ಷುವು ಅಥವಾ ಉಪಾಸಕನು ಬುದ್ಧರ ಮೇಲೆ ಸಂಶಯಪಟ್ಟಾಗ ಶ್ರದ್ಧೆಯಿಲ್ಲದಾಗ, ನಂಬಿಕೆಯಿಲ್ಲದಿರುವಾಗ, ಖಚಿತತೆಯಿಲ್ಲದಾಗ, ಸಾಮಿಪ್ಯ ಇಲ್ಲದಿರುವಾಗ, ಆತನ ಮನಸ್ಸು ಪ್ರಯತ್ನದಲ್ಲಿ ಬಾಗುವುದಿಲ್ಲ, ಆತನು ಶ್ರಮಪಡಲಾರ, ಬೋಧನೆ ಪಾಲಿಸಲಾರ, ಅಂತಹ ಇಚ್ಛೆಯನ್ನು ಆತನು ವ್ಯಕ್ತಪಡಿಸಲಾರ, ಇದು ಪ್ರಥಮ ಮಾನಸಿಕ ತಡೆಯಾಗಿದೆ."

"ಹಾಗೆಯೇ ಆತನು ಧಮ್ಮದ ಮೇಲೆ ಅಥವಾ ಸಂಘದ ಮೇಲೆ ಅಥವಾ ಶಿಕ್ಷಣ (ಕಲಿಯುವಿಕೆಯ)ದ ಮೇಲೆ ಅಥವಾ ಸಹಚರರ ಮೇಲೆ ಸಂಶಯಪಟ್ಟಾಗ, ಶ್ರದ್ಧೆಯಿಲ್ಲದಿರುವಾಗ, ಆತನಲ್ಲಿ ಪಾಲನೆಯ ಇಚ್ಛೆಯಾಗಲಿ ಇರುವುದಿಲ್ಲ. ಆತನ ಮನಸ್ಸು ಪ್ರಯತ್ನದಲ್ಲಿ ಬಾಗುವುದಿಲ್ಲ, ಆತನು ಶ್ರಮಪಡಲಾರ, ಬೋಧನೆ ಪಾಲಿಸಲಾರ, ಹೀಗೆ ಇವು ಐದು ಮಾನಸಿಕ ತಡೆಗಳಾಗಿವೆ."

**10 ತಡೆಗಳು**

ಜಡತೆ ಮತ್ತು ಸೋಮಾರಿತನವು ಐಶ್ವರ್ಯಕ್ಕೆ ತಡೆಯಾಗಿದೆ.

ಶೃಂಗಾರ ಮತ್ತು ಅಲಂಕಾರದ ಕೊರತೆಯು ಸೌಂದರ್ಯಕ್ಕೆ ತಡೆಯಾಗಿದೆ.

ಸಮಯೋಚಿತವಾಗಿ ವರ್ತನೆ ಮಾಡದಿದ್ದರೆ ಆರೋಗ್ಯಕ್ಕೆ ತಡೆಯಾಗಿದೆ.

ದುರ್ಜನರ ಸ್ನೇಹವು ಮತ್ತು ವಾತಾವರಣವು ಶೀಲಕ್ಕೆ ತಡೆಯಾಗಿದೆ.

ಇಂದ್ರೀಯ ಸಂಯಮ ಇಲ್ಲದಿರುವಿಕೆ ಬ್ರಹ್ಮಚರ್ಯ ಜೀವನಕ್ಕೆ ತಡೆಯಾಗಿದೆ.

ಜಗಳವಾಡುವಿಕೆಯು ಮಿತ್ರತ್ವಕ್ಕೆ ತಡೆಯಾಗಿದೆ.

ಪದೇ ಪದೇ ನೆನಪು ಮಾಡಿಕೊಳ್ಳದಿದ್ದರೆ ಜ್ಞಾನ ಗಳಿಕೆಗೆ ತಡೆಯಾಗಿದೆ.

ಕಿವಿಗೊಡದಿದ್ದರೆ ಮತ್ತು ಪ್ರಶ್ನಿಸದಿದ್ದರೆ ಅದು ಪ್ರಜ್ಞಾ ಅಭಿವೃದ್ಧಿಗೆ ತಡೆಯಾಗಿದೆ.

ಅಧ್ಯಯನ ಮತ್ತು ಪರೀಕ್ಷಿಸುವಿಕೆ ಮಾಡದಿದ್ದರೆ ಬೋಧನೆಗೆ ತಡೆಯಾಗಿದೆ.

ಮಿಥ್ಯ ಮಾರ್ಗದಲ್ಲಿ ನೆಲಸುವಿಕೆಯು ಸುಗತಿಗೆ ತಡೆಯಾಗಿದೆ.

ಇವು 10 ತಡೆಗಳಾಗಿವೆ.

## ಲೋಕವು ಬಯಸುವ 10 ವಿಷಯಗಳಿಗೆ ಸಹಕಾರಿ

ಪ್ರಯತ್ನಶೀಲತೆ ಮತ್ತು ಬುದ್ಧಿವಂತಿಕೆ ಐಶ್ವರ್ಯ ಪಡೆಯಲು ಸಹಕಾರಿ. ಶೃಂಗಾರ ಮತ್ತು ಅಲಂಕಾರವು ಸೌಂದರ್ಯಕ್ಕೆ ಸಹಕಾರಿ. ಸಮಯೋಚಿತ ಕ್ರಿಯೆಯು ಆರೋಗ್ಯಕ್ಕೆ ಸಹಕಾರಿ. ಮೈತ್ರಿಯುತ ಸ್ನೇಹವು ಸದ್ಗುಣಗಳ ಅಭಿವೃದ್ಧಿಗೆ ಸಹಕಾರಿ. ಇಂದ್ರೀಯಗಳ ಸಂಯಮವು ಬ್ರಹ್ಮಚರ್ಯ ಜೀವನಕ್ಕೆ ಸಹಕಾರಿ. ಜಗಳವಾಡದಿರುವಿಕೆ ಮಿತ್ರತ್ವಕ್ಕೆ ಸಹಕಾರಿ. ಪದೇ ಪದೇ ನೆನಪಿನ ಪುನರಾವರ್ತನೆ ಜ್ಞಾನ ಗಳಿಕೆಗೆ ಸಹಕಾರಿ. ಕಿವಿಗೊಡುವಿಕೆ ಮತ್ತು ಪ್ರಶ್ನಿಸುವಿಕೆ ಪ್ರಜ್ಞಾಭಿವೃದ್ಧಿಗೆ ಸಹಕಾರಿ. ಅಧ್ಯಯನ ಮತ್ತು ಪರೀಕ್ಷಿಸುವಿಕೆ ಬೋಧನೆಗೆ ಸಹಕಾರಿ. ಯೋಗ್ಯ ಮಾರ್ಗವು ಸುಗತಿಗೆ ಸಹಕಾರಿಯಾಗಿದೆ.

## ಲೋಕೋತ್ತರ ಮಾರ್ಗದಲ್ಲಿ ದೃಷ್ಟಿಗಳ ನಾಶ

## ದಿಟ್ಠಿ ವಿಶುದ್ಧಿ (ದೃಷ್ಟಿಕೋನದ ಪರಿಶುದ್ಧಿ)

ಈ ಹಂತಕ್ಕೆ ಬರುವವರು ಈ ಮೊದಲೇ ಪ್ರಜ್ಞಾ ಸಮ್ಮಾದೃಷ್ಟಿಯ ಬಗ್ಗೆ ತಿಳಿದಿರಬೇಕು ಹಾಗು ಶೀಲ ವಿಶುದ್ದಿಯಲ್ಲಿ ಮತ್ತು ಚಿತ್ತವಿಶುದ್ದಿಯಲ್ಲಿ ತೇರ್ಗಡೆ ಹೊಂದಿರಬೇಕಾಗುತ್ತದೆ. ಅಂದರೆ ಅವುಗಳನ್ನು ದೀರ್ಘವಾಗಿ ಅಭ್ಯಸಿಸಿರಬೇಕು. ವಿಪಶ್ಯನ ಧ್ಯಾನದ ಉನ್ನತ ಹಂತಗಳಲ್ಲಿ ಸಕ್ಕಾಯದಿಟ್ಠಿ ನಾಶವಾಗುತ್ತದೆ.

ದಿಟ್ಠಿ ವಿಶುದ್ದಿ ಎಂದರೆ ನಾಮರೂಪ (ಮನಸ್ಸು ಮತ್ತು ದೇಹ)ವನ್ನು ಅವು ಇರುವಂತೆ ಯಥಾಭೂತವಾಗಿ ಅರಿಯಬೇಕು ಹೊರತು ಇಲ್ಲದಿದ್ದುದನ್ನು ಕಲ್ಪಿಸುವುದಾಗಲಿ ಅಥವಾ ತೋರಿಕೆಯ ಸತ್ಯವನ್ನೇ ಅಂತಿಮ ಸತ್ಯವೆಂದು ಬಗೆಯಬಾರದು. ಹೀಗೆ ಯಥಾಭೂತವಾಗಿ ಅರಿತು ಮಿಥ್ಯಾದೃಷ್ಟಿಗಳಿಂದ ಶುದ್ಧರಾಗುವುದಕ್ಕೆ ದಿಟ್ಠಿವಿಶುದ್ದಿ ಎನ್ನುತ್ತಾರೆ.

ಇಲ್ಲಿ ನಾವು ನಾಮ (ಮನಸ್ಸು) ಮತ್ತು ರೂಪ (ದೇಹ)ವನ್ನು ಅವು ಹೇಗಿದಿಯೋ ಹಾಗೆಯೇ ಅರಿಯಬೇಕಾಗುತ್ತದೆ. ನಾಮವೆಂದರೆ ಬಾಗುವಿಕೆ ಎಂದರ್ಥ. ಚಿತ್ತವಾಗಲಿ ಅಥವಾ ಚಿತ್ತ ವಿಷಯವೇ ಆಗಲಿ ಯಾವುದೇ ವಿಷಯಗಳೊಂದಿಗೆ ಬಾಗುತ್ತದೆ. ಹಾಗೆಯೇ ಚಲಿಸುತ್ತಿರುತ್ತದೆ. ಆದ್ದರಿಂದ ಇದನ್ನು ನಾಮ (ಬಾಗುವಿಕೆ) ಎನ್ನುವವರು ರೂಪವೆಂದರೆ ಉಪದ್ರವ ತರುವಂತಹುದು ಎಂದರ್ಥ. ಹೇಗೆಂದರೆ ರೋಗ, ಮುಪ್ಪು, ನೋವು, ಮರಣದಂತಹ ನಾನಾ ಉಪದ್ರವ ತರುವುದರಿಂದ ಇದಕ್ಕೆ ಈ ಹೆಸರು ನೀಡಿದ್ದಾರೆ.

## ಆತ್ಮವಿಲ್ಲ

ಇಲ್ಲಿ ಸಾಧಕನು ಪಂಚಖಂಧಗಳ ಉದಯ ಮತ್ತು ಇರುವಿಕೆ ಮತ್ತು ಅಳಿಯುವಿಕೆಯನ್ನು ಗಮನಿಸುತ್ತಾನೆ. ಹೀಗೆ ಆತನು ಶಾರೀರಿಕ ಮತ್ತು ಮಾನಸಿಕಾಗಳ ಲಕ್ಷಣಗಳನ್ನು ಅರಿಯುತ್ತಾನೆ, ಕ್ರಿಯೆಗಳನ್ನು ಅರಿಯುತ್ತಾನೆ. ಅವುಗಳ ಸ್ಥಿತಿಗಳನ್ನು



ಅವು ನೆಲೆಗೊಳ್ಳುವುದನ್ನು ಮತ್ತು ಅವುಗಳಿಗೆ ತತ್‌ಕ್ಷಣದ ಕಾರಣಗಳನ್ನು ಮತ್ತು ಮೂಲ ಕಾರಣಗಳನ್ನು ಅರಿಯುತ್ತಾನೆ.

ಆತ ಆತನಲ್ಲಿದ್ದ ಆತ್ಮದ ಬಗೆಗಿನ ಮಿಥ್ಯಾದೃಷ್ಟಿ ದೂರವಾಗುತ್ತದೆ. ಆತನಿಗೆ ಕೇವಲ ಶರೀರ ಮತ್ತು ಮನಸ್ಸುಗಳ ಸೂಕ್ಷ್ಮಾತಿಸೂಕ್ಷ್ಮ ಹಂತಗಳು ಕಾಣುತ್ತಾನೆ. ಅವುಗಳ ನಡುವಿನ ಪರಸ್ಪರ ಅವಲಂಬನೆಯನ್ನು ಕಾಣುತ್ತಾನೆ. **ಆತನಿಗೆ ಆತ್ಮವಿಲ್ಲದೆ ಎಲ್ಲಾ ಕ್ರಿಯೆಗಳು ಪರಸ್ಪರ ಅವಲಂಬನೆಯಿಂದ ನಡೆಯುತ್ತಿರುವುದು ಕಾಣುತ್ತದೆ. ದೇಹ ಮತ್ತು ಮನಸ್ಸುಗಳ ಹಿನ್ನಲೆಯಲ್ಲಿ ಯಾವುದೇ ನಿಯಂತ್ರಿಸುವ ಶಕ್ತಿ (ಆತ್ಮ)ಯನ್ನು ಆತ ಕಾಣಲಾರ. ಈ ನಾಮರೂಪಗಳ ವಿಶ್ಲೇಷಣೆಗಳ ಜ್ಞಾನಕ್ಕೆ 'ನಾಮರೂಪ ವವತ್ಥನ ಜ್ಞಾನ' ಎನ್ನುತ್ತಾರೆ.** ಏಕೆಂದರೆ ಇಲ್ಲಿ ನಾಮರೂಪಗಳ ಬಗ್ಗೆ ಪೂರ್ಣವಾಗಿ ಅರಿವು ಉಂಟಾಗುತ್ತದೆ.

ಒಬ್ಬನು ಹಣ್ಣನ್ನು ಅಥವಾ ಯಾವುದಾದರೂ ವಸ್ತುವನ್ನು ಸೀಳಿ, ವಿಭಾಜಿಸಿ ಅರಿಯುವಂತೆ ಆತನು ಪಂಚಖಂಧಗಳನ್ನು/ಧಾತುಗಳನ್ನು/ಆಧಾರಗಳನ್ನು/ನಾಮರೂಪಗಳನ್ನು ಅರಿಯುತ್ತಾನೆ. ಹೀಗೆ ಅರಿಯುವಾಗ ಆತನಿಗೆ ದೇಹ ಮತ್ತು ಮನಸ್ಸಿನ ವಿನಃ ಯಾವುದೇ ಆತ್ಮವಾಗಲಿ, ಶಕ್ತಿಯಾಗಲಿ, ವ್ಯಕ್ತಿಯಾಗಲಿ, ದೇವತೆಯಾಗಲಿ, ಅಥವಾ ಬ್ರಹ್ಮವಾಗಲಿ ಈ ಶರೀರದ ಒಳಗೆ/ಹಿಂದೆ ಎಲ್ಲಿಯೂ ಕಾಣಲಾರ.

ಹೀಗೆಯೇ ವಿಶ್ಲೇಷಿಸುತ್ತಾ ಆತನು ವ್ಯಕ್ತಿ, ನಾನು, ಆತ್ಮ ಎಂಬಂತಹ ಗೊಂದಲ, ಸಂಶಯ, ಮಿಥ್ಯಾದೃಷ್ಟಿಗಳನ್ನು ತ್ಯಜಿಸುತ್ತಾನೆ.

ಇಲ್ಲಿ ಕೇವಲ ನಾಮ (ಮನಸ್ಸು) ರೂಪ (ದೇಹ)ವೇ ಮಾತ್ರ ಇದೆ. (ನಾನು ಎಂಬುದು ಆಗಲಿ, ನನ್ನದು ಎಂಬುದಾಗಲಿ ಅಥವಾ ನನ್ನ ಆತ್ಮ ಎಂಬುದಾಗಲಿ ಯಾವುದೂ ಇಲ್ಲ ಎಂಬ ಜ್ಞಾನವು ಆತನಿಗೆ ಸಿಗುತ್ತದೆ).

"ಕೆಲವು ಭಾಗಗಳನ್ನು ಜೋಡಿಸಿ 'ರಥ' ಎಂಬ ಪದವನ್ನು ನೀಡುತ್ತಾರೆ. ಹಾಗೆಯೇ ರಾಶಿಗಳು (ನಾಮರೂಪವು) ಇರುವಾಗ ಜೀವಿ/ವ್ಯಕ್ತಿ ಎಂಬ ಸಾಮಾನ್ಯ ಪದವನ್ನು ಬಳಸುತ್ತಾರೆ".

ಬುದ್ಧರ ನೂರಾರು ಬೋಧನೆಗಳಲ್ಲಿ ನಾಮರೂಪದ ಬಗ್ಗೆ ಉಲ್ಲೇಖವಿದೆ. ಆದರೆ ವ್ಯಕ್ತಿಯ ಬಗ್ಗೆ ಉಲ್ಲೇಖವಾಗಿಲ್ಲ. ರಥದ ಪೀಠ, ಚಕ್ರಗಳು, ಧ್ವಜ, ಕುದುರೆಗಳು ಇತ್ಯಾದಿ ಸೇರಿ ರಥ ಎನಿಸುತ್ತದೆ ಹೊರತು ರಥವೆಂಬುದಿಲ್ಲ ಎಂದು ಅರಿಯುತ್ತಾರೆ. ಹಾಗೆಯೇ ಕಟ್ಟಡಗಳು, ಮನೆಗಳು, ಮನುಷ್ಯರು, ಪ್ರಾಣಿಗಳು ಸೇರಿ ನಗರ ಎನಿಸುತ್ತದೆ. ಆದರೆ ವಾಸ್ತವಿಕವಾಗಿ ನಗರ ಎಂಬುದಿಲ್ಲ. ಹೀಗೆಯೇ ವ್ಯವಹಾರ ದೃಷ್ಟಿಕೋನದಲ್ಲಿ ವ್ಯಕ್ತಿ ಎಂದು ಬಳಸುತ್ತೇವೆ. ಆದರೆ ಪರಮಾರ್ಥ ದೃಷ್ಟಿಕೋನದಲ್ಲಿ 'ವ್ಯಕ್ತಿ' ಎಂಬುದೇ ಇಲ್ಲ.

## ಎರಡು ರೀತಿಯ ಸತ್ಯಗಳು :

ಎರಡು ರೀತಿಯ ಸತ್ಯಗಳಿವೆ : 1. ಸಮ್ಮುತ್ತಿ ಸಚ್ಚ (ವ್ಯವಹಾರಿಕ ಸತ್ಯ) 2. ಪರಮಥ್ಥಸಚ್ಚ (ಪರಾಮಾರ್ಥ ಸತ್ಯ)

ವ್ಯವಹಾರಿಕ ಸತ್ಯದಲ್ಲಿ ಉದಾಹರಣೆಗೆ : ಸೂರ್ಯನು ಪೂರ್ವದಲ್ಲಿ ಹುಟ್ಟುತ್ತಾನೆ ಮತ್ತು ಪಶ್ಚಿಮದಲ್ಲಿ ಮುಳುಗುತ್ತಾನೆ.

ಆದರೆ ಪರಮಾರ್ಥ ಸತ್ಯದ ಪ್ರಕಾರ ಸೂರ್ಯ ಹುಟ್ಟುವುದು ಪೂರ್ವದಲ್ಲಿ ಅಲ್ಲ. ಹಾಗೆಯೇ ಪಶ್ಚಿಮದಲ್ಲಿ ಮುಳುಗುವುದೂ ಇಲ್ಲ. ಸೂರ್ಯ ಅಲ್ಲೇ ಇರುತ್ತಾನೆ. ಆದರೆ ಭೂಮಿ ಮಾತ್ರ ಸೂರ್ಯನ ಸುತ್ತಲೂ ತಿರುಗುತ್ತಿರುತ್ತದೆ. ಆಗ ಸೂರ್ಯನ ಬೆಳಕು ಬಿದ್ದಲ್ಲಿ ಹಗಲು, ಬೆಳಕು ಇಲ್ಲದೆಡೆ ರಾತ್ರಿಯು ಸಂಭವಿಸುವುದು.

ಹಾಗೆಯೇ ಮಡಿಕೆಯು ವ್ಯವಹಾರ ದೃಷ್ಟಿಕೋನದಲ್ಲಿ ಆದರೆ ಪರಾಮಾರ್ಥವಾಗಿ ಮಡಿಕೆಯೇ ಇಲ್ಲ, ಕೇವಲ ಮಣ್ಣಿನ ರಾಶಿಯಷ್ಟೆ.

ಹಾಗೆಯೇ ನಾವು ಕರೆಯುವ 'ಮಾನವ'/ವ್ಯಕ್ತಿ/ಆತ್ಮ/ನಾನು/ನನ್ನದು ಕೇವಲ ವ್ಯವಹಾರ ದೃಷ್ಟಿಕೋನವಷ್ಟೆ. ಆದರೆ ಇಲ್ಲಿ ಕೇವಲ ದೇಹ ಮತ್ತು ಮನಸ್ಸುಗಳು ಪರಸ್ಪರ ಅವಲಂಬನೆಯಿಂದ ಇದೆ ಅಷ್ಟೇ. ಇವು ಉದಯಿಸುತ್ತದೆ ಹಾಗೆಯೇ ಅಳಿಯುತ್ತಿರುತ್ತದೆ. 'ಅಹಂಕಾರ'ವನ್ನು 'ನಾನು' ಎನ್ನುತ್ತೇವೆ. 'ಸ್ವಾರ್ಥ'ವನ್ನು 'ನನ್ನದು' ಎನ್ನುತ್ತೇವೆ. ಇವೆಲ್ಲಾ ಚೇತಸಿಕಾ (ಮನಸ್ಸಿನ ಸ್ಥಿತಿಗಳಾಗಿವೆ). ಗ್ರಹಿಕೆಯಿಂದಾದ, ಸಂಖಾರಗಳಿಂದಾದ ಪ್ರಜ್ಞಾವನ್ನು ಕೆಲವೊಮ್ಮೆ ನಾನು ಎನ್ನುತ್ತೇವೆ. ಹಾಗೆಯೇ ಆನಂದದಿಂದ ತುಂಬಿದ ಮನಸ್ಸನ್ನು ಅಂದರೆ ಪೀತಿ (ಆನಂದವನ್ನು)ಯನ್ನು 'ನಾನು' ಎನ್ನುತ್ತೇವೆ. ಕೆಲವೊಮ್ಮೆ 'ನಾನು ಕೋಪಿಷ್ಟ' ಅಂದರೆ ದೋಸವನ್ನು ನಾನು ಎನ್ನುತ್ತೇವೆ. 'ನಾನು ದಯಾಮಯಿ' ಅಂದರೆ ಕರುಣೆಯನ್ನು 'ನಾನು' ಎನ್ನುತ್ತೇವೆ. 'ನಾನು ಮೂರ್ಖ' ಎಂದು ಅವಿದ್ಯೆಯನ್ನೇ ಹೇಳುತ್ತೇವೆ. ಇದೇರೀತಿ 'ನಾನು ಸುಂದರ' / 'ನಾನು ಬಲಿಷ್ಠ' ಎಂದು ದೇಹವನ್ನೇ ನಾನು ಎನ್ನುತ್ತೇವೆ. ನಾವೆಲ್ಲಾ ಹೀಗೆಯೇ ದೇಹವನ್ನು ಸನ್ಯಾವನ್ನು, ಸಂಖಾರಗಳನ್ನು, ವೇದನೆಗಳನ್ನು ಮತ್ತು ವಿನ್ಯಾನ (ಅರಿವನ್ನು)ವನ್ನು ಹೀಗೆ ಪಂಚಖಂಧಗಳಲ್ಲಿ ಒಂದನ್ನು ನಾನು ಎನ್ನುತ್ತೇವೆ. ಮಿಕ್ಕವನ್ನು ನನ್ನದು ಎನ್ನುತ್ತೇವೆ. ಆದರೆ ಸ್ಥಿರವಾಗಿ ನಾವು ಯಾವುದನ್ನು ನಾನು ಎಂದು ಹೇಳಲಾರದು. ಆದರೆ ವಾಸ್ತವವಾಗಿ ಪಂಚಖಂಧಗಳಲ್ಲಿ ಯಾವುದು ಅಥವಾ ನಾಮರೂಪಗಳಲ್ಲಿ ಯಾವೊಂದು ಸಹಾ ನಾನಲ್ಲ, ನನ್ನದಲ್ಲ ಮತ್ತು ನನ್ನ ಆತ್ಮವೂ ಅಲ್ಲ.

ಕೆಲವರು ಆನಂದ ಸ್ವರೂಪಿಯೇ ನಾನು ಎನ್ನುತ್ತಾರೆ. ಅಂದರೆ ಅವರು ವೇದನಾ ಖಂಧವನ್ನು ನಾನು ಎಂದು ಹೇಳುತ್ತಾರೆ. ಕೆಲವರು ಯಾರು ಕರ್ತನೋ ಅವನೇ



ನಾನು ಎನ್ನುತ್ತಾರೆ. ಅಂದರೆ ಇಚ್ಛೆ ಅಥವಾ ವೀರ್ಯ (ಸಂಖಾರ)ಗಳಿಗೆ ನಾನು ಎಂದು ಹೇಳುತ್ತಿದ್ದಾರೆ.

ಮತ್ತೆ ಕೆಲವರು ನಾನು ಸರ್ವಜ್ಞ, ಜ್ಞಾನ ಸ್ವರೂಪಿ ಎನ್ನುತ್ತಾರೆ. ಅಂದರೆ ಅವರು 'ಪನ್ಯೇಂದ್ರಿಯಾ' ಸಂಖಾರಕ್ಕೆ ಇಲ್ಲವೇ ವಿನ್ಯಾನಕ್ಕೆ ನಾನು ಎನ್ನುತ್ತಿದ್ದಾರೆ. ನಾನು 'ಶಾಂತ ಸ್ವರೂಪಿ' ಅಥವಾ ಸಮಾಧಿ ಸ್ವರೂಪಿ ಎಂದು ತಪ್ಪು ಕಲ್ಪನೆ ಮಾಡುತ್ತಾರೆ. ಕೆಲವರು ಅದು ಸಮಾಧಿ ಸ್ಥಿತಿಗೆ ನಾನು ಎಂದು, ನನ್ನ ಆತ್ಮವೆಂದು ತಪ್ಪಾಗಿ ತೀರ್ಮಾನಿಸುತ್ತಾರೆ.

ಹೀಗೆ ವ್ಯವಹಾರಿಕ ದೃಷ್ಟಿಕೋನದಿಂದ ಪಂಚಖಂಧಗಳಿಗೆ ಅಥವಾ ದೇಹ ಮನಸ್ಸಿಗೆ ನಾನು ಎನ್ನುತ್ತಾರೆ. ಅಥವಾ ದೇಹಕ್ಕೆ ಅಥವಾ ಮನಸ್ಸಿಗೆ ಅಥವಾ ಒಟ್ಟಾರೆ ದೇಹ ಮನಸ್ಸಿಗೆ ಅಥವಾ ದೇಹ ಮನಸ್ಸಿಗೆ ಅತೀತವಾದುದು ಯಾವುದೋ ನಿಯಂತ್ರಿಸುತ್ತದೆ. ಅದೇ ಆ ಆತ್ಮವೇ ನಾನು ಎಂದು ಕಲ್ಪಿಸುತ್ತಾರೆ. ಆದರೆ ಪರಮಾರ್ಥ ಸತ್ಯದಿಂದ ವಿಶ್ಲೇಷಿಸುವಾಗ ದೇಹ ಮತ್ತು ಮನಸ್ಸಿನ ವಿನಃ ಯಾವುದೂ ಕಾಣುವುದಿಲ್ಲ.

ಕೆಲವು ಪಂಚಖಂಧಗಳಿಗೆ ಸಾವಿದೆ ಎಂದು ಉಚ್ಛೇದವಾದಕ್ಕೆ ಅಂಟುತ್ತಾರೆ. ಕೆಲವರು ಮರಣದ ನಂತರ ಶಾಶ್ವತ ನೆಲೆಯಿದೆ, ಆತ್ಮ ಅಮರ ಎಂಬ ಶಾಶ್ವತ ವಾದಕ್ಕೆ ಅಂಟುತ್ತಾರೆ.

ಒಂದೆಡೆ ಭಗವಾನರು ಹೀಗೆ ಹೇಳುತ್ತಾರೆ.

ಭಿಕ್ಷುಗಳೇ, ಎರಡು ಬಗೆಯ ದೃಷ್ಟಿಗಳಿವೆ. ಅದರಲ್ಲೇ ದೇವತೆಗಳು ಮತ್ತು ಮನುಷ್ಯರು ಅಂಟಿಕೊಂಡುಬಿಟ್ಟಿದ್ದಾರೆ. ಆದರೆ ಯಾರು ಚಕ್ಷುವಂತರು (ವಿಚಾರ ವಿಶ್ಲೇಷಣೆ ಉಳ್ಳವರು) ಅವರು ನೋಡಿ ಅಂಟದೆ ಇರುತ್ತಾರೆ. ಮಾನವರು ಮತ್ತು ದೇವತೆಗಳು ಇರುವುದಕ್ಕಾಗಿ, ಸಂಭವಿಸುವುದಕ್ಕಾಗಿ ಆನಂದಿಸುತ್ತವೆ. ಆದರೆ ಧಮ್ಮವನ್ನು ಬೋಧಿಸುವಾಗ ಸಂಭವಿಸುವಿಕೆಗೆ ಅತೀತವಾದುದನ್ನು ಹೇಳಿದರೆ ಅವರ ಮನಸ್ಸು ಆನಂದಿಸುವುದಿಲ್ಲ. ಅವರ ಮನಸ್ಸು ಸತ್ಯದಲ್ಲಿ ನೆಲೆಸುವುದಿಲ್ಲ. ಹಾಗೆಯೇ ಉಚ್ಛೇದವಾದುದರಲ್ಲಿ ಕೆಲವರು ಆನಂದಿಸುತ್ತಾರೆ. ಹೀಗೆ ಕೆಲವರು ಶಾಶ್ವತತೆ ಇದೆ. ಕೆಲವರು ನಾಶವಿದೆ ಎಂದು ಎರಡು ಅಂತಗಳಲ್ಲಿ (ಅತಿರೇಕಗಳಲ್ಲಿ) ಜೀವಿಸುತ್ತಿದ್ದಾರೆ ಮತ್ತು ಕಣ್ಣುಳ್ಳವರು ನೋಡುವುದು ಹೀಗೆ? ಇಲ್ಲಿ ಭಿಕ್ಷುವು ಭವವನ್ನು ಭವವೆಂದೇ ನೋಡುತ್ತಾನೆ. ಹೀಗೆಯೇ ವಿರಾಗಿ ಆಗುತ್ತಾನೆ. ನಿರೋಧ ಸಾಧಿಸುತ್ತಾನೆ. ಹೀಗೆ ಚಕ್ಷುವುಳ್ಳವನನ್ನು ನೋಡುತ್ತಾನೆ.

ಹೇಗೆ ಸ್ಥಳವನ್ನು ಕಲ್ಲು, ಇಟ್ಟಿಗೆಗಳು, ಕಟ್ಟಿಗೆಗಳು, ಮಣ್ಣುಗಳು ಜೋಡಿಸಿದಾಗ ಮನೆಯೊಂದು ನಿರ್ಮಿತವಾಗಿದೆಯೋ ಹಾಗೆಯೇ ಮಾಂಸ, ರಕ್ತ, ಮೂಳೆ ಚರ್ಮಾದಿಗಳಿಂದ ಶರೀರವು ರಚನೆಯಾಗಿದೆ.

"ಆದರೆ ದುಃಖವು ಮಾತ್ರ ಉದಯಿಸುತ್ತದೆ. ದುಃಖವೇ ಇರುತ್ತದೆ ಮತ್ತು ದುಃಖವು ನಿರ್ಗಮಿಸುತ್ತದೆ. ದುಃಖವಲ್ಲದೆ ಯಾವುದೂ ಉದಯಿಸುತ್ತಿಲ್ಲ ಮತ್ತು ದುಃಖದ ವಿನಃ

ಯಾವುದೂ ಅಳಿಯುತ್ತಿಲ್ಲ". ಈ ನಾಮರೂಪಗಳು ಶೂನ್ಯವಾಗಿದೆ, ಆತ್ಮರಹಿತವಾಗಿದೆ ಮತ್ತು ಕುತೂಹಲರಹಿತವಾಗಿದೆ. ಆದರೆ ಕೇವಲ ಪರಸ್ಪರ ಅವಲಂಬನೆಯಿಂದ ಮಾತ್ರ ನಿಲ್ಲುತ್ತದೆ, ನಡೆಯುತ್ತದೆ ಅಷ್ಟೇ. ಆದರೆ ನೋಡಲು ಕುತೂಹಲಕಾರಿ ಎಂಬಂತೆ ಕಾಣುತ್ತದೆ ಅಷ್ಟೇ. ಆದ್ದರಿಂದಲೇ ಜ್ಞಾನಿಗಳು ಹೀಗೆ ಹೇಳುತ್ತಾರೆ:

"ನಾಮರೂಪಗಳು ನಿಜವಾಗಿಯೂ ಇಲ್ಲಿ ಇದೆ. ಆದರೆ ಮಾನವ ಜೀವಿ ಕಾಣಲಾಗುತ್ತಿಲ್ಲ. ಶೂನ್ಯವಾಗಿದೆ. ವ್ಯಕ್ತಿಯಿಂದ ಶೂನ್ಯವಾಗಿದೆ. ಗೊಂಬೆಯಂತೆ ಶರೀರವಿದೆ, ದುಃಖವನ್ನು ಅಲಂಕರಿಸಿದ್ದಾರೆ ಅಷ್ಟೇ"

ಆತನಲ್ಲಿದ್ದ ಸಕ್ಕಾಯ ದಿಟ್ಟಿಯು ನಾಶವಾಗುತ್ತದೆ. ಅಂದರೆ ಬದಲಾವಣೆಯಾಗದ ನಿತ್ಯ ಆತ್ಮವಿದೆ ಎಂಬ ದೃಷ್ಟಿಯು ನಾಶವಾಗುತ್ತದೆ. ಏಕೆಂದರೆ ಇಲ್ಲಿರುವುದು ಭೌತಿಕ ಮಾನಸಿಕಾದ ಸಂಯುಕ್ತ ರಾಶಿಯಷ್ಟೇ ಎಂದು ಅರಿಯುತ್ತಾನೆ.

**ನಾಮರೂಪಗಳ ಪರಸ್ಪರ ಅವಲಂಬನೆ :**

"ನಾಮ ರೂಪಗಳು ಅವಳಿಗಳ ಹಾಗೆ ಪರಸ್ಪರ ಸಲಹುತ್ತವೆ. ಆದರೆ ಒಂದು ಮುರಿದಾಗ ಎರಡು ಪರಸ್ಪರ ಅವಲಂಬನೆಯಿಂದು ಮುರಿದು ಹೋಗುತ್ತವೆ".

ನಗಾರಿಯು ಒಂದು, ಹಾಗೆಯೇ ಶಬ್ದವೂ ಒಂದಾಗಿದೆ. ನಗಾರಿ ಮತ್ತು ಶಬ್ದಗಳು ಮಿಶ್ರಣವಾಗದಿದ್ದರೆ, ನಗಾರಿಯ ವಿನಃ ಶಬ್ದವೂ ಶೂನ್ಯ, ಶಬ್ದದ ವಿನಃ ನಗಾರಿ ಶೂನ್ಯವಾಗಿದೆ.

ಹಾಗೆಯೇ ದೇಹವು ಒಂದು ಚಿತ್ತವು ಒಂದಾಗಿದೆ. ಇವೆರಡು ಮಿಶ್ರಣವಾಗದಿದ್ದರೆ ಶರೀರದ ವಿನಃ ಚಿತ್ತ ಶೂನ್ಯ ಚಿತ್ತದ ವಿನಃ ಶರೀರ ಶೂನ್ಯವಾಗಿದೆ.

ಇವೆರಡು ಪರಸ್ಪರ ಅವಲಂಬನೆಯಾಗಿದೆ. ಚಿತ್ತವಿಲ್ಲದಿದ್ದಾಗ ಶರೀರವೂ ಶವವೇ ಸರಿ. ಹಾಗೆಯೇ ಶರೀರವಿಲ್ಲದಿದ್ದಾಗ ಚಿತ್ತವೂ ನಮಗಂತು ಕಾಣದು. ಆದ್ದರಿಂದಾಗಿ ಇವೆರಡೂ ಪರಸ್ಪರ ಅವಲಂಬನೆಯಿಂದಾಗಿ ಶಕ್ತಿಶಾಲಿಗಳಾಗಿವೆ, ಕ್ರಿಯಾತ್ಮಕವಾಗಿದೆ. ಜೊತೆಗೆ ಕ್ರಿಯಾಶೀಲತೆಯಿಂದ ಸಾಗುತ್ತಿವೆ. ಹೇಗೆಂದರೆ ಕುರುಡ ಮತ್ತು ಹೆಳವನ ರೀತಿಯಲ್ಲಿ ಅಂದರೆ ಕುರುಡ ಕಣ್ಣಿಲ್ಲದೆ ನಡೆಯಲಾರ. ಹೆಳವ ಕಾಲಿಲ್ಲದೆ ನಡೆಯಲಾರ. ಆದರೆ ಕುರುಡನ ಹೆಗಲು ಏರಿ ಹೆಳವನು ಕುಳಿತಾಗ ಮತ್ತು ದಾರಿ ಮಾರ್ಗದರ್ಶಕನಾದಾಗ ಕುರುಡ ನಡೆಯುತ್ತಾನೆ, ಹೆಳವ ದಾರಿ ತೋರಿಸುತ್ತಾನೆ. ಹೀಗೆ ಹೆಳವನಿಗೆ ಕುರುಡನ ದೇಹವೇ ಕಾಲಾಗುತ್ತದೆ ಮತ್ತು ಕುರುಡನಿಗೆ ಹೆಳವನ ಕಣ್ಣೇ ತನ್ನ ಕಣ್ಣಾಗುತ್ತದೆ. ಹೀಗೆ ಇವರು ಪರಸ್ಪರ ಅವಲಂಬನೆಯಿಂದ ಸಾಗುತ್ತಾರೆ. ಹೀಗೆಯೇ ದೇಹವು ಮನಸ್ಸಿನಿಂದ ಮತ್ತು ಮನಸ್ಸು ದೇಹದಿಂದ ಸಹಾಯ ಪಡೆದು ಮುನ್ನಡೆಯುತ್ತದೆ. ಆದರೆ ಯಾರಿಗೆ ಅಭಿಜ್ಞಶಕ್ತಿ ಇಲ್ಲವೋ ಅಥವಾ ಪ್ರಜ್ಞಾಶಕ್ತಿ ಇಲ್ಲವೋ ಅವರಿಗೆ ಶರೀರ ಮನಸ್ಸು ಒಂದೇ



ಎಂದು ಕಾಣಿಸುತ್ತದೆ. ಅವರಿಗೆ ಸಾವೇ ಕೊನೆ ಎಂದು ನಿರ್ಧರಿಸುತ್ತಾರೆ. ಕೆಲವರಿಗೆ ಇವೆರಡರ ನಡುವಿನ ಕಾರ್ಯ ತಿಳಿಯದೆ ಎರಡು ಬೇರೆ ಬೇರೆ ಎಂದು ನಿರ್ಧರಿಸಿ, ಶರೀರಕ್ಕೆ ಮೃತ್ಯು ಆತ್ಮ ಅವಿನಾಶಿ ಎನ್ನುತ್ತಾರೆ. ಆತ್ಮ ಚಿರಾಯು ಎನ್ನುತ್ತಾರೆ. ಆದರೆ ಸತ್ಯ ಅರಿತವ ಹಾಗೆ ಹೇಳಲಾರ.

ಸತ್ಯ ಅರಿತವರು ಹೀಗೆ ಕಾಣುತ್ತಾರೆ :

"ವಿನ್ನಾನದಿಂದ ನಾಮರೂಪಗಳು ಉದಯಿಸುತ್ತದೆ. ಹಾಗೆಯೇ ನಾಮರೂಪದಿಂದ ವಿನ್ನಾನ ಉದಯಿಸುತ್ತದೆ".

ವಿನ್ನಾನದ ನಿರೋಧದಿಂದ ನಾಮರೂಪದ ನಿರೋಧ ಆಗುತ್ತದೆ. ಹಾಗೆಯೇ ನಾಮರೂಪದ ನಿರೋಧದಿಂದ ವಿನ್ನಾನದ ನಿರೋಧವಾಗುತ್ತದೆ.

ಅಂದರೆ ಅವಿದ್ಯೆಯಿಂದ ಸಂಖಾರಗಳು ಉದಯಿಸುತ್ತದೆ. ಸಂಖಾರಗಳಿಂದ ವಿನ್ನಾನವು ಉದಯಿಸುತ್ತದೆ. ವಿನ್ನಾನದಿಂದ ನಾಮರೂಪಗಳು ಉದಯಿಸುತ್ತದೆ.

ಅಜ್ಞಾನದ ನಿರೋಧದಿಂದ ಸಂಖಾರಗಳ ನಿರೋಧವು ಸಂಖಾರಗಳ ನಿರೋಧದಿಂದ ನಾಮರೂಪಗಳ ನಿರೋಧವೂ ಆಗುತ್ತದೆ.

ಹೇಗೆಂದರೆ ತೆಪ್ಪವು ನಮಗೆ ನೀರಿನಲ್ಲಿ ದಡ ತಲುಪಿಸುತ್ತದೆ. ನೆಲದಲ್ಲಿ ನಾವು ತೆಪ್ಪವನ್ನು ಹೊತ್ತುಕೊಂಡು ತಿರುಗುತ್ತೇವೆ. ಈ ರೀತಿಯಲ್ಲಿ ನೀರಿನಲ್ಲಿ ತೆಪ್ಪವು ನಮ್ಮನ್ನು ಮತ್ತು ನೆಲದಲ್ಲಿ ನಾವು ತೆಪ್ಪವನ್ನು ಹೊತ್ತುಕೊಂಡು ನೆಲೆ ತಲುಪುತ್ತೇವೆ.

ಅದೇರೀತಿಯಲ್ಲಿ (ಹಿಂದಿನ ಜನ್ಮದ) ಅರಿವಿನಿಂದ (ವಿನ್ನಾನದಿಂದ) (ಈ ಜನ್ಮದಲ್ಲಿ) ಶರೀರ ಮತ್ತು ಮನಸ್ಸು ಉಂಟಾಗುತ್ತದೆ ಮತ್ತು ಈಗಿನ ಶರೀರ ಮತ್ತು ಮನಸ್ಸಿನಿಂದ (ಮುಂದಿನ ಜನ್ಮಕ್ಕೆ) ವಿನ್ನಾನ (ಅರಿವು/ಮನಸ್ಸು) ಉಂಟಾಗುತ್ತದೆ ಮತ್ತು ಜೀವದಿಂದಿರುವವರೆಗೆ ಜೊತೆ ಪರಸ್ಪರ ಅವಲಂಬನೆಯಿಂದ ಕ್ರಿಯಾಬದ್ಧವಾಗಿರುತ್ತದೆ. ಹೀಗೆ ಸಾಧಕನು ಸ್ಪಷ್ಟವಾಗಿ ಆತ್ಮದ ರಹಿತತೆಯನ್ನು ವ್ಯಕ್ತಿಯ ರಹಿತತೆಯನ್ನು ಕಾಣುತ್ತಾನೆ. ಏಕೆಂದರೆ ಆತನು ದೇಹ ಮತ್ತು ಮನಸ್ಸುಗಳ ಸರ್ವ ಕ್ರಿಯೆಗಳನ್ನು ಸ್ಪಷ್ಟವಾಗಿ ತಿಳಿದುದರಿಂದಾಗಿ ಹೀಗೆ ತೀರ್ಮಾನಿಸುತ್ತಾನೆ.







## ಕಂಖಾವಿತರಣ–ವಿಶುದ್ಧಿ (ಸಂಶಯಗಳನ್ನು ದಾಟುವ ಪರಿಶುದ್ಧಿ)

ಸಂಶಯವು ಜ್ಞಾನದ ನಿಜ ತಿಳುವಳಿಕೆ ಆಗುವವರೆಗೂ ಕಾಡುತ್ತಲೇ ಇರುತ್ತದೆ. ಎಲ್ಲಿಯವರೆಗೆ ಸಂಶಯ ನಿವಾರಣೆ ಅಗುವುದಿಲ್ಲವೋ ಅಲ್ಲಿಯವರೆಗೆ ಆತನು ನಿಜಕ್ಕೂ ಮಾರ್ಗದಲ್ಲಿರುವುದಿಲ್ಲ.

ಸಂಶಯ ನಿವಾರಣೆಯು 3 ವಿದದಲ್ಲಿ ಆಗುತ್ತದೆ.

1. **ಸಂಶಯವನ್ನೇ ಹುಟ್ಟಿಸದಿರುವುದು :** ತಾತ್ಕಾಲಿಕವಾಗಿ ಇದು ಪರಿಣಾಮವನ್ನುಂಟು ಮಾಡಿದರೂ ಮತ್ತೆ ಮತ್ತೆ ಬಲಿಷ್ಠವಾಗಿ ಸಂಶಯವು ಕಾಡುವುದುಂಟು. ಧ್ಯಾನ ಸಾಧಿಸುವವರು ಹೀಗೆ ತಾತ್ಕಾಲಿಕವಾಗಿ ಸಂಶಯವನ್ನು ಹುಟ್ಟಿಸದೆ ಏಕಾಗ್ರತೆ ಸಾಧಿಸುವರು. ಆದರೆ ಸುಪ್ತವಾಗಿರುವ ಸಂಶಯವು ಬಲಿಷ್ಠವಾಗಿ ಬಡಿಯುತ್ತದೆ.

2. **ಮಿಥ್ಯಾದೃಷ್ಟಿಗೆ ಬಲಿ :** ಇಲ್ಲಿ ಮಾನವನಿಗೆ ವಿಚಾರಪರತೆಯ ಕೊರತೆಯಿಂದಾಗಿ ಸುಳ್ಳನ್ನೇ ಸತ್ಯವೆಂದು ನಂಬುತ್ತಾನೆ. ಆದುದರಿಂದಲೇ ಇಂದು ಸೃಷ್ಟಿಯ ಬಗ್ಗೆ, ಮಾನವನ ಅಸ್ತಿತ್ವದ ಬಗ್ಗೆ, ಜೀವನದ ಬಗ್ಗೆ, ಜೀವಿಸುವುದರ ಬಗ್ಗೆ ಸಂಶಯವುಂಟಾಗಿ ಕೊನೆಗೆ ಮೂಢನಂಬಿಕೆಗಳನ್ನೇ, ಮಿಥ್ಯಾದೃಷ್ಟಿ, ಸಿದ್ಧಾಂತಗಳನ್ನೇ ನಿಜವೆಂದು ನಂಬಿ ಕೆಟ್ಟಿರುವವರು ಅಸಂಖ್ಯಾತ ಮಂದಿ. ಸಂಶಯವು ದ್ವಂದ್ವಸ್ಥಿತಿ ಯಾವುದೇ ನಿರ್ಧಾರಕ್ಕೆ ಬರದಿರುವ ಸ್ಥಿತಿ. ಅದಕ್ಕಿರುವ ಪರಿಹಾರವೆಂದರೆ ಸತ್ಯವನ್ನು ಯಥಾಭೂತ ಸ್ಥಿತಿಯಲ್ಲಿ ಅರಿಯುವುದು ಹಾಗು ಸಂಶಯವನ್ನು ದಾಟುವುದು. ಇಲ್ಲದಿದ್ದರೆ ಆತನು ಮೇಲಿನ ಎರಡರಲ್ಲಿ ಒಂದಕ್ಕೆ ಬಲಿಯಾಗುವುದು ಖಚಿತ.

3. **ಸಮ್ಮಾದೃಷ್ಟಿ :** ಸಾರವನ್ನು ಸಾರವೆಂದು, ಅಸಾರವನ್ನು ಅಸಾರವೆಂದೇ ಸತ್ಯವನ್ನು ಯಥಾಭೂತವಾಗಿ ಅರಿತು ಮಿಥ್ಯಾದೃಷ್ಟಿಗಳನ್ನು ತೊಡೆದುಹಾಕುವಂತಹ ವಿಪಸ್ಸನ ಹಾದಿಯಲ್ಲಿರುವುದು. ಇಲ್ಲಿ ಆತನು ನಾಮರೂಪಗಳ ಉದಯ ಸ್ಥಿತಿ ಮತ್ತು ಅಳಿವುಗಳನ್ನು ಪರಿವರ್ತನೆಗಳನ್ನು ಅರಿಯುತ್ತ ಸಂಶಯಗಳನ್ನು ಪರಿಹರಿಸುತ್ತಾ ಸಂಶಯಾತೀತವಾಗಿ ವಿಹರಿಸುತ್ತಾನೆ. ತರ್ಕಗಳಿಂದ, ವಿಚಾರಬದ್ಧ ವಿಶ್ಲೇಷಣೆಯಿಂದ ಬಹುಪಾಲು ಸಂಶಯ ನಿವಾರಣೆಯಾದರೂ ಮಿಕ್ಕ ಸಂಶಯಗಳು ಅಭಿಜ್ಞಾ ಪ್ರಾಪ್ತಿಯಿಂದ ಅಲೌಕಿಕ ದಿವ್ಯ ಚಕ್ಷುವಿನಿಂದ ನಿವಾರಣೆಯಾಗುತ್ತದೆ. ಪೂರ್ಣ ಸಂಶಯ ನಿವಾರಣೆಯು ಲೋಕೋತ್ತರ ಸಾಧನೆಯಿಂದ, ಸಾಕ್ಷಾತ್ಕಾರದಿಂದಲೇ ಆಗುವುದು. ಸಂಶಯಾತೀತವಾದರೆ ಮಾತ್ರ ಆತನು ಸೋತಪನ್ನನಾಗುವನು.

ಇಲ್ಲಿ ಸಾಧಕನು ನಾಮರೂಪಗಳ ಕಾರಣ ಮತ್ತು ಸ್ಥಿತಿಗಳನ್ನು ಅರಿಯುತ್ತಿರುತ್ತಾನೆ, ಹುಡುಕುತ್ತಿರುತ್ತಾನೆ. ಹೇಗೆಂದರೆ ಕೌಶಲ್ಯಯುತ ವೈದ್ಯ ರೋಗದ ಕಾರಣವನ್ನು ಹುಡುಕುವ ರೀತಿ ಮತ್ತು ದಯಾಮಯಿ ಒಬ್ಬ ರಸ್ತೆಯಲ್ಲಿರುವ ಮಗುವಿನ ತಂದೆ–ತಾಯಿಗಳನ್ನು ಹುಡುಕುವ ರೀತಿ. ಹಾಗೆಯೇ ಆತನು ನಾಮರೂಪಗಳ (ದೇಹ ಮನಸ್ಸುಗಳ) ಕಾರಣ ಮತ್ತು ಸ್ಥಿತಿಗಳನ್ನು ಅರಿಯುತ್ತಿರುತ್ತಾನೆ ಮತ್ತು ಮೂರು ಕಾಲದ ಬಗೆಗಿನ ಸಂಶಯಗಳೆಲ್ಲಾ ನಿವಾರಣೆಯಾಗುತ್ತದೆ.

"ಅವಿದ್ಯೆಯಿಂದ ಸಂಖಾರಗಳು ಉಂಟಾಗುತ್ತವೆ. ಸಂಖಾರಗಳಿಂದ ವಿನ್ಯಾನವು (ಪಟಿಸಂದಿ–ಪುನರ್‌ಜನ್ಮದ ಕೊಂಡಿ) ಉಂಟಾಗುತ್ತದೆ.

ವಿನ್ಯಾನದಿಂದ ನಾಮರೂಪಗಳು ಉಂಟಾಗುತ್ತವೆ ಅಥವಾ

(ಹಿಂದಿನ ಜನ್ಮದ) ನಾಮರೂಪದಿಂದ ವಿನ್ಯಾನ (ಪುನರ್ ಜನ್ಮದ ಕೊಂಡಿ) ಉಂಟಾಗುತ್ತದೆ. ವಿನ್ಯಾನದಿಂದ ನಾಮರೂಪಗಳು (ಈ ಜನ್ಮದ ದೇಹ + ಮನಸ್ಸು) ಉಂಟಾಗುತ್ತದೆ".

ಇದು ಸ್ಪಷ್ಟವಾಗಿ ಅರಿವಾದಾಗ, ಅರಿತಾಗ ಆತನಿಗೆ ಸೃಷ್ಟಿಯು ಅಕಾರಣವಲ್ಲ. ಹಾಗೆಯೇ ಸೃಷ್ಟಿಕರ್ತನಿಂದ ಸೃಷ್ಟಿಯಾಗಿಲ್ಲ ಎಂದು ಸ್ಪಷ್ಟವಾಗಿ ಅರಿಯುತ್ತಾನೆ. ಹಾಗೆಯೇ ಪ್ರತಿಯೊಂದಕ್ಕೂ ಹಿಂದಿನ ಜನ್ಮವೇ ಕಾರಣವಲ್ಲ ಎಂದು ಹಾಗೆಯೇ ಸಾವೇ ಕೊನೆ ಅಲ್ಲ, ನಿಬ್ಬಾಣ ಪಡೆಯುವವರೆಗೆ ಜನ್ಮಗಳು ಬರುತ್ತಲೇ ಇರುತ್ತವೆ ಎಂದು ಅರಿಯುತ್ತಾನೆ. ಅನಿತ್ಯತೆಯನ್ನು ಗಮನಿಸಿದ ಆತ ಯಾವುದೊಂದು ನಿತ್ಯವಲ್ಲ ಎಂದು ಅರಿಯುತ್ತಾನೆ. ಪ್ರತಿಯೊಂದಕ್ಕೂ ಕಾರಣವಿದೆ. ಕಾರಣದಿಂದಲೇ ಈಗಿನ ಸ್ಥಿತಿ. ಈಗಿನ ಕ್ರಿಯೆಯಿಂದ ಮುಂದಿನ ಪರಿಣಾಮ ಅಂದರೆ ಕರ್ಮಫಲ. ಹೀಗೆ ಕಾರಣ–ಸ್ಥಿತಿ, ಪರಿಣಾಮಗಳ ಕ್ರಿಯೆಯು ನಡೆಯುತ್ತಲೇ ಇರುತ್ತದೆ ಎಂದು ಸ್ಪಷ್ಟವಾಗಿ ಅರಿಯುತ್ತಾನೆ.

ಒಂದುವೇಳೆ ಸರ್ವಶಕ್ತನಾದ ದೇವರು ಇದ್ದುದೇ ಆದರೆ ಪ್ರತಿಜೀವಿಯ ಸುಖಕ್ಕೆ ಅಥವಾ ದುಃಖಕ್ಕೆ ಮತ್ತು ಪಾಪಕ್ಕೆ ಅಥವಾ ಪುಣ್ಯಕ್ಕೆ (ಸೃಷ್ಟಿಕರ್ತನೆ ಮೂಲ ಕಾರಣಕರ್ತನಾಗಿ) ಆ ದೇವರೇ ಪಾಪದ ಕಲೆಯುಳ್ಳವನಾಗುತ್ತಾನೆ. ಮಾನವ ಕೇವಲ ಆತನ ಇಚ್ಛೆಯಂತೆ ವರ್ತಿಸುತ್ತಿದ್ದಾನೆ ಅಷ್ಟೇ.

ದುಃಖದ ಕಾರಣವನ್ನು ಭಗವಾನರಷ್ಟು ಸ್ಪಷ್ಟವಾಗಿ ಯಾರೂ ವಿವರಿಸಿಲ್ಲ. ಆದ್ದರಿಂದಲೇ ಇಲ್ಲಿ ಸಾಧಕರು ನಿಜವಾದ ಕಾರಣವನ್ನು ಕಿತ್ತೆಸೆದು ನೋವಿಗೆ, ದುಃಖಕ್ಕೆ ಅತೀತರಾಗುತ್ತಾರೆ.

ಕಾಲದ ಬಗ್ಗೆ ಪ್ರತಿಯೊಬ್ಬರಿಗೂ ಕಾಡುವಂತಹ ಪ್ರಶ್ನೆಗಳಿವೆ. ಅವೆಂದರೆ :

**1. ಭೂತಕಾಲದ ಬಗ್ಗೆ** : ನಾನು ಹಿಂದೆ (ಭೂತಕಾಲದಲ್ಲಿ) ಇದ್ದೇನೆ? ನಾನು ಈ ಹಿಂದೆ ಇರಲಿಲ್ಲವೇ? ನಾನು ಹಿಂದೆ ಏನಾಗಿದ್ದೆ? ಹೇಗಿದ್ದೆ? ಏನಾಗಿದ್ದೆ? ನಂತರ ಏನಾದೆ?

**2. ಭವಿಷ್ಯ ಕಾಲದ ಬಗ್ಗೆ** : ನಾನು ಭವಿಷ್ಯದಲ್ಲಿ (ಮುಂದೆ) ಇರುವೆನೆ? ನಾನು ಭವಿಷ್ಯದಲ್ಲಿ ಇರುವುದಿಲ್ಲವೇ? ನಾನು ಭವಿಷ್ಯದಲ್ಲಿ ಏನು ಆಗಿರುತ್ತೇನೆ? ನಾನು ಭವಿಷ್ಯದಲ್ಲಿ ಹೇಗಿರುತ್ತೇನೆ? ಭವಿಷ್ಯದಲ್ಲಿ ಏನಾಗಿದ್ದು ನಾನು ಏನಾಗುತ್ತೇನೆ?

**3. ವರ್ತಮಾನದ ಬಗ್ಗೆ** : ನಾನು ಇರುವೆನೇ? ನಾನು ಇಲ್ಲವೇ? ನಾನು ಏನು ಆಗಿದ್ದೇನೆ? ನಾನು ಹೇಗಿದ್ದೇನೆ? ನಾನು ಎಲ್ಲಿಂದ ಬಂದೆ? ನಾನು ಎಲ್ಲಿಗೆ ಹೋಗುವೆನು?

ಭಗವಾನರು ದಿವ್ಯಚಕ್ಷುವಿನಿಂದ ತಮ್ಮ ಮತ್ತು ಪರರ ಭೂತಕಾಲದ ಬಗ್ಗೆ ಹಾಗೆಯೇ ಭವಿಷ್ಯದ ಬಗ್ಗೆ ಹಾಗೆಯೇ ವರ್ತಮಾನದ ಬಗ್ಗೆ ಪೂರ್ಣ ವಿಶ್ಲೇಷಣೆಯಿಂದ ಅರಿತು ವಿವರಿಸಿದ್ದಾರೆ. ನಾವು ಸಹ ಸಾಧನೆಯಿಂದ ದಿವ್ಯಚಕ್ಷು ಪಡೆದು ನೋಡಬಹುದು ಅಥವಾ ತರ್ಕಶಕ್ತಿಯಿಂದಲೇ ಭೂತ, ವರ್ತಮಾನ ಮತ್ತು ಭವಿಷ್ಯ ಅರಿಯಬಹುದು.



ನಮ್ಮ ಶರೀರ ಮನಸ್ಸಿಗೆ ಮೂಲ, ನಮ್ಮ ಹಿಂದಿನ ಜನ್ಮದ ಚಿತ್ತ (ವಿನ್ಯಾನ) ಆಗಿದೆ. ಆ ಹಿಂದಿನ ಜನ್ಮದ ಚಿತ್ತಕ್ಕೆ ಕಾರಣ ಸಂಖಾರಗಳಾಗಿವೆ. ಸಂಖಾರಗಳಿಗೆ ಕಾರಣ ಅಜ್ಞಾನವಾಗಿದೆ. ಹೀಗೆ ಅಜ್ಞಾನದಿಂದ ಸಂಖಾರಗಳು ಉದಯಿಸುತ್ತದೆ. ಸಂಖಾರಗಳಿಂದ ವಿನ್ಯಾನ ಉಂಟಾಗುತ್ತದೆ. ವಿನ್ಯಾನದಿಂದ ನಾಮರೂಪಗಳು (ಶರೀರ ಮತ್ತು ಮನಸ್ಸು) ಉಂಟಾಗುತ್ತದೆ.

ಇದನ್ನು ಸ್ಪಷ್ಟವಾಗಿ ಅರಿತಾಗ ಆತನು ಆಕಸ್ಮಿಕವಾಗಿ ಜನ್ಮಿಸಿರುವೆ ಎಂದು ಹೇಳುವುದಿಲ್ಲ. ಬದಲಾಗಿ ಕಾರಣದಿಂದ ಜನಿಸಿದ್ದೇನೆ ಎನ್ನುವನು. ಹಾಗೆಯೇ ಹೀಗೆ ಸ್ಪಷ್ಟವಾಗಿ ಅರಿತಾಗ ಆತನು ದೇವರಿಂದ ಜನ್ಮಿಸಿರುವೆ ಅಥವಾ ವಿಧಿಯಿಂದ ಜನ್ಮಿಸಿರುವೆ ಎಂದು ಹೇಳುವುದಿಲ್ಲ. ಬದಲಾಗಿ ಹಿಂದಿನ ಜನ್ಮ ಆಸಕ್ತಿ ಮತ್ತು ಕರ್ಮಫಲಗಳಿಂದ ಜನ್ಮಿಸಿದ್ದೇನೆ ಎಂದು ಹೇಳುತ್ತಾನೆ.

ಈಗಿನ ಶರೀರ ಮನಸ್ಸಿನಿಂದ ಸಳಯಾತನಗಳು (ಇಂದ್ರೀಯಗಳು) ಉಂಟಾಗುತ್ತದೆ.
ಇಂದ್ರೀಯಗಳಿಂದ (ವಿಷಯಗಳೊಂದಿಗೆ) ಸ್ಪರ್ಶ ಉದಯಿಸುತ್ತವೆ.
ಸ್ಪರ್ಶದಿಂದ ವೇದನೆಗಳು ಉದಯಿಸುತ್ತವೆ.
ವೇದನೆಗಳಿಂದ ತೀವ್ರ ಬಯಕೆಗಳು ಉದಯಿಸುತ್ತವೆ.
ತೀವ್ರ ಬಯಕೆಗಳಿಂದ ಅಂಟುಕೊಳ್ಳುವಿಕೆ ಉದಯಿಸುತ್ತದೆ.

ಹೀಗಾದಾಗ ಆತನು ಅನೇಕ ಕರ್ಮಗಳನ್ನು ಮಾಡುತ್ತಾನೆ. ಅದರಂತೆಯೇ ಫಲಗಳನ್ನು ಪಡೆಯುತ್ತಾನೆ. ಯಾವ ಯಾವ ಕರ್ಮ ವಿಪಾಕಗಳಿವೆ? ಅದು ಹೀಗಿದೆ: ಅದನ್ನು ನಾಲ್ಕು ರೀತಿಯಲ್ಲಿ ಕರ್ಮವಿಪಾಕ ವರ್ಗೀಕರಣ ಮಾಡಲಾಗಿದೆ.

**ಕಾಲದ ಪರಿಗಣನೆಯಿಂದಾದ ವರ್ಗೀಕರಣ**

1. ತಕ್ಷಣ ಪರಿಣಾಮ ಬೀರುವ ಕಮ್ಮ : ಈಗಲೇ ಫಲ ನೀಡುವ ಕರ್ಮ
2. ಅನಂತರ ಪರಿಣಾಮ ಬೀರುವ ಕರ್ಮ : ಮುಂದಿನ ಜನ್ಮದಲ್ಲಿ ಫಲ
3. ಅನಿಶ್ಚಿತ ಕಾಲದವರೆಗೆ ಪರಿಣಾಮ ಬೀರುವ ಕರ್ಮ : ಎಷ್ಟೋ ಕಲ್ಪಗಳ ನಂತರ ಫಲ ನೀಡುವ ಕರ್ಮ
4. ಅಪರಿಣಾಮಕಾರಿ ಕಮ್ಮ : ಫಲ ನೀಡದ ಕರ್ಮ.

**ಪರಿಣಾಮದ ಪರಿಗಣನೆಯಿಂದಾದ ವರ್ಗೀಕರಣ**

1. ಭಾರವಾದ ಕರ್ಮ – ತಂದೆ–ತಾಯಿಯರ ಹತ್ಯೆಯಿಂದ ನೇರವಾಗಿ ನರಕ ಅಥವಾ ಧ್ಯಾನದಿಂದ ಮುಂದಿನ ಸುಜನ್ಮ.
2. ಮರಣದ ಸಮೀಪದ ಗ್ರಹಿಕೆಯಿಂದಾದ ಕರ್ಮ : ಮರಣದ ವೇಳೆಯಲ್ಲಿರುವ ಮನಸ್ಥಿತಿಗೆ ಅವಲಂಬನೆ ಸಿಗುವಂತಹ ಜನ್ಮ.

3. ಅಭ್ಯಾಸದ ಕರ್ಮ : ನಿರಂತರ ಅಭ್ಯಾಸದಿಂದ ಏರ್ಪಟ್ಟ ವ್ಯಕ್ತಿತ್ವದಿಂದ ಲಭಿಸುವ ಮುಂದಿನ ಜನ್ಮ.
4. ರಾಶಿ ಕರ್ಮ : ಮುಂದೆ ಕಾದಿಟ್ಟ ಕರ್ಮ ಫಲ.

**ಕ್ರಿಯೆಯ ಪರಿಗಣನೆಯಿಂದ ವರ್ಗೀಕರಣ :**

1. ಉತ್ಪನ್ನಕಾರಿ ಕರ್ಮ : ಹಿಂದಿನ ಜನ್ಮದ ಪ್ರಚನ್ನತೆಯಿಂದಾದ ಉತ್ಪನ್ನ
2. ಬೆಂಬಲಕಾರಿ ಕರ್ಮ : ಹಿಂದಿನ ಮತ್ತು ಈಗಿನ ಪ್ರಯತ್ನ
3. ಪ್ರತಿಕ್ರಿಯಾಕಾರಿ ಕರ್ಮ : ಈಗಿನ ಪಾಪ ಅಥವಾ ಪುಣ್ಯದ ಪ್ರತಿಕ್ರಿಯೆ.
4. ನಾಶಕಾರಿ ಕರ್ಮ : ಕೆಟ್ಟ ಪಾಪದ ಫಲ.

**ಮುಂದಿನ ಗತಿಯ ಪರಿಗಣನೆಯಿಂದಾದ ವರ್ಗೀಕರಣ**

1. ಅಕುಶಲ ಕರ್ಮಗಳಿಂದಾಗಿ ಕಾಮಲೋಕದಲ್ಲಿ ಅಂದರೆ ಮಾನವ ಲೋಕದಲ್ಲಿ ಅಥವಾ ದುರ್ಗತಿಗಳಾದ, ಅಸುರ, ಪ್ರೇತ, ಪ್ರಾಣಿ, ಈ ನರಕಗಳಲ್ಲಿ ಜನನ ಮತ್ತು ದುಃಖ ಅನುಭವಿಸುವಿಕೆ.
2. ಕುಶಲ ಕರ್ಮಗಳಿಂದಾಗಿ ಸುಗತಿಯಲ್ಲಿ ಅಂದರೆ ದೇವಲೋಕದಲ್ಲಿ ಅಥವಾ ಮಾನವ ಲೋಕದಲ್ಲಿ ಜನನ ಮತ್ತು ಸುಖಪ್ರಾಪ್ತಿ.
3. ಧ್ಯಾನಗಳಿಂದ ಸಿಗುವ ರೂಪಲೋಕ.
4. ಧ್ಯಾನಗಳಿಂದ ಸಿಗುವ ಅರೂಪಲೋಕ.

ಹೀಗೆ ಆತನು ಕರ್ಮ ಪರಿಣಾಮಗಳನ್ನು ಅರಿತಾಗ ಕರ್ಮಗಳಿಂದಾಗಿ ಸಿಗುವ ಅಪಾಯ ಅಥವಾ ಸುಗತಿ ಸ್ಪಷ್ಟವಾಗಿ ಅರಿತಾಗ ಆತನು ವರ್ತಮಾನ ಕಾಲದ ಮಹತ್ವತೆ ಅರಿತು ಕುಶಲ ಕರ್ಮಗಳಲ್ಲಿ ತಲ್ಲೀನನಾಗಿ ಧ್ಯಾನಗಳಲ್ಲಿ, ಪ್ರಜ್ಞಾಭಾವನಾದಲ್ಲಿ ತಲ್ಲೀನನಾಗುತ್ತಾನೆ. ಧ್ಯಾನದಲ್ಲಿ ಎಲ್ಲವನ್ನು ಅರಿಯುವ ಸಾಧಕನಿಗೆ **'ಮುಂದಿನ ಜನ್ಮವಿಲ್ಲ'** ಎಂಬ ಮಿಥ್ಯಾದೃಷ್ಟಿಯು ನಾಶವಾಗುತ್ತದೆ. ಹಾಗೆಯೇ **'ಎಲ್ಲದಕ್ಕೂ ಹಿಂದಿನ ಜನ್ಮವೇ ಕಾರಣ'** ವರ್ತಮಾನದ ಮಹತ್ವವಿಲ್ಲ ಎಂಬ ಮಿಥ್ಯಾದೃಷ್ಟಿಯು ನಾಶವಾಗುತ್ತದೆ. ಹಾಗೆಯೇ **'ಕರ್ಮಫಲವಿಲ್ಲ'** ಎಂಬ ಮಿಥ್ಯಾದೃಷ್ಟಿಯು ನಾಶವಾಗುತ್ತದೆ.

ಹೀಗೆ ಆತನು ಅಂಟಿಕೊಳ್ಳುವಿಕೆ ಭವ ಉದಯಿಸುತ್ತದೆ. ಭವದಿಂದ ಜನ್ಮ ಉದಯಿಸುತ್ತದೆ. ಜನ್ಮದಿಂದ ದುಃಖವು ಉದಯಿಸುತ್ತದೆ ಎಂದು ಸ್ಪಷ್ಟವಾಗಿ ಅರಿಯುತ್ತಾನೆ.

ಆಗ ಆತನಿಗೆ ಇದ್ದ ಮೂರು ಕಾಲಗಳ ಬಗೆಗಿನ ಸಂದೇಹಗಳೆಲ್ಲವೂ ಪರಿಹಾರವಾಗುತ್ತದೆ. ಆತನಿಗೆ ಬುದ್ಧರ ಬಗ್ಗೆ, ಧಮ್ಮದ ಬಗ್ಗೆ, ಸಂಘದ ಬಗ್ಗೆ (ವಿನಯ/ಶಿಸ್ತು), ಭೂತಕಾಲದ ಬಗ್ಗೆ, ಭವಿಷ್ಯಕಾಲದ ಬಗ್ಗೆ ಮತ್ತು ವರ್ತಮಾನದ ಬಗ್ಗೆ ಮತ್ತು ಪಟಚ್ಚ ಸಮುಪ್ಪಾದದ ಬಗ್ಗೆ ಎಲ್ಲಾರೀತಿಯ ಸಂದೇಹಗಳು ಪರಿಹಾರವಾಗುತ್ತದೆ.

**ಕರ್ಮ ಮತ್ತು ಅದರ ಪರಿಣಾಮವಿದೆ, ಆದರೆ ಕರ್ತೃವಿಲ್ಲ :**

ಯಾವುದೇ ರೀತಿಯ ಪಕ್ಷಪಾತವಿಲ್ಲದೆ ವೀಕ್ಷಿಸುತ್ತಿರುವ ಆತನಿಗೆ ಎಲ್ಲಾ ಬಗೆಯ



ಸಂಭವಿಸುವಿಕೆಗಳು, ಎಲ್ಲಾ ಹಂತಗಳು ಕೇವಲ ಶಾರೀರಿಕ, ಮಾನಸಿಕಾ (ನಾಮರೂಪ) ಗಳಾಗಿಯೇ ಕಾಣುತ್ತದೆ. ಅವೆಲ್ಲವೂ ಕಾರಣ ಮತ್ತು ಫಲ (ಪರಿಣಾಮ)ದ ಕೊಂಡಿಗಳಾಗಿ ಕಾಣುತ್ತದೆ. ಆತನು ಯಾವುದೇ ಕರ್ತೃವನ್ನು (ಕರ್ಮ ಮಾಡುವವನನ್ನು) ಕಾಣಲಾರ. ಹಾಗೆಯೇ ಆತನಿಗೆ ಕರ್ಮಾನುಭವಿಯನ್ನು (ಕರ್ಮ ಪರಿಣಾಮವನ್ನು ಅನುಭವಿಸುವವನು) ಕಾಣಲಾರ. ಇದನ್ನು ಆತನು ಸ್ಪಷ್ಟವಾಗಿ, ಸಮ್ಮಾದೃಷ್ಟಿಯಿಂದ ಕಾಣುತ್ತಾನೆ. ಅಲ್ಲಿ ಕೇವಲ **'ಮಾಡುವಿಕೆ'** ಇರುತ್ತದೆ ಆದರೆ **ಮಾಡುವವನು** ಇರಲಾರ. ಅಲ್ಲಿ ಕೇವಲ **'ಅನುಭವ'** ಇರುತ್ತದೆ. ಆದರೆ **ಅನುಭವಿಸುವವನು** ಇರಲಾರ. ಅದು ಕೇವಲ ವ್ಯವಹಾರ ಭಾಷೆಯಷ್ಟೇ. ಆದ್ದರಿಂದಲೇ ಸನಾತನಿ ಬೌದ್ಧರು ಹೇಳಿರುವುದು:

"ಕರ್ಮ ಮಾಡುವವನು (ಕರ್ತೃ) ಇಲ್ಲ ಅಥವಾ ಕರ್ಮ ಪರಿಣಾಮವನ್ನು ಅನುಭವಿಸುವವನೂ ಇಲ್ಲ. ಕೇವಲ ಆಗುಹೋಗುವಿಕೆಗಳು ಹರಿಯುತ್ತಿವೆ. ಇದರ ಹೊರತು ಬೇರೆ ಯಾವುದೂ ಸಮ್ಮಾದೃಷ್ಟಿಯಿಲ್ಲ".

"ಮತ್ತು ಹೀಗೆ ಕರ್ಮ ಮತ್ತು ಪರಿಣಾಮಗಳು ಕಾರಣಬದ್ಧವಾಗಿ ತಮ್ಮ ಸುತ್ತುಗಳನ್ನು ನಡೆಸುತ್ತಿರುತ್ತವೆ. ಹೇಗೆಂದರೆ ಬೀಜ ಮತ್ತು ವೃಕ್ಷಗಳು ಬದಲಾಗುವ ರೀತಿ ಪ್ರಥಮ ಆದಿಯನ್ನು ತೋರಿಸಲು ಆಗುವುದಿಲ್ಲ. ಹಾಗೆಯೇ ಜನ್ಮಗಳ ಚಕ್ರಗಳ ಭವಿಷ್ಯವನ್ನು ಸಹಾ ಅವು ಸಂಭವಿಸಬಾರದೆಂದು ತೋರಿಸಲು ಅಗುವುದೇ? ಅನ್ಯ ಪಂಥಿಯರು ಇದನ್ನು ಅರಿಯಲಾಗದೆ ಪೂರ್ಣ ಸ್ವ-ಪ್ರಭುತ್ವವನ್ನು ಪಡೆಯಲು ವಿಫಲರಾಗಿರುವರು".

"ಅವರು ಜೀವಿಯನ್ನು (ಆತ್ಮ) ಕಲ್ಪಿಸುವರು. ಅದನ್ನು ನಿತ್ಯವೆಂದು ಅಥವಾ ನಶ್ವರವೆಂದು ಕಾಣುವರು. 62 ಮಿಥ್ಯಾದೃಷ್ಟಿಗಳನ್ನು ಅವರು ಹೊಂದಿದ್ದು, ಅವೆಲ್ಲಾ ಒಂದು ಇನ್ನೊಂದಕ್ಕೆ ವಿರೋಧವಾಗಿರುವುವು".

"ತನ್ಹಾದ ಪ್ರವಾಹವು ಅವರನ್ನು ಸದೆಬಡಿದಿದೆ. ಅವರು ತಮ್ಮದೇ ಆದ ದೃಷ್ಟಿಗಳ ಬಲೆಯಲ್ಲಿ ಸಿಕ್ಕಿಕೊಂಡಿದ್ದಾರೆ ಮತ್ತು ಹೀಗೆ ಪ್ರವಾಹವು ಅವರನ್ನು ಸದೆಬಡಿಯುವಾಗ ಅವರು ದುಃಖದಿಂದ ಮುಕ್ತರಾಗುವುದಿಲ್ಲ".

"ಬುದ್ಧರ ಶಿಷ್ಯನಾದ ಭಿಕ್ಖುವು ತನ್ನ ಅಭಿಜ್ಞಾ ಮತ್ತು ಪ್ರಜ್ಞಾದಿಂದ ಈ ವಾಸ್ತವವನ್ನು ಅರಿಯುತ್ತಾನೆ ಮತ್ತು ಶೂನ್ಯ ಸ್ಥಿತಿಯನ್ನು ಆಳವಾಗಿ ಮತ್ತು ಸೂಕ್ಷ್ಮವಾಗಿ ಅರಿಯುತ್ತಿರುತ್ತಾರೆ".

"ಪರಿಣಾಮದಲ್ಲಿ ಯಾವ ಕರ್ಮವೂ ಇಲ್ಲ. ಹಾಗೆಯೇ ಕರ್ಮದಲ್ಲಿ ಯಾವ ಪರಿಣಾಮವೂ ಇಲ್ಲ. ಅವು ಒಂದಕ್ಕೆ ಇನ್ನೊಂದು ಶೂನ್ಯವಾಗಿದ್ದರೂ ಕರ್ಮದ ವಿನಃ ಫಲವಿಲ್ಲ".

"ಹೇಗೆ ಅಗ್ನಿಯು ರತ್ನದ ಹರಳಿನಲ್ಲಿಯಾಗಲಿ, ಭರಣಿಯಲ್ಲಾಗಲಿ, ಕಟ್ಟಿಗೆಯಲ್ಲಾಗಲಿ ಇರುವುದಿಲ್ಲವೋ ಹಾಗೆಯೇ ಅವುಗಳ ಹೊರಗೂ ಇರುವುದಿಲ್ಲವೋ, ಆದರೆ ಅದರ ಅಂಗಗಳ ಯೊಗ್ಯರೀತಿಯಲ್ಲಿನ ಕ್ರಿಯೆ ಮಾಡಿದಾಗ ಅಗ್ನಿಯನ್ನು ಉತ್ಪಾದಿಸಬಹುದು".

"ಹೀಗೆ ಎರಡು ರೀತಿಯಲ್ಲಿಯೂ ಪರಿಣಾಮಗಳನ್ನು ನಾವು ಕಾಣಲಾರೆವು. ಕರ್ಮ ಒಳಗೂ ಅಥವಾ ಕರ್ಮದ ಹೊರಗೂ ಅಥವಾ ಅದರ ಫಲಿತಾಂಶದಲ್ಲೂ ಸಹಾ".

"ಕರ್ಮಕ್ಕೆ ಅದರ ಫಲವೂ ಶೂನ್ಯ, ಫಲಕ್ಕೆ ಕರ್ಮವೂ ಶೂನ್ಯ. ಆದರೆ ಫಲವಂತು ಅದರಿಂದಲೇ ಬರುತ್ತದೆ. ಕರ್ಮವನ್ನು ಅವಲಂಬಿಸಿಯೇ ಹುಟ್ಟುತ್ತದೆ ಮತ್ತು ಇಲ್ಲಿ ಯಾವ ಸೃಷ್ಟಿಕರ್ತ ಬ್ರಹ್ಮ ಇಲ್ಲ. ಜನ್ಮಗಳಲ್ಲಿ ಸುತ್ತಾಡಿಸುವಂತಹ ಸೃಷ್ಟಿಕರ್ತನಿಲ್ಲ. ಕೇವಲ ಕಾರಣ ಮತ್ತು ಅದರ ಅಂಗಗಳ ಆಗುಹೋಗುವಿಕೆಗಳೇ ಹರಿಯುತ್ತಿವೆ".

ಹೀಗೆ ಆತನು ನಾಮರೂಪಗಳನ್ನು ಮತ್ತು ಕರ್ಮ ಹಾಗು ಕರ್ಮದ ಪರಿಣಾಮಗಳನ್ನು ಈ ರೀತಿಯಾಗಿ ಅರಿಯುತ್ತಿರುವಾಗ ಆತನಲ್ಲಿ ಕಾಲದ ಮೂರು ಹಂತಗಳಾದ ಭೂತ, ಭವಿಷ್ಯತ್ ಮತ್ತು ವರ್ತಮಾನದ ಎಲ್ಲಾ ಸಂಶಯಗಳು ನಿವಾರಣೆಯಾಗುತ್ತದೆ. ಆತನಿಗೆ ಮರಣ ಮತ್ತು ಪುನರ್ಜನ್ಮದ ಕೊಂಡಿಗಳು ಸ್ಪಷ್ಟವಾಗಿ ಅರ್ಥವಾಗುತ್ತದೆ. ಭೂತಕಾಲದಿಂದ ವರ್ತಮಾನದ ಕೊಂಡಿ, ಹಾಗೆಯೇ ವರ್ತಮಾನದಿಂದ ಭವಿಷ್ಯದ ಕೊಂಡಿಗಳನ್ನು ಸ್ಪಷ್ಟವಾಗಿ ಅರಿಯತ್ತಾನೆ.

"ಹೇಗೆ ಕಣ್ಣಿನ ವಿನ್ಯಾನವನ್ನು ಮನೋವಿನ್ಯಾನವು (ಚಿತ್ತದ ವಿಷಯಗಳು) ಹಿಂಬಾಲಿಸುವುದೋ, ಅದು ಅದರಿಂದಲೇ ಬಂದಿರುವಂತಹದ್ದಾಗಿದೆ. ಹಾಗೆಯೇ ಪುನರ್ ಜನ್ಮದ ಕೊಂಡಿಯು ಸಹಾ ನಿರಂತರ ನಡೆಯುತ್ತಲೇ ಇರುತ್ತದೆ. ಹಿಂದಿನ ಚಿತ್ತವು ಮುರಿಯುತ್ತದೆ. ನಂತರದ ಚಿತ್ತವು ಅದರಿಂದಲೇ ಹುಟ್ಟುತ್ತದೆ. ಇವುಗಳ ನಡುವಿನ ಅಂತರವಿಲ್ಲ. ನಿಲ್ಲುವಿಕೆಯಿಲ್ಲ, ವಿಶ್ರಾಂತಿಯೂ ಇಲ್ಲ. ಅಲ್ಲಿ ಏನೊಂದು ಹಾದು ಹೋಗದಿದ್ದರೂ ಪುನರ್ಜನ್ಮದ ಕೊಂಡಿಯು ಅಸ್ತಿತ್ವಕ್ಕೆ ಬಂದಿದೆ".

ಹೀಗೆ ಅತನು ಅನಿತ್ಯವನ್ನು ಗಮನಿಸುತ್ತಿರುವಾಗ ಎಲ್ಲಾ ಖಂಧಗಳ ಅನಿತ್ಯವನ್ನು ಸ್ಪಷ್ಟವಾಗಿ ನೋಡುತ್ತಾನೆ. ಆಗ ಆತನ ಸಂದೇಹಗಳೆಲ್ಲವೂ ಪರಿಹಾರವಾಗುತ್ತದೆ.

ಸರಿಯಾದ ಜ್ಞಾನ, ಯೋಗ್ಯವಾದ ರೀತಿಯಲ್ಲಿ ನೋಡುವಿಕೆ ಮತ್ತು ಸಂದೇಹವನ್ನು ಹಾದುಹೋಗುವಿಕೆ ಇವೆಲ್ಲವೂ ಒಂದೇ ಅರ್ಥವನ್ನು ನೀಡುತ್ತದೆ. ಕೇವಲ ಪದಗಳು ಬೇರೆಯಷ್ಟೇ. ಈ ರೀತಿಯಲ್ಲಿ ಭಿಕ್ಷುವು ನಾಮರೂಪಗಳನ್ನು ಸದಾ ಜಾಗ್ರತೆಯಲ್ಲಿ ಗಮನಿಸಿ ಸಂದೇಹಾತೀತನಾಗುತ್ತಾನೆ. ಆತನು ಸೋತಪನ್ನ ಸ್ಥಿತಿಗಿಂತ ಸ್ವಲ್ಪ ಕೆಳಗೆ ಇರುತ್ತಾನೆ.

ಆತನಿಗೆ ಬುದ್ಧರಲ್ಲಿ, ಧಮ್ಮದಲ್ಲಿ ಮತ್ತು ಸಂಘಗಳಲ್ಲಿ ಸಂಶಯ ನಾಶವಾಗಿ ತ್ರಿರತ್ನಗಳಲ್ಲಿ ಪ್ರಬಲ ಶ್ರದ್ಧೆಯುಳ್ಳವನಾಗುತ್ತಾನೆ.

ಇಲ್ಲಿಯದನ್ನು ಕುರಿತ, ಮುಂದಿನದನ್ನು ಕುರಿತ ಯಾವ ಸಂಶಯಗಳಿವೆಯೋ, ತಾನೇ ಅರಿತಿರುವುದಾಗಲಿ ಅಥವಾ ಪರರಿಗೆ ತಿಳಿದವುಗಳಾಗಲಿ, ಅವೆಲ್ಲವನ್ನು ಧ್ಯಾನಿಗಳಾದವರು ಪರಿಹರಿಸಿ ತೊರೆಯುತ್ತಾರೆ. ಶ್ರದ್ಧೆಯಿಂದ ಬ್ರಹ್ಮಚರ್ಯ ಜೀವನ ಪಾಲಿಸುತ್ತಾರೆ.

*"ಯಾರಿಗೆ ಬಂಧನವಿಲ್ಲವೋ ಯಾರು ಪೂರ್ಣ ಪ್ರಜ್ಞೆಯಿಂದಾಗಿ ಸರ್ವ ಸಂಶಯಗಳನ್ನು ಇಲ್ಲವಾಗಿಸಿಕೊಂಡಿರುವನೋ ಮತ್ತು ಅಮರತ್ವ ಸಿದ್ಧಿಸಲು ಸಿದ್ಧನೋ ಆತನನ್ನು ನಾನು ಬ್ರಾಹ್ಮಣ (ಶ್ರೇಷ್ಠ/ಪರಿಶುದ್ಧ) ಎನ್ನುತ್ತೇನೆ".* **(ಧಮ್ಮಪದ 411)**



## ತ್ರಿಶರಣುವಿಗೆ ಮೀರಿದ ಶ್ರೇಷ್ಠ ಶರಣಿಲ್ಲ :

ಈ ಲೋಕಗಳಿಂದ ಮುಕ್ತರಾಗಲು ನಂಬುವಂತಹ, ಕ್ಷೇಮಯುತ ಮಿಥ್ಯವಲ್ಲದ ಆಶ್ರಯಗಳೆಂದರೆ ಬುದ್ಧ, ಧಮ್ಮ ಮತ್ತು ಸಂಘವಾಗಿದೆ. ಇವೇ ತ್ರಿರತ್ನಗಳಾಗಿವೆ. ಇವುಗಳಿಗೆ ಶರಣು (ನಂಬುವುದೇ) ತ್ರಿಶರಣಗಳಾಗಿವೆ.

ಮಹಾ ಕೋಶಾಲ ರಾಜನ ಬಳಿ ಅಗ್ಗಿದತ್ತನೆಂಬ ಪುರೋಹಿತನಿದ್ದನು. ಆತನು ಮಹಾರಾಜರ ನಿಧನದ ನಂತರ ವಿರಕ್ತಿ ಹುಟ್ಟಿ ತನ್ನ ಸಂಪತ್ತೆಲ್ಲಾ ದಾನ ಮಾಡಿ ಸನ್ಯಾಸಿಯಾದನು. ಆತನಿಗೆ ಅಸಂಖ್ಯಾತ ಶಿಷ್ಯರು ದೊರಕಿದರು. ಆತನಿಗೆ ಅಂಗ, ಮಗಧ ಮತ್ತು ಕುರು ಈ ಮೂರು ರಾಜ್ಯಗಳಿಂದಲೂ ಶಿಷ್ಯರಿದ್ದರು. ಆತನ ಬೋಧನೆಯೆಂದರೆ "ಕಾಡಿಗೆ ನಮಸ್ಕರಿಸಿ, ಪರ್ವತಕ್ಕೆ ನಮಸ್ಕರಿಸಿ, ಮರಗಳಿಗೆ ವಂದಿಸಿರಿ. ಈ ರೀತಿ ವಂದಿಸುವುದರಿಂದ ನೀವು ಜೀವನದ ಎಲ್ಲಾ ದುಃಖಗಳಿಂದ ಪಾರಾಗುವಿರಿ".

ಒಂದು ದಿನ ಭಗವಾನರಿಗೆ ಅಗ್ಗಿದತ್ತ ಮತ್ತು ಆತನ ಹಿಂಬಾಲಕರು ಅರಹತ್ವ ಪಡೆಯಲು ಪಕ್ವವಾಗಿದ್ದಾರೆ ಎಂದು ಅರಿವಾಗಿ ಭಗವಾನರು ಮೊಗ್ಗಲಾನರನ್ನು ಅಗ್ಗಿದತ್ತ ಮತ್ತು ಆತನ ಹಿಂಬಾಲಕರಿಗೆ ಬೋಧನೆ ಮಾಡಲು ಕಳುಹಿಸಿದರು.

ಮೊಗ್ಗಲಾನರವರು ಅಲ್ಲಿಗೆ ಹೋಗಲು ಸಂಜೆಯಾಯಿತು. ಅವರು ಮಲಗಲು ಸ್ಥಳವನ್ನು ಕೇಳಿದರು. ಮೊದಲು ಅವರು ನಿರಾಕರಿಸಿದರು. ನಂತರ 'ನಾಗಾ' ವಾಸಿಸುವಂತಹ ಸ್ಥಳವನ್ನು ತೋರಿಸಿದರು. ನಂತರ ಅವರು ಅಲ್ಲಿ ನೆಲೆಸಿದರು. ಸ್ವಲ್ಪಹೊತ್ತಿನಲ್ಲಿ ನಾಗಾವು ಭಯಂಕರ ಕೋಪ ಆವೇಶ ತೋರಿಸುತ್ತಾ ಮೊಗ್ಗಲಾನರವರನ್ನು ಎದುರಿಸಲು ಬಂದಿತು. ಆದರೆ ಕೊನೆಗೆ ಮೊಗ್ಗಲಾನರವರ ಮುಂದೆ ಸೋತಿತು, ಶರಣಾಗತವಾಯಿತು.

ಮಾರನೆಯದಿನ ಬೆಳಿಗ್ಗೆ ಅಗ್ಗಿದತ್ತ ಮತ್ತು ಆತನ ಹಿಂಬಾಲಕರು ಮೊಗ್ಗಲಾನರವರ ಹಣೆಬರಹ ನೋಡಲು ಬಂದರು. ಆದರೆ ಮೊಗ್ಗಲಾನರವರ ಹಿಂದೆ ಕೊಡೆಯಂತೆ ಹೆಡೆಯನ್ನು ಬಿಚ್ಚಿ ರಕ್ಷಣೆ, ಗೌರವ ನೀಡುತ್ತಾ ಅದು ಮೊಗ್ಗಲಾನರನ್ನು ಹಿಂಬಾಲಿಸಿತು. ಅದನ್ನು ವೀಕ್ಷಿಸಿದ ಎಲ್ಲರೂ ಗೌರವ ಮತ್ತು ಭಕ್ತಿಯಿಂದ ಮೊಗ್ಗಲಾನರವರನ್ನು ವಂದಿಸಿದರು.

ಆಗ ಬುದ್ಧರು ಅಲ್ಲಿ ಪ್ರವೇಶಿಸಿದರು. ಆಗ ಮೊಗ್ಗಲಾನರವರು ಎದ್ದು ಭಗವಾನರಿಗೆ ವಂದಿಸಿ "ಇವರೇ ನನ್ನ ಗುರುಗಳು, ಪರಮಶ್ರೇಷ್ಠರಾದ ಬುದ್ಧರು ಮತ್ತು ನಾನು ಅವರ ವಿನಮ್ರ ಶಿಷ್ಯನು" ಎಂದು ಪರಿಚಯಿಸುತ್ತಿದ್ದರು. ಅದನ್ನು ಕಂಡು ಕಂಡು ಅಗ್ಗಿದತ್ತ ಮತ್ತು ಆತನ ಶಿಷ್ಯರೆಲ್ಲರೂ ಸಹಾ ಬುದ್ಧರಿಗೆ ವಂದಿಸಿದರು.

ನಂತರ ಭಗವಾನರು ಅವರಿಗೆ ಈ ರೀತಿಯಲ್ಲಿ ಬೋಧಿಸಿದರು :

"ಯಾವಾಗ ಭಯವು ಪೀಡಿಸುವುದೋ ಆಗ ಮನುಷ್ಯರು ಹಲವಾರು ಪ್ರದೇಶಗಳಿಗೆ ಶರಣು ಹೋಗುತ್ತಾರೆ. ಅವೆಂದರೆ : ಬೆಟ್ಟಗಳು, ಪರ್ವತಗಳು, ಕಾಡುಗಳು, ಉದ್ಯಾನವನಗಳು, ಮರಗಳು ಮತ್ತು ಮಂದಿರಗಳು".

"ಆದರೆ ಅಂತಹ ಶರಣು ಕ್ಷೇಮಕರವಲ್ಲ ಮತ್ತು ಅವ್ಯಾವುದು ಉತ್ತಮವಾದ (ಶ್ರೇಷ್ಠವಾದ) ಶರಣು ಅಲ್ಲ. ಅಂತಹ ಶರಣುವಿನಿಂದ ಯಾರೊಬ್ಬರು ದುಃಖದಿಂದ ಮುಕ್ತರಾಗಲು ಸಾಧ್ಯವಿಲ್ಲ".

"ಆದರೆ ಯಾರು ಬುದ್ಧರಲ್ಲಿ, ಧಮ್ಮದಲ್ಲಿ ಮತ್ತು ಸಂಘದಲ್ಲಿ ಶರಣು ಹೋಗುವರೋ ಅವರು ಮಾತ್ರ ಸಮ್ಮಾ ಪ್ರಜ್ಞಾದಿಂದ ನಾಲ್ಕು ಆರ್ಯಸತ್ಯಗಳನ್ನು ಅರಿಯುತ್ತಾರೆ. ಅದೆಂದರೆ ದುಃಖ, ಸಮುದಯ, ನಿರೋಧ ಮತ್ತು ಮಾರ್ಗ".

*"ಇದು ನಿಜಕ್ಕೂ ಶರಣು ಆಗಿದೆ (ನಂಬುವಂತಹ, ವಿಶ್ವಾರ್ಹವಾಗಿದೆ) ಕ್ಷೇಮಕರವಾಗಿದೆ. ಇಂತಹುದರಲ್ಲಿ ಶರಣು ಹೋದವರು ದುಃಖವೆಲ್ಲದರಿಂದ ಮುಕ್ತರಾಗುತ್ತಾರೆ".* **(ಧಮ್ಮಪದ 188–192)**

ಈ ಸುತ್ತದ ಕೊನೆಯಲ್ಲಿ ಎಲ್ಲರೂ ಅರಹಂತರಾಗುತ್ತಾರೆ ಮತ್ತು ಎಲ್ಲರೂ ಸಂಘಕ್ಕೆ ಸೇರುತ್ತಾರೆ.

## ಸೋತಪನ್ನ ಯಾರು?

ಸಮುದ್ರದಲ್ಲಿ ರಾತ್ರಿ ಪ್ರಯಾಣ ಮಾಡುವ ಪ್ರಯಾಣಿಕನು ದೂರದಿಂದ ಭೂ ಪ್ರದೇಶದ ಬೆಳಕನ್ನು ಕಂಡು ಮರೆಯಾದಂತೆ ಧ್ಯಾನಿಗೆ ಇಲ್ಲಿ ನಿಬ್ಬಾಣದ ದರ್ಶನವಾಗುತ್ತದೆ. ಮೊದಲಬಾರಿಗೆ ನಿಬ್ಬಾಣ ಸಾಕ್ಷಾತ್ಕರಿಸುವುದರಿಂದ, ನಿಬ್ಬಾಣದ ಹೊಳೆಯಲ್ಲಿ ಪ್ರವೇಶಿಸುವುದರಿಂದಾಗಿ ಆತನಿಗೆ ಸೋತಾಪನ್ನ ಎನ್ನುತ್ತಾರೆ.

ಈ ಹೊಳೆಯಲ್ಲಿ ಗೆದ್ದ ವಿಜಯಶಾಲಿ (ಸೋತಾಪನ್ನ) ಈಗ ಪ್ರಾಪಂಚಿಕನಲ್ಲ (ಪುತುಜ್ಜನ) ಬದಲಾಗಿ ಆರ್ಯನಾಗಿರುತ್ತಾನೆ (ಶ್ರೇಷ್ಠ).

ಆತನಲ್ಲಿ 3 ಸಂಕೋಲೆಗಳು ಕತ್ತರಿಸಲ್ಪಟ್ಟಿರುತ್ತದೆ. ಅವೆಂದರೆ :

1. ಸಕ್ಕಾಯದಿಟ್ಠಿ – ಅಂದರೆ ಆತ್ಮ ಇದೆ ಎನ್ನುವ ದೃಷ್ಟಿ ಮತ್ತು ಸಾವೇ ದೇಹದ ಕೊನೆ ಎಂಬ ದೃಷ್ಟಿಗಳು ನಾಶವಾಗುತ್ತದೆ.
2. ಸಂಶಯಗಳು – ತ್ರಿರತ್ನದಲ್ಲಿ ಮತ್ತು 3 ಕಾಲದಲ್ಲಿರುವ ಸಂಶಯಗಳೆಲ್ಲಾ ಆತನಲ್ಲಿ ನಾಶವಾಗುತ್ತದೆ.
3. ಸೀಲಬ್ಬತ ಪರಾಮಾಸ : ಅಂದರೆ ಮಿಥ್ಯಾ ಆಚರಣೆಗಳಿಗೆ ಮತ್ತು ಮಿಥ್ಯಾ ಸಮಾರಂಭಗಳಿಗೆ ಅಂಟಿರುವುದು.

ಇವೆಲ್ಲವೂ ಸೋತಾಪನ್ನಾನಲ್ಲಿ ಕತ್ತರಿಸಲ್ಪಟ್ಟಿರುತ್ತದೆ.

ಸೋತಾಪನ್ನರವರು ಬುದ್ಧರಲ್ಲಿ, ಧಮ್ಮದಲ್ಲಿ, ಸಂಘದಲ್ಲಿ ಅಪಾರ ಅಚಲ ಶ್ರದ್ಧೆಯಿಂದ ಕೂಡಿರುತ್ತಾರೆ.

ಸೋತಾಪನ್ನರವರು ಎಂದಿಗೂ ಪಂಚಶೀಲವನ್ನು ಭಂಗ ಮಾಡುವುದಿಲ್ಲ ಮತ್ತು ಅವರು ಅಪಾಯ ಲೋಕಗಳಾವುದರಲ್ಲೂ ಜನಿಸುವುದಿಲ್ಲ ಮತ್ತು ಅವರು ಬೋಧಿಗೆ ವಾಲಿರುವುದರಿಂದಾಗಿ ಹೆಚ್ಚೆಂದರೆ 7 ಜನ್ಮಗಳನ್ನು ಹೊಂದಿರುತ್ತಾರೆ. ಅದರ ಒಳಗೆಯೇ



ನಿಬ್ಬಾಣವನ್ನು ಪಡೆಯುತ್ತಾರೆ ಮತ್ತು ಅವರಿಗೆ 7 ಸಂಕೋಲೆಗಳು ಮಾತ್ರ ಉಳಿದಿರುತ್ತದೆ. ಮೆತ್ತಾ ಕರುಣೆಯಿಂದ ಕೂಡಿರುವ ಅವರು ಪರರನ್ನು ಸೋತಾಪನ್ನ ಮಾಡಲು ಸದಾ ಪ್ರಯತ್ನಶೀಲರಾಗಿರುತ್ತಾರೆ ಹಾಗು ಸೋತಾಪನ್ನರಲ್ಲಿ ಈ 5 ದೋಷಗಳು ಇರುವುದಿಲ್ಲ.

1. ಬೇರೆಯವರು ಬೋಧನೆ ಮಾಡಿದರೆ ಬೇಸರಪಡುವುದು (ಮಾಕ್ಖೋ)
2. ತನ್ನನ್ನು ಶ್ರೇಷ್ಠರಿಗೆ ಹೋಲಿಸಿಕೊಳ್ಳುವುದು (ಫಲಿಸೋ)
3. ಅಸೂಯೆ (ಇಸ್ಸಾ)
4. ಸ್ವಾರ್ಥ (ಮಚ್ಚರಿಯ)
5. ಮಾಯಾವಿಯತೆ (ಮಾಯಾ) ಅಂದರೆ ಮೋಸ, ವಂಚನೆ.

"ಭಿಕ್ಖುಗಳೇ, ಯಾರೆಲ್ಲಾ ಅವಿಚಲಿತ ಶ್ರದ್ಧೆಯನ್ನು ನನ್ನಲ್ಲಿ ಇರಿಸಿದ್ದಾರೋ ಅವರು ಸೋತಪನ್ನರಾಗುತ್ತಾರೆ. ಸೋತಪನ್ನರು ಇಲ್ಲಿಯೇ 5 ವಿಜಯಗಳನ್ನು ಪಡೆಯುತ್ತಾರೆ ಮತ್ತು ಪರಲೋಕದಲ್ಲೂ 5 ವಿಜಯಗಳನ್ನು ಪಡೆಯುತ್ತಾರೆ. ಯಾವುವವು?"

"ಆತನಿಗೆ ಹೆಚ್ಚೆಂದರೆ 7 ಜನ್ಮಗಳು ಮಾತ್ರ ಇರುತ್ತದೆ. ಒಳ್ಳೆಯ ಶುದ್ಧ ವಂಶದಲ್ಲಿ ಹುಟ್ಟುತ್ತಾನೆ. ಆತನ ಪ್ರಜ್ಞಾಹರಿತವಾಗಿರುತ್ತದೆ. ಈ ಜನ್ಮದಲ್ಲೇ ಅರಹಂತವಾಗುವ ಸಾಧ್ಯತೆಯಿರುತ್ತದೆ."

"ಪರಲೋಕದಲ್ಲಿ ಪಡೆಯುವ ವಿಷಯಗಳೆಂದರೆ: ಮಧ್ಯದಲ್ಲೇ ಆತನು ವಿಮುಕ್ತನಾಗಬಹುದು, ಕಾಲಕ್ಕೆ ಮೊದಲೇ ವಿಮುಕ್ತನಾಗಬಹುದು, ಹೆಚ್ಚು ಕಷ್ಟಗಳಿಲ್ಲದೆ ಅಥವಾ ಅಲ್ಪ ಕಷ್ಟಗಳಿಂದ ವಿಮುಕ್ತನಾಗಬಹುದು ಮತ್ತು ಹಿರಿಯ ಅರಹಂತರಂತೆ ವಿಮುಕ್ತನಾಗುತ್ತಾನೆ."

## ಸೋತಪನ್ನ ಹೇಗಾಗುತ್ತಾನೆ?

"ಭಿಕ್ಖುಗಳೇ, ಯಾವಾಗ ಆರ್ಯಶ್ರಾವಕನು ಪಂಚ ಉಪಾದಾನ ಖಂಧಗಳಿಗೆ (ದೇಹ ಮತ್ತು ಮನಸ್ಸುಗಳ ಅಂಟುವಿಕೆಯನ್ನು) ಅವು ಹೇಗಿದೆಯೋ ಹಾಗೆಯೇ ಅರಿಯುತ್ತಾನೋ, ಅವುಗಳ ಉದಯವನ್ನು ಅರಿಯುತ್ತಾನೋ ಮತ್ತು ಅವುಗಳು ಅಳಿಯುವಿಕೆ ಅರಿಯುತ್ತಾನೋ, ಉದಯವಯಗಳೆರಡನ್ನು ಅರಿಯುತ್ತಾನೋ, ಅವುಗಳ ಸ್ವಾದವನ್ನು, ಅವುಗಳ ಅಪಾಯವನ್ನು ಅವುಗಳಿಂದ ಪಾರಾಗುವಿಕೆಯನ್ನು ಯತಾಭೂತವಾಗಿ ಅರಿಯುತ್ತಾನೋ ಅಂತಹ ಆರ್ಯಶ್ರಾವಕನಿಗೆ ಸೋತಪನ್ನ (ಶೋಕವನ್ನು ಗೆದ್ದಿರುವವನು) ಎನ್ನುತ್ತಾರೆ. ಆತನು ಎಲ್ಲಾ ಅಪಾಯಗಳಿಂದ ಪಾರಾಗಿದ್ದಾನೆ, ಅಂತಹವನು ಬೋಧಿಯನ್ನು ಖಚಿತವಾಗಿ ಪಡೆಯುತ್ತಾನೆ."



# IX. ಬುದ್ಧರು ಕೆಲವು ಪ್ರಶ್ನೆಗಳಿಗೆ ಏಕೆ ಉತ್ತರಿಸಲಿಲ್ಲ?

## ಬುದ್ಧರು ಕೆಲವು ಪ್ರಶ್ನೆಗಳಿಗೆ ಏಕೆ ಉತ್ತರಿಸಲಿಲ್ಲ?

ಒಮ್ಮೆ ವಚ್ಚಗೊತ್ತ ಭಗವಾನರಲ್ಲಿಗೆ ಬಂದು: "ಲೋಕವು ಶಾಶ್ವತವೇ ಅಥವಾ ಅಶಾಶ್ವತವೇ? ಅನಂತವೇ ಅಥವಾ ಅಂತವೇ? ಶರೀರ ಮತ್ತು ಜೀವ ಒಂದೆಯೇ ಅಥವಾ ಬೇರೆಯೇ? ತಥಾಗತರು ಸಾವಿನ ನಂತರ ಇರುವರೆ ಅಥವಾ ಇರುವುದಿಲ್ಲವೇ ಅಥವಾ ಇದ್ದು ಇರಲಾರರೇ ಅಥವಾ ಇರುವುದಿಲ್ಲ ಇಲ್ಲವೆಂದೂ ಇಲ್ಲವೇ?" ಎಂದೆಲ್ಲಾ ಪ್ರಶ್ನೆಗಳನ್ನು ಹಾಕತೊಡಗಿದನು.

ಆಗ ಭಗವಾನರು ಅಂತಹ ದೃಷ್ಟಿಗಳನ್ನು ಹೊಂದಿಲ್ಲ ಎನ್ನುತ್ತಾರೆ.

ಆಗ ಆತನು ಹೀಗೆ ಕೇಳುತ್ತಾನೆ: "ಯಾವ ಕಾರಣಕ್ಕಾಗಿ ಭಗವಾನರೇ, ಪರರು ಈ ಪ್ರಶ್ನೆಗೆ ಸುಲಭವಾಗಿ ಉತ್ತರಿಸುತ್ತಾರೆ, ಆದರೆ ಭಗವಾನರು ತಾವು 'ಈ ದೃಷ್ಟಿಯನ್ನು ಹೊಂದಿಲ್ಲ' ಎನ್ನುವಿರಿ, ಏಕೆ ಹೀಗೆ?"

ಆಗ ಭಗವಾನರು ಹೀಗೆ ಉತ್ತರಿಸುತ್ತಾರೆ "ಓ ವಚ್ಚ, ಪರ ಸಮಣ ಬ್ರಾಹ್ಮಣರು ಕಣ್ಣನ್ನು 'ಇದು ನನ್ನದು, ಇದೇ ನಾನು ಅಥವಾ ಇದೇ ನನ್ನ ಆತ್ಮ' ಎಂಬ ಆತ್ಮದೃಷ್ಟಿ (ಸತ್ಕಾಯ ದಿಟ್ಠಿ) ಇಡುತ್ತಾರೆ. ಹಾಗೆಯೇ ಅವರು ಕಿವಿಗೆ, ಮೂಗಿಗೆ, ನಾಲಿಗೆಗೆ, ದೇಹಕ್ಕೆ ಮತ್ತು ಮನಸ್ಸಿಗೆ 'ಇದು ನನ್ನದು, ಇದೇ ನಾನು ಅಥವಾ ಇದೇ ನನ್ನ ಆತ್ಮ' ಎಂಬ ದಿಟ್ಠಿ (ಸತ್ಕಾಯ ದಿಟ್ಠಿ) ಇಡುತ್ತಾರೆ. ಆದರೆ ವಚ್ಚ, ತಥಾಗತರು ಅರಹಂತರು ಆದ ಸಮ್ಮಾಸಂಬುದ್ಧರು ಈ ಆರು ಇಂದ್ರೀಯ ಆಧಾರಗಳಿಗೆ (ಕಣ್ಣು, ಕಿವಿ, ಮೂಗು, ನಾಲಿಗೆ, ದೇಹ, ಮನಸ್ಸಿಗೆ) 'ಇದು ನನ್ನದು, ಇದೇ ನಾನು ಅಥವಾ ಇದೇ ನನ್ನ ಆತ್ಮ' ಎಂದು ಭಾವಿಸುವುದಿಲ್ಲ. ಅಂತಹ ಮಿಥ್ಯಾದೃಷ್ಟಿಯನ್ನು ಹೊಂದಿಲ್ಲ. ಆದ್ದರಿಂದಾಗಿ ಆ ರೀತಿ ಉತ್ತರಿಸುವುದಿಲ್ಲ."

ಇನ್ನೊಮ್ಮೆ ಹೀಗೆ ಉತ್ತರಿಸುತ್ತಾರೆ: "ಭಿಕ್ಷುಗಳೇ, ಈ ಊಹಾಪೋಹಗಳು ಸಿದ್ಧಾಂತಗಳು ಹೇಗೆ ಬಂದಿತು. ಅವುಗಳ ಪರಿಣಾಮಗಳೇನು? ಎಂಬುದನ್ನು ತಥಾಗತರು ಅರಿತಿದ್ದಾರೆ. ಅಷ್ಟೇ ಅಲ್ಲ, ಇದನ್ನು ಮೀರಿದ, ದಾಟಿದ ಇನ್ನೆಷ್ಟೋ ವಿಷಯಗಳನ್ನು ತಥಾಗತರು ಅರಿತಿದ್ದಾರೆ... ಆದರೆ ಅಂತಹ ಗಂಭೀರ ಜ್ಞಾನದಿಂದಲೂ ಅವರು ಆನಂದಿಸುವುದಿಲ್ಲ. ಹೀಗೆ ಯಾವುದಕ್ಕೂ ಅವಲಂಬಿತವಾಗದೆ ತಮಗೆ ತಾವೇ ಆಧಾರವಾಗಿರುತ್ತಾರೆ. ಈ ಎಲ್ಲವುಗಳ ಉದಯ, ಅಳಿವು, ಅವುಗಳ ರುಚಿ, ಅವುಗಳ ಅಪಾಯ ಅರಿತು ಇವೆಲ್ಲಾ ನಂಬಿಕೆಗೆ ಅರ್ಹವಲ್ಲ ಎಂದು ಅರಿತು ಯಾವುದಕ್ಕೂ ಅಂಟದೆ ತಥಾಗತರು ಮುಕ್ತರಾಗಿದ್ದಾರೆ."

ಇನ್ನೊಮ್ಮೆ ಭಗವಾನರು ಉದಾಹರಣೆ ಸಹಿತ ವಿವರಿಸುತ್ತಾರೆ. ಆಗ ಭಗವಾನರು ಕೈಯಲ್ಲಿ ಕೆಲವು ಎಲೆಗಳನ್ನು ಹಿಡಿದು ಇದು ಹೆಚ್ಚಾಗಿವೆಯೋ ಅಥವಾ ಮುಂದೆ



ಕಾಣುತ್ತಿರುವ ಅರಣ್ಯದಲ್ಲಿ ಎಲೆಗಳು ಹೆಚ್ಚಾಗಿವೆಯೋ ಎಂದು ಕೇಳುತ್ತಾರೆ. ಆಗ ಭಿಕ್ಷುಗಳು ಅರಣ್ಯದಲ್ಲೇ ಹೆಚ್ಚಾಗಿವೆ ಎಂದು ಉತ್ತರಿಸಿದಾಗ ಭಗವಾನರು ತಾವು ಬೋಧಿಸಿದ್ದು, ಈ ಕೈಯಲ್ಲಿ ಇರುವಷ್ಟು ಎಲೆಗಳಷ್ಟೇ, ಅರಣ್ಯದಲ್ಲಿರುವ ಎಲೆಗಳಷ್ಟು ಸರ್ವಜ್ಞತೆಯು ತಮಗೆ ತಿಳಿದಿದೆ. ಆದರೆ ಅವು ಅಭಿಜ್ಞಾತೆಗೆ, ಸಂಬೋಧಿಗೆ ನಿಬ್ಬಾಣಕ್ಕೆ ಸಹಕಾರಿಯಲ್ಲದ್ದರಿಂದಾಗಿ ಬೋಧಿಸಿಲ್ಲ ಎನ್ನುತ್ತಾರೆ.

ಇನ್ನೊಮ್ಮೆ ಸ್ಪಷ್ಟವಾಗಿ ಈ ನುಡಿಯುತ್ತಾರೆ: "ಭಿಕ್ಷುಗಳೇ, ಲೋಕವು ಶಾಶ್ವತವೆ? ............................................ ಇವೆಲ್ಲಾ ರೀತಿಯ ಪ್ರಶ್ನೆಗಳಿಗೆ ನಾನು ಉತ್ತರಿಸಲಿಲ್ಲ. ಏಕೆಂದರೆ ಅವು ಲಾಭಕಾರಿಯಲ್ಲ, ಬ್ರಹ್ಮಚರ್ಯದ ಧಮ್ಮ ಜೀವನಕ್ಕೆ ಸಹಕಾರಿಯಲ್ಲ, ವಿರಾಗವಾಗಲಿ, ನಿರೋಧವಾಗಲಿ, ಅಭಿಜ್ಞಾಗಳನ್ನು ದುಃಖವಿಮುಕ್ತಿಗಾಗಲಿ ಸಂಬೋಧಿಯಾಗಲಿ, ನಿಬ್ಬಾಣಕ್ಕಾಗಲಿ ಸಹಕಾರಿಯಲ್ಲ, ಆದ್ದರಿಂದಾಗಿ ನಾನು ಉತ್ತರಿಸಲಿಲ್ಲ."

"ಆದರೆ ಭಿಕ್ಷುಗಳೇ, ನಾನು ನಾಲ್ಕು ಆರ್ಯಸತ್ಯಗಳನ್ನು ಬೋಧಿಸಿದ್ದೇನೆ, ಏಕೆಂದರೆ ಅವುಗಳಿಗೆ, ವಿರಾಗಕ್ಕೆ, ನಿರೋಧಕ್ಕೆ, ದುಃಖವಿಮುಕ್ತಿಗೆ, ಅಭಿಜ್ಞಾಗೆ ಸಂಬೋಧಿಗೆ, ನಿಬ್ಬಾಣಕ್ಕೆ ಸಹಕರಿಯಾಗಿದೆ, ಪರಮ ಲಾಭಕಾರಿಯಾಗಿದೆ ಆದ್ದರಿಂದಾಗಿ ಅವನ್ನೆಲ್ಲಾ ವಿವರಿಸಿರುವೆ."

## ಕುರುಡರ ದೃಷ್ಟಿಕೋನ:

ಭಗವಾನರು ಕೆಲವು ಪ್ರಶ್ನೆಗಳಿಗೆ ಉತ್ತರಿಸದಿರುವುದಕ್ಕಾಗಿ, ಇನ್ನೊಂದು ಕಾರಣವಿದೆ. ಅವೆಂದರೆ, ಅವರ ದೃಷ್ಟಿಕೋನಗಳು ಪಕ್ಷಪಾತದಿಂದ ಕೂಡಿದೆ, ಏಕಪಕ್ಷೀಯವಾಗಿದೆ. ಒಂದು ಭಾಗ ಮಾತ್ರ ತಿಳಿಸುತ್ತದೆ, ಪೂರ್ಣ ಸತ್ಯದಿಂದ ಕೂಡಿಲ್ಲ. ಅದಕ್ಕಾಗಿಯೇ ಭಗವಾನರು ಒಂದು ಕಥೆಯನ್ನು ತಿಳಿಸುತ್ತಾರೆ, ಅದು ಹೀಗಿದೆ:

ಒಬ್ಬ ರಾಜನಿಗೆ ಕುರುಡರು ಹೇಗೆ ಸತ್ಯವನ್ನು ಅರಿಯುತ್ತಾರೋ ಎಂಬ ಕುತೂಹಲವಾಗುತ್ತದೆ. ಅದಕ್ಕಾಗಿ ಆತನು ಒಂದು ಆನೆಯನ್ನು ನಿಲ್ಲಿಸಿ ಅದನ್ನು ಮುಟ್ಟಿ ಅದು ಏನೆಂದು ತಿಳಿಸಿ ಎಂದು ಕುರುಡರಿಗೆ ಆಜ್ಞೆ ನೀಡುತ್ತಾನೆ. ಆಗ ಕಾಲುಗಳನ್ನು ಮುಟ್ಟಿದ ಕುರುಡನು ಇದು ಕಂಬ ಎನ್ನುತ್ತಾನೆ. ಬಾಲವನ್ನು ಮುಟ್ಟಿದ ಕುರುಡನು ಇದು ಪೊರಕೆ ಎನ್ನುತ್ತಾನೆ. ಹೀಗೆಯೇ ಒಂದೊಂದು ಭಾಗವನ್ನು ಮುಟ್ಟಿ ಏನೇನೋ ತಿಳಿಸುತ್ತಾರೆ. ಏಕೆಂದರೆ ಅವರು ಕುರುಡರಾಗಿರುತ್ತಾರೆ. ತಮ್ಮದೇ ಸತ್ಯ, ಮಿಕ್ಕವರದ್ದು ಮೌಢ್ಯ ಎಂದು ಅವರು ನಂಬಿ ಜಗಳವಾಡುವ ಹಂತಕ್ಕೆ ಬರುತ್ತಾರೆ. ಅದೇರೀತಿಯಲ್ಲಿ ಸಂಬೋಧಿ ಪಡೆಯದ ದಾರ್ಶನಿಕರು, ಸಿದ್ಧಾಂತಿಗಳು ತಾವು ಚಿಂತಿಸಿದ್ದೆ, ತರ್ಕಸಿದ್ದೆ ಸತ್ಯ ಅಥವಾ ತಾವು ಧ್ಯಾನದಲ್ಲಿ ಪಡೆದ ಅನುಭೂತಿಯೇ ಪೂರ್ಣ ಸತ್ಯ ಎಂದು ನಂಬಿ ಆ ಕುರುಡರ ರೀತಿ ವಾದ–ವಿವಾದಗಳಲ್ಲಿ ಬೀಳುತ್ತಾರೆ.

ಆದರೆ ಭಗವಾನರು ಚಕ್ಷುವಂತರಾಗಿದ್ದಾರೆ, ವಿಸ್ತಾರಪೂರ್ಣ ಪ್ರಜ್ಞಾವಂತರಾಗಿದ್ದಾರೆ, ಅವರು ಯಾವುದೇ ಪೂರ್ವಾಗ್ರಹ ಪೀಡಿತರಾಗದೆ, 'ಇದೇ ಸತ್ಯ, ಮಿಕ್ಕಿದ್ದೆಲ್ಲಾ ಮೌಢ್ಯ' ಎಂದು ಪರಿಗಣಿಸದೆ, ಪ್ರತ್ಯಕ್ಷವಾದರೂ ಪ್ರಮಾಣಿಸಿ' ಯಾವುದೇ ಹೊಸ ಸಿದ್ಧಾಂತ

ಮಂಡಿಸುವ ಲಾಲಸೆಯಿಲ್ಲದೆ, ಕೇವಲ ಸತ್ಯಾನ್ವೇಷಣೆಯಿಂದ, ಸತ್ಯಕ್ಕೆ ಗೌರವಿಸಿ, ವ್ಯಕ್ತಿ ಪೂಜೆಗಿಂತ ಸತ್ಯಪೂಜೆ ಶ್ರೇಷ್ಠವೆಂದು ಪರಿಗಣಿಸಿ, ಸತ್ಯ ಸಾಕ್ಷಾತ್ಕಾರಕ್ಕೆ ಅಪಾರ ಶ್ರಮಿಸಿ, ಸತ್ಯದ ಪ್ರತಿ ಹಂತವನ್ನು ಆತುರ ಬೀಳದೆ, ಸಾಕ್ಷಾತ್ಕರಿಸಿ, ಕೇವಲ ಸತ್ಯಗಳನ್ನೇ, ಲಾಭಕಾರಿಯಾದುದನ್ನೇ ಬೋಧಿಸಿದವರಾಗಿದ್ದಾರೆ. ಸತ್ಯವನ್ನು ಅರಿಯುವುದಾಗಲಿ ಅಥವಾ ಸತ್ಯವನ್ನೇ ಬೋಧಿಸುವುದಾಗಲಿ ಅಷ್ಟು ಸುಲಭವಾದ ಕಾರ್ಯವಲ್ಲ. ಅದು ಸತ್ಯ ತಕ್ಕಡಿಯಂತೆ, ಯಾವಕಡೆ ವಾಲಿದರೂ ಅತಿರೇಕಕ್ಕೆ ಕೊಂಡೊಯ್ಯುವಂತಹ ಪರಿಸ್ಥಿತಿಗಳು ಇರುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಅತಿರೇಕಗಳನ್ನು ಮೀರಿದ ಸತ್ಯವನ್ನು ಹೇಳುವುದು ಸುಲಭದ ಮಾತಲ್ಲ. ಇದು ಭಗವಾನರ ಸತ್ಯನಿಷ್ಠತೆ ಆಗಿತ್ತು. ಆದ್ದರಿಂದಲೇ ಅವರು ಕೆಲವೊಂದು ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದರು. ಏಕೆಂದರೆ ಕೇಳುಗನಿಗೂ ಅದನ್ನು ಅರಿಯುವ ಸಾಮರ್ಥ್ಯವಿರಬೇಕು. ಇಲ್ಲದಿದ್ದರೆ ಅಪಾರ್ಥ ಮಾಡಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಭಗವಾನರು ಅಪಾರ್ಥಕ್ಕೆ ಎಂದಿಗೂ ಎಡೆಯುಂಟು ಮಾಡಲಿಲ್ಲ. ಅದಕ್ಕೆ ಈ ಮುಂದಿನ ಘಟನೆಯೇ ಸಾಕ್ಷಿ.

## ಭಗವಾನರ ನಿಶ್ಶಬ್ದತೆ (ಮೌನ)

ಇನ್ನೊಮ್ಮೆ ವಚ್ಚಗೊತ್ತನೆಂಬ ಸಮಣನು ಭಗವಾನರು ಇರುವೆಡೆ ಬಂದನು ಮತ್ತು ಈ ಪ್ರಶ್ನೆಯನ್ನು ಕೇಳಿದನು "ಭಗವಾನ್ ಆತ್ಮವಿದೆಯೇ?"

ಆತನ ಮನಸ್ಸು ಅರಿತ ಭಗವಾನರು ಮೌನರಾದರು.

ಆಗ ವಚ್ಚಗೊತ್ತನು ಹೀಗೆ ಕೇಳಿದನು: "ಹಾಗಾದರೆ ಭಗವಾನ್ ಆತ್ಮವಿಲ್ಲವೆ?"

ಈ ಬಾರಿಯು ಭಗವಾನರು ಉತ್ತರದಿಂದ ಆಗುವ ಪರಿಣಾಮ ಅರಿತು ನಿಶ್ಶಬ್ದ ತಾಳಿದರು. ಆಗ ವಚ್ಚಗೊತ್ತ ಸಮಣನು ಅಲ್ಲಿಂದ ಎದ್ದು ಹೊರಟುಹೋದನು. ಆಗ ಅಲ್ಲಿಯೇ ಆನಂದರವರು ಭಗವಾನರಿಗೆ ಈ ರೀತಿ ಪ್ರಶ್ನಿಸಿದರು:

"ಭಗವಾನ್ ಸಮಣ ವಚ್ಚಗೊತ್ತನ ಪ್ರಶ್ನೆಗೆ ಏಕೆ ಉತ್ತರಿಸಲಿಲ್ಲ?"

ಆಗ ಭಗವಾನರು ಅದಕ್ಕೆ ಈ ರೀತಿ ಉತ್ತರಿಸಿದರು:

"ಆನಂದ ನಾನು 'ಆತ್ಮವಿದೆಯೇ' ಎಂಬ ಪ್ರಶ್ನೆಗೆ 'ಆತ್ಮವಿದೆ' ಎಂದು ಹೇಳಿದ್ದರೆ, ಆತನು ಶಾಶ್ವತವಾದ ಮಂಡಿಸುವ ದಾರ್ಶನಿಕರು ಹೇಳುವುದೇ ಸತ್ಯವೆಂದು ಅತಿರೇಕಕ್ಕೆ ಒಳಗಾಗುತ್ತಿದ್ದನು.

"ಹಾಗೆಯೇ ನಾನು 'ಆತ್ಮವಿಲ್ಲವೆ' ಎಂಬ ಪ್ರಶ್ನೆಗೆ 'ಆತ್ಮವಿಲ್ಲ' ಎಂದು ಹೇಳಿದ್ದರೆ ಆತನು ಉಚ್ಚೇದವಾದ (ವಿನಾಶ ವಾದ) ಮಂಡಿಸುವ ದಾರ್ಶನಿಕರು ಹೇಳುವುದೇ ಸತ್ಯ ಎಂದು ಅತಿರೇಕಕ್ಕೆ ಒಳಗಾಗುತ್ತಿದ್ದನು."

"ಮತ್ತೆ ಆನಂದ ಆತನ ಪ್ರಶ್ನೆಯಾದ 'ಆತ್ಮವಿದೆಯೇ?' ಎಂಬುದಕ್ಕೆ ನಾನು ಸಕಾರಾತ್ಮಕವಾಗಿ ಉತ್ತರಿಸಿದ್ದರೆ, ನಾನು ಬೋಧಿಸಿದ 'ಎಲ್ಲಾ ಧಮ್ಮಗಳು ಅನಾತ್ಮ (ಅನತ್ತ)' ಎಂಬುದಕ್ಕೆ ಹೊಂದಿಕೆಯಾಗುತ್ತದೆ?"

"ಖಂಡಿತ ಇಲ್ಲ ಭಗವಾನ್."



"ಮತ್ತೆ ಆನಂದ, ಆತನ ಪ್ರಶ್ನೆಯಾದ 'ಆತ್ಮವಿಲ್ಲವೇ?' ಎಂಬುದಕ್ಕೆ ಇಲ್ಲವೆಂದಿದ್ದರೆ, ಪ್ರಜ್ಞಾಶೀಲನಲ್ಲದ ಆತನು ದಿಗ್ಭ್ರಮೆಗೊಳ್ಳುತ್ತಿದ್ದನು. ಆಗ ಸಂಶಯ, ದ್ವಂದ್ವಗಳಿಗೆ ಸಿಲುಕಿ ಆತನು ಹೀಗೆ ಹೇಳುತ್ತಿದ್ದನು: "ಹಿಂದೆ ನನ್ನಲ್ಲಿ ಆತ್ಮವಿತ್ತು, ಆದರೆ ಈಗ ನನ್ನಲ್ಲಿ ಆತ್ಮವಿಲ್ಲವಾಗಿದೆ."

## ತಥಾಗತರು ಸಾವಿನ ಬಳಿಕ ಏನಾಗುತ್ತಾರೆ?

ಆಗ ಪ್ರಚಲಿತವಾಗಿದ್ದ ಪ್ರಶ್ನೆಯಿದು. ಆದರೆ ಇಲ್ಲಿ ತಥಾಗತರ ಅರ್ಥ 'ನುಡಿದಂತೆ ನಡೆದವರು, ನಡೆದಂತೆ ನುಡಿಯುವವರು ಯಾರೂ ಈ ಸತ್ಯಪಥದಲ್ಲಿ ಚಲಿಸಿರುವವರೋ ಅವರು ಸಾವಿನ ನಂತರ ಏನಾಗುವರು? ಆಗ ತರ್ಕದಿಂದ ಮತ್ತು ಹಲವರು ಬೋಧಿಸುವಂತೆ ಈ ನಾಲ್ಕು ಗತಿಗಳಿದ್ದವು. (1) ಇರುವರು (2) ಇರುವುದಿಲ್ಲ (3) ಇದ್ದು ಇರುವುದಿಲ್ಲ (4) ಇರುವುದಿಲ್ಲ, ಇಲ್ಲವೆಂದೂ ಅಲ್ಲ. ಆದರೆ ಭಗವಾನರು ಈ ನಾಲ್ಕು ಉತ್ತರವನ್ನು ಒಪ್ಪುವುದಿಲ್ಲ, ನಿರಾಕರಿಸುತ್ತಾರೆ. ಏಕೆಂದರೆ ಸತ್ಯವು ಇಲ್ಲಿ ತರ್ಕವನ್ನು ಮೀರಿದೆ ಅಥವಾ ಅರಿಯಲು ಕಡುಕಷ್ಟಕರವಾಗಿದೆ.

ಒಮ್ಮೆ ಅಗ್ಗಿ ವಚ್ಚಗೊತ್ತನು ಇದೇ ಪ್ರಶ್ನೆ ಕೇಳಿದಾಗ, ಭಗವಾನರು ಈ ನಾಲ್ಕು ಗತಿಗಳ ಉತ್ತರವನ್ನು ನಿರಾಕರಿಸಿದರು. ಆಗ ವಚ್ಚನು ಹೀಗೆ ನಿರಾಶನಾಗಿ ಉತ್ತರಿಸಿದನು: ಈ ಅಂಶದಲ್ಲಿ ನಾನು ಕಳೆದುಕೊಂಡೆನು ಭಗವಾನ್, ನಾನು ದಿಗ್ಭ್ರಮೆಗೊಂಡಿರುವೆನು. ನನಗೆ ಹಿಂದೆ ನಿಮ್ಮ ಬೋಧನೆಯಲ್ಲಿ ಸಿಕ್ಕಿದ ತೃಪ್ತಿ ನಾನು ಈಗ ಕಳೆದುಕೊಂಡಿರುವೆನು.

ಆಗ ಭಗವಾನರು ಹೀಗೆ ಉತ್ತರಿಸುತ್ತಾರೆ: "ಓ ವಚ್ಚ, ನೀನು ಅತೃಪ್ತನಾಗಿರುವುದು ಆಶ್ಚರ್ಯಕರ ಸಂಗತಿಯೇನಲ್ಲ. ಏಕೆಂದರೆ ವಚ್ಚ ಈ ಧಮ್ಮವು ಅತ್ಯಂತ ಆಳವಾದದ್ದು, ಅರಿಯಲು ಕಷ್ಟಕರವಾದದ್ದು, ವಿಶ್ಲೇಷಿಸಲು ಕಷ್ಟಕರವಾಗಿರುವುದು, ಶಾಂತವಾದುದು, ಉತ್ಕೃಷ್ಟವಾದುದು, ಚರ್ಚೆಗೆ, ತರ್ಕಕ್ಕೆ ಮೀರಿದ್ದು, ಪರಮಸೂಕ್ಷ್ಮವಾದದ್ದು, ಕೇವಲ ಪ್ರಜ್ಞಾವಂತರು ಅರಿಯುವಂತಹುದು. ಆದರೆ ಇದು ಕಷ್ಟಕರವಾಗಿರುವುದು ಏಕೆಂದರೆ ಪರಸಿದ್ಧಾಂತಕ್ಕೆ ಅಂಟಿರುವುದು, ಪೂರ್ವಗ್ರಹ ಪೀಡಿತವಾಗಿರುವುದು, ಬೇರೊಂದು ದೃಷ್ಟಿಕೋನಗಳಿಗೆ ಅಂಟಿರುವುದು. ಬೇರೆ ಸಿದ್ಧಾಂತಕ್ಕೆ ನಿಷ್ಠನಾಗಿರುವುದು, ಬೇರೊಂದು ಗುರಿಯನ್ನು ಹೊಂದಿರುವುದು, ಬೇರೆಯದನ್ನು ಪಾಲಿಸುತ್ತಿರುವುದು ಮತ್ತು ಬೇರೆ ಗುರುವನ್ನು ಹೊಂದಿರುವುದು ಆಗಿದೆ. ಸರಿ ವಚ್ಚ, ನಾನು ಒಂದು ಪ್ರಶ್ನೆಯನ್ನು ಕೇಳುವೆ, ಅದರ ಬಗ್ಗೆ ನಿನಗೆ ಸರಿ ಎನಿಸುವಂತೆ ಉತ್ತರಿಸು. ನಿನ್ನ ಮುಂದೆ ಅಗ್ನಿಯು ಉರಿಯುತ್ತಿರುವುದು ಎಂದು ಭಾವಿಸು, ಅದು ಯಾವುದನ್ನು ಆಧರಿಸಿ ಉರಿಯುತ್ತಿರುವುದು?"

"ಅದು ಹುಲ್ಲು ಮತ್ತು ಕಟ್ಟಿಗೆಗಳನ್ನು ಆಧರಿಸಿ ಉರಿಯುತ್ತಿರುವುದು."

"ವಚ್ಚ, ಈಗ ಆ ಅಗ್ನಿಯು ಆರಿಹೋಗುವುದು, ಈಗ ನಿನಗೆ ಯಾರಾದರು ಈ ರೀತಿ ಪ್ರಶ್ನಿಸುತ್ತಾರೆ, ಏನೆಂದರೆ ಆ ಅಗ್ನಿಯು ಪೂರ್ವಕ್ಕೆ ಹೋಯಿತೆ? ಅಥವಾ ದಕ್ಷಿಣಕ್ಕೆ ಅಥವಾ ಪಶ್ಚಿಮಕ್ಕೆ ಅಥವಾ ಉತ್ತರಕ್ಕೆ ಹೋಯಿತೆ? ಎಂದು ಪ್ರಶ್ನಿಸಿದರೆ ಏನೆಂದು ಉತ್ತರಿಸುವೆ?"

"ಭಗವಾನ್ ಇಲ್ಲಿ ಈ ಪ್ರಶ್ನೆಯೇ ಹೊಂದಿಕೆಯಾಗದು, ಏಕೆಂದರೆ ಹುಲ್ಲು, ಕಟ್ಟಿಗೆಗಳನ್ನು ಆಧರಿಸಿ ಉರಿಯುತ್ತಿತ್ತು. ಇಂಧನ ಮುಗಿದನಂತರ ಆರಿಹೋಯಿತು ಎಂದಷ್ಟೇ ಹೇಳಬಹುದು."

ಅದೇರೀತಿಯಲ್ಲಿ ವಚ್ಛ, ಇಲ್ಲಿ ತಥಾಗತರವನ್ನು ಕಾಯದಿಂದ, ಅನುಭವಗಳಿಂದ, ಗ್ರಹಿಕೆಗಳಿಂದ, ಚಿತ್ತದ ಚಟುವಟಿಕೆಗಳಿಂದ ಅರಿವುಗಳಿಂದ (ಒಟ್ಟಾರೆ ದೇಹ ಮತ್ತು ಮನಸ್ಸಿನಿಂದ) ಗುರ್ತಿಸುತ್ತಾರೆ. ಆದರೆ ಅವೆಲ್ಲವೂ ಭವದಲ್ಲಿ ಬೆಳೆಯದಂತೆ, ತಾಳೆ ಮರವನ್ನು ಬುಡದ ಬಳಿ ಕತ್ತರಿಸುವಂತೆ, ತೆಗೆದುಹಾಕಲಾಗಿದೆ. ಹೀಗಿರುವಾಗ ಅವರು ಮರುಹುಟ್ಟುವರೆ, ಇರುವುದಿಲ್ಲವೆ, ಇರುತ್ತಾರೆ ಹಾಗೆ ಇರುವುದಿಲ್ಲವೆ, ಇರುವುದಿಲ್ಲ ಹಾಗೆ ಇಲ್ಲವೆಂದು ಅಲ್ಲ ಎಂಬುದು ಅನ್ವಯಿಸುವುದಿಲ್ಲ. ಏಕೆಂದರೆ ತಥಾಗತರನ್ನು ಗುರ್ತಿಸಬಹುದಾದ ದೇಹ ಮತ್ತು ಮನಸ್ಸನ್ನು ತಾಳೆ ಮರವನ್ನು ಬುಡದಲ್ಲಿ ಕತ್ತರಿಸಿ ಅದು ಮೊಳೆಯದಂತೆ ಮಾಡಿರುವರೋ ಹಾಗೆಯೇ ತಥಾಗತರು ನಿಬ್ಬಾಣ ಸಾಧಿಸಿದ್ದಾರೆ. ಅವರು 'ಇರುತ್ತಾರೆ', 'ಇರುವುದಿಲ್ಲ' ಇಂತಹ ಪ್ರಶ್ನೆಗಳು ಅವರಿಗೆ ಅನ್ವಯಿಸುವುದಿಲ್ಲ.

ಆಗ ವಚ್ಛನಿಗೆ ಸತ್ಯಗೋಚರವಾಗಿ ಆತನು ತಿಸರಣ ಪಡೆದು ನಿಷ್ಠ ಉಪಾಸಕನಾಗುತ್ತಾನೆ.

* * *

ಇದೇ ವಿಷಯದ ಬಗ್ಗೆ ಅನಿರುದ್ಧರು ವಿಚಾರಿಸಿದಾಗ ಭಗವಾನರು ಹೀಗೆ ಆತನಿಗೆ ಪ್ರಶ್ನಿಸುತ್ತಾರೆ: "ಅನಿರುದ್ಧ ದೇಹ ಮತ್ತು ಮನಸ್ಸು (ವೇದನ, ಸಞ್ಞ, ಸಂಖಾರ ಮತ್ತು ವಿಞ್ಞಾನ) ಅನಿತ್ಯವೋ ಅಥವಾ ನಿತ್ಯವೋ?"

"ಅನಿತ್ಯ ಭಗವಾನ್."

"ಅನಿರುದ್ಧ ತಥಾಗತರ ಶರೀರವನ್ನು ತಥಾಗತರೆಂದು ಪರಿಗಣಿಸಿದೆಯೇನು?"

"ಖಂಡಿತ ಇಲ್ಲ ಭಗವಾನ್."

"ಹಾಗಾದರೆ ತಥಾಗತರ ಮನಸ್ಸನ್ನು (ವೇದನ, ಸಞ್ಞ, ಸಂಖಾರ ಮತ್ತು ವಿಞ್ಞಾನ) ತಥಾಗತರೆಂದು ಪರಿಗಣಿಸಿದೆಯೇನು?"

"ಖಂಡಿತ ಇಲ್ಲ ಭಗವಾನ್."

"ಹಾಗಾದರೆ ಅನಿರುದ್ಧ ಈ ಜನ್ಮದಲ್ಲೇ ಈ ದೇಹ ಮತ್ತು ಮನಸ್ಸು ತಥಾಗತರು ಅಲ್ಲವೆಂದು ಪರಿಗಣಿಸಿರುವಾಗ ತಥಾಗತರು ಸಾವಿನ ಬಳಿಕ ಇರುವರೇ, ಇರುವುದಿಲ್ಲವೇ ಇತ್ಯಾದಿ ಪ್ರಶ್ನೆಗಳು ಉಚಿತವೇ?"

"ಖಂಡಿತ ಇಲ್ಲ ಭಗವಾನ್."

"ಸರಿಯಾಗಿ ಹೇಳಿದೆ, ಅನಿರುದ್ಧ, ಸರಿಯಾಗಿಯೇ ಗ್ರಹಿಸಿರುವೆ. ಹಿಂದೆಯು ಮತ್ತು ಈಗಲು ಸಹಾ ಅನಿರುದ್ಧ, ನಾನು ದುಃಖವನ್ನು ಮತ್ತು ಅದರ ನಿರೋಧವನ್ನು ಬೋಧಿಸುತ್ತೇನೆ."



# X. ನಾವು ಕಲಿಯಲೇ ಬೇಕಾದ ಪಾಠವೇನು ?

ನಾವು ಕಲಿಯಲೇಬೇಕಾಗಿರುವ ಅಪಾರ ಪಾಠಗಳಿವೆ.

1. ಮೊದಲನೆಯದು ಏನೆಂದರೆ ನಮ್ಮ ಸದ್ಯದ ಅರಿವಿಗೆ ಮೀರಿದ ಅಪಾರ ವಿಷಯಗಳಿವೆ ಎಂದು ಅರಿಯುವುದು.
2. ಎರಡನೆಯ ಪಾಠ ಏನೆಂದರೆ "ಇದೇ ಸತ್ಯ, ಮಿಕ್ಕಿದ್ದೆಲ್ಲಾ ಮೌಢ್ಯ" ಎಂಬ ಮನೋಭಾವ ಬಿಟ್ಟುಬಿಡುವುದು. ಹಾಗೆಯೇ "ಎಲ್ಲವೂ ಸತ್ಯ" ಎಂಬುದನ್ನು ಬಿಟ್ಟುಬಿಡುವುದು.
3. ಕೆಲವು ದೃಷ್ಟಿಗಳು ನಮಗೆ ಅರ್ಥವಾಗದಿದ್ದಾಗ, ನಮ್ಮ ಮನಸ್ಸಿಗೆ ಸ್ವೀಕೃತವಾಗ ದಿದ್ದಾಗಲೂ, ಅದನ್ನು ಒಪ್ಪದಿದ್ದರೂ, ಅದನ್ನು ತಿರಸ್ಕಾರ ಮಾಡದಿರುವುದು. ಮುಂದೆ ನಮ್ಮ ಪೂರ್ಣ ವಿಚಾರಶೀಲತೆಯಿಂದ ಪೂರ್ಣ ಸತ್ಯ ಅರಿವಾಗಬಹುದು. ಆಗ ನಾವು ಒಪ್ಪುವುದೋ ಅಥವಾ ತಿರಸ್ಕರಿಸುವುದು ನಿರ್ಧರಿತವಾಗುತ್ತದೆ.
4. ಪ್ರತಿಯೊಂದನ್ನು ವಿಚಾರಶೀಲತೆಯಿಂದ ಪರೀಕ್ಷಿಸುವುದು. ಅದು ವಿಜ್ಞಾನವೇ ಆಗಲಿ, ಧರ್ಮವೇ ಆಗಲಿ, ಇನ್ನಿತರ ರಂಗವೇ ಆಗಲಿ, ಪರೀಕ್ಷಿಸಿ ಸ್ವೀಕರಿಸುವುದು, ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡುವುದು.
5. ನಮ್ಮ ಜೀವನದ ಸರ್ವ ದುಃಖಗಳನ್ನು ಆರ್ಯಸತ್ಯಗಳ ಬೆಳಕಿನಲ್ಲಿ ಪರೀಕ್ಷಿಸುವುದು, ಅಂದರೆ ಇದು ಹೇಗೆ ದುಃಖ, ಈ ದುಃಖಕ್ಕೆ ಸ್ಪಷ್ಟ ಕಾರಣವೇನು? ಈ ದುಃಖದಿಂದ ಹೇಗೆ ಪಾರಾಗಬೇಕು, ಅದಕ್ಕೆ ಎಷ್ಟೊಂದುರೀತಿಯ ಮಾರ್ಗಗಳಿದ್ದರೂ ಯಾವುದು ಅದರಲ್ಲಿ ಉತ್ತಮ ಎಂದು ಆಯ್ಕೆ ಮಾಡುವುದು.
6. ಮೂಢನಂಬಿಕೆಗಳನ್ನು, ಮಿಥ್ಯಾ ದೃಷ್ಟಿಗಳನ್ನು, ಮಿಥ್ಯಾ ಸಿದ್ಧಾಂತಗಳನ್ನು ತೊರೆಯುವುದು.
7. ಸಂಶಯಗಳನ್ನು ನಿವಾರಿಸಿಕೊಳ್ಳಲು ಅಪಾರ ಧಮ್ಮ ಅಧ್ಯಯನ, ಚರ್ಚೆ, ಚಿಂತನೆ, ಸಾಧನೆ ಮಾಡುವುದು.
8. ಸಮ್ಯಕ್ ದೃಷ್ಟಿಕೋನ ಬೆಳೆಸುವುದು ಮತ್ತು ವೃದ್ಧಿಸುವುದು.
9. ಶೀಲವಂತರಾಗುವುದು ಮತ್ತು ಪರರಿಗೆ ಸಹಾಯ ಮಾಡುವುದು.
10. ವಿಚಾರಶೀಲತೆ, ವಿಮರ್ಶೆ, ತುಲನಾತ್ಮಕತೆಯನ್ನು ವೃದ್ಧಿಸುವುದು.
11. ಮಿಥ್ಯಾ ಮಾರ್ಗವನ್ನು ತ್ಯಜಿಸಿ, ಸಮ್ಯಕ್ ಮಾರ್ಗದಲ್ಲಿ ಅಂದರೆ ಆರ್ಯ ಅಷ್ಟಾಂಗ ಮಾರ್ಗದಲ್ಲಿ ಜೀವಿಸುವುದು ಇತ್ಯಾದಿ.